"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

21ನೇ ಸೆಪ್ಟೆಂಬರ್ 2020
ಸೋಮವಾರ

## ವಿಷಯಾನುಕ್ರಮಣಿಕೆ


1. **ಸಂತಾಪ ಸೂಚನೆ**

   **ವಿಷಯ:** **ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿ, ಕೇಂದ್ರದ ಮಾಜಿ ಸಚಿವರಾದ ಶ್ರೀ ಎಂ.ವಿ.ರಾಜಶೇಖರನ್. ರಾಜ್ಯಸಭೆಯ ಹಾಲಿ ಸದಸ್ಯರಾದ ಶ್ರೀ ಅಶೋಕ್ ಗಸ್ತಿ, ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ರಾಜಾ ರಂಗಪ್ಪನಾಯಕ, ಮಾಜಿ ಸಚಿವರಾದ ಶ್ರೀ ಬಿ.ಸತ್ಯನಾರಾಯಣ, ಶ್ರೀ ಮದನ ಗೋಪಾಲ ನಾಯಕ್ ಮತ್ತು ಶ್ರೀ ಜಿ.ರಾಮಕೃಷ್ಣ, ಕನ್ನಡದ ಹೆಸರಾಂತ ಕವಿ ಪ್ರೊ:ಕೆ.ಎಸ್.ನಿಸಾರ್ ಅಹಮದ್, ಹಿರಿಯ ಕಥೆಗಾರ್ತಿ ಶ್ರೀಮತಿ ಶಾಂತಾದೇವಿ ಕಣವಿ, ಸಂಗೀತಗಾರ್ತಿಯಾದ ಡಾ:ಶ್ಯಾಮಲಾ ಜಿ.ಭಾವೆ, ಪಂಡಿತ್ ಜಸ್‌ರಾಜ್, ಯಕ್ಷಗಾನ ಕಲಾವಿದ ಶ್ರೀ ಹೊಸ್ತೋಟ ಗಜಾನನ ಭಟ್, ರಂಗಭೂಮಿ ಕಲಾವಿದೆ ಡಾ:ಸುಭದ್ರಮ್ಮ ಮನ್ಸೂರ್, ಎಡನೀರು ಮಠದ ಶ್ರೀ ಕೇಶಾವನಂದ ಭಾರತಿ ಸ್ವಾಮೀಜಿ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಸ್.ಎನ್.ಹುಚ್ಚರಾಯಪ್ಪ, ಗಲ್ವಾನ್ ಕಣಿವೆಯಲ್ಲಿ ಮರಣ ಹೊಂದಿದ ವೀರ ಯೋಧರು, ಕೊರೋನಾ ವೈರಸ್ ಸೋಂಕಿನಿಂದ ನಿಧನರಾದವರು ಮತ್ತು ಆಗಸ್ಟ್ ಮಾಹೆಯಲ್ಲಿ ಅತಿವೃಷ್ಟಿಯಿಂದ ನಿಧನರಾದವರ ಬಗ್ಗೆ.**

   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
   - ಶ್ರೀ ಎಸ್.ಆರ್.ಪಾಟೀಲ್(ವಿರೋದ ಪಕ್ಷದ ನಾಯಕರು)

2. **ಮಾಜಿ ವಿಧಾನಸಭಾ ಸದಸ್ಯರು ನಿಧನರಾದರೂ ಕೂಡ ವಿಧಾನ ಪರಿಷತ್ತಿನಲ್ಲಿ ಇನ್ನು ಮುಂದೆ ಸಂತಾಪ ಸೂಚನೆಯನ್ನು ಸಲ್ಲಿಸಬೇಕೆಂಬ ಬಗ್ಗೆ.**
   - ಶ್ರೀ ಸಿ.ಎಂ.ಇಬ್ರಾಹಿಂ
   - ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
   - ಸಭಾಪತಿಯವರು

3. **ನೂತನ ಸದಸ್ಯರ ಪರಿಚಯ**
4. **ಪ್ರಕಟಣೆ**
5. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**
6. **ಕಾರ್ಯದರ್ಶಿಯವರ ವರದಿ**
7. **ನಿಯಮ 59ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳಿ ಸೂಚನೆ ಮಂಡಿಸಲು ಪೂರ್ವಭಾವಿ ಚರ್ಚೆ.**

   **ವಿಷಯ:–** ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಮನೆಗಳು, ಲಕ್ಷಾಂತರ ಎಕರೆ ಬೆಳೆ


"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಶವಾಗಿರುವ ಬಗ್ಗೆ.
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಸಭಾಪತಿಯವರು

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

**8. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**130 – ಕಟ್ಟಡ ಕಾರ್ಮಿಕರ ಮಕ್ಕಳ ಪಾಲನೆಗಾಗಿ ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.**
- ಶ್ರೀ ನಸೀರ್ ಅಹ್ಮದ್
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಕಾರ್ಮಿಕ ಹಾಗೂ ಸಕ್ಕರೆ ಸಚಿವರು)

**70 - ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**
- **ಶ್ರೀ ವಿಜಯ್ ಸಿಂಗ್**
- **ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**

**160 – ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ**
- ಶ್ರೀ ಅ.ದೇವೇಗೌಡ
- ಶ್ರೀ ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರ ಪರವಾಗಿ)

**112+113 – ಕರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ.**
- ಶ್ರೀ ಎನ್.ನಾರಾಯಣಸ್ವಾಮಿ
- ಶ್ರೀ ಆರ್. ರಮೇಶ್
- ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**85 – ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದವರಿಗೆ ರೂ.500/-ಗಳ ವಿಶೇಷ ಭತ್ಯೆ ಮಂಜೂರಾತಿ ಬಗ್ಗೆ.**
- ಶ್ರೀ ಮರಿತಿಬ್ಬೇಗೌಡ
- ಶ್ರೀ ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**89 – ಸರ್ಕಾರಿ ವೈದ್ಯರುಗಳ ಅಸಮರ್ಪಕ ಕಾರ್ಯನಿರ್ವಹಣೆ**
- ಶ್ರೀ ಮರಿತಿಬ್ಬೇಗೌಡ
- ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**104+71 – ಬೀದರ್ ಬ್ರೀಮ್ಸ್ ಆಸ್ಪತ್ರೆ ಬಗ್ಗೆ**
– ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
– ಶ್ರೀ ವಿಜಯ್ ಸಿಂಗ್
– ಡಾ:ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು)

**30 – ಬೋಧಕರಿಲ್ಲದ ಕಾರಣ ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತಿರುವ ಬಗ್ಗೆ**
– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**129 – ವಿಶ್ವವಿದ್ಯಾನಿಲಯಗಳಲ್ಲಿ ಅಕ್ರಮವಾಗಿ ಪದೋನ್ನತಿ ನೀಡುತ್ತಿರುವ ಬಗ್ಗೆ**
– ಶ್ರೀ ಕೆ.ಗೋವಿಂದರಾಜ್
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)(ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**62 – ವೃಕ್ಷ ಸಂರಕ್ಷಣಾ ಕಾಯಿದೆಯ ವ್ಯಾಪ್ತಿಯಡಿ ಇರುವ ನಗರ ಪ್ರದೇಶಗಳ ಬಗ್ಗೆ**
– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಆನಂದ್ ಸಿಂಗ್ (ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು)

**46 – ಅನಧಿಕೃತ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮದ ಬಗ್ಗೆ**
– ಅರವಿಂದ ಕುಮಾರ್ ಅರಳಿ
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)

**121 – ಆಯವ್ಯಯದಲ್ಲಿ ಘೋಷಿಸಿರುವಂತೆ ವಿಶೇಷ ತಂತ್ರಜ್ಞಾನವನ್ನು ರೂಪಿಸುವ ಬಗ್ಗೆ**
– ಶ್ರೀ ಸಿ.ಎಂ.ಲಿಂಗಪ್ಪ
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)(ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**01 – ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆ ಬಗ್ಗೆ**
– ಶ್ರೀ ಬಸವರಾಜ ಪಾಟೀಲ್ ಇಟಗಿ
– ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರು)

**90 – ರಾಜ್ಯದಲ್ಲಿನ ಸರ್ಕಾರಿ/ಖಾಸಗಿ ಆಸ್ಪತ್ರೆಗಳ ಮಾಹಿತಿ ನೀಡುವ ಬಗ್ಗೆ**
– ಶ್ರೀ ಪಿ.ಆರ್.ರಮೇಶ್
– ಶ್ರೀ ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಗಗಳ ಕಲ್ಯಾಣ ಸಚಿವರು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**9. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**
**ವಿಷಯ:- ರಾಜ್ಯದಲ್ಲಿ ಮಕ್ಕಳಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಡ್ರಗ್ಸ್ ಮತ್ತು ಗಾಂಜಾ ಪತ್ತೆಯಾಗಿ "ಕೊಲ್ಲಬೇಡಿ ಮಕ್ಕಳನ್ನು" ಎಂಬ ಶೀರ್ಷಿಕೆಯಡಿ ಮಾಧ್ಯಮದಲ್ಲಿ ಪ್ರಸಾರವಾದ ವಿಷಯಕ್ಕೆ ಸಂಬಂಧಿಸಿದ ಬಗ್ಗೆ.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**10. ನೂತನ ಸದಸ್ಯರ ಪರಿಚಯ**
**11. ಗಮನ ಸೆಳೆಯುವ ಸೂಚನೆ**
**ವಿಷಯ:ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟುಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಬಗ್ಗೆ.**
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗೃಹ ಸಚಿವರ ಪರವಾಗಿ)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)

**12. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ**
**ವಿಷಯ:- ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಮನೆಗಳು, ಲಕ್ಷಾಂತರ ಎಕರೆ ಬೆಳೆ ನಾಶವಾಗಿರುವ ಬಗ್ಗೆ.**
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ವಿ.ಸೋಮಣ್ಣ(ವಸತಿ ಸಚಿವರು)
- ಶ್ರೀ ಆರ್.ಬಿ.ತಿಮ್ಮಾಪುರ
- ಶ್ರೀ ಬಸವರಾಜ ಪಾಟೀಲ್ ಇಟಗಿ

**13. ಪ್ರಕಟಣೆಗಳು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**14. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ**

**ವಿಷಯ:- ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಮನೆಗಳು, ಲಕ್ಷಾಂತರ ಎಕರೆ ಬೆಳೆ ನಾಶವಾಗಿರುವ ಬಗ್ಗೆ**

- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಅರವಿಂದಕುಮಾರ್ ಅರಳಿ
-

**15. ಗಮನ ಸೆಳೆಯುವ ಸೂಚನೆ**

**ಅ) ಸುಗ್ರೀವಾಜ್ಞೆ ಮೂಲಕ ಕರ್ನಾಟಕ ಭೂ ಸುಧಾರಣೆ ಕಾಯ್ದೆಗೆ ತಂದಿರುವ ತಿದ್ದುಪಡಿಯು ರೈತಾಪಿ ವರ್ಗಕ್ಕೆ ಮಾರಕವಾಗಿರುವುದರಿಂದ ತಿದ್ದುಪಡಿಯನ್ನು ಹಿಂಪಡೆಯುವ ಬಗ್ಗೆ.**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**(ಸದರಿ ವಿಷಯದ ಬಗ್ಗೆ ವಿಧೇಯಕದ ಮೇಲಿನ ಚರ್ಚೆಯಲ್ಲಿಯೇ ಚರ್ಚಿಸಬೇಕೆಂದು ತಿಳಿಸಲಾಯಿತು)**

**ಆ) ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟುಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಬಗ್ಗೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗೃಹ ಸಚಿವರ ಪರವಾಗಿ)
- ಲಹರ್‌ಸಿಂಗ್ ಸಿರೋಯಾ
- ಶ್ರೀ ಪಿ.ಆರ್.ರಮೇಶ್
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಎಮ್.ಅಪ್ಪಾಜಿಗೌಡ
- ಶ್ರೀ ಏನ್.ರವಿಕುಮಾರ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಹೆಚ್.ಎಂ.ರಮೇಶ್ ಗೌಡ

**16. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

**ವಿಷಯ:-** ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗಿರುವ ಜಾತಿವಾರು ಜನಗಣತಿ ವರದಿಯನ್ನು ಬಿಡುಗಡೆಗೊಳಿಸಿ ತ್ವರಿತವಾಗಿ ಅನುಷ್ಠಾನಗೊಳಿಸುವ ಬಗ್ಗೆ.

- ಶ್ರೀ ಕೆ.ಪಿ.ನಂಜುಂಡಿ
- ಶ್ರೀ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
- ಶ್ರೀ ಪಿ.ಆರ್.ರಮೇಶ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– – –

**(707) (708) (709)/ 21.09.2020/11.20,11.30,11.40/ಹೆಚ್‌ವಿಃಎಂಡಿ, ಪಿಕೆ:ಎಂಡಿ, ಡಿಎಸ್:ಎಕೆ**

<ins>ಕರ್ನಾಟಕ ವಿಧಾನ ಪರಿಷತ್ತು</ins>

ಸೋಮವಾರ, 21ನೇ ಸೆಪ್ಟೆಂಬರ್ 2020

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಬೆಳಗ್ಗೆ 11 ಗಂಟೆ 21 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು**
**ಪೀಠದಲ್ಲಿ ಉಪಸ್ಥಿತರಿದ್ದರು**

(‘ವಂದೇ ಮಾತರಂ’ ಗೀತೆಯೊಂದಿಗೆ ಸದನವು ಪ್ರಾರಂಭಗೊಂಡಿತು)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01. ಸಂತಾಪ ಸೂಚನೆ**

ವಿಷಯ **ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿ, ಕೇಂದ್ರದ ಮಾಜಿ ಸಚಿವರಾದ ಶ್ರೀ ಎಂ.ವಿ.ರಾಜಶೇಖರನ್. ರಾಜ್ಯಸಭೆಯ ಹಾಲಿ ಸದಸ್ಯರಾದ ಶ್ರೀ ಅಶೋಕ್ ಗಸ್ತಿ, ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ರಾಜಾ ರಂಗಪ್ಪನಾಯಕ, ಮಾಜಿ ಸಚಿವರಾದ ಶ್ರೀ ಬಿ.ಸತ್ಯನಾರಾಯಣ, ಶ್ರೀ ಮದನ ಗೋಪಾಲ ನಾಯಕ್ ಮತ್ತು ಶ್ರೀ ಜಿ.ರಾಮಕೃಷ್ಣ, ಕನ್ನಡದ ಹೆಸರಾಂತ ಕವಿ ಪ್ರೊ:ಕೆ.ಎಸ್.ನಿಸಾರ್ ಅಹಮದ್, ಹಿರಿಯ ಕಥೆಗಾರ್ತಿ ಶ್ರೀಮತಿ ಶಾಂತಾದೇವಿ ಕಣವಿ, ಸಂಗೀತಗಾರರಾದ ಡಾ:ಶ್ಯಾಮಲಾ ಜಿ.ಭಾವೆ, ಪಂಡಿತ್ ಜಸ್‌ರಾಜ್, ಯಕ್ಷಗಾನ ಕಲಾವಿದ ಶ್ರೀ ಹೊಸ್ತೋಟ ಗಜಾನನ ಭಟ್, ರಂಗಭೂಮಿ ಕಲಾವಿದೆ ಡಾ:ಸುಭದ್ರಮ್ಮ ಮನ್ಸೂರ್ ಎಡನೀರು ಮಠದ ಶ್ರೀ ಕೇಶಾವನಂದ ಭಾರತಿ ಸ್ವಾಮೀಜಿ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಎಸ್.ಎನ್.ಹುಚ್ಚರಾಯಪ್ಪ, ಗಲ್ವಾನ್ ಕಣಿವೆಯಲ್ಲಿ ಮರಣ ಹೊಂದಿದ ವೀರ ಯೋಧರು, ಕೊರೋನಾ ವೈರಸ್ ಸೋಂಕಿನಿಂದ ನಿಧನರಾದವರು ಮತ್ತು ಆಗಸ್ಟ್ ಮಾಹೆಯಲ್ಲಿ ಅತಿವೃಷ್ಟಿಯಿಂದ ನಿಧನರಾದವರ ಬಗ್ಗೆ.**

---

**ಸಭಾಪತಿಯವರು:–** ಕೆಲವು ಮಾನ್ಯ ಸದಸ್ಯರುಗಳು ಮತ್ತು ಕೆಲವು ಗಣ್ಯರು ನಮ್ಮನ್ನಗಲಿದ್ದಾರೆ. ಅವರುಗಳನ್ನು ನೆನಪು ಮಾಡಿಕೊಳ್ಳುತ್ತಾ ಸಂತಾಪ ಸೂಚನೆ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

(ಪ್ರತಿ ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(710) 11.50 21.09.2020 ಎಸ್‌ವಿ-ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ಅನುಮೋದನೆಯನ್ನು ಕೊಡುತ್ತಾ, ಮೊದಲನೆಯದಾಗಿ ಭಾರತದ ಮಾಜಿ ರಾಷ್ಟ್ರಪತಿ, ಶ್ರೇಷ್ಠ ಚಿಂತಕ, ಆರ್ಥಿಕ ತಜ್ಞ, ರಾಜಕಾರಣಿ, ದಾರ್ಶನಿಕ ಇವೆಲ್ಲವುಗಳಿಗಿಂತ ಹೆಚ್ಚಾಗಿ ಜನಪರ ಕಾಳಜಿಯನ್ನು ಹೊಂದಿದ್ದಂತಹ ಶ್ರೀ ಪ್ರಣಬ್ ಮುಖರ್ಜಿಯವರ ವ್ಯಕ್ತಿತ್ವಕ್ಕೆ ಮನಸೋಲದವರೇ ಇಲ್ಲ ಎನ್ನುವ ಭಾವನೆ ಇಡೀ ರಾಷ್ಟ್ರದಲ್ಲಿದೆ. ಅಂತಹ ಹಿರಿಯರ ಹೆಸರಿನಲ್ಲಿ ತಾವು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಶ್ರೀ ಪ್ರಣಬ್ ಮುಖರ್ಜಿಯವರು ಒಬ್ಬ ದೂರದೃಷ್ಟಿಯುಳ್ಳ ನಾಯಕರಾಗಿದ್ದರು. ಬೆಳಗಾವಿಯಲ್ಲಿರುವ ಸುವರ್ಣ ಸೌಧದ ಉದ್ಘಾಟನೆಗೆ ಅವರು ಬಂದಿದ್ದರು. ಆಗ ಅವರನ್ನು ಬಹಳ ಹತ್ತಿರದಿಂದ ನೋಡುವ ಅವಕಾಶ ನಮಗೊದಗಿತ್ತು. ಶ್ರೀ ಪ್ರಣಬ್ ಮುಖರ್ಜಿಯವರ ವಿಶೇಷತೆ ಏನೆಂದರೆ ಭಾರತದ ಹದಿಮೂರನೆಯ ರಾಷ್ಟ್ರಪತಿಗಳಾಗಿ 2017ರಲ್ಲಿ ನಿವೃತ್ತಿಯಾದ ನಂತರ ಭಾರತ ಕಂಡಂತಹ ಸರ್ವಶ್ರೇಷ್ಠ ರಾಜಕಾರಣಿಗಳಲ್ಲಿ ಒಬ್ಬರು ಎನ್ನುವಂತಹ ಮಾತಿಗೆ ಇಡೀ ರಾಷ್ಟ್ರ ಸಹಮತವನ್ನು ವ್ಯಕ್ತ ಪಡಿಸುತ್ತದೆ ಎಂದು ನಾವು ಭಾವಿಸುತ್ತೇವೆ. ಸತತ ಐದು ದಶಕಗಳ ಕಾಲ ಭಾರತದ ರಾಜಕಾರಣದಲ್ಲಿ ಹಲವು ಮಹತ್ವದ ಹುದ್ದೆಗಳನ್ನು ದಿವಂಗತ ಪ್ರಣಬ್ ಮುಖರ್ಜಿಯವರು ಅಲಂಕರಿಸಿದ್ದರು. ಒಬ್ಬ ಅಧ್ಯಾಪಕರಾಗಿ, ಪತ್ರಕರ್ತರಾಗಿ, ರಾಜಕೀಯ ನಾಯಕರಾಗಿ ನಂತರ ರಾಷ್ಟ್ರಪತಿಗಳಾಗಿ ಶ್ರೀ ಪ್ರಣಬ್ ಮುಖರ್ಜಿಯವರು ತಮ್ಮ ಬಹುಮುಖ ಪ್ರತಿಭೆಯನ್ನು ಪ್ರಪಂಚಕ್ಕೆ ತೋರ್ಪಡಿಸಿದ್ದರು. ಕೇಂದ್ರ ಸಚಿವರಾಗಿಯೂ ಸಹ ಹಲವು ಪ್ರಮುಖ ಖಾತೆಗಳನ್ನು ನಿರ್ವಹಿಸಿದ್ದರು. ಹಣಕಾಸು ಸಚಿವರಾಗಿ ಏಳು ಬಾರಿ ಆಯವ್ಯಯವನ್ನು ಮಂಡಿಸಿದ ಕೀರ್ತಿಗೆ ದಿವಂಗತ ಪ್ರಣಬ್ ಮುಖರ್ಜಿಯವರು ಪಾತ್ರರಾಗಿದ್ದರು. ಅವರು ಅಧ್ಯಾಪಕರಾಗಿದ್ದವರು ಎನ್ನುವ ವಿಚಾರ ಅನೇಕರಿಗೆ ತಿಳಿದಿರಲಿಲ್ಲ. 1963ರಲ್ಲಿ ಪಶ್ಚಿಮ ಬಂಗಾಳದ ವಿದ್ಯಾನಗರ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿ ಅವರು ಕೆಲಸವನ್ನು ಮಾಡಿದರು. ಬಂಗಾಳಿ ಪತ್ರಿಕೆಯಾದ 'Desher Dak' ದಲ್ಲಿ ಅವರು ಪತ್ರಕರ್ತರಾಗಿ ಸೇವೆಯನ್ನು ಸಲ್ಲಿಸಿದರು. ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ಪ್ರಣಬ್ ಮುಖರ್ಜಿಯವರು ರಾಜ್ಯಸಭಾ ಸದಸ್ಯರಾಗುತ್ತಾರೆ. ಅವರು ಕೆಲಸವನ್ನು ದೇವರೆಂದು ನಂಬಿ ಕೆಲಸ ಮಾಡಿದವರು. ಬಹಳ ಶ್ರಮ ಜೀವಿಯಾಗಿದ್ದರು. ಯಾವುದೇ ವಿರಾಮವನ್ನು ಪಡೆಯದೆ ಕೆಲಸ ಮಾಡುವ ಗುಣ ಅವರಿಗೆ ಕರಗತವಾಗಿತ್ತು. ಅವರು ಯಾವುದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಜೆಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ವಿದೇಶಾಂಗ ಮಂತ್ರಿಯಾಗಿ, ಹಣಕಾಸು ಮಂತ್ರಿಯಾಗಿ ಹಲವಾರು ಖಾತೆಗಳನ್ನು ಅತ್ಯಂತ ಸಮರ್ಥವಾಗಿ ನಿರ್ವಹಣೆ ಮಾಡಿದ್ದರು. 1984ರಲ್ಲಿ 'Euro Money' ಎನ್ನುವ ಅಂತರರಾಷ್ಟ್ರೀಯ ನಿಯತಕಾಲಿಕವೊಂದು ಸರ್ವೆ ಮಾಡಿದ್ದು, ಅದರಲ್ಲಿ ವಿಶ್ವದಲ್ಲಿಯೇ ಅತ್ಯುತ್ತಮ ಹಣಕಾಸು ಸಚಿವರು ಎಂಬ ಕೀರ್ತಿಗೆ ಶ್ರೀ ಪ್ರಣಬ್ ಮುಖರ್ಜಿಯವರು ಭಾಜನರಾಗಿದ್ದರು. ಆ ಮೂಲಕ ಅವರ ಅರ್ಹತೆ ಹಾಗೂ ಆರ್ಥಿಕ ತಜ್ಞತೆ ಎಷ್ಟು ಎಂದು ನಾವು ಊಹಿಸಬಹುದು. ಸುಮಾರು 40 ವರ್ಷಗಳಿಂದ ಅವರು ದಿನಚರಿಯನ್ನು ಬರೆಯುತ್ತಿದ್ದರು ಎಂಬ ಮಾಹಿತಿಯಿದೆ. ಅವರ ಕಾಲಾನಂತರ ಅವರ ದಿನಚರಿಯನ್ನು ಪ್ರಕಟಿಸಬೇಕೆಂಬ ಎನ್ನುವ ಇಚ್ಛೆಯನ್ನು ಅವರು ಹೊಂದಿದ್ದರು. ಮುಂದೆ ಅವರ ಕುಟುಂಬದವರು ಪ್ರಣಬ್ ಮುಖರ್ಜಿಯವರ ದಿನಚರಿಯನ್ನು ಪ್ರಕಟಿಸಬಹುದು ಎನ್ನುವ ಕುತೂಹಲದಿಂದ ಇಡೀ ದೇಶ ಎದುರು ನೋಡುತ್ತಿದೆ. ಅವರು ವಿಚಾರದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ವಸ್ತುನಿಷ್ಠ ವಿಷಯವನ್ನು ಚರ್ಚಿಸುವಾಗ ರಾಜಕಾರಣವನ್ನು ಮೀರಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರು. ಅವರು ರಾಷ್ಟ್ರಪತಿಯಾಗಿದ್ದ ಸಂದರ್ಭದಲ್ಲಿ ಭಯೋತ್ಪಾದಕರಾಗಿದ್ದ ಅಫ್ಜಲ್ ಗುರು ಮತ್ತು ಅಜ್ಮಲ್ ಕಸಬ್ ಕ್ಷಮಾಪಣಾ ಅರ್ಜಿಯನ್ನು ರಾಷ್ಟ್ರಪತಿಗಳಿಗೆ ಕಳುಹಿಸಿದಾಗ ಬೇರೆ ಬೇರೆ ಕಾರಣಗಳಿಂದಾಗಿ ಅನೇಕ ಒತ್ತಡಗಳು ಬಂದರೂ ಸಹ ಒಂದು ನಿಮಿಷವೂ ಸಹ ಆ ಕಡತವನ್ನು ತಮ್ಮ ಬಳಿ ಇಟ್ಟುಕೊಳ್ಳದೆ ನ್ಯಾಯಾಲಯ ಕೊಟ್ಟಿರುವ ತೀರ್ಪನ್ನು ಕ್ಷಮಾದಾನವಿಲ್ಲದೆ ಮರಣ ದಂಡನೆಯ ತೀರ್ಪನ್ನು ಅನುಷ್ಠಾನಗೊಳಿಸಬೇಕು ಎಂದು ಕಡತಕ್ಕೆ ಸಹಿ ಮಾಡಿ ವಾಪಸ್ ಕಳುಹಿಸುತ್ತಾರೆ.

**(...ಮುಂದು)**

**(711) 21.09.2020 12.00. KG-RN**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು.,)**

ಶ್ರೀಯುತರು ಅರ್ಜಿಯನ್ನು ತನಿಖೆ ಮಾಡುವುದಕ್ಕೂ ಸಹ ಒಪ್ಪುವುದಿಲ್ಲ. ಅಂದರೆ, ರಾಷ್ಟ್ರೀಯತೆ ವಿಚಾರದಲ್ಲಿ ಯಾವ ನಿರ್ಧಾರಕ್ಕೂ ಸಹ ಅವರು ಯೋಚನೆ ಮಾಡದೆ ದೇಶದ ಪರವಾಗಿ ನಿರ್ಧಾರವನ್ನು ತೆಗೆದುಕೊಳ್ಳುವಂತಹ ಯೋಚನೆ ಅವರಿಗೆ ಇತ್ತು. ಅವರು ರಾಷ್ಟ್ರಪತಿಯಾಗಿದ್ದಂತಹ ಸಂದರ್ಭದಲ್ಲಿ ಸೆಪ್ಟೆಂಬರ್, 05 ರಂದು ಶಿಕ್ಷಕರ ದಿನಾಚರಣೆಯ ದಿವಸ ಭಾರತ ರಾಜಕೀಯ ಇತಿಹಾಸವನ್ನು ದೆಹಲಿಯಲ್ಲಿನ ಒಂದು ಶಾಲೆಯಲ್ಲಿ ಶಾಲಾ ಮಕ್ಕಳಿಗೆ ಅಧ್ಯಾಪಕರಾಗಿ ಪಾಠ ಮಾಡುವುದರ ಮೂಲಕ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಚರಣೆ ಮಾಡುತ್ತಾರೆಂದರೆ, ಅವರ ಸರಳತೆ ಮತ್ತು ಶ್ರದ್ಧೆ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನು ನಾವು ಯೋಚನೆ ಮಾಡುವಂತಹ ಕಾಲಘಟ್ಟದಲ್ಲಿದ್ದೇವೆ.

ಮಾನ್ಯ ಸಭಾಪತಿಯವರೇ, ಈ ರಾಷ್ಟ್ರಕ್ಕೆ ಒಂದು ಕೂತಹಲ ಇದೆ. ಸಾಮಾನ್ಯವಾಗಿ ಬೇರೆ ಬೇರೆ ರಾಜಕಾರಣದ ವಿಚಾರದ ಬಗ್ಗೆ ಯೋಚನೆ ಮಾಡುತ್ತಿರುವಂತಹ ಶ್ರೀ ಪ್ರಣಬ್ ಮುಖರ್ಜಿಯವರು ಅತ್ಯಂತ ಸರ್ವಶೇಷ್ಠ ಚಿಂತಕರು. ಶ್ರೀ ಪ್ರಣಬ್ ಮುಖರ್ಜಿಯವರು ತುಂಬ ಹಿರಿಯರು ಮತ್ತು ತುಂಬ ಮುತ್ಸದಿ. ಅವರಿಗೆ ಇಡೀ ದೇಶ ಗೌರವ ಕೊಡುತ್ತಿತ್ತು. ಅವರ ವಿಚಾರಗಳ ನಡುವೆಯೂ ಸಹ ಅವರು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಕಛೇರಿಗೆ ಒಂದು ಬಾರಿ ಭೇಟಿ ಕೊಟ್ಟಿದ್ದರು. ಶ್ರೀ ಪ್ರಣಬ್ ಮುಖರ್ಜಿಯವರು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಕಛೇರಿಗೆ ಭೇಟಿ ಕೊಟ್ಟಿದ್ದಾರೆಂದು ಅದರ ಬಗ್ಗೆ ಅನೇಕರಿಗೆ ಚರ್ಚೆ ಇದೆ. ಅವರು ಅತ್ಯಂತ ನಿರ್ಮಲವಾದ ಮನಸ್ಸಿನಿಂದ ಯೋಚನೆ ಮಾಡುತ್ತಿದ್ದರು. ಅವರು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಕಛೇರಿಗೆ ಭೇಟಿ ಕೊಟ್ಟಂತಹ ವಿಚಾರವನ್ನು ಅವರು ದಾಖಲೆಯ ಪುಸ್ತಕದಲ್ಲಿ ಭಾರತದ ಹೆಮ್ಮೆಯ ಪುತ್ರ "ಹೆಗೆಡೆವಾರ್ ಜನ್ಮ ಸ್ಥಳಕ್ಕೆ ಆಗಮಿಸಿದ್ದೇನೆ. ಇಂತಹ ಧೀಮಂತ ನಾಯಕನಿಗೆ ಗೌರವ ಸಲ್ಲಿಸಲು ಇಲ್ಲಿಗೆ ಆಗಮಿಸಿದ್ದು, ನನಗೆ ಹೆಮ್ಮೆ ಇದೆ ಎಂದು ದಾಖಲೆಯ ಪುಸ್ತಕದಲ್ಲಿ ಬರೆದು" ಸಹಿ ಮಾಡಿರುತ್ತಾರೆ. ಒಟ್ಟಾರೆಯಾಗಿ, ಅವರ ಭಾವನೆಗಳು ಇಡೀ ಸಮಾಜವನ್ನು ಮುಕ್ತವಾಗಿ ನೋಡಬೇಕು ಎನ್ನುವಂತಹ ಯೋಚನೆಯ ಚೌಕಟ್ಟು ಅವರಿಗೆ ಇತ್ತು. ರಾಜಕಾರಣವನ್ನು ಮೀರಿ ಅವರಿಗೆ "ಭಾರತ ರತ್ನ" ಪ್ರಶಸ್ತಿ ಬಂದಿರುವುದನ್ನು ತಾವು ಗಮನಿಸಿದ್ದೀರಿ. ಅವರಿಗೆ "ಭಾರತ ರತ್ನ" ಪ್ರಶಸ್ತಿ ಬಂದಂತಹ ಸಂದರ್ಭದಲ್ಲಿ ನಮ್ಮ ಇಡೀ ದೇಶ ಬಹಳ ಸಂತಸವನ್ನು ವ್ಯಕ್ತಪಡಿಸಿತ್ತು. ಅವರು ಅನೇಕ ಬಾರಿ ಪಕ್ಷಬೇಧ ಮರೆತು ಅವರ ಯೋಚನೆಯ ಮೂಲಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ನಮ್ಮ ದೇಶದ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಹುಟ್ಟುಹಬ್ಬದ ದಿವಸ ಅವರಿಗೆ "ಜಗ ಮೆಚ್ಚಿದ ಮತ್ತು ಜನ ಮೆಚ್ಚಿದ ನಾಯಕರಾಗಿದ್ದೀರಿ" ನಿಮ್ಮನ್ನು ನಾನು ಅಭಿನಂದಿಸುತ್ತೇನೆ ಎಂಬ ಸಂದೇಶವನ್ನು ಕಳುಹಿಸಿದ್ದರು. ಪಕ್ಷವನ್ನು ಮೀರಿ ನಿರ್ಧಾರವನ್ನು ಕೈಗೊಳ್ಳುವಂತಹ ಯೋಚನೆ ಮಾಡುವಂತಹ ಗುಣ ಶ್ರೀ ಪ್ರಣಬ್ ಮುಖರ್ಜಿಯವರಿಗೆ ಇತ್ತು. ಈ ಸದನದ ಪರವಾಗಿ ತಾವು ಮಂಡಿಸಿರುವಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು ಉಲ್ಲೇಖ ಮಾಡಿರುವಂತಹ "ಶ್ರೀ ಎಂ.ವಿ.ರಾಜಶೇಖರನ್‌ರವರು" ನನಗೆ ನೆನಪಿರುವಂತೆ ನಮ್ಮ ಸಹ ಸದಸ್ಯರಾಗಿ ಕೆಲಸಗಳನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಶ್ರೀ ಎಂ.ವಿ.ರಾಜಶೇಖರನ್‌ರವರು ತುಂಬ ಹಿರಿಯರು. ಅವರಿಗೆ ಗ್ರಾಮೀಣಾಭಿವೃದ್ಧಿ ಬಗ್ಗೆ ಅಪರವಾದಂತಹ ಕಾಳಜಿ ಇತ್ತು. ಗ್ರಾಮೀಣ ಆರ್ಥಿಕತೆಯ ವಿಚಾರದಲ್ಲಿ ಆಳವಾದ ಜ್ಞಾನವನ್ನು ಹೊಂದಿದ್ದರು. 1967 ರಲ್ಲಿ ಪ್ರಥಮ ಬಾರಿಗೆ ಲೋಕಸಭಾ ಸದಸ್ಯರಾಗಿ, 1978 ರಲ್ಲಿ ವಿಧಾನ ಸಭೆ ಸದಸ್ಯರಾಗಿ, 2002 ರಲ್ಲಿ ರಾಜ್ಯ ಸಭೆ ಸದಸ್ಯರಾಗಿ ಮತ್ತು 2008 ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ನಮಗೆ ಸಮಸ್ಸೆಗಳು ಬಂದಾಗ, ನಾವು ಶ್ರೀಯುತರ ಬಳಿಗೆ ಹೋಗಿ ಮಾತನಾಡಿದಾಗ ಅವರು ಬಹಳ ಪ್ರೀತಿಯಿಂದ ಅವರ ಅನುಭವಗಳನ್ನು ನಮ್ಮ ಜೊತೆಗೆ ಹಂಚಿಕೊಳ್ಳುತ್ತಿದ್ದರು. ಅಂತಹ ಹಿರಿಯರೊಬ್ಬರ ನಿಧನದಿಂದ ನಮಗೆ ನೋವು ತಂದಿದೆ.

ಮಾನ್ಯ ಸಭಾಪತಿಯವರೇ, ತಾವು ಮೂರನೆಯದಾಗಿ, "ಶ್ರೀ ಅಶೋಕ ಗಸ್ತಿಯವರ" ಬಗ್ಗೆ ಉಲ್ಲೇಖಿಸಿ ಸಂತಾಪವನ್ನು ಮಂಡಿಸಿದ್ದೀರಿ. ನಮಗೆ ಅತ್ಯಂತ ನೋವಿನ ಸಂಗತಿ ಎಂದರೆ, ಶ್ರೀಯುತರು ನಮ್ಮ ಪಕ್ಷದಲ್ಲಿ "ಯುವ ಮೋರ್ಚಾದ" ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. 2001 ರಲ್ಲಿ ರಾಯಚೂರು ನಗರಸಭೆ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅಲ್ಲದೇ, ಬೇರೆ ಬೇರೆ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿದ್ದಾರೆ. ಇವತ್ತಿನ ಕಾಲಘಟ್ಟದಲ್ಲಿ ಶ್ರೀ ಅಶೋಕ ಗಸ್ತಿ ಅಂತಹ ಸಮಾಜದ ಕಟ್ಟಕಡೆಯ ಮನುಷ್ಯ ಹಾಗೂ ಸಮಿತಾ ಸಮಾಜದಿಂದ ಬಂದವರು ರಾಜ್ಯ ಸಭೆಯ ಸದಸ್ಯರಾಗಿದ್ದರು ಎಂದರೆ, ನಾವು ಏನೇ ವ್ಯಯ ಮಾಡಿದ್ದರೂ ಸಹ, ಆರ್ಥಿಕವಾಗಿ ಸಮರ್ಥರು ಮತ್ತು ಬಹು ದೊಡ್ಡ ವ್ಯಕ್ತಿಗಳು ರಾಜ್ಯಸಭೆಯನ್ನು ಪ್ರವೇಶ ಮಾಡುತ್ತಾರೆಂದು ನಾವೆಲ್ಲರೂ ನಂಬಿರುವಂತಹ ಕಾಲಘಟ್ಟದಲ್ಲಿ ನಮ್ಮ ಪಕ್ಷದ ಹಿರಿಯರು ಯೋಚನೆ ಮಾಡಿ ಶ್ರೀ ಅಶೋಕ ಗಸ್ತಿ ಅಂತಹ ಸಮಿತಾ ಸಮಾಜದ ವ್ಯಕ್ತಿ ಹಾಗೂ ನಮ್ಮ ಪಕ್ಷದ ಸಾಮಾನ್ಯ ಕಾರ್ಯಕರ್ತನಿಗೆ ರಾಜ್ಯ ಸಭೆಯ ಸದಸ್ಯನಾಗಿ ಅವಕಾಶಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ನಮ್ಮ ರಾಜ್ಯದ ಕಾರ್ಯಕರ್ತರು ಬಹಳ ರೋಮಾಂಚನಗೊಂಡಿದ್ದಾರೆ. ಏಕೆಂದರೆ, ನಮ್ಮ ಪಕ್ಷದ ಕಟ್ಟಕಡೆಯ ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ರಾಜ್ಯ ಸಭೆಗೆ ಅವಕಾಶ ಸಿಕ್ಕಿತ್ತು ಎಂದು ಹೇಳುವಂತಹ ಹೆಮ್ಮೆ ನಮಗೆ ಇದೆ. ಶ್ರೀ ಅಶೋಕ ಗಸ್ತಿಯವರು ರಾಜ್ಯ ಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ನಮ್ಮ ಪಕ್ಷದವರು ರೋಮಾಂಚನಗೊಂಡಿದ್ದೇವೆ. ಹಾಗೆಯೇ, ಬೇರೆ ಪಕ್ಷದವರು ಸಹ ನಮಗೆ ಪೋನ್ ಮಾಡಿ ಒಬ್ಬ ಸಾಮಾನ್ಯ ಕಾರ್ಯಕರ್ತನಿಗೂ ನೀವು ಅವಕಾಶ ಕೊಟ್ಟಿದ್ದೀರಿ ಎಂದು ಹೇಳಿದ್ದರು. ಬೇರ ಬೇರೆ ಪಕ್ಷಗಳಲ್ಲಿ ಮಹಿಳೆಯರ ವಿಭಾಗ ಇರುತ್ತದೆ. ವಿದ್ಯಾರ್ಥಿಗಳ ವಿಭಾಗ ಇರುತ್ತದೆ, ಹಿಂದೂಳಿದ ವರ್ಗಗಳ ವಿಭಾಗ ಇರುತ್ತದೆ. ಅದೇ ರೀತಿ ನಮ್ಮ ಪಕ್ಷದಲ್ಲಿಯೂ ಹಿಂದೂಳಿದ "ವರ್ಗಗಳ ಮೋರ್ಚಾ" ಎಂಬ ಒಂದು ಸಂಘಟನೆ ಇದೆ. ಆ ಸಂಘಟನೆಗೆ ನಾನು ರಾಜ್ಯಧ್ಯಕ್ಷನಾಗಿ ಮೂರು ವರ್ಷಗಳ ಕೆಲಸ

ಮಾಡಿದ್ದೇನೆ. ಆಗ ಶ್ರೀ ಅಶೋಕ ಗಸ್ತಿ ಯವರು ಪ್ರಧಾನ ಕಾರ್ಯದರ್ಶಿಯಾಗಿದ್ದರು. ಆ ಸಂದರ್ಭದಲ್ಲಿ ಅವರು ಅವರ ಅನುಭವಗಳನ್ನು ನನ್ನ ಜೊತೆಗೆ ಹಂಚಿಕೊಂಡಿದ್ದರು. ಶ್ರೀಯುತರು ನನಗೆ ಮಾರ್ಗದರ್ಶನಗಳನ್ನು ಕೊಟ್ಟಿದ್ದರು. ಅಲ್ಲದೇ, ಬೇರೆ ಬೇರೆ ವಿಚಾರಗಳಲ್ಲಿ ಯಾವ ರೀತಿ ಓಡಾಟ ಮಾಡಬೇಕು, ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡಬೇಕು ಎನ್ನುವಂತಹ ಒಂದು ಸ್ನೇಹದ ವಾತಾವರಣವನ್ನು ನಿರ್ಮಾಣ ಮಾಡಿ ನನಗೆ ವಿಶ್ವಾಸವನ್ನು ತುಂಬಿದ್ದರು. ಶ್ರೀ ಅಶೋಕ ಗಸ್ತಿ ಅವರ ನಿಧನ ನನಗೆ ಅತ್ಯಂತ ನೋವು ತಂದಿದೆ. ಶ್ರೀ ಅಶೋಕ ಗಸ್ತಿ ರವರು ಈ ಬಾರಿ ಸದನದಲ್ಲಿ ಭಾಗವಹಿಸಿ ಸಾಮಾನ್ಯ ಬಡವರ, ದುರ್ಬಲರ ಹಾಗೂ ಕೆಳವರ್ಗದವರ ಭಾವನೆಗಳನ್ನು ಸದನದಲ್ಲಿ ಬಿಂಬಿಸುವಂತಹ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುತ್ತಾರೆ ಎಂಬ ಆಸೆ ಇತ್ತು. ನಾವು ಅದನ್ನು ನೋಡಿ ಸಂತೋಷ ಪಡಬೇಕೆಂಬ ಆಸೆಗಳು ಇದ್ದವು. ಶ್ರೀ ಅಶೋಕ ಗಸ್ತಿ ರವರಿಗೆ ನಮ್ಮ ಜಿಲ್ಲೆಗೆ ಬನ್ನಿ ಎಂದು ಹೇಳಿದ್ದೆ. ಅದಕ್ಕೆ ಅವರು ಬರುತ್ತೇನೆಂದು ಹೇಳಿದ್ದರು. ಅವರು ಬರುತ್ತೇನೆಂದು ಹೇಳಿದ್ದವರು. ಆದರೆ, ನಮ್ಮನ್ನೆಲ್ಲಾ ಬಿಟ್ಟು ಹೋಗಿರುವಂತಹ ನೋವು ಕಾಡುತ್ತಿದೆ. ತಾವು ಶ್ರೀ ಅಶೋಕ ಗಸ್ತಿಯವರ ಬಗ್ಗೆ ಮಂಡಿಸಿರುವಂತಹ ಸಂತಾಪ ಸೂಚನೆಗೆ ನಾನು ನನ್ನ ಸಹಮತವನ್ನು ವ್ಯಕ್ತ ಪಡಿಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು "ಶ್ರೀ ಬಿ.ಸತ್ಯನಾರಾಯಣ" ರವರ ಪ್ರಸ್ತಾಪವನ್ನು ಮಂಡಿಸಿದ್ದೀರಿ. ಹಾಲಿ ವಿಧಾನಸಭೆಯ ಸದಸ್ಯರಾಗಿದಂತಹ ಶ್ರೀ ಬಿ.ಸತ್ಯನಾರಾಯಣ ರವರು ಅತ್ಯಂತ ಚುರುಕಿನ ಶಾಸಕರಾಗಿದ್ದರು. ಶ್ರೀಯುತರು ಬಿ.ಎ., ಎಲ್.ಎಲ್.ಬಿ., ಪದವೀಧರಾಗಿದ್ದರು. ಅವರು ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಶ್ರೀಯುತರು ಬಡವರ, ದುರ್ಬಲರ, ನೋವುಂಡವರ ಧ್ವನಿಯಾಗಿ ಕೆಲಸ ಮಾಡಿದ್ದರು. ಶ್ರೀಯುತರು ಬದುಕಿದ್ದರೆ, ಇನ್ನೂ ಮೂರು ವರ್ಷಗಳ ಕಾಲ ಕೆಳಮನೆಯ ಸದಸ್ಯರಾಗಿ ಅನೇಕ ಸಂಗತಿಗಳನ್ನು ಉಲ್ಲೇಖ ಮಾಡಿ ಸಾರ್ವಜನಿಕರ ಜೀವನದಲ್ಲಿ ಮಹತ್ವವಾದಂತಹ ಕೆಲಸ ಕಾರ್ಯಗಳನ್ನು ಮಾಡುವಂತಹ ಅವಕಾಶಗಳು ಅವರಿಗೆ ಇತ್ತು. ಶ್ರೀಯುತರ ನಿಧನದಿಂದಾಗಿ ನಮ್ಮ ರಾಜ್ಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಹ ಅನುಭವ ನಮಗೆಲ್ಲಾ ಆಗಿದೆ.

ಮಾನ್ಯ ಸಭಾಪತಿಯವರೇ, ತಾವು "ಶ್ರೀಮತಿ ವಿನ್ನಿಫ್ರೇಡ್ ಎಫ್.ಪರ್ನಾಂಡಿಸ್" ರವರ ನಿಧನಕ್ಕೆ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಶ್ರೀಯುತರು ಕುಂದಾಪುರ ಕ್ಷೇತ್ರದಿಂದ ವಿಧಾನ ಸಭೆಯ ಸದಸ್ಯರಾಗಿದ್ದರು ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದರು. ಶ್ರೀಯುತರು ಭೂ ನ್ಯಾಯ ಮಂಡಳಿಯ ಸದಸ್ಯರಾಗಿ ಕೆಲಸಗಳನ್ನು ಮಾಡಿದ್ದರು. ಭೂ ಮಸೂದೆ ಜಾರಿಯಾದ ಸಂದರ್ಭ, ಮಾನ್ಯ ದೇವರಾಜು ಅರಸು ಮುಖ್ಯ ಮಂತ್ರಿ ಆಗಿದಂತಹ ಸಂದರ್ಭದಲ್ಲಿ ಭೂ ನ್ಯಾಯ ಮಂಡಳಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಸದಸ್ಯರಾಗುವುದೇ ಬಹು ದೊಡ್ಡ ಹುದ್ದೆ. ಏಕೆಂದರೆ, ಬಡವರಿಗೆ ಭೂಮಿ ಹಂಚುವುದಕ್ಕೆ ಸಿಗುವಂತಹ ಏಕೈಕ ಅವಕಾಶ ಅದು. ನಾನು ಅರ್ಥ ಮಾಡಿಕೊಂಡಂತೆ, ಅಲ್ಲಿನ ಜನರು ಅವರನ್ನು 'ಏನ್ನಿಯಮ್ಮ' ಎಂದು ಕರೆಯುತ್ತಿದ್ದರು. ಪಕ್ಷಭೇದ ಮರೆತು ನಮಗೆ ಅವರ ಬಗ್ಗೆ ವಿಶೇಷವಾದ ಗೌರವ ಮತ್ತು ಕಾಳಜಿ ಇತ್ತು. ಶ್ರೀಯುತರು ನಿಧನರಾದಂತಹ ಸಂದರ್ಭದಲ್ಲಿ ಶ್ರೀಯುತರು ಮಾಜಿ ಶಾಸಕರಾಗಿದ್ದರಿಂದ ಅವರಿಗೆ ಸರ್ಕಾರಿ ಗೌರವಗಳನ್ನು ಸಲ್ಲಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಚರ್ಚೆ ಆಗಿತ್ತು. ಆ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮತ್ತು ಪ್ರಧಾನ ಕಾರ್ಯದರ್ಶಿಯವರ ಬಳಿ ಶ್ರೀಮತಿಯವರಿಗೆ ವಿಶೀಷವಾಗಿ ಸರ್ಕಾರಿ ಗೌರವಗಳನ್ನು ಕೊಡಬೇಕೆಂದು ವಿನಂತಿ ಮಾಡಿದ್ದೆ. ಅದರ ಆಧಾರ ಮೇರೆಗೆ ಅವರಿಗೆ ಸರ್ಕಾರಿ ಗೌರವಗಳನ್ನು ಸಲ್ಲಿಸಲಾಯಿತು. ನಾನು ಅದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು “ಶ್ರೀ ರಾಜ ರಂಗಪ್ಪನಾಯಕ್” ರವರ ನಿಧನಕ್ಕೆ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಶ್ರೀಯುತರು 1987–92 ರಲ್ಲಿ ಕೂನಾಪುರ ಎಸ್.ಹೆಚ್.ಮಂಡಲದ ಪ್ರಧಾನರಾಗಿ ಸೇವೆ ಸಲ್ಲಿಸಿದ್ದಾರೆ. ಗುಲಬರ್ಗಾ ಜಿಲ್ಲಾ ಪಂಚಾಯತ್‌ನಲ್ಲಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. 1996 ರಲ್ಲಿ ರಾಯಚೂರು ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಲೋಕಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇಂತಹ ಹಿರಿತನ ರಾಜ ರಂಗಪ್ಪ ನಾಯಕ್‌ರವರಿಗೆ ಈ ಸದನದ ಪರವಾಗಿ ತಾವು ಮಂಡಿಸಿರುವಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ ಎಂಬುದನ್ನು ಉಲ್ಲೇಖ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು “ಶ್ರೀ ಮದನ ಗೋಪಾಲ ನಾಯಕ್” ರವರ ನಿಧನಕ್ಕೆ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಶ್ರೀಯುತರು 1951ರ ಆಗಸ್ಟ್ 22 ರಂದು ಯಾದಗಿರಿ ಜಿಲ್ಲೆಯ ಶೋರಾಪುರದಲ್ಲಿ ಜನಿಸಿದ್ದರು. ಶ್ರೀಯುತರು ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಹಾಗೂ ಹಿಂದೂಳಿದ ವರ್ಗಗಳ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು. ಶ್ರೀಯುತರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಶ್ರೀಯುತರು ರಾಜಕಾರಣದಲ್ಲಿದ್ದರೂ ಸಹ, ಕಲೆ ಮತ್ತು ಸಾಹಿತ್ಯದಲ್ಲಿ ವಿಶೇಷವಾದಂತಹ ಕಾಳಜಿಯನ್ನು ಹೊಂದಿದ್ದರು. ಶ್ರೀಯುತರ ಆತ್ಮಕ್ಕೆ ದೇವರು ಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಸಭಾಪತಿಯವರೇ, ತಾವು "ಶ್ರೀ ಜಿ.ರಾಮಕೃಷ್ಣರವರ" ಬಗ್ಗೆ ಉಲ್ಲೇಖನಗಳನ್ನು ಮಾಡಿದ್ದೀರಿ. ಶ್ರೀಯುತರು ಗುಲಬರ್ಗಾ ಜಿಲ್ಲೆಯವರಾಗಿದ್ದು, ಶ್ರೀಯುತರು ಮಾನ್ಯ ವೀರಪ್ಪ ಮೊಯಿಲಿ ಅವರ ಸಚಿವ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ಶ್ರೀಯುತರು ಬಡವರು, ದೀನದಲಿತರ ಏಳಿಗೆಗಾಗಿ ಸಲ್ಲಿಸಿದ ಅಪ್ರತಿಮ ಸೇವೆಗಾಗಿ ರಾಜ್ಯ ಸರ್ಕಾರವು ಅವರಿಗೆ ಡಾ||ಬಾಬು ಜಗಜೀವನರಾಮ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಶ್ರೀಯುತರ ನಿಧನದಿಂದ ನಮಗೆಲ್ಲಾ ನೋವು ತಂದಿದೆ. ಹಾಗೆಯೇ, ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಮಾನ್ಯ ಸಭಾಪತಿಯವರೇ, "ಶ್ರೀ ಹೊಸ್ತೋಟ ಗಜಾನನ ಭಟ್" ಇವರು ಖ್ಯಾತ ಯಕ್ಷಗಾನ ಕಲಾವಿದರಾಗಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತಹ ವಿಶಿಷ್ಟತೆ ಏನೆಂದರೆ, ಅದು "ಕಲೆಗೆ ಗಂಡು ಮೆಟ್ಟಿದ ನೆಲ". ಉತ್ತರ ಕನ್ನಡ ಜಿಲ್ಲೆಯಲ್ಲಿ ನೂರಾರು ಪ್ರತಿಭಾವಂತ ಕಲಾವಿದರು ಇದ್ದಾರೆ. ಅಂತಹ ಕಲಾವಿದರಲ್ಲಿ ಶ್ರೀ ಹೊಸ್ತೋಟ ಗಜಾನನ ಭಟ್ ರವರು ಒಬ್ಬರಾಗಿದ್ದರು. ಶ್ರೀಯುತರನ್ನು "ಯಕ್ಷಋಷಿ " ಎಂದು ಕರೆಯುತ್ತಿದ್ದರು. ಶ್ರೀಯುತರ ನಿಧನದಿಂದ ಬಹಳ ಸಂಕಟವನ್ನು ಉಂಟು ಮಾಡಿದೆ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು "ಪ್ರೊ||ಕೆ.ಎಸ್.ನಿಸಾರ್ ಅಹಮದ್" ರವರನ್ನು ಉಲ್ಲೇಖ ಮಾಡಿದ್ದೀರಿ. ಶ್ರೀಯುತರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಬ್ಬ ಶ್ರೇಷ್ಠ ಅದ್ಭುತ ಕವಿಯಾಗಿದ್ದರು. ತಾವು ಉಲ್ಲೇಖ ಮಾಡಿದಂತೆ, ಅನೇಕ ಸಾಹಿತ್ಯಗಳನ್ನು ಬರೆದಿದ್ದಾರೆ. ಶ್ರೀಯುತರು "ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ" ಪದ್ಯ ರಚನೆ ಮೂಲಕ ನಾಡಿನಾದ್ಯಂತ ನಿತ್ಯೋತ್ಸವ ಕವಿಗಳೆಂದು ಜನಪ್ರಿಯರಾಗಿದ್ದರು. ಅಲ್ಲದೇ, "ಬೆಣ್ಣೆ ಕದ್ದ ನಮ್ಮ ಕೃಷ್ಣ" ಸಹ ತುಂಬ ಪ್ರಚಾರಕ್ಕೆ ಬಂದಿತ್ತು. ಶ್ರೀಯುತರ ಅಂತಿಮ ಸಂಸ್ಕಾರದ ದಿವಸ ನಾನು ಅವರ ಮನೆಗೆ ಹೋಗಿದ್ದೆ. ಅಂದು ಮಾನ್ಯ ಸಿದ್ದರಾಮಯ್ಯನವರು ಸಹ ಬಂದಿದ್ದರು. ಅಂದಿನ ದಿವಸ ಶ್ರೀಯುತರ ಬಗ್ಗೆ ನಮಗೆ ಮಾತನಾಡುವಂತಹ ಅವಕಾಶಗಳು ಸಿಕ್ಕಿತ್ತು. ಶ್ರೀಯುತರು "ಪದ್ಮಶ್ರೀ" ಪ್ರಶಸ್ತಿ ಪಡೆದಂತಹ ಶೇಷ್ಠ ಕವಿಯಾಗಿದ್ದರು. ಶ್ರೀಯುತರ ಹೆಸರಿನಲ್ಲಿ ಒಂದು ಶಾಶ್ವತವಾದಂತಹ 'Theme Park' ಅನ್ನು ರಚನೆ ಮಾಡಬೇಕೆಂದು ನಮ್ಮ ಸರ್ಕಾರ ಯೋಚನೆ ಮಾಡಿ ಅದಕ್ಕೆ ಬೇಕಾದಂತಹ ಪ್ರಸ್ತಾವನೆಯನ್ನು ಸಿದ್ದಪಡಿಸಿದೆ.

ಮುಂದು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(712)21-09-2020(12-10)ಎಂವಿ-ಆರ್‌ಎನ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಅದಕ್ಕೆ ಬೇಕಾದಂತಹ ಪ್ರಸ್ತಾವನೆಯನ್ನು ಸಿದ್ಧತೆ ಮಾಡಿಕೊಂಡಿದೆ. ಅದನ್ನು ಮಂಜೂರು ಮಾಡಬೇಕೆಂದು ಸರ್ಕಾರದ ಪರವಾಗಿ ಯೋಚನೆ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಶ್ರೀಮತಿ ಶ್ಯಾಮಲಾ ಜಿ. ಭಾವೆಯವರನ್ನು 'ಗಾನ ಕೋಗಿಲೆ' ಎಂದು ಕರೆಯುತ್ತಿದ್ದರು. ಅವರು 'ಹಿಂದೂಸ್ತಾನಿ ಸಂಗೀತ'ದ ಜೊತೆಗೆ 'ಕರ್ನಾಟಕ ಸಂಗೀತ' ವನ್ನು ಕೂಡ ಕರಗತ ಮಾಡಿಕೊಂಡಿದ್ದರು. ಅವರನ್ನು 'ಉಭಯ ಗಾನ ವಿದೂಷಿ' ಎಂದು ಕರೆಯುತ್ತಿದ್ದರು. ವಿಶೇಷವಾಗಿ ಅವರು ತಮ್ಮ ಬಾಲ್ಯದಲ್ಲಿಯೇ ಗಾಯಕಿ ಎಂದು ಗುರುತಿಸಿಕೊಂಡು, ಸಾರ್ವಜನಿಕ ಸಂಗೀತ ಕಚೇರಿಗಳನ್ನು ನಡೆಸಿಕೊಡುತ್ತಿದ್ದರು. ರಾಷ್ಟ್ರವು ಸಂಗೀತ ಕ್ಷೇತ್ರದಲ್ಲಿ ಒಬ್ಬ ಒಳ್ಳೆಯ ಕಲಾವಿದೆಯನ್ನು ಕಳೆದುಕೊಂಡಂತಹ ಅನುಭವವಾಗಿದೆ.

ಮಾನ್ಯ ಸಭಾಪತಿಯವರೇ, ತಾವು ಶ್ರೀಮತಿ ಶಾಂತಾದೇವಿ ಕಣವಿಯವರ ಹೆಸರನ್ನು ಮಂಡಿಸಿದ್ದೀರಿ. ಅವರು ಶ್ರೀ ಚನ್ನವೀರ ಕಣವಿಯವರ ಪತ್ನಿ. ನಾನು ಒಂದೂವರೆ ವರ್ಷದ ಹಿಂದೆ ಶ್ರೀ ಚನ್ನವೀರ ಕಣವಿಯವರ ಮನೆಗೆ ಹೋಗಿ, ಅವರ ಹಿರಿಯರನ್ನೆಲ್ಲಾ ಮಾತನಾಡಿಸಿಕೊಂಡು ಬಂದಿದ್ದೆ. ಶ್ರೀಮತಿ ಶಾಂತಾದೇವಿ ಕಣವಿಯವರಲ್ಲಿ ಇರುವಂತಹ ವಿಚಾರವೆಂದರೆ, ಅವರ 'ಜಾತ್ರೆ ಮುಗಿದಿತ್ತು' ಎಂಬುದು ಅವರ ಕಥಾಸಂಕಲನ, ಅದು ಅದ್ಭುತವಾದಂತಹ ಜನಾಭಿಪ್ರಾಯವನ್ನು ಮೂಡಿಸಿತ್ತು ಮತ್ತು ಲಕ್ಷಾಂತರ ಓದುಗರು "ಜಾತ್ರೆ ಮುಗಿದಿತ್ತು" ಸಂಕಲನವನ್ನು ಓದಿ ಅದನ್ನು ಮುಕ್ತವಾಗಿ ಪ್ರಶಂಸೆ ಮಾಡಿದ್ದರು.

ಇನ್ನು ಹಿರಿಯ ರಂಗಕಲಾವಿದರು ಮತ್ತು ಖ್ಯಾತ ಗಾಯಕಿಯಾಗಿದ್ದಂತಹ ಡಾ॥ಸುಭದ್ರಮ್ಮ ಮನ್ಸೂರ್‌ರವರು ನಿಧನ ಹೊಂದಿದ್ದಾರೆ. ಅವರು ಹಿಂದೂಸ್ತಾನಿ ಗಾಯಕಿಯಾಗಿ ಖ್ಯಾತಿ ಪಡೆದಿದ್ದರು ಕೂಡಾ ಅವರು 'ಸುಮಂಗಲಿ ನಾಟ್ಯ ಸಂಘ' ದ ಮೂಲಕ ತಮ್ಮ 12ನೇ ವಯಸ್ಸಿನಲ್ಲಿ ವೃತ್ತಿ ರಂಗಭೂಮಿಯನ್ನು ಪ್ರವೇಶ ಮಾಡಿದ್ದರು. ಅವರು 'ಹೇಮರೆಡ್ಡಿ ಮಲ್ಲಮ್ಮ' ಎನ್ನುವಂತಹ ಕಥಾನಕ ನಾಟಕದ ಪಾತ್ರ ಮತ್ತು ಅಕ್ಕಮಹಾದೇವಿಯವರ 'ಬೆಟ್ಟದ ಮೇಲೊಂದು ಮನೆಯ ಮಾಡಿ' ನಾಟಕದ ಹಾಡುಗಳು ಅವರಿಗೆ ಬಹಳ ದೊಡ್ಡ ಕೀರ್ತಿಯನ್ನು ತಂದುಕೊಟ್ಟಿದೆ ಎಂಬುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾದಂತಹ ಅವಶ್ಯಕತೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ತಾವು ಶ್ರೀ ಪಂಡಿತ್ ಜಸ್‌ರಾಜ್‌ರವರ ಉಲ್ಲೇಖವನ್ನು ಮಾಡಿದ್ದೀರಿ. ಅವರು ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದ ಗಾಯಕರಾಗಿದ್ದರು. ಶಾಸ್ತ್ರೀಯ ಸಂಗೀತವಷ್ಟೇ ಅಲ್ಲದೆ, ತಬಲ ಮತ್ತು ಸಿತಾರ ಹಾಗೂ ಬೇರೆ ಬೇರೆ ವಾದ್ಯಗಳ ಮೇಲೆ ಅಪಾರವಾದಂತಹ ಅನುಭವವನ್ನು ಹೊಂದಿದ್ದರು. ಅವರು ತಮ್ಮ 14ನೇ ವಯಸ್ಸಿನಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭ ಮಾಡಿದ್ದಾರೆ ಎಂಬ ದಾಖಲೆಗಳಿವೆ. ಅಮೆರಿಕಾ ಮತ್ತು ಕೆನಡಾ ದೇಶಗಳಲ್ಲಿ ಕೂಡ ಸಂಗೀತ ಕಚೇರಿಗಳನ್ನು ನೀಡಿದ್ದರು ಮತ್ತು ಭಾರತೀಯ ಸಂಗೀತವನ್ನು ದೇಶ ವಿದೇಶಗಳಿಗೆ ಕೊಂಡ್ಯೊಯ್ದಂತಹ ಒಂದು ಬಹು ದೊಡ್ಡ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರಿಗೆ 'ಪದ್ಮಭೂಷಣ ಪ್ರಶಸ್ತಿ' ಕೂಡ ಬಂದಿದೆ.

ಇನ್ನು ತಾವು ಉಲ್ಲೇಖ ಮಾಡಿರುವಂಥದ್ದು, ಶ್ರೀ ಕೇಶಾವನಂದ ಭಾರತಿ ಸ್ವಾಮೀಜಿಗಳ ಬಗ್ಗೆ. ಅವರ ಕಲೆ ಮತ್ತು ಸಾಹಿತ್ಯ ಹಾಗೂ ಧಾರ್ಮಿಕ ವಿಚಾರಗಳು ಕೇವಲ ಕೇರಳ ರಾಜ್ಯಕ್ಕೆ ಮಾತ್ರವಲ್ಲ, ಇಡೀ ಕರ್ನಾಟಕದಾದ್ಯಂತ ಬಹು ದೊಡ್ಡ ಹೆಸರನ್ನು ಪಡೆದಿವೆ. ಅವರು ತಮ್ಮ 20ನೇ ವಯಸ್ಸಿನಲ್ಲಿ ಮಠಾಧೀಶರಾಗಿ, ಚಾತುರ್ಮಾಸ್ಯ ವ್ರತಾನುಷ್ಠಾನವನ್ನು ಮಾಡಿರುವಂತಹ ರೀತಿಗಳು ಮತ್ತು ಇಡೀ ಮಠಾಧೀಶರಲ್ಲಿ ಅವರಿಗೆ ವಿಶಿಷ್ಟವಾದಂತಹ ಗೌರವವಿದೆ. ಅವರು ಕಲೆಯ ಬಗ್ಗೆ ತುಂಬಾ ಅದ್ಭುತವಾಗಿ ಯೋಚನೆ ಮಾಡವಂತಹವರು. ಅವರು ಸರ್ವಶ್ರೇಷ್ಠ ವಾಗ್ಮಿಗಳಾಗಿ ಸಮಾಜಕ್ಕೆ ಸಂದೇಶವನ್ನು ಕೊಟ್ಟಿರುವಂತಹ ವಿದ್ವಾಂಸರಾಗಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಅವರು ನ್ಯಾಯಾಂಗ ವ್ಯವಸ್ಥೆಯಲ್ಲಿ ಸಂವಿಧಾನ ಪರವಾಗಿ ಮಾಡಿರುವಂತಹ ಹೋರಾಟ, ಕೇರಳ ರಾಜ್ಯದ ಸರ್ಕಾರ ಮತ್ತು ಸ್ವಾಮೀಜಿಯವರ ಮಧ್ಯೆ ಒಂದು ರೀತಿಯ ಸಮರ ಏರ್ಪಾಡಾಗುವ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ದಾಖಲೆಗಳು ಹೇಳುತ್ತವೆ. ಅವರು ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸಬಾರದು ಎಂದು ಹೇಳಿ. ನ್ಯಾಯಾಂಗ ಒಂದು ತೀರ್ಪನ್ನು ಕೊಡುವುದಕ್ಕೆ ಕಾರಣೀಭೂತರಾದವರು ಶ್ರೀ ಕೇಶಾವನಂದ ಭಾರತಿ ಸ್ವಾಮೀಜಿಯವರು ಎನ್ನುವುದನ್ನು ನಾವು ಇಲ್ಲಿ ಉಲ್ಲೇಖ ಮಾಡುವಂಥದ್ದು ಇದೆ. ಪೂಜ್ಯ ಸ್ವಾಮೀಜಿಯವರ ಆತ್ಮಕ್ಕೆ ಪರಮಾತ್ಮ ಚಿರಶಾಂತಿಯನ್ನು ಕರುಣಿಸಲಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಎನ್.ಎಸ್.ಹುಚ್ಚರಾಯಪ್ಪ ಇವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದ ಕಾರಣಕ್ಕೆ ಅಂದಿನ ಬ್ರಿಟಿಷ್ ಸರ್ಕಾರ ಮರಣದಂಡನೆಯನ್ನು ಘೋಷಿಸಿತ್ತು. ಆದರೆ, ಅವರು ಅಪ್ರಾಪ್ತ ವಯಸ್ಕರಾಗಿದ್ದರಿಂದ, ಅವರ ಮರಣದಂಡನೆಯನ್ನು ಬದಲಿಸಿ ಜೀವಾವಧಿ ಶಿಕ್ಷೆ ವಿಧಿಸಿತ್ತು ಎಂದು ದಾಖಲೆಗಳಲ್ಲಿ ತಿಳಿಯುತ್ತದೆ. ಬಹುಶಃ ಸ್ವಾತಂತ್ರ್ಯ ಹೋರಾಟದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆಯ ಕೊಂಡಿಗಳೇನಾದರೂ ಉಳಿದಿರುವುದು ಎಂದು ಇದ್ದರೆ, ಅದು ನಮ್ಮ ಶ್ರೀ ಎನ್.ಎಸ್.ಹುಚ್ಚರಾಯಪ್ಪನವರು ಒಬ್ಬರು ಎಂದು ನನಗೆ ಅನಿಸುತ್ತದೆ. ಅಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಮತ್ತು ರಾಷ್ಟ್ರ ಭಕ್ತರನ್ನು ಕಳೆದುಕೊಂಡಿದ್ದೇವೆ ಎನ್ನುವಂತಹ ನೋವುಗಳು ಸಹಜವಾಗಿ ನಮ್ಮೆಲ್ಲರನ್ನು ಕಾಡುವುದಕ್ಕೆ ಸಾಧ್ಯವಿದೆ.

ಮಾನ್ಯ ಸಭಾಪತಿಯವರೇ, ಕೊರೋನಾ ವೈರಸ್ ವಿರುದ್ಧ ಹೋರಾಟ ಮಾಡಿದಂತಹ ಅನೇಕ ವಾರಿಯರ್ಸ್‌ರನ್ನು ಉಲ್ಲೇಖ ಮಾಡಿದ್ದೀರಿ. ಕೊರೋನಾದಲ್ಲಿ ಮೃತರಾದಂತಹ ಜೀವಗಳನ್ನು ತಾವು ಉಲ್ಲೇಖ ಮಾಡಿದ್ದೀರಿ. ಈ ಕೊರೋನಾ ಮಹಾಮಾರಿಯನ್ನು ಹೋಗಲಾಡಿಸುವುದಕ್ಕೆ ಅನೇಕ ವೈದ್ಯರು ಹಗಲಿರುಳು ದುಡಿದಿದ್ದಾರೆ, ಕೊರೋನಾದಿಂದ ಮೃತರಾದಂತಹವರನ್ನು ಸಹ ತಾವು ಪ್ರಸ್ತಾಪದಲ್ಲಿ ಮಂಡಿಸಿದ್ದೀರಿ. ಲಡಾಖ್ ಗಡಿಯಲ್ಲಿ ಮತ್ತು ಗಲ್ವಾನ್ ಕಣಿವೆಯಲ್ಲಿ ಭಾರತ ಮತ್ತು ಚೀನಾದ ಸಂಘರ್ಷದ ಸಂದರ್ಭದಲ್ಲಿ ಹುತಾತ್ಮರಾಗಿರುವಂತಹ ದೇಶಭಕ್ತ ಸೈನಿಕರು ಮೃತರಾಗಿದ್ದು, ಅವರ ಪ್ರಸ್ತಾಪವನ್ನು ಸಹ ಮಾಡಿದ್ದೀರಿ ಹಾಗೂ ಪ್ರವಾಹದಿಂದ ಮೃತರಾದಂತಹ ವ್ಯಕ್ತಿಗಳಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವುದಕ್ಕೆ ಪ್ರಸ್ತಾಪವನ್ನು ಮಂಡನೆ ಮಾಡಿದ್ದೀರಿ. ಈ ಎಲ್ಲಾ ವಿಚಾರಗಳಿಗೆ ತಾವು ಮಂಡಿಸಿದಂತಹ ಸಂತಾಪ ಸೂಚಕದ ನಿರ್ಣಯಕ್ಕೆ ಸದನದ ಪರವಾಗಿ ಪೂರ್ಣ ಸಹಮತವನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಮಂಡಿಸಿದಂತಹ ಸಂತಾಪ ಸೂಚಕ ಗೊತ್ತುವಳಿಗೆ ಸಂಪೂರ್ಣ ಬೆಂಬಲ ನೀಡಿ, ತಾವು ಮೃತರ ವಿಚಾರವಾಗಿ ಹಾಗೂ ನಮ್ಮನ್ನು ಅಗಲಿದ ದಿವ್ಯಚೇತನಗಳ ಬಗ್ಗೆ ಅನೇಕ ಮಾತುಗಳನ್ನು ಹೇಳಿದ್ದೀರಿ. ಅದರ ಜೊತೆಗೆ ನಾನು ಕೆಲವೊಂದು ಮಾತುಗಳನ್ನು ಜೋಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊಟ್ಟ ಮೊದಲನೆಯದಾಗಿ, ರಾಷ್ಟ್ರದ 13ನೇ ರಾಷ್ಟ್ರಪತಿಯಾಗಿದ್ದಂತಹ ಶ್ರೀ ಪ್ರಣಬ್ ಮುಖರ್ಜಿಯವರು ದಿನಾಂಕ:31.08.2020ರಂದು ನವದೆಹಲಿಯಲ್ಲಿ ನಿಧನರಾದರು. ಇದು ಇಡೀ ರಾಷ್ಟ್ರದ ಸಾರ್ವಜನಿಕ ಬದುಕಿನಲ್ಲಿ ತುಂಬಲಾರದಂತಹ ಒಂದು ಹಾನಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಪಶ್ಚಿಮ ಬಂಗಾಳದ ಬಿರ್‌ಬೂಮ್ ಜಿಲ್ಲೆಯ ಮಿರತಿ ಹಳ್ಳಿಯಲ್ಲಿ ಜನಿಸಿದ ಶ್ರೀ ಪ್ರಣಬ್ ಮುಖರ್ಜಿಯವರಿಗೆ 'ಪ್ರಣಬ್ ದಾ' ಎಂದು ಕರೆಯುತ್ತಿದ್ದರು. ಅದರಿಂದಲ್ಲೇ ಅವರು ಖ್ಯಾತಿಯನ್ನು ಹೊಂದಿದ್ದರು. ಈಗ ಇಡೀ ಜಗತ್ತನೇ ಕಾಡುತ್ತಿರುವ ಮತ್ತು ಇಡೀ ಮನುಕುಲದ ವಿನಾಶಕ್ಕೆ ಬಂದಂತಹ ಕೊರೋನಾ ವೈರಸ್‌ಗೆ ತುತ್ತಾದದ್ದು ನಮ್ಮ ದುರ್ದೈವ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ರಾಷ್ಟ್ರಪತಿಗಳಾಗುವುದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುನ್ನ ಕಾಂಗ್ರೆಸ್ ಪಕ್ಷದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಅವರು 1972ರಲ್ಲಿ ಹಣಕಾಸು ಸಚಿವರಾಗಿ, 1991ರಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ, 1995ರಲ್ಲಿ ವಿದೇಶಾಂಗ ಸಚಿವರಾಗಿ ಬಹಳ ಅರ್ಥಪೂರ್ಣವಾದಂತಹ ಕಾರ್ಯವನ್ನು ಮಾಡಿದ್ದಾರೆ. ಮಾನ್ಯ ಪ್ರಣಬ್ ಮುಖರ್ಜಿಯವರು ನಾಲ್ಕು ಬಾರಿ ರಾಜ್ಯಸಭೆಯ ಸದಸ್ಯರಾಗಿ ಮತ್ತು ಎರಡು ಬಾರಿ ಲೋಕ ಸಭೆಗೆ ಆಯ್ಕೆಯಾಗಿದ್ದರು. ಪಕ್ಷಾತೀತವಾಗಿ ಅವರ ಬಗ್ಗೆ ಗೌರವವಿತ್ತು. ಅವರು ಒಬ್ಬ ಅಪರೂಪದ ರಾಜಕಾರಣಿಯಾಗಿದ್ದರು. 2019ರಲ್ಲಿ ಅವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದಂತಹ **'ಭಾರತ ರತ್ನ'** ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶ್ರೀ ಪ್ರಣಬ್ ಮುಖರ್ಜಿಯವರು ಆ ಪ್ರಶಸ್ತಿಗೆ ನೂರಕ್ಕೆ ನೂರರಷ್ಟು ಅರ್ಹತೆಯನ್ನು ಹೊಂದಿದಂತಹವರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ರಾಜಕೀಯ ಇತಿಹಾಸದ ವಿಶ್ವಕೋಶವೆಂದು ಖ್ಯಾತರಾಗಿದ್ದರು. ಶ್ರೀ ಪ್ರಣಬ್ ಮುಖರ್ಜಿಯವರು ಎಷ್ಟು ಮೇಧಾವಿಗಳಾಗಿದ್ದರು ಎಂದರೆ, ದೇಶ ವಿದೇಶಗಳ ಸುಮಾರು 14 ವಿಶ್ವವಿದ್ಯಾಲಯಗಳು ಅವರಿಗೆ 'ಗೌರವ ಡಾಕ್ಟರೇಟ್' ಪ್ರಶಸ್ತಿ ನೀಡಿವೆ. ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವಂತಹ ಸಂದರ್ಭದಲ್ಲಿ, ಅವರು ರಾಷ್ಟ್ರಪತಿಗಳಾಗಿದ್ದರು. ಆರ್ಟಿಕಲ್ 371(ಜೆ) ಕಾಯ್ದೆಯಾಗಿ ರೂಪುಗೊಳ್ಳುವಂತಹ ಸಂದರ್ಭದಲ್ಲಿ, ಆ ಕಾಯ್ದೆಗೆ ಒಪ್ಪಿಗೆ ಸೂಚಿಸಿದ್ದು ನಮ್ಮ ನೆನಪಿನ ಅಂಗಳದಲ್ಲಿದೆ. ಅದರ ಮುಖಾಂತರ ಹೈದ್ರಾಬಾದ್-ಕರ್ನಾಟಕ ಇವತ್ತು ಕಲ್ಯಾಣ ಕರ್ನಾಟಕವಾಗಿ ಬಹಳ ಅತ್ಯದ್ಭುತವಾದಂತಹ ಪ್ರಗತಿ ಸಾಧಿಸಿದ್ದು, ನಾನು ಅದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಅವರು ನಮ್ಮ ಪಾಲಿಗೆ ಅಪದ್ಬಾಂಧವರು ಎಂದು ಪ್ರಸಿದ್ಧರು. ನಮ್ಮ ರಾಜ್ಯದ ಬೀದರ್ ಜಿಲ್ಲೆಯ ಶಂಭುಲಿಂಗೇಶ್ವರರ ಪರಮ ಭಕ್ತರಾಗಿದ್ದರು. ಅವರು ಅಲ್ಲಿಗೆ ಬರುತ್ತಿದ್ದದ್ದು ನನಗೆ ನೆನಪಿದೆ. ಅವರು ಯಾವುದೇ ಒಂದು ಖಾತೆಯನ್ನು ನಿರ್ವಹಿಸಲಿ, ಬಹಳ ಅತ್ಯುತ್ತಮ ರೀತಿಯಿಂದ ಮತ್ತು ಆ ಖಾತೆಯಲ್ಲಿ ಒಂದು ಹೊಸತನ ಮತ್ತು ಹೊಸ ಸುಧಾರಣೆ ತರುವಂತಹ ಒಂದು ಕೆಲಸವನ್ನು ಶ್ರೀ ಪ್ರಣಬ್ ಮುಖರ್ಜಿಯವರು ಮಾಡುತ್ತಿದ್ದರು. ಆಧುನಿಕ ಭಾರತದ ಆರ್ಥಿಕತೆಯ ಸುಧಾರಕ ಎನ್ನುವಂತಹ ಕೀರ್ತಿಗೆ ಅವರು ಭಾಜನರಾಗಿದ್ದರು. ಅವರಿಗೆ ನೆನಪಿನ ಶಕ್ತಿ ಬಹಳ ದೊಡ್ಡದಾಗಿತ್ತು. ಅವರು ಅತ್ಯುತ್ತಮ ಆಡಳಿತಗಾರರು, ಸಾಹಿತ್ಯಾಸಕ್ತರು, ಲೇಖಕರು ಮತ್ತು ಎಲ್ಲಾ ಪಕ್ಷದ ನಾಯಕರ ಜೊತೆ ಅತ್ಯುತ್ತಮ ಸಂಬಂಧವನ್ನು ಹೊಂದಿದ್ದರು. ರಾಜಕೀಯ ರಂಗದಲ್ಲಿ ಅವರನ್ನು ಅಜಾತ ಶತ್ರುವೆಂದು ಕರೆಯುತ್ತಿದ್ದರು. ಅವರು ಅಷ್ಟೊಂದು ಮೇಧಾವಿಗಳಾಗಿದ್ದರಿಂದ ಶ್ರೀ ಪ್ರಣಬ್ ಮುಖರ್ಜಿಯವರನ್ನು ಕೆಣಕುವುದಕ್ಕೆ ಪ್ರತಿಪಕ್ಷದವರು ಕೂಡ ಅಂಜುತಿದ್ದರು ಎನ್ನುವುದು ಇದೆ. ಏಕೆಂದರೆ, ಅವರು ಅಂತಹ ಮೇಧಾವಿಯಾಗಿದ್ದರು, ಉತ್ತಮ ಸಂಸದೀಯಪಟುವಾಗಿದ್ದರು ಮತ್ತು ಸಮರ್ಥ ಆಡಳಿಗಾರರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರನ್ನು ಪ್ರತಿಪಕ್ಷದವರು ಕೆಣಕುವುದಕ್ಕೆ ದುಸ್ಸಾಹಸ ಮಾಡುತ್ತಿರಲಿಲ್ಲ. ಇನ್ನೊಂದು ಬಹಳ ಮಹತ್ವದ ವಿಚಾರವೇನೆಂದರೆ, ಅವರು ರಾಷ್ಟ್ರಪತಿಗಳಾದ ನಂತರ 'His Excellency' ಎಂಬ ಪದದ ಬಳಕೆಗೆ ಇತಿಶ್ರೀ ಹಾಡಿದರು. 'His Excellency' ಎಂದು ಏನು ಉಪಯೋಗ ಮಾಡುತ್ತಿದ್ದರು, ಆ ಪದಕ್ಕೆ ಕೊನೆ ಹಾಡಿದ್ದು ಶ್ರೀ ಪ್ರಣಬ್ ಮುಖರ್ಜಿಯವರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಶ್ರೀ ಪ್ರಣಬ್ ಮುಖರ್ಜಿಯವರ ಬಗ್ಗೆ ಚಿಂತಕರು ಯಾವ ರೀತಿ ಹೇಳುತ್ತಾರೆಂದರೆ, 'ವಾಮನ ಮೂರ್ತಿಯ ತ್ರಿವಿಕ್ರಮ' ಎಂಬ ಸಾಧನೆಯಿಂದ ಅವರನ್ನು ಬಣ್ಣಿಸುತ್ತಾರೆ. ಅವರು ಸುಮಾರು 40 ವರ್ಷಗಳಿಂದ ಡೈರಿ ಬರೆಯುತ್ತಿದ್ದರು. ಉಳಿದಿರುವುದನ್ನು ಬರೆದು ಮುಗಿಸುವುದಕ್ಕೆ ಅವರ ಕುಟುಂಬದವರಿಗೆ ತಿಳಿಸಿದ್ದಾರೆ. ಅವರು ಇತಿಹಾಸ ಮತ್ತು ರಾಜಕೀಯದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿ, ಎಲ್.ಎಲ್.ಬಿ. ಮಾಡಿ, ನೌಕರರಾಗಿ, ಶಿಕ್ಷಕರಾಗಿ, ಪ್ರಾಧ್ಯಾಪಕರಾಗಿ ಮತ್ತು ಪತ್ರಕರ್ತರಾಗಿ ಮತ್ತು ಕೆಲವು ಕಾಲ ಅವರು ವಕೀಲರಾಗಿ ಸೇವೆ ಸಲ್ಲಿಸಿದ್ದ ಶ್ರೀ ಪ್ರಣಬ್ ಮುಖರ್ಜಿಯವರು ರಾಷ್ಟ್ರಪತಿಗಳಾಗಿ 'ಭಾರತ ರತ್ನ' ಪ್ರಶಸ್ತಿ ಯೊಂದಿಗೆ ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿದಿದ್ದಾರೆಂದು ಹೇಳಬಹುದು.

**(713 ) 21.09.2020 12.20 LL-VK**

**ಶ್ರೀ ಎಸ್.ಆರ್. ಪಾಟೀಲ್(ಮುಂದು) :-**

ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿದಿದ್ದಾರೆಂದು ಹೇಳಬಹುದು. ಅವರ ಅಗಲಿಕೆ ಬಗ್ಗೆ ನನಗೆ ಏನು ಅನ್ನಿಸುತ್ತಿದೆಯೆಂದರೆ, ಭಾರತ ಮಾತೆಯ ರತ್ನಖಚಿತ ಕಿರೀಟದಿಂದ ಒಂದು 'ಅನರ್ಘ್ಯ ರತ್ನ' ಕಳಚಿ ಬಿದ್ದಂತಹ ಅನುಭವ ನಮಗೆ ಆಗುತ್ತಿದೆ. It is not so easy to fill the packing created by the sad demise of our former President in a public life of our Country. ಆದರೆ, ಶ್ರೀಯುತರ ಶೋಕಾಚರಣೆಯ ಸಂದರ್ಭದಲ್ಲಿ ನನಗೆ ಸ್ವಲ್ಪ ಜಿಜ್ಞಾಸೆ ಆಗುವುದೇನೆಂದರೆ,... ಈ ಸದನದಲ್ಲಿ ಮಾನ್ಯ ಶಿಕ್ಷಣ ಸಚಿವರು ಸಹ ಇದ್ದಾರೆ. 7 ದಿನಗಳ ಕಾಲ ಶೋಕಾಚರಣೆ ಮಾಡುವಂತಹ ಸಂದರ್ಭದಲ್ಲಿ, ಶಿಕ್ಷಕರ ದಿನಾಚರಣೆ, ಒಬ್ಬ ಮಾಜಿ ರಾಷ್ಟ್ರಪತಿಗಳ ನಿಧನದ ಶೋಕಾಚರಣೆಯ ಸಂದರ್ಭದಲ್ಲಿ, ಇನ್ನೊಬ್ಬ ಮಾಜಿ ರಾಷ್ಟ್ರಪತಿಯವರ ಜನ್ಮದಿನ ಆಚರಣೆ ಮಾಡುವಂಥದ್ದು ನಮ್ಮ ರಾಜ್ಯದಲ್ಲಿ ನಡೆಯಿತು. ಅದು ಏತಕ್ಕೆ ಎನ್ನುವುದು ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ಹೆಚ್ಚು ಗೊಡವಿಗೆ ಹೋಗುವುದಿಲ್ಲ. ಆದರೆ, ಶ್ರೀಯುತರ ಅಗಲಿಕೆ ಈ ರಾಷ್ಟ್ರ ಅತ್ಯಂತ ಸಮರ್ಥ, ಮೇಧಾವಿ, ಮುತ್ಸದ್ಧಿ ನಾಯಕರನ್ನು ಕಳೆದುಕೊಂಡು ಇಡೀ ಭಾರತ ದೇಶ ಸಾರ್ವಜನಿಕ ಬದುಕಿನಲ್ಲಿ ಬರಡಾಗಿದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಂ.ವಿ. ರಾಜಶೇಖರನ್ ರವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು, ಅತ್ಯಂತ ಹಿರಿಯರು, ವೈಯಕ್ತಿಕವಾಗಿ ನನಗೆ ಮಾರ್ಗದರ್ಶಕರು ಸಹ ಆಗಿದ್ದರು ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ಕೇಂದ್ರದ ಸಚಿವರು, ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಂತಹವರು. ಬಹುತರವಾಗಿ ನಯ, ವಿನಯ, ಸೌಜನ್ಯತೆ, ಶಿಷ್ಟಾಚಾರ ಹಾಗೂ ಮಾನವೀಯ ಮೌಲ್ಯಗಳನ್ನು ಹೊಂದಿದಂತಹವರು. ದಯೆ, ಕರುಣೆ, ಪರೋಪಕಾರ ಅವರನ್ನು ನೋಡಿದ ಕೂಡಲೇ ನಮಗೆ ನೆನಪಿಗೆ ಬರುತ್ತವೆ. ಅಷ್ಟೊಂದು ನಯ, ವಿನಯ, ಸೌಜನ್ಯತೆ ಹಾಗೂ ಶಿಷ್ಟಾಚಾರದಿಂದ ಮಾತನಾಡುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೈಸೂರು ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ವೃತ್ತಿಯಲ್ಲಿ ಅವರು ಕೃಷಿಕರಾಗಿದ್ದರು. ಕೃಷಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಅದು ಯಾವ ರೀತಿ ಎಂದರೆ, ಇವೊತ್ತಿನ ದಿವಸ ಕೃಷಿ ವಿಶ್ವವಿದ್ಯಾಲಯ ಅಥವಾ ತೋಟಗಾರಿಕೆ ವಿಶ್ವವಿದ್ಯಾಲಯಗಳು ಏನು ಲ್ಯಾಬ್‌ನಲ್ಲಿ ಮಾಡುವಂತಹ ಪ್ರಯೋಗಗಳನ್ನು ಅವರು ತಮ್ಮ ಜಮೀನಿನಲ್ಲಿ ಬೆಳೆಗಳನ್ನು ಬೆಳೆದು ಪ್ರಯೋಗ ಮಾಡುತ್ತಿದ್ದರು. ಇವೊತ್ತಿನ ದಿವಸ ತೋಟಗಾರಿಕೆ ಬೆಳೆಗಾರರಿಗೆ ಅನುಕೂಲ ಆಗಲಿ ಎನ್ನುವಂತಹ ದೃಷ್ಟಿಯಿಂದ ಮೊಟ್ಟಮೊದಲನೆಯ ಬಾರಿಗೆ ಭಾರತ ದೇಶದಲ್ಲಿ 1200 ಟನ್ ಸಾಮರ್ಥ್ಯದ ಶೈತ್ಯಾಗಾರವನ್ನು ಕೃಷಿಗೆ ಸಮಾಜದ ಆಶ್ರಯದಲ್ಲಿ ಸ್ಥಾಪಿಸಿ, ತೋಟಗಾರಿಕೆ ಬೆಳೆಗಾರರಿಗೆ cold chain ಗೆ ಅನುಕೂಲ ಆಗುವಂತಹ ಕೆಲಸ ಮಾಡಿದ್ದನ್ನು ನಾವು ಇವೊತ್ತಿನ ದಿವಸ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಗ್ರಾಮೀಣಾಭಿವೃದ್ಧಿ tough subject. ಆದರೆ, ಶ್ರೀಯುತರು ಗ್ರಾಮೀಣಾಭಿವೃದ್ಧಿ ಬಗ್ಗೆ ನೂರಕ್ಕೂ ಹೆಚ್ಚು ಪ್ರಬಂಧಗಳನ್ನು ಅಂತರಾಷ್ಟ್ರೀಯ ವೇದಿಕೆಯಲ್ಲಿ ಮಂಡಿಸಿದ್ದನ್ನು ನಾನು ಇವತ್ತಿಗೂ ನೆನಪಿಸಿಕೊಳ್ಳುತ್ತೇನೆ. ಶ್ರೀಯುತರ ನಿಧನ ನಿಜವಾಗಲೂ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಅಪ್ಪಟ ಗಾಂಧಿವಾದಿ, ಸರಳ, ಸಜ್ಜನಿಕೆ, ಮೌಲ್ಯಾಡಳಿತ ರಾಜಕಾರಣಿಯಷ್ಟೇ ಅಲ್ಲದೇ ಉತ್ತಮ ಸಂಸದೀಯ ಪಟುವನ್ನು ನಾವು ಕಳೆದುಕೊಂಡಂತಾಗಿದೆ ಎನ್ನುವಂತಹ ಮಾತನ್ನು ಮತ್ತೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅಶೋಕ ಗಸ್ತಿ ಯವರ ಬಗ್ಗೆ ನಮ್ಮ ಸಭಾನಾಯಕರು ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಇದು ಅತ್ಯಂತ ನೋವಿನ ಸಂಗತಿ. ಏಕೆಂದರೆ, Microscopic Minority Community ಗೆ ಸೇರಿದ್ದ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡುವ ಮುಖಾಂತರ ಭಾರತೀಯ ಜನತಾ ಪಕ್ಷದವರು ಸಾಮಾಜಿಕ ನ್ಯಾಯಕ್ಕೆ ಇಂಬು ಕೊಟ್ಟಿದ್ದು ನನಗೂ ಕೂಡ ಬಹಳ ಖುಷಿಯಾಗಿತ್ತು. ಆದರೆ, ದುರ್ದೈವದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಗತಿ ಎಂದರೆ, ಮೊದಲನೆಯ ಅಧಿವೇಶನಕ್ಕೂ ಸಹ ಅವರು ಹೋಗುವುದಕ್ಕೆ ಆಗಲಿಲ್ಲ. ಬಹುತರವಾಗಿ ಸಾಮಾಜಿಕ ನ್ಯಾಯ 12ನೇ ಶತಮಾನದ ಬಸವಾದಿ ಶರಣರಿಂದ ಪ್ರಾರಂಭವಾಗಿ, ನಮ್ಮ ಪಕ್ಷ ಅದಕ್ಕೆ ನೂರಕ್ಕೆ ನೂರರಷ್ಟು ಬದ್ಧತೆಯಿಂದ ಕೆಲಸ ಮಾಡುವ ಸಾಮಾಜಿಕ ನ್ಯಾಯದ ಪರಿಕಲ್ಪನೆ ಭಾರತೀಯ ಜನತಾ ಪಕ್ಷದವರು ಸಹ ಆ ದಿಸೆಯಲ್ಲಿ ವ್ಯಕ್ತ ಮಾಡಿ, ಶ್ರೀಯುತರನ್ನು ಹಾಗೂ ಒಬ್ಬ ಸಾಮಾನ್ಯ ಕಾರ್ಯಕರ್ತರನ್ನು ರಾಜ್ಯಸಭೆಗೆ ಆಯ್ಕೆ ಮಾಡುವಂತಹ ಒಂದು ದೊಡ್ಡ ಕೆಲಸ ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು, ರಾಯಚೂರು ನಗರಸಭೆಯ ಸದಸ್ಯರಾಗಿದ್ದರು. ಆದರೆ, ಅವರು ರಾಜ್ಯಸಭೆಯ ಸದಸ್ಯರಾದಂತಹ ಸಂದರ್ಭದಲ್ಲಿ ಅವರಿಂದ ನಮ್ಮ ರಾಜ್ಯ ಬಹಳಷ್ಟು ನಿರೀಕ್ಷೆಯನ್ನು ಮಾಡಿತ್ತು. ಶ್ರೀಯುತರಿಂದ ಕನ್ನಡ ನಾಡಿನ ಅಭಿವೃದ್ಧಿಗೆ ಅಪಾರ ಕೊಡುಗೆ ದೊರೆಯುತ್ತಿತ್ತು. ಅದರಲ್ಲಿಯೂ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಸಣ್ಣ-ಸಣ್ಣ ಸಮುದಾಯಗಳಿಗೆ ಅವರಿಂದ ಸಹಾಯ ಸಿಗುತ್ತದೆ ಎಂದು ನಾವೆಲ್ಲರೂ ನಿರೀಕ್ಷೆಯಲ್ಲಿದ್ದಂತಹ ಸಂದರ್ಭದಲ್ಲಿ ಹಠಾತ್ತಾಗಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದಲೇ ಅವರು ನಿಧನರಾಗಿದ್ದು, ಬಹುತರವಾಗಿ ನಮ್ಮ ರಾಜ್ಯದಲ್ಲಿ ಮೊದಲನೆ ಜನಪ್ರತಿನಿಧಿ ಎಂದು ನಾನು ಭಾವಿಸುತ್ತೇನೆ. ಇಡೀ ಕರ್ನಾಟಕ ರಾಜ್ಯದ ಜನತೆ ಅವರ ಸಾವಿನ ಬಗ್ಗೆ ಬಹಳ ದುಃಖವನ್ನು ವ್ಯಕ್ತ ಮಾಡಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಸತ್ಯನಾರಾಯಣರವರು ಹಾಲಿ ವಿಧಾನಸಭೆಯ ಶಾಸಕರಾಗಿದ್ದವರು. ಶ್ರೀಯುತರು ವೃತ್ತಿಯಲ್ಲಿ ನ್ಯಾಯವಾದಿಗಳು. ಬಿ.ಎ.ಎಲ್.ಎಲ್.ಬಿ ಪದವೀಧರರಾಗಿ, ನ್ಯಾಯವಾದಿಯಾಗಿ ಕೆಲಸ ಮಾಡುವುದರ ಜೊತೆಗೆ, ಪ್ರವೃತ್ತಿಯಿಂದ ರಾಜಕಾರಣಿಯಾಗಿ ಪರಿವರ್ತನೆಯಾಗಿ 5 ಬಾರಿ ವಿಧಾನಸಭೆಗೆ ಆಯ್ಕೆಯಾಗಿರುವುದಷ್ಟೇ, ಅಲ್ಲದೇ, ಸಚಿವರಾಗಿ ಅನೇಕ ಖಾತೆಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದಂತಹ ಕೀರ್ತಿಗೆ ಭಾಜನರಾದವರು. ಕೆ.ಎಸ್.ಆರ್.ಟಿ.ಸಿ. ನಿಗಮದ ಅಧ್ಯಕ್ಷರಾಗಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಇವೊತ್ತಿನ ದಿವಸ ಕೆಳಮನೆಯ ಹಾಲಿ ಶಾಸಕರನ್ನು ಕಳೆದುಕೊಂಡು, ನಮ್ಮ ರಾಜ್ಯದ ಸಾರ್ವಜನಿಕ ಕ್ಷೇತ್ರ ಬರಡಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಯುತರಿಗೆ ಇನ್ನೂ ಉಜ್ವಲವಾದ ಭವಿಷ್ಯತ್ ಇದ್ದು, ಅವರ ಅಕಾಲಿಕವಾದಂತಹ ನಿಧನ ನಿಜವಾಗಿಯೂ ಅವರ ಜಿಲ್ಲೆಗೆ, ನಮ್ಮ ನಾಡಿಗೆ ತುಂಬಲಾರದ ನಷ್ಟ ಉಂಟುಮಾಡಿದೆ ಎನ್ನುವಂತಹ ಮಾತನ್ನು ಇಲ್ಲಿ ವ್ಯಕ್ತ ಮಾಡುವುದಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ವಿನ್ನಿಫ್ರೆಡ್ ಎಫ್. ಫರ್ನಾಂಡಿಸ್‌ರವರು ಕೆಳಮನೆಯ ಮತ್ತು ಮೇಲ್ಮನೆ ಸದಸ್ಯರು ಕೂಡ ಆಗಿದ್ದರು. ಶ್ರೀಯುತರ ಬಗ್ಗೆ ಅವರ ಜಿಲ್ಲೆಯವರಾದ ಸಭಾನಾಯಕರು ವಿಸ್ತೃತವಾಗಿ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಶ್ರೀಯುತರು ಮಂಗಳೂರಿನ ಬಿಜ್ಜೆಯಲ್ಲಿ ಜನಿಸಿದ ಇವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸಮಿತಿಯ ಅಧ್ಯಕ್ಷರಾಗಿ, ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ಕುಂದಾಪುರ ತಾಲ್ಲೂಕ್ ಅಧ್ಯಕ್ಷರಾಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷರಾಗಿಯೂ ಕೂಡ ಅತ್ಯುತ್ತಮ ಸೇವೆ ಸಲ್ಲಿಸಿರುವುದು ನಮ್ಮ ನೆನಪಿನಂಗಳದಲ್ಲಿದೆ. ಶ್ರೀಯುತರ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಒಬ್ಬ ಶ್ರೇಷ್ಠ ಮಹಿಳಾ ಸಮಾಜ ಸೇವಕಿಯನ್ನು ನಾವು ಕಳೆದುಕೊಂಡಂತಾಗಿದೆ. ಮಹಿಳೆಯರ ಅಭ್ಯುದಯಕ್ಕಾಗಿ women's empowerment ಗೂ ಕೂಡ ಅವರು ಬಹಳಷ್ಟು ಸೇವೆ ಸಲ್ಲಿಸಿದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಆ ದೃಷ್ಟಿಯಿಂದ ನಮ್ಮ ನಾಡು ಒಬ್ಬ ಶ್ರೇಷ್ಠ ಮಹಿಳಾ ಸಮಾಜ ಸೇವಕಿಯನ್ನು ಕಳೆದುಕೊಂಡು ಬಡವಾಗಿದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ರಾಜ ರಂಗಪ್ಪನಾಯಕ್‌ರವರು ಮಂಡಲ ಪ್ರಧಾನರಾದವರು. ಪ್ರಥಮ ಬಾರಿಗೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಬಂದಾಗ ನಾನು ಜಿಲ್ಲಾ ಪರಿಷತ್ ಸದಸ್ಯನಾಗಿ, ಪ್ರತಿಪಕ್ಷದ ನಾಯಕನಾಗಿ, ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಕೆಲಸ ಮಾಡಿದ್ದು ನನಗೆ ನೆನಪಾಗುತ್ತದೆ. ಆ ಸಂದರ್ಭದಲ್ಲಿ ಶ್ರೀಯುತರು ಮಂಡಲ ಪ್ರಧಾನರಾಗಿ, ಖಾನಾಪುರ ಎಸ್.ಹೆಚ್. ಕ್ಷೇತ್ರದ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ ಆಯ್ಕೆಯಾಗುತ್ತಾರೆ. ಅಲ್ಲಿಂದ ಮುಂದೆ, ರಾಯಚೂರು ಲೋಕಸಭಾ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದನ್ನು ನೋಡಿದರೆ, ಹಳ್ಳಿಯಿಂದ ದಿಲ್ಲಿಗೆ ಎಂದು ಮಾತನಾಡುವ ರೀತಿಯಲ್ಲಿ ಸಾಧನೆ ಮಾಡಿದಂತಹವರು ಶ್ರೀ ರಾಜ ರಂಗಪ್ಪನಾಯಕ್‌ರವರು ಎಂದು ಹೇಳುತ್ತೇನೆ. ಒಂದು ಗ್ರಾಮದಿಂದ ಮಂಡಲ ಪಂಚಾಯಿತಿ ಸದಸ್ಯರಾಗಿ, ಅಲ್ಲಿಂದ ದಿಲ್ಲಿಯವರೆಗೂ ಹೋಗುವುದು ಸಾಮಾನ್ಯ ಕೆಲಸವಲ್ಲ. ಅದು ಬಹಳ ದೊಡ್ಡ ಕಾರ್ಯ ಎಂದು ನಾನು ಭಾವಿಸುತ್ತೇನೆ ಮತ್ತು ಅದರಲ್ಲಿ ಅವರ ಶ್ರಮ ಇದೆ ಎಂದು ಸಹ ನಾನು ಭಾವಿಸುತ್ತೇನೆ.

ಶ್ರೀ ಮದನ ಗೋಪಾಲ ನಾಯಕ್‌ರವರು ಸಚಿವರಾಗಿ ಕೆಲಸ ಮಾಡಿದವರು. ವಿಧಾನಸಭೆಯ ಶಾಸಕರಾಗಿದ್ದಂತಹ ಶ್ರೀಯುತರು ಬಿ.ಎ. ಪದವೀಧರರು, ವೃತ್ತಿಯಲ್ಲಿ ಕೃಷಿಕರು ಹಾಗೂ ಯಾದಗಿರಿ ಜಿಲ್ಲೆಯ ಸುರುಪುರದ ರಾಜಮನೆತನದವರು. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಬಂದ ಕೂಡಲೇ ರಾಜಮನೆತನದಲ್ಲಿದ್ದಂತಹ ರಾಜರು ಸಮಾಜಸೇವಕರಾಗಿ ಕೆಲಸ ಮಾಡುವಂತಹ ವ್ಯವಸ್ಥೆ, that is

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the beauty of Indian Democracy. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಬಹಳಷ್ಟು ಸಂಸ್ಥಾನಗಳಿದ್ದವು. ಕನಿಷ್ಠ 500 ಸಂಸ್ಥಾನಗಳು ವಿಲೀನೀಕರಣ ಕೂಡ ಆದವು. ಬಹಳಷ್ಟು ರಾಜರುಗಳು ಬೇರೆ ಬೇರೆ ಕಡೆ ಹೋದರು. ಆದರೆ, ಶ್ರೀಯುತರು ನಮ್ಮಲ್ಲಿ ಸಮಾಜ ಸೇವಕರಾಗಿ, ರಾಜಕೀಯ ವಿಚಾರಗಳಲ್ಲಿ ತಾನು ಒಬ್ಬ ರಾಜ ಎನ್ನುವುದನ್ನು ಮರೆತು ಒಬ್ಬ ಸಮಾಜ ಸೇವಕರಾಗಿ ಸರಳ, ಸಜ್ಜನಿಕೆ ರಾಜಕಾರಣಿಯಾಗಿ ಕೆಲಸ ಮಾಡಿದ್ದನ್ನು ನಾನು ಇಲ್ಲಿ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ.

ಶ್ರೀ ಜಿ. ರಾಮಕೃಷ್ಣರವರು ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಶ್ರೀಯುತರ ಜೊತೆ ಬಹಳಷ್ಟು ಸಂದರ್ಭಗಳಲ್ಲಿ ನನಗೆ ಒಡನಾಟವಿತ್ತು. ಅವರು ಶೋಷಿತರ, ದೀನದಲಿತರ ಧ್ವನಿಯಾಗಿ ಕೆಲಸ ಮಾಡುತ್ತಿದ್ದರು. ಅಷ್ಟೇ ಅಲ್ಲದೇ, ಅವರು ಮೊದಲು ಸರ್ಕಾರಿ ನೌಕರರಾಗಿದ್ದು, ನಂತರ ಶಾಸಕರಾಗಿ ಶ್ರೀಮಾನ್ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದ್ದು ನಮಗೆ ನೆನಪಿದೆ. ಜೊತೆಗೆ, ಶ್ರೀಯುತರು ಶಿಕ್ಷಣ ಪ್ರೇಮಿಗಳು ಕೂಡ ಆಗಿದ್ದರು. 'ಕೀರ್ತಿ ಸಮೂಹ ಶೈಕ್ಷಣಿಕ ಸಂಸ್ಥೆ'ಯನ್ನು ಸ್ಥಾಪಿಸಿ ಉದಾತ್ತ ವಿಚಾರದಿಂದ ಹಾಗೂ ಗ್ರಾಮೀಣ ಭಾಗದ ಮಕ್ಕಳಿಗೆ ವಿದ್ಯೆ ನೀಡಬೇಕೆನ್ನುವ ವಿಚಾರದಿಂದ ಅತ್ಯುತ್ತಮವಾದ ಶಿಕ್ಷಣ ಸಂಸ್ಥೆಯನ್ನು ನಡೆಸಿ, ಬಡ ಮಕ್ಕಳಿಗೆ ವಿದ್ಯಾ ದಾನ ಮಾಡುವಂತಹ ಕೆಲಸ ಸಹ ಮಾಡಿದ್ದರು. ಶ್ರೀಯುತರನ್ನು 'ಅಪ್ಪಟ ಶಿಕ್ಷಣ ಪ್ರೇಮಿ' ಎಂದು ಹೇಳಬಹುದು.

**(ಮುಂದು)**

**(714)21.09.2020/12.30/ವೈಎಲ್-ವಿಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅದರ ಜೊತೆಗೆ ಶೋಷಿತ ವರ್ಗಕ್ಕೆ ಧ್ವನಿಯಾಗಿ ಕೆಲಸ ಮಾಡುವಂಥ ನಾಯಕನ ಅಗಲಿಕೆಯಿಂದ ಶೋಷಿತ ವರ್ಗಕ್ಕೆ ಬಹಳಷ್ಟು ನೋವುಂಟು ಮಾಡಿದಂತಾಗಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ತಾವು ಉಡುಪಿ ಜಿಲ್ಲೆಯವರಾಗಿದ್ದು, ನಮ್ಮ ಸಭಾನಾಯಕರು ಸಹ ಉಡುಪಿ ಜಿಲ್ಲೆಯವರೇ ಆಗಿದ್ದಾರೆ. ಶ್ರೀಯುತರು ಖ್ಯಾತ ಯಕ್ಷಗಾನ ಕಲಾವಿದರಾಗಿದ್ದು, ಯಕ್ಷಗಾನದ ಬಗ್ಗೆ ಆಸಕ್ತಿ ಇರುವವರು ಶ್ರೀ ಹೊಸ್ತೋಟ ಗಜಾನನ ಭಟ್‌ರವರ ಹೆಸರನ್ನು ಕೇಳದವರೆ ಇಲ್ಲ. ಇವರ ಬಗ್ಗೆ ಬಹಳಷ್ಟು ಗೌರವವಿದೆ ಹಾಗೂ ಬಹಳಷ್ಟು ಸಾಧನೆಯನ್ನು ಸಹ ಮಾಡಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಈಗಾಗಲೇ ಹೇಳಿದ ಹಾಗೆ ಯಕ್ಷಗಾನದ ಯಕ್ಷಋಷಿಯೊಬ್ಬರನ್ನು ಕಳೆದುಕೊಂಡಂತಾಗಿದೆ ಎನ್ನುವಂಥ ಮಾತು ಸರಿಯಾದ ಮಾತಾಗಿದೆ. ಇಂತಹ ಯಕ್ಷಋಷಿಯನ್ನು ಕಳೆದುಕೊಂಡು ಯಕ್ಷಗಾನ ಕ್ಷೇತ್ರ ಇವತ್ತು ಬರಡಾಗಿದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಕನ್ನಡದ ಅತ್ಯಂತ ಹಿರಿಯ ಖ್ಯಾತ ಕವಿ, ಬರಹಗಾರರ ಮತ್ತು ನಾಡಿನ ಖ್ಯಾತ ಸಾಹಿತ್ಯ ವಿಮರ್ಶಕರು ಎಂದು ಹೆಸರು ಪಡೆದಂತಹವರು. ಪ್ರೊ: ಕೆ.ಎಸ್.ನಿಸಾರ್ ಅಹಮದ್‌ರವರು ಕನ್ನಡದ ಕಂಠ ಹಿರಿಯ ಖ್ಯಾತ ಕವಿ, ಬರಹಗಾರ ಮತ್ತು ನಾಡಿನ ಖ್ಯಾತ ಸಾಹಿತ್ಯ ವಿಮರ್ಶಕರಾದ ಇವರ ನಿಧನ ಕನ್ನಡ ಸಾರಸ್ವತ ಲೋಕಕ್ಕೆ ದೊಡ್ಡ ಹಾನಿ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. **"ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ"** ಪದ್ಯ ರಚನೆಯು ನಾಡಿನ ಅತ್ಯಂತ ನಿತ್ಯೋತ್ಸವ ಕವಿಗಳೆಂದೇ ಪ್ರಖ್ಯಾತರಾದವರು. ಕನ್ನಡ ನಾಡಿನ ಉದ್ದಕ್ಕೂ ಪ್ರಖ್ಯಾತರಾಗಿದ್ದು, ಇವರಂತೆ ಯಾರು ಇರಲಿಲ್ಲ. ರವಿ ಕಾಣದನ್ನು ಕವಿ ಕಾಣುತ್ತಾನೆ ಎನ್ನುವ ಮಾತು ಇವರಿಗೆ ಅನ್ವಯಿಸುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವರು ಶಿವಮೊಗ್ಗದಲ್ಲಿ ನಡೆದ 73ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದವರು. ಬಹಳಷ್ಟು ಸ್ವಹೃದಯದವರು, ಸರಳ ಜೀವಿಗಳು, ಅತ್ಯುತ್ತಮ ಶ್ರೇಷ್ಠ ಕವಿಯೆಂದೇ ಖ್ಯಾತರಾದವರು. ಹತ್ತು ಹಲವಾರು ಪ್ರಶಸ್ತಿಗೆ ಭಾಜನರಾದವರು. ಶ್ರೀಯುತರು ಪದ್ಮಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ದೇವರಾಜು ಅರಸು ಪ್ರಶಸ್ತಿ, ಗೊರೂರು ಪ್ರಶಸ್ತಿ, ಅನಕೃ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಹಾಗೂ ಆದಿ ಕವಿ ಪಂಪ ಪ್ರಶಸ್ತಿಗಳಿಗೆ ಭಾಜನರಾಗಿದ್ದವರು. ಇವರ ಅಗಲಿಕೆ ನಿಜವಾಗಿಯು ಕನ್ನಡ ಸ್ವಾರಸ್ವತ ಲೋಕ ಒಬ್ಬ ಶ್ರೇಷ್ಠ ಕವಿ, ಸಾಹಿತ್ಯ ಬರಹಗಾರರನ್ನು ಕಳೆದುಕೊಂಡಂತಾಗಿದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಡಾ:ಶ್ಯಾಮಲಾ ಜಿ.ಭಾವೆಯವರು ಗಾನ ಕೋಗಿಲೆ ಎಂದು ಪ್ರಖ್ಯಾತ ಹೊಂದಿದವರು. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತದ ಬಗ್ಗೆ ಆಳವಾಗಿ ಜ್ಞಾನ ಹೊಂದಿದವರು. 'ಉಭಯ ಗಾನ ವಿದುಷಿ' ಎಂಬ ಬಿರುದನ್ನು ಸಹ ಗಳಿಸಿದವರು. ಇವರು ಸುಮಾರು 9 ಭಾಷೆಗಳಲ್ಲಿ 1,500ಕ್ಕೂ ಹೆಚ್ಚಿನ ಗೀತೆಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಕೇವಲ ಭಾರತ ದೇಶದಲ್ಲಿ ಮಾತ್ರವಲ್ಲ. ದೇಶ ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ ಭಾರತೀಯ ಸಂಗೀತಕ್ಕೆ ಅಂತರಾಷ್ಟ್ರೀಯ ಖ್ಯಾತಿ ತಂದುಕೊಟ್ಟ ಕೀರ್ತಿಗೆ ಪಾತ್ರರಾಗಿರುತ್ತಾರೆ. ಇವರ ನಿಧನದಿಂದ ರಾಷ್ಟ್ರವು ಸಂಗೀತ ಕ್ಷೇತ್ರದ ಹಿರಿಯ ಗಾನಕೋಗಿಲೆಯನ್ನು ಕಳೆದುಕೊಂಡಂತಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಮತಿ ಶಾಂತಾದೇವಿ ಕಣವಿಯವರು ನಾಡಿನ ಹಿರಿಯ ಕವಿ ನಾಡೋಜಾ ಚನ್ನವೀರ ಕಣವಿಯವರ ಪತ್ನಿಯವರಾಗಿದ್ದಾರೆ. ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ವಿಭಿನ್ನ ಬರಹಗಳಿಂದ ಜನಪ್ರಿಯರಾಗಿದ್ದಾರೆ. ಅದರಲ್ಲಿಯು ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದ ದೇಸಿ ಸೊಬಗು ಇವರ ಕಥಾಲೇಖನದಲ್ಲಿ ಕಾಣುತ್ತಿದ್ದೆವು. ಅಪ್ಪಟ ಉತ್ತರ ಕರ್ನಾಟಕ ಭಾಷೆಯಲ್ಲಿಯೇ ಇವರು ಕಥೆಗಳನ್ನು ಬರೆಯುತ್ತಿದ್ದು, ಇವರು ಉತ್ತರ ಕರ್ನಾಟಕದ ಸೊಗಟನ್ನು ಎಲ್ಲಿಯೂ ಬಿಟ್ಟು ಕೊಟ್ಟಿಲ್ಲ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ ಇತರೆ ಅನೇಕ ಪ್ರಶಸ್ತಿಯನ್ನು ಪಡೆದುಕೊಂಡವರಾಗಿದ್ದಾರೆ. ರಾಜ್ಯ ಅತ್ಯಂತ ಹಿರಿಯ ಕಥಾ ಲೇಖಕಿಯನ್ನು ಕಳೆದುಕೊಂಡಂತಹ ಭಾವನೆಯಾಗುತ್ತಿದೆ.

ಡಾ:ಸುಭದ್ರಮ್ಮ ಮನ್ಸೂರ್‌ರವರು ರಂಗ ಕಲಾವಿದೆ ಹಾಗೂ ಖ್ಯಾತ ಗಾಯಕಿಯಾಗಿದ್ದರು. ತಮ್ಮ 12ನೇ ವಯಸ್ಸಿನಲ್ಲಿ ವೃತ್ತಿ ರಂಗಭೂಮಿಗೆ ಚಿಕ್ಕ ವಯಸ್ಸಿನಲ್ಲಿಯೇ ಪ್ರವೇಶಿಸಿದ್ದರು. ಇವರ ಪಾತ್ರ ಬಹಳ ಮನಮೆಚ್ಚುವಂಥ ಪಾತ್ರವನ್ನು ರಂಗ ಸಂಚಿಕೆಯಲ್ಲಿ ಮಾಡುತ್ತಿದ್ದರು. ಶ್ರೀಯುತರು ಪೌರಾಣಿಕ ರಕ್ತರಾತ್ರಿ ನಾಟಕದ ದ್ರೌಪದಿ, ಹೇಮರೆಡ್ಡಿ ಮಲ್ಲಮ್ಮ ನಾಟಕದ ಮಲ್ಲಮ್ಮ ಪಾತ್ರ, ಕುರುಕ್ಷೇತ್ರ ನಾಟಕದಲ್ಲಿ ಗಾಂಧಾರಿ ಪಾತ್ರಗಳು ಬಹಳ ಪ್ರಸಿದ್ಧಿಯನ್ನು ತಂದು ಕೊಟ್ಟಿರುವುದಷ್ಟೇ ಅಲ್ಲದೇ ಜನರ ಮನಸ್ಸನ್ನು ಅಚ್ಚಳಿಯದೇ ಉಳಿದಿದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿಗಳಲ್ಲದೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದು, ಒಬ್ಬ ಖ್ಯಾತ ಗಾಯಕಿ ಹಾಗೂ ಪ್ರಖ್ಯಾತ ರಂಗಭೂಮಿಯ ಹಿರಿಯ ಕಲಾವಿದೆಯನ್ನು ಕಳೆದುಕೊಂಡು ಆ ಕ್ಷೇತ್ರ ಬರಡಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪಂಡಿತ್ ಜಸ್‌ರಾಜ್‌ರವರು ಖ್ಯಾತ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದ ಗಾಯಕರು. 14ನೇ ವಯಸ್ಸಿನಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದವರು. ಇವರ ವಿದ್ಯಾಭ್ಯಾಸ ಅಮೆರಿಕ ಮತ್ತು ಕೆನಡಾಗಳಲ್ಲಿಯೂ ಸಂಗೀತ ಶಿಕ್ಷಣವನ್ನು ಪಡೆದಂಥವರು. ಶ್ರೀಯುತರು ಪದ್ಮವಿಭೂಷಣ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿಗಳಿಗೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಶ್ರೀಯುತರ ನಿಧನ ರಾಷ್ಟ್ರದ ಹಿರಿಯ ಶಾಸ್ತ್ರೀಯ ಸಂಗೀತ ಹಾಗೂ ಹಿಂದೂಸ್ತಾನಿ ಗಾಯಕರನ್ನು ಕಳೆದುಕೊಂಡಂತಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿಗಳು ತಮ್ಮ 24ನೇ ವಯಸ್ಸಿನಲ್ಲಿಯೇ ಮಠಾಧೀಶರಾಗಿದ್ದರು. ಅತ್ಯಂತ ಶ್ರೇಷ್ಠವಾದ gift of gab. ಮತ್ತು ಭಾಷೆಯ ಮೇಲೆ ಬಹಳಷ್ಟು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಪ್ರಭುತ್ವವನ್ನು ಹೊಂದಿದಂಥವರು. ಅಷ್ಟೇ ಅಲ್ಲದೇ ಮಠದಲ್ಲಿ ಅನೇಕ ಸಂಸ್ಕೃತಿ ಕಾರ್ಯಕ್ರಮಗಳನ್ನು ನಡೆಸಿದರು. ಶ್ರೀಗಳು ಕನ್ನಡ ಮತ್ತು ಮಲೆಯಾಳಂನಲ್ಲಿ ಭಕ್ತಿ ಗೀತೆ ಹಾಡಿದ್ದಾರೆ. ಸ್ವತಃ ನಾಟಕಗಳಲ್ಲಿಯೂ ಕೂಡಾ ನಿರ್ದೇಶಿಸಿದ್ದಾರೆ. ಇವೆಲ್ಲದಕ್ಕಿಂತ ಮಿಗಿಲಾಗಿ ಭಾರತೀಯ ನಾಯಾಂಗ ಇತಿಹಾಸದಲ್ಲಿ Kesavananda Bharati ...vs State of Kerala And Anr. ಪ್ರಕರಣ ಪ್ರಮುಖವಾದುದು. ಎಲ್ಲರೂ ಈ ಪ್ರಕರಣದ ಬಗ್ಗೆ ಬಹಳಷ್ಟು ಸಂದರ್ಭದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ಶ್ರೀಗಳ ಹೆಸರು ಅಚ್ಚಳಿಯದೇ ಉಳಿದಿದೆ ಎನ್ನುವುದಕ್ಕೆ ಕಾರಣ ಸಂವಿಧಾನದ ಮೂಲ ಸ್ವರೂಪ ಬದಲಿಸಬಾರದು ಎನ್ನುವ ತೀರ್ಪು ಈ ದೇಶದಲ್ಲಿ ಸರ್ವೋಚ್ಚ ನ್ಯಾಯಾಲಯ ಕೊಟ್ಟಂತಹ ನಿರ್ಣಯ ಬರಲು ಇವರು ಕಾರಣಕರ್ತರು ಎನ್ನುವುದನ್ನು ನಾವು ನೆನಪಿಸಿಕೊಳ್ಳಬೇಕು. ಹಾಗೆಯೇ ಅದರ ಮೂಲ ಸ್ವರೂಪವನ್ನು ಬದಲಾವಣೆ ಮಾಡುವುದರ ಬಗ್ಗೆ ಕೆಲವರು ಏನೇನೋ ಮಾತನಾಡಿದರು. Kesavananda Bharati ...vs State of Kerala And Anr. ಪ್ರಕರಣ ಮುಖಾಂತರ ಸರ್ವೋಚ್ಚ ನ್ಯಾಯಾಲಯವು ಒಂದು ನಿರ್ಣಯಕ್ಕೆ ಬರುತ್ತದೆ ಆ ನಿರ್ಣಯಕ್ಕೆ ಒಂದು ಅಂತಿಮ ಹಾಕಿದ ಹಾಗೆ ಆಗುತ್ತದೆ. ಸಂವಿಧಾನದ ಮೂಲ ಅಂತಸತ್ವ ಏನಿದೆ, ಮೂಲ ಸ್ವರೂಪ ಏನಿದೆ, it cannot be altered ಎಂದು ಶ್ರೇಷ್ಠವಾದಂತಹ ಮಹತ್ವದ ತೀರ್ಪು ನೀಡಿದೆ. ಅಷ್ಟೇ ಅಲ್ಲದೇ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಲು ಪ್ರಜಾಪ್ರಭುತ್ವದ ವ್ಯಕ್ತಿಯಾಗುವುದಕ್ಕೆ ಅಡಿಪಾಯ ಹಾಕುವುದರ ಜೊತೆಗೆ ಭಾರತ ದೇಶದ ಪ್ರಜಾಪ್ರಭುತ್ವದ ತೇರು ಸಾಂಗವಾಗಿ ಸಾಗುವುದಕ್ಕೆ ಸಹಕರಿಸಿ ಪ್ರಜಾಪ್ರಭುತ್ವದ ಅಪ್ಪಟ ಪ್ರೇಮಿಯನ್ನು ನಾವು ಕಳೆದುಕೊಂಡಂತಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ ಮತ್ತು ಸಂವಿಧಾನದ ಬದಲಾವಣೆ ಮಾಡಬೇಕೆನ್ನುವವರಿಗೆ ಮೂಲ ಸ್ವರೂಪವನ್ನು ಬದಲಾವಣೆ ಮಾಡಬೇಕೆನ್ನುವವರಿಗೆ ಇವರ ಮೂಲಕ ಸರ್ವೋಚ್ಚ ನ್ಯಾಯಾಲಯದಿಂದ ಬಂದಂತಹ ತೀರ್ಮಾನದ ಉತ್ತರವನ್ನು ಈ ಸಂದರ್ಭದಲ್ಲಿ ನೀಡಿದ್ದೇನೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**(ಮುಂದು) . .**

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(715) 21.09.2020 12.40 ಟಿಸಿಹೆಚ್-ಬಿಎನ್ಎಸ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಕೋವಿಡ್-19 ಸೋಂಕಿನಿಂದ ನಮ್ಮ ದೇಶ ಮತ್ತು ರಾಜ್ಯದಲ್ಲಿ ಅನೇಕ ಜನರು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 8023 ಜನ ಕೋವಿಡ್-19 ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಈಗ ಆ ಸಂಖ್ಯೆ ವೃದ್ಧಿಯಾಗಿರಬಹುದು. ಭಾರತ ದೇಶದಲ್ಲಿ ಸುಮಾರು 87,882 ಸಾವುಗಳಾಗಿವೆ. ಕೋವಿಡ್-19 ಸೋಂಕಿನಿಂದ ದೇಶದಲ್ಲಿ ಮತ್ತು ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸಾವಿರಾರು ಜನ ನಿಧನರಾಗಿದ್ದಾರೆ. ಗಲ್ವಾನ್ ಕಣಿವೆಯಲ್ಲಿ ಭಾರತ ಮತ್ತು ಚೀನಾ ಸೈನ್ಯಗಳ ನಡುವೆ ನಡೆದಂತಹ ಸಂಘರ್ಷದಲ್ಲಿ ಮಾತೃಭೂಮಿಯ ಸಲುವಾಗಿ ತಮ್ಮ ಜೀವದ ಹಂಗನ್ನು ತೊರೆದು ಹೋರಾಟ ಮಾಡಿದಂತಹ ವೀರ ಸೈನಿಕರು ಮತ್ತು ಆಗಸ್ಟ್ ತಿಂಗಳಿನಲ್ಲಿ ಅತಿವೃಷ್ಟಿಯಿಂದ ನೂರಾರು ಜನರು ಸಾವನ್ನಪ್ಪಿದ್ದಾರೆ. ಇವತ್ತು ನಾವು ಇವರೆಲ್ಲರ ಸಾವನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಕೋವಿಡ್-19 ನಿಯಂತ್ರಣ ಸರಿಯಾಗಿ ಆಗಿದ್ದರೆ, ಈ ಸಾವು ಆಗುತ್ತಿರಲಿಲ್ಲ ಎನ್ನತಕಂಥ ವಿಚಾರವನ್ನು ವ್ಯಕ್ತ ಮಾಡುತ್ತಿದ್ದೇನೆ. ರಾಷ್ಟ್ರದ ಗಡಿ ಕಾಯುವ ಸೈನಿಕರು ನಮ್ಮ ದೇಶಕ್ಕಾಗಿ ಏನು ತಮ್ಮ ಜೀವವನ್ನು ತೆತ್ತಿದ್ದಾರೆ. ಅದಕ್ಕೆ ನಾವು ಅವರ ದೇಶಪ್ರೇಮವನ್ನು ಮೆಚ್ಚಿಕೊಳ್ಳಬೇಕು. ಪ್ರಕೃತಿ ವಿಕೋಪದಿಂದ ಅತಿವೃಷ್ಟಿಗೆ ಒಳಗಾಗಿ ಸತ್ತವರ ಬಗ್ಗೆಯೂ ಕೂಡ ಕಾಳಜಿಯನ್ನು ವ್ಯಕ್ತಪಡಿಸಿ, ಅಗಲಿದ ದಿವ್ಯಚೇತನಗಳ ಆತ್ಮಗಳಿಗೆ ಚಿರಶಾಂತಿ ಸಿಗಲೆಂದು ಹಾರೈಸುತ್ತೇನೆ. ಹಾಗೂ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ, ಅವರ ಅಭಿಮಾನಿಗಳಿಗೆ ಮತ್ತು ಹಿತೈಷಿಗಳಿಗೆ ಹಾಗೂ ಬಂಧು-ಬಾಂಧವರಿಗೆ ನೀಡಲೆಂದು ನಾನು ದೇವರಲ್ಲಿ ಪ್ರಾರ್ಥಿಸಿಕೊಳ್ಳುವುದರ ಜೊತೆಗೆ ತಮಗೂ ಕೂಡ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರುಗಳ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕು.

**(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಕಾಲ ಮೌನವನ್ನಾಚರಿಸಿತು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಸದನದಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯವನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ಈಗ ಸದನವನ್ನು ಮಧ್ಯಾಹ್ನ 1.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು 12 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟಿತು)**

**(716)/21–9–2020/ಎಲ್‌ಎಂ/ಜಿಆರ್/1–10**

**(ಮಧ್ಯಾಹ್ನ 12 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 1 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಗಳು ಪೀಠವನ್ನು ಅಲಂಕರಿಸಿದರು)**

**02. ಮಾಜಿ ವಿಧಾನಸಭಾ ಸದಸ್ಯರು ನಿಧನರಾದರೂ ಕೂಡ ವಿಧಾನ ಪರಿಷತ್ತಿನಲ್ಲಿಯೂ ಇನ್ನು ಮುಂದೆ ಸಂತಾಪ ಸೂಚನೆಯನ್ನು ಸಲ್ಲಿಸಬೇಕೆಂಬ ಬಗ್ಗೆ.**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಗಳೆ, sitting ಎಂ.ಎಲ್.ಎ., ನಿಧನ ಹೊಂದಿದರೆ ಸಂತಾಪ ಸೂಚನೆಯನ್ನು ಸದನದಲ್ಲಿ ಮಂಡಿಸುವುದು, ನಿವೃತ್ತ ಎಂ.ಎಲ್.ಎ., ಗಳು ನಿಧನ ಹೊಂದಿದರೆ ಸಂತಾಪಸೂಚನೆಯನ್ನು ಮಂಡಿಸಬಾರದು ಎಂದು ಈ ಸದನದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆಯೇ? ಏಕೆಂದರೆ ಭದ್ರಾವತಿಯ ಶ್ರೀ ಅಪ್ಪಾಜಿಗೌಡರು ನಿಧನ ಹೊಂದಿದ್ದಾರೆ. ಅವರು ಮಾಜಿ ಎಂ.ಎಲ್.ಎ ಅವರ ಬಗ್ಗೆ ಸಂತಾಪ ಸೂಚನೆಯಲ್ಲಿ ಪ್ರಸ್ತಾಪ ಮಾಡಲಿಲ್ಲ. sitting ಎಂ.ಎಲ್.ಎ., ಆಗಲಿ ಮಾಜಿ ಎಂ.ಎಲ್.ಎ., ಗಳಾಗಲ್ಲಿ ಎಂ.ಎಲ್.ಎ., ಗಳೆ, ಅವರುಗಳು ಸದನದಲ್ಲಿ ಕೆಲಸ ಮಾಡಿದವರು, ಅವರ ಹೆಸರನ್ನು ಸಂತಾಪ ಸೂಚನೆಯಲ್ಲಿ ಸೇರಿಸುವುದು ಉತ್ತಮ ಎನ್ನುವುದು ತಮ್ಮಲ್ಲಿ ನನ್ನ ಕಳಕಳಿಯ ಸಲಹೆ.

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾಜಿ ಎಂ.ಎಲ್.ಎ., ಶ್ರೀ ರಾಮಕೃಷ್ಣರವರ ಹೆಸರನ್ನು ಸೇರಿಸಲಾಗಿದೆ. ಆದರೆ ಶ್ರೀ ಅಪ್ಪಾಜಿಗೌಡರ ಹೆಸರು ಮಿಸ್ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಒಬ್ಬರು ಎಕ್ಸ್–ಎಂ.ಎಲ್.ಎ., ರವರ ಹೆಸರು ಸಂತಾಪ ಸೂಚನೆಯಲ್ಲಿ ಇದೆ. ಶ್ರೀ ಅಪ್ಪಾಜಿಗೌಡರ ಹೆಸರನ್ನು ಸೇರಿಸಬೇಕು. ನಾಳೆಗೆ ಅವರ ಹೆಸರಿನಲ್ಲಿ ಸಂತಾಪ ಸೂಚನೆಯನ್ನು ಮಂಡಿಸಬಹುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ನಿಧನ ಹೊಂದಿದಾಗ, ವಿಧಾನ ಸಭೆಯ ಮಾಜಿ ಶಾಸಕರು ನಿಧನ ಹೊಂದಿದ್ದರೆ ಅವರಿಗೆ ವಿಧಾನಸಭೆಯಲ್ಲಿ ಸಂತಾಪ ಸೂಚನೆಯನ್ನು ಮಂಡಿಸುತ್ತಾರೆ. ವಿಧಾನ ಪರಿಷತ್ತಿನ ಮಾಜಿ ಶಾಸಕರು ನಿಧನರಾದರೆ ಈ ಮನೆಯಲ್ಲಿ ಸಂತಾಪ ಸೂಚನೆಯನ್ನು ಮಂಡಿಸಲಾಗುತ್ತದೆ. ಯಾರಾದರೂ ಮಾಜಿ ಸಚಿವರು ನಿಧನ ಹೊಂದಿದ್ದರೆ ಎರಡು ಮನೆಯಲ್ಲಿ ಸಂತಾಪ ಸೂಚನೆಯನ್ನು ಮಂಡಿಸಲಾಗುತ್ತದೆ. ವಿಧಾನಸಭೆಯಲ್ಲಿ ಯಾವ ರೀತಿ ಮಾಡುತ್ತಿದ್ದಾರೆ ಅದೇ ರೀತಿಯಲ್ಲಿ ವಿಧಾನ ಪರಿಷತ್ತಿನಲ್ಲಿ ನಾವು ಮಾಡುತ್ತಿದ್ದೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೆ, ನಾವು ಮೇಲ್ಮನೆಯವರು ಹೊಸಪಂಕ್ತಿಯನ್ನು ಹಾಕಿಕೊಳ್ಳೋಣ. ಕೆಳಮನೆಯವರು ಏನು ಮಾಡುತ್ತಾರೆ ಎನ್ನುವುದು ಬೇಡ. ಮೇಲ್ಮನೆಯಲ್ಲಿ ಎರಡು ಸದನದ ಯಾರೆ ಶಾಸಕರು ಆಗಿರಲಿ ಅವರು ಮೇಲ್ಮನೆ ಅಥವಾ ಕೆಲಮನೆಯಾಗಿರಲಿ, ಅವರು ಈ ರಾಜ್ಯಕ್ಕೆ ಹಾಗೂ ದೇಶಕ್ಕೆ ಸೇವೆಯನ್ನು ಸಲ್ಲಿಸಿರುತ್ತಾರೆ, ಅವರು ನಿಧನ ಹೊಂದಿದಾಗ ಅವರನ್ನು ನೆನಪಿಸಿಕೊಳ್ಳುವುದು ನಮ್ಮ ಧರ್ಮ.

**ಸಭಾಪತಿಯವರು:–** ಕಳೆದ ಸಾರಿ ಸಭೆಯಲ್ಲಿ ಚರ್ಚೆ ಮಾಡಿದಾಗ ಈ ರೀತಿ ಮಾಡಲು ತೀರ್ಮಾನ ಮಾಡಲಾಗಿದೆ. ಅದನ್ನು ಬದಲಾವಣೆ ಮಾಡುವುದಾದರೆ ನೋಡೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದನ್ನು incorporate ಮಾಡಬಹುದು. ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

**03.ನೂತನ ಸದಸ್ಯರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಹೊಸದಾಗಿ ಆಯ್ಕೆಯಾಗಿ ಸದನಕ್ಕೆ ಆಗಮಿಸಿರುವ ನೂತನ ಸದಸ್ಯರಗಳನ್ನು ಸದನಕ್ಕೆ ಪರಿಚಯಿಸುತ್ತೇನೆ.

1) ಶ್ರೀ ಸಿ.ಪಿ.ಯೋಗೀಶ್ವರ್
2) ಶ್ರೀ ಅಡಗೂರು ಎಚ್.ವಿಶ್ವನಾಥ್
3) ಶ್ರೀಮತಿ ಭಾರತಿ ಶೆಟ್ಟಿ
4) ಬುಡಕಟ್ಟು ಜನಾಂಗದ ಶ್ರೀ ಶಾಂತಾರಾಂ ಸಿದ್ಧಿ
5) ಶ್ರೀ ತಳವಾರ ಸಾಂಬಣ್ಣನವರು ಅನಾರೋಗ್ಯದ ಕಾರಣ ಗೈರು ಹಾಜರಾಗಿದ್ದಾರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6) ಶ್ರೀ ಗೋವಿಂದ ರಾಜು

7) ಶ್ರೀ ಬಿ.ಕೆ.ಹರಿಪ್ರಸಾದ್

8) ಶ್ರೀ ಎಂ.ಟಿ.ಬಿ ನಾಗರಾಜು

9) ಶ್ರೀ ಪ್ರತಾಪಸಿಂಗ್ ಕೆ

10) ಶ್ರೀ ಆರ್.ಶಂಕರ್

11) ಶ್ರೀ ಸುನೀಲ ವಲ್ಯಾಪೂರ ಇವರು ಇಂದು ಸದನಕ್ಕೆ ಬಂದಿರುವುದಿಲ್ಲ. ಬಂದ ಮೇಲೆ ಪರಿಚಯ ಮಾಡಿಕೊಡುತ್ತೇನೆ.

12) ಶ್ರೀ ನಸೀರ್ ಅಹ್ಮಮದ್ ಇವರು ಪುನರ್ ಆಯ್ಕೆಯಾಗಿದ್ದಾರೆ.

**04. ಪ್ರಕಟಣೆ**

**ಸಭಾಪತಿಯವರು:-** ದಿನಾಂಕ:18-9-2020 ರಿಂದ ಅಧಿವೇಶನ ಮುಕ್ತಾಯವಾಗುವವರಗೆ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ RTPCR ಪರೀಕ್ಷೆ ನಡೆಸಲು ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿದ್ದು, ಮಾನ್ಯ ಶಾಸಕರ ಇದರ ಪ್ರಯೋಜನವನ್ನು ಪಡೆಯಬೇಕೆಂದು ಸದನದ ಗಮನಕ್ಕೆ ತರಲಾಗುತ್ತದೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಗಳೆ, ಒಂದು ಸಾರಿ ಪರೀಕ್ಷೆ ಮಾಡಿಸಿಕೊಂಡ ಮೇಲೆ ಎಷ್ಟು ದಿವಸಗಳವರೆಗೆ ಆ ವರದಿಗೆ value ಇರುತ್ತದೆ? ಪದೇ-ಪದೇ ಮೂಗಿನಲ್ಲಿ ಬಾಯಲ್ಲಿ ದ್ರವ ತೆಗೆದುಕೊಳ್ಳುವುದು ನಮಗೆ ಕಷ್ಟವಾಗುತ್ತದೆ. ಈಗ ನಮ್ಮ ಹತ್ತಿರ ಪ್ರಮಾಣ ಪತ್ರ ಇದೆ. ಮತ್ತೆ ಯಾವಾಗ ನಾವು ಮಾಡಿಸಿಕೊಳ್ಳಬೇಕು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**05. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**(ಪಟ್ಟಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**06. ಕಾರ್ಯದರ್ಶಿಯವರ ವರದಿ**

ಕಾರ್ಯದರ್ಶಿ(ಕ.ವಿ.ಪ):– ಮಾನ್ಯ ಸಭಾಪತಿಗಳೆ, ಘನತೆವೆತ್ತ ರಾಜ್ಯಪಾಲರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

01. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಧರ್ಾರಣೆ (ತಿದ್ದುಪಡಿ) ವಿಧೇಯಕ, 2020

The Karnataka Motor Vehicles Taxation (Amendment) Bill, 2020

02. ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2020

The Karnataka Lokayukta (Amendment) Bill, 2020

03. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ,2020

The Karnataka State Civil Services (Regulations of Transfer of Teachers) Bill, 2020

04. ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020

The Karnataka Regulation of Pay and Pension of Teacher in Higher Educational Institutions Bill, 2020

05. ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) (ತಿದ್ದುಪಡಿ) ವಿಧೇಯಕ, 2020

The Karnataka Open Places (Prevention of Disfigurement) (Amendment) Bill, 2020

06. ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ,2020

The Karnataka Municipalities and Certain other Law (Amendment)
Bill, 2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

07. ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ,2020

The Karnataka Municipal Corporations (Amendment) Bill, 2020

08. ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020

The Karnataka Innovation Authority Bill, 2020

09. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ,2020

The Karnataka Transparency in Public Procurements (Amendment) Bill, 2020

10. ಕರ್ನಾಟಕ ಧನ ವಿನಿಯೋಗ ವಿಧೇಯಕ,2020

The Karnataka Appropriation Bill, 2020

11. ಕರ್ನಾಟಕ ಧನ ವಿನಿಯೋಗ (ಸಂಖ್ಯೆ,2) ವಿಧೇಯಕ,2020

The Karnataka Appropriation (No.2) Bill, 2020

12. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ,2020

The Karnataka Land Reforms (Amendment) Bill, 2020

13. ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ,2020

The Karnataka Official Language (Amendment) Bill, 2020

14. ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020

The National Law School of India (Amendment) Bill, 2020

15. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ,2020

The Karnataka State Universities (Amendment) Bill, 2020

16. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ,2020

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

The Karnataka State Law University (Amendment) Bill, 2020

ಸಭಾಪತಿಯವರು:- ಮಂಡಿಸಲಾಯಿತು.

**07. ನಿಯಮ 59ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ನಿಲುವಳ ಸೂಚನೆ ಮಂಡಿಸಲು ಪೂರ್ವಭಾವಿ ಚರ್ಚೆ**

**ವಿಷಯ:- ರಾಜ್ಯದಲ್ಲಿ ಭಾರಿ ಮಳೆಯಿಂದಾಗಿ ಮನೆಗಳು, ಲಕ್ಷಾಂತರ ಎಕರೆ ಬೆಳೆ ನಾಶವಾಗಿರುವ ಬಗ್ಗೆ.**

– – –

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಸದನ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಪೂರ್ವದಲ್ಲಿ ನಿಯಮಗಳ ಪ್ರಕಾರ ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ನಿಲುವಳಿ ಸೂಚನೆಯನ್ನು ನಿಯಮಗಳ ಪ್ರಕಾರ ಪ್ರಶ್ನೋತ್ತರ ಮತ್ತು ಶೂನ್ಯವೇಳೆಯಾದ ನಂತರ ತೆಗೆದುಕೊಳ್ಳಲಾಗುತ್ತದೆ. ತಾವು ಹಿರಿಯ ಸದಸ್ಯರು, ತಮಗೆ ನೆನಪಿಲ್ಲವೇನೊ ಎಂದು ಹೇಳಿದೆ ಅಷ್ಟೆ.

**(ಮುಂದು)**

**(717)21-09-2020(01-20)ಬಿಎಸ್‌ಡಿ-ಎಂಡಿ**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, We will have a say. ನಾನು ಒಂದೆರಡು ನಿಮಿಷ ಮಾತನಾಡುತ್ತೇನೆ. ನಾನು ನಿಲುವಳಿ ಸೂಚನೆ ಮಂಡಿಸಿರುವ ಬಗ್ಗೆ ಹೇಳಿದ್ದೇನೆ. ಪ್ರಸಕ್ತ ಸಾಲಿನಲ್ಲಿ ಬಾರಿ ಪ್ರಮಾಣದ ಮಳೆಯಿಂದ ಸಾವಿರಾರು ಮನೆಗಳು ಮುಳುಗಿವೆ ಮತ್ತು ಲಕ್ಷಾಂತರ ಎಕರೆ ಪೈರು ಹಾನಿಯಾಗಿದೆ, ಜೀವ ಹಾನಿಯಾಗಿದೆ, ಸಾರ್ವಜನಿಕ ಕಟ್ಟಡಗಳು ನಾಶವಾಗಿವೆ. 2019ರಲ್ಲಿ ಎಂದೂ ಕಂಡು ಕೇಳರಿಯದ ಶತಮಾನದ ಬಹುದೊಡ್ಡ ಮಹಾಪೂರ ಬಂದು ಬಾರಿ ಪ್ರಮಾಣದ ಹಾನಿಯಾಗಿರುವುದು ಇನ್ನೂ ಮುಗಿದಿಲ್ಲ. ಇನ್ನೂ ಅನೇಕ ನ್ಯೂನತೆಗಳಿವೆ. ಎಷ್ಟೋ ಮಂದಿಗೆ ಪೀಕ್ ಕಳೆದುಕೊಂಡ ರೈತರಿಗೆ ಹಣ ಕೊಡುವುದು ಇದೆ, ಮನೆಗಳ ಹಾನಿಗೆ ಹಣ ಕೊಡುವುದು ಬಾಕಿ ಇದೆ. ಆಗ ಸುರಕ್ಷಿತ ಕ್ರಮ ಕೈಗೊಂಡಿದ್ದರೆ ಈ ಸಾರಿ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಹೋದ ಸಾರಿ...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ,

**ಶ್ರೀ ಎಸ್.ಆರ್. ಪಾಟೀಲ್:–** ನಾನು ಮುಗಿಸಿಬಿಡುತ್ತೇನೆ. I am going to complete it within few minutes. ಮಾನ್ಯ ಸಭಾನಾಯಕರು ಕೇಳಬೇಕು. ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳಬೇಕು. ಪ್ರಸಕ್ತ ಸಾಲಿನಲ್ಲಿ ಬಾರಿ ಪ್ರಮಾಣದ ಮಳೆಯಿಂದ ಪ್ರಾಣಹಾನಿ, ಆಸ್ತಿಹಾನಿ ಮತ್ತು ಕೃಷಿಕರು ಬೆಳೆದಂತಹ ಪೀಕ್ ದೊಡ್ಡ ಪ್ರಮಾಣದ ಹಾನಿಯಾಗಿದೆ. ಇದು ಅತ್ಯಂತ ಮಹತ್ವದ ವಿಷಯವಾಗಿದ್ದು, ಎಲ್ಲಾ ಕಲಾಪಗಳನ್ನು ಬದಿಗಿಟ್ಟು, ಇದು ಮಹತ್ವ ಮತ್ತು ಜ್ವಲಂತ ಸಮಸ್ಯೆಯಾಗಿರುವುದರಿಂದ...... ಮಾನ್ಯ ಸಭಾಪತಿಯವರೇ, ಅದರಲ್ಲೂ ವಿಶೇಷವಾಗಿ ನಿಮ್ಮ ಜಿಲ್ಲೆಯ ನಿಮ್ಮ ಕ್ಷೇತ್ರದಲ್ಲಿಯೇ...... ಇವತ್ತಿನ ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ “ 38 ವರ್ಷಗಳ ನಂತರ ದಾಖಲೆ ಮಳೆ” ಎಂದಿದೆ. ಅದಕ್ಕೆ ಇದು ಬಹಳ ಮಹತ್ವದ ವಿಷಯವಾಗಿದ್ದು, ಎಲ್ಲಾ ಕಲಾಪಗಳನ್ನು ಬದಿಗಿಟ್ಟು ನಿಯಮ 59ರಡಿಯಲ್ಲಿ ನೀಡಿರುವ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಂಡು ಚರ್ಚೆ ಮಾಡಲು ಅವಕಾಶ ಕಲ್ಪಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯರಿದ್ದು, ಸದನದಲ್ಲಿ ತಮ್ಮ ಅನುಮತಿ ತೆಗೆದುಕೊಂಡು ಯಾವುದೇ ವಿಷಯಗಳ ಬಗ್ಗೆ ಚರ್ಚೆ ಮಾಡಲು ಸರ್ಕಾರ ಸಿದ್ಧವಿದ್ದು, ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ತಾವು ಕೊಡುವ ಆದೇಶಕ್ಕೆ ಸರ್ಕಾರ ಬದ್ಧವಾಗಿದ್ದು, ಚರ್ಚೆಯಲ್ಲಿ ಭಾಗವಹಿಸುತ್ತದೆ. ಆದರೆ ನಾವೇ ಮಾಡಿಕೊಂಡಿರುವ ನಿಯಮಗಳಂತೆ ನಿಯಮ 58ರಡಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ವಿಚಾರಗಳ ಬಗ್ಗೆ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳುವಾಗ ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ನಂತರ ತೆಗೆದುಕೊಳ್ಳಬೇಕೆಂದು ಇದೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಮಾನ್ಯ ಸಭಾನಾಯಕರಾಗಿದ್ದ ಶ್ರೀ ಎಸ್.ಆರ್. ಪಾಟೀಲರ ಆಕ್ಷೇಪಣೆ ಮೇರೆಗೆ ಪ್ರಶ್ನೋತ್ತರ ನಂತರ ತೆಗೆದುಕೊಳ್ಳಬೇಕೆಂದು ತಾವೇ ನಿರ್ದೇಶನ ಕೊಟ್ಟಿರುವ ಉದಾಹರಣೆಗಳಿವೆ. ಆದ್ದರಿಂದ ತಮ್ಮಲ್ಲಿ ವಿನಂತಿಸುವುದೇನೆಂದರೆ, ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ನಂತರ ಅವರ ನಿಲುವಳಿ ಸೂಚನೆಯ ಅಗತ್ಯತೆ ಬಗ್ಗೆ ಚರ್ಚೆ ಮಾಡಲು ತೆಗೆದುಕೊಳ್ಳಬೇಕು ಎಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ನಿಯಮ 68ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**08.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 28**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ನನಗೆ ಉತ್ತರ ಬಂದಿಲ್ಲ, ಒಂದು ಖಾಲಿ cover ಕೊಟ್ಟಿದ್ದಾರೆ. ಖಾಲಿ cover ಇದೆ, ಇದರೊಳಗೆ ಏನೂ ಇಲ್ಲ. ನಾನು ಕೋವಿಡ್ 19ರ ಹಿನ್ನಲೆಯಲ್ಲಿ ರಾಜ್ಯದ ಆಸ್ಪತ್ರೆಗಳ ಮೂಲ ಸೌಕರ್ಯ ಮತ್ತು ಅಭಿವೃದ್ಧಿಗೆ ಬಗ್ಗೆ ಪ್ರಶ್ನೆ ಕೇಳಿದ್ದು, ಇದು ಪ್ರಾರಂಭವಾದಾಗಿನಿಂದ ಇದರಲ್ಲಿ 6 ತಿಂಗಳ ಮಾಹಿತಿಯನ್ನು ಮಾತ್ರ ಕೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಬರೆದಿರುವ ಪತ್ರ ಸಿಕ್ಕಿದ್ದು, ಈ ಪ್ರಶ್ನೆಗೆ ಉತ್ತರಿಸಲು 15 ದಿವಸ ಕಾಲಾವಕಾಶವನ್ನು ಕೇಳಿದ್ದೀರಿ. ಆದರೆ ಈ ಪ್ರಶ್ನೆ ನೋಡಿದರೆ ಕಾಲಾವಕಾಶದ ಅವಶ್ಯಕತೆ ಇಲ್ಲ. ಉತ್ತರ ಕೊಡಬಹುದು. ಏಕೆಂದರೆ ಸಾಮಾನ್ಯವಾಗಿ ಮೂರು ವರ್ಷದ ಒಳಗಡೆ ಇರತಕ್ಕ ಪ್ರಶ್ನೆಯನ್ನು ಕೇಳಬಹುದು. ಅದರಲ್ಲಿ 10 ದಿವಸದ ಕಾಲಾವಕಾಶದಿಂದ 30 ದಿವಸದ ಒಳಗಡೆ ಇರತಕ್ಕದ್ದನ್ನು ಕೇಳಲು ಅವಕಾಶ ಇದೆ. ಇಲ್ಲಿ ಕೇಳಿರುವ ಪ್ರಶ್ನೆ ವ್ಯಾಪ್ತಿಯೊಳಗಡೆ ಬರುತ್ತದೆ. ಆದ್ದರಿಂದ ಇದಕ್ಕೆ 15 ದಿವಸದ ಕಾಲಾವಕಾಶ ಕೇಳಿರುವುದು ಸರಿಯಾಗುವುದಿಲ್ಲ. ಆದ್ದರಿಂದ ತಾವು ಯಾವಾಗ ಉತ್ತರ ಕೊಡುತ್ತೀರಾ ಎಂಬುದನ್ನು ಹೇಳಿ.

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಕೆಲವೊಂದು ಜಿಲ್ಲೆಗಳಿಂದ ಮಾಹಿತಿ ತೆಗೆದುಕೊಳ್ಳಬೇಕಾಗಿದೆ.

**ಸಭಾಪತಿಯವರು:-** ಏನಿಲ್ಲ, ಪ್ರಶ್ನೆಯನ್ನು ನೋಡಿ.

**ಶ್ರೀ ಬಿ. ಶ್ರೀರಾಮುಲು:-** ತಾವು 10 ದಿನ time ಕೊಟ್ಟರೆ ಸಾಕು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 6 ತಿಂಗಳು ಆಯಿತು, ಮಾನ್ಯ ಸಚಿವರು 10 ದಿವಸ ಎಂದು ಕೇಳುತ್ತಿದ್ದಾರೆ. 6 ತಿಂಗಳು ಆಗಿದೆ. 6 months period is lapsed. ಜ್ವಲಂತ ಸಮಸ್ಯೆಗಳ ಬಗ್ಗೆ ಎರಡೂ ಭಾಗಗಳ ಸದಸ್ಯರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆಗಳನ್ನು ಕೇಳಬಹುದು, ಏಕೆಂದರೆ ಅವರಿಗೆ ಬಹಳಷ್ಟು ಅವಕಾಶಗಳು ದೊರೆಯುವುದಿಲ್ಲ. ಕೊನೆ ಪಕ್ಷ ಪ್ರಶ್ನೋತ್ತರದ ಮುಖಾಂತರ ಅವರ ಕ್ಷೇತ್ರದ ಕೆಲಸ ಮಾಡಲು ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಪ್ರಶ್ನಿಸುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ಸರಿಯಿದೆ ಮತ್ತು ತಮ್ಮ ಭಾವನೆಗಳು ಕೂಡ ಸರಿಯಿದೆ. ಸದನ ಮುಗಿಯುವುದರೊಳಗೆ ಉತ್ತರ ಕೊಡಿಸುತ್ತೇನೆ.

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ:–** ಕೋವಿಡ್‌ನಂತಹ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳು ಪದೇ ಪದೇ press media ಗೆ ಹೇಳುತ್ತಿರುತ್ತಾರೆ. ನಾವೆಲ್ಲರೂ ಸಿದ್ಧವಾಗಿದ್ದೇವೆ, ಎಲ್ಲಾ ಮಾಡಲಾಗಿದೆ. ಆದರೆ ಏನು ಮಾಡಿದ್ದಾರೆ ಎಂದು ಹೇಳುವುದಕ್ಕೆ ಅವರ ಕೈಲಿ ಆಗುವುದಿಲ್ಲ, ಅದಕ್ಕೆ 10 ದಿವಸ time ಬೇಕೆಂದರೆ ಏನು ಪರಿಸ್ಥಿತಿ?

**(ಗೊಂದಲ)**

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಎಸ್. ರವಿ:–** ಸಮಸ್ಯೆಯಿಂದ ಜಾರಿಕೊಳ್ಳುತ್ತಿದ್ದಾರೆ. ಇರುವುದು ಒಂದು ಸಮಸ್ಯೆ. ಏನು ಮಾಡುತ್ತಿದ್ದಾರೆ, ಏನು ನಡೆಯುತ್ತಿದೆ. ಅದನ್ನು ಹೇಳುವುದಕ್ಕೆ ಏಕೆ escape ಮಾಡುತ್ತಿದ್ದಾರೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ನಿಮಗೆ ಖುದ್ದಾಗಿ ಕೋವಿಡ್ ಬಂದಿದೆಯೇ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪ್ರಶ್ನೆಗೆ ಉತ್ತರ ನೀಡಲು ಕಾಲಾವಕಾಶವನ್ನು ನೀಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ.

**ಶ್ರೀ ಎಸ್. ರವಿ:–** ಈ ಪ್ರಶ್ನೆಗೆ ಕಾಲಾವಕಾಶವೇ? ಪ್ರಶ್ನೆ ನೋಡಿ.

**ಡಾ: ತೇಜಸ್ವಿನಿಗೌಡ:–** ಸರಿಯಾದ ಮಾಹಿತಿ ಕೊಡಬೇಕು, update ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಗೊಂದಲ)**

**ಶ್ರೀ ಬಿ. ಶ್ರೀರಾಮಲು:–** ಕಾಲಕಾಲಕ್ಕೆ, ದಿನದಿನಕ್ಕೆ update ಆಗಬೇಕು.

**ಸಭಾಪತಿಯವರು:–** ಸದನ ಮುಗಿಯುವುದರೊಳಗೆ......

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಸದನ ಮುಗಿಯುವುದರೊಳಗೆ ಎಂದರೆ ಯಾವಾಗ? ಇದು ಜ್ವಲಂತ ಸಮಸ್ಯೆಯಾಗಿದೆ. ಒಬ್ಬೊಬ್ಬರು ಒಂದೊಂದು ರೀತಿ ಹೇಳಿಕೆ ಕೊಡುತ್ತಾರೆ.

**(ಗೊಂದಲ)**

**ಶ್ರೀ ಬಿ. ಶ್ರೀರಾಮುಲು:–** ನಾವು ಎಲ್ಲಾ ತಾಲ್ಲೂಕುಗಳಿಂದ ಮಾಹಿತಿ ತೆಗೆದುಕೊಳ್ಳಬೇಕು. ಜಿಲ್ಲೆಗಳಿಂದ ಮಾಹಿತಿ ತೆಗೆದುಕೊಳ್ಳಬೇಕು.

**(ಗೊಂದಲ)**

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಚಿವರ ಕಾಳಜಿಯನ್ನು ಅರ್ಥಮಾಡಿಕೊಳ್ಳಬೇಕು.

**ಶ್ರೀ ಎಸ್. ರವಿ:–** ಎಷ್ಟು ದಿವಸ ಆಯಿತು, ಸರ್ಕಾರ ಇರುವುದು ಏಕೆ? ವ್ಯವಸ್ಥೆ ಇರುವುದು ಏಕೆ?

**ಶ್ರೀ ಬಿ. ಶ್ರೀರಾಮುಲು:–** ಬೇರೆ ಪ್ರಶ್ನೆಗಳಿಗಲ್ಲಾ ಉತ್ತರ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ನೇರವಾಗಿ ಇದು ಸಮಯ ಕೇಳುವ ಪ್ರಶ್ನೆ ಅಲ್ಲ ಎಂದು ಹೇಳಿದ್ದೀರಿ. ಇದಕ್ಕೆ ತಾವೇ ನಿರ್ದೇಶನ ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್. ಪಾಟೀಲ್:–** ನಮ್ಮ ಭಾರತ ದೇಶದಲ್ಲಿ ಅಲ್ಲದೇ ಇಡೀ ಪ್ರಪಂಚದಲ್ಲಿ ಇದೆ. ಎಲ್ಲಾ ದೇಶಗಳಲ್ಲಿ ಎಷ್ಟು ಜನ ಸೋಂಕಿತರು, ಎಷ್ಟು ಸಾವಾಗುತ್ತಿದೆ ಎಂಬ ಮಾಹಿತಿ ಸಿಗುತ್ತಿದೆ. ತಾವು ಕಟ್ಟುನಿಟ್ಟಿನ ಆದೇಶ ಮಾಡಬೇಕು.

**ಸಭಾಪತಿಯವರು:–** ಅಧಿವೇಶನ ಮುಗಿಯುವುದರೊಳಗೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ಇವರಿಗಿಂತ Electronic Media ಅವರನ್ನು ಕೇಳಿದರೆ ಅವರೇ ಚೆನ್ನಾಗಿ ಉತ್ತರ ಹೇಳುತ್ತಾರೆ. ಅವರು ಕ್ಷಣ ಕ್ಷಣದ ಮಾಹಿತಿ ಇಟ್ಟುಕೊಂಡಿರುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅಧಿವೇಶನ ಮುಗಿಯುವುದರೊಳಗೆ ಮಾನ್ಯ ಸಭಾಪತಿಯವರು ತಿಳಿಸಿದಂತೆ ವಿರೋಧ ಪಕ್ಷದವರು ಒಪ್ಪುವಂತಹ ಉತ್ತರವನ್ನು ಕೊಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಹೃದಯ ಮುಟ್ಟಿಕೊಂಡು ಹೇಳಲಿ, is it right?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಾಮಾನ್ಯವಾಗಿ ಸಮಯ ಕೇಳುವುದಿದೆ, ಅವರು ಸಮಯ ಕೇಳಿರುವುದನ್ನು ಅವರು ವಿರೋಧ ಮಾಡಿದ್ದಾರೆ. ಅಧಿವೇಶನ ಮುಗಿಯುವುದರೊಳಗೆ ಸಮಾಧಾನಕರವಾದ ಉತ್ತರ ಕೊಡುತ್ತೇವೆ.

**ಸಭಾಪತಿಯವರು:–** ಶ್ರೀ ನಸೀರ್ ಅಹಮದ್ ನಂತರದ ಪ್ರಶ್ನೆ ಕೇಳಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರಿಗೂ mask ಹಾಕಿಕೊಂಡು ಮಾತನಾಡುವುದಕ್ಕೆ ಹೇಳಿ.

**ಶ್ರೀ ಎಸ್. ರವಿ:–** ಅವರು ಹಾಕಿಕೊಳ್ಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಾಲಾವಕಾಶ ಕೇಳಿದ್ದರು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(718)/21.09.2020/1.30/ಹೆಚ್‌ವಿಃಎಂಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**
ಸನ್ಮಾನ್ಯ ಸಭಾಪತಿಯವರೇ, ತಾವು ಉತ್ತರ ಕೊಡಲು ಒಂದು ವಾರಗಳ ಕಾಲಾವಕಾಶವನ್ನು ನೀಡಿದರೆ ನಾವು ಒಂದು ವಾರದೊಳಗೆ ಉತ್ತರವನ್ನು ಕೊಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಇಡೀ ಪ್ರಪಂಚದಲ್ಲಿ ಪ್ರತಿ ನಿಮಿಷಕ್ಕೆ ಎಷ್ಟು ಜನರು ಕೋವಿಡ್ ವೈರಸ್ ಸೋಂಕಿತರಾಗುತ್ತಿದ್ದಾರೆ, ಎಷ್ಟು ಜನರು ಗುಣಮುಖರಾಗುತ್ತಿದ್ದಾರೆ ಮತ್ತು ಎಷ್ಟು ಜನರು ಮರಣ ಹೊಂದಿದ್ದಾರೆ ಎನ್ನುವ ಮಾಹಿತಿ ಕ್ಷಣಕ್ಷಣಕ್ಕೂ ದೊರೆಯುತ್ತಿರುವಾಗ, ಮಾನ್ಯ ಸಭಾ ನಾಯಕರು ಇನ್ನೊಂದು ವಾರದೊಳಗಾಗಿ ಉತ್ತರವನ್ನು ನೀಡುತ್ತೇವೆಂದು ಹೇಳುತ್ತಿದ್ದಾರೆ. ಸರ್ಕಾರ ಇನ್ನೊಂದೆರಡು ದಿನಗಳೊಳಗಾಗಿ ಉತ್ತರವನ್ನು ನೀಡಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

**(ಗೊಂದಲ)**

**ಶ್ರೀ ಎಸ್.ರವಿ:-** ಸನ್ಮಾನ್ಯ ಸಭಾಪತಿಯವರೇ, ಎಷ್ಟು ಅಸಮರ್ಥರ ಕೈಗೆ ಅಧಿಕಾರ ಸಿಕ್ಕಿದೆ ಎನ್ನುವುದು ಇದರಿಂದ ಗೊತ್ತಾಗುತ್ತಿದೆ. ಇವರಿಂದ ಉತ್ತರ ಕೊಡಲು ಆಗುತ್ತಿಲ್ಲ.

**(ಗೊಂದಲ)**

**SRI S.R.PATIL :-** Every minute the information will be updated. You don't make delay and furnish the details tomorrow only.

**ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಒಂದು ವಾರದೊಳಗಾಗಿ ಉತ್ತರವನ್ನು ಕೊಡುತ್ತೇವೆ. ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಕೋವಿಡ್ ಬಂದಾಗಿನಿಂದ ಇಲ್ಲಿಯವರೆಗೆ ಮೂಲಭೂತ ಸೌಲಭ್ಯಗಳನ್ನು ಅಂದರೆ, ವೆಂಟಿಲೇಶನ್ ಮತ್ತು ಆಕ್ಸಿಜನ್ ಸಿಲಿಂಡರ್ ಇತ್ಯಾದಿಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒದಗಿಸುವುದಕ್ಕಾಗಿ ಮಾಡಿರುವಂತಹ ಖರ್ಚುವೆಚ್ಚಗಳ ಮಾಹಿತಿಯನ್ನು ಪಡೆದುಕೊಳ್ಳಬೇಕಾಗಿದೆ. ಈ ಎಲ್ಲ ಮಾಹಿತಿಗಳನ್ನು ಸಂಬಂಧಪಟ್ಟವರಿಂದ ಪಡೆದುಕೊಳ್ಳುವುದಕ್ಕಾಗಿ ಒಂದು ವಾರಗಳ ಕಾಲಾವಕಾಶವನ್ನು ಕೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಒಂದು ವಾರದ ಕಾಲಾವಕಾಶವನ್ನು ನೀಡಿದರೆ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಎಸ್.ರವಿ ಅವರು ಮತ್ತು ಎಲ್ಲರೂ ಒಪ್ಪುವಂತಹ ಉತ್ತರವನ್ನು ನೀಡುತ್ತೇವೆ.

**(ಗೊಂದಲ)**

**ಶ್ರೀ ಎಸ್.ರವಿ:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಪ್ರಶ್ನೆಯನ್ನು ಕಳುಹಿಸಿಕೊಟ್ಟು ಎಷ್ಟು ದಿನಗಳಾಗಿವೆ. ಇಷ್ಟು ದಿನಗಳಾದರೂ ಉತ್ತರವನ್ನು ಕೊಡದಿದ್ದರೆ ಹೇಗೆ?

**(ಗೊಂದಲ)**

**ಡಾ:ತೇಜಸ್ವಿನಿಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮತ್ತು ಮಾನ್ಯ ಸಚಿವರು ಹೇಳುತ್ತಿರುವ ಉತ್ತರವನ್ನು ಅವರು ಸಮಾಧಾನದಿಂದ ಕೇಳಬೇಕಾಗಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾಗೋಷ್ಠಿಯನ್ನು ಕರೆದು ಸಚಿವರ ಪಟ್ಟಿಯನ್ನು ನೀಡಿ ನಮ್ಮ ಸಚಿವರುಗಳು ಎಲ್ಲ ಮಾಹಿತಿಗಳನ್ನು ನೀಡುವುದಕ್ಕೆ ಸಮರ್ಥರಿದ್ದಾರೆಂದು ಹೇಳಿದ್ದರು. ಆದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಬಳಿ ನಾವು ಕೇಳಿದಂತಹ ಪ್ರಶ್ನೆಗಳಿಗೆ ಮಾಹಿತಿಯೇ ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಾಲ್ಲೂಕುವಾರು ಮಾಹಿತಿಯನ್ನು ಕೇಳಿರುವುದರಿಂದ ಆ ಮಾಹಿತಿಗಳನ್ನು ಸಂಗ್ರಹಿಸಿ ಒಂದು ವಾರದೊಳಗಾಗಿ ಉತ್ತರವನ್ನು ಕೊಡುತ್ತೇವೆಂದು ಹೇಳಿದರೂ ಸಹ ಅವರು ಸುಮ್ಮನೆ ವಾದ ಮಾಡುವುದು ಸರಿಯಲ್ಲ. ಹಿಂದಿನ ಸರ್ಕಾರಗಳು ಅಧಿಕಾರದಲ್ಲಿದ್ದಾಗಲೂ ಸಹ ಈ ಸ್ಥಾನದಲ್ಲಿ ನಿಂತು ಉತ್ತರವನ್ನು ಕೊಡಲು ಸಮಯಾವಕಾಶವನ್ನು ಕೇಳಿರುವಂತಹ ಉದಾಹರಣೆಗಳು ಇವೆ. ಈ ವಾರದ ಅಂತ್ಯದೊಳಗೆ ನಾವು ಉತ್ತರವನ್ನು ನೀಡುತ್ತೇವೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ರವಿಃ–** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಆಗುವುದಿಲ್ಲವೆಂದು ಅವರು ಹೇಳಲಿಲ್ಲ. ಉತ್ತರ ಕೊಡಲು ಅವರು ಸಮರ್ಥರಿಲ್ಲವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ತಾಲ್ಲೂಕುವಾರು ಮಾಹಿತಿಯನ್ನು ಕೇಳಿರುವುದರಿಂದ ಸ್ವಲ್ಪ ವಿಳಂಬವಾಗಿದೆ. ಒಂದು ವಾರದೊಳಗಾಗಿ ಅವರೆಲ್ಲರೂ ಒಪ್ಪುವಂತಹ, ಪಾರದರ್ಶಕವಾದ ಉತ್ತರವನ್ನು ಕೊಡುತ್ತೇವೆಂದು ಹೇಳುತ್ತಿದ್ದೇನೆ.

**(ಗೊಂದಲ)**

**ಡಾಃಕೆ.ಸುಧಾಕರ್ಃ–** ಸನ್ಮಾನ್ಯ ಸಭಾಪತಿಯವರೇ, ಸಮಾಧಾನದಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರು ನಮ್ಮ ಮಾತುಗಳನ್ನು ಕೇಳಬೇಕಾಗಿದೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಪ್ರಶ್ನೆ ಕೇಳಿರುವುದು, ಆದರೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಉತ್ತರವನ್ನು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಎಲ್ಲಾ ಮಂತ್ರಿಗಳ ಸಹಕಾರ ಕೊಡುವಂತಹ ವ್ಯವಸ್ಥೆ ಹಿಂದಿನ ಸರ್ಕಾರದಲ್ಲಿಯೂ ನಡೆದುಕೊಂಡು ಬಂದಿದೆ. ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಕೇಳಿಕೊಳ್ಳುವುದೇನೆಂದರೆ, ಮುಂದಿನ ವಾರದೊಳಗಾಗಿ ಅವರೆಲ್ಲರೂ ಒಪ್ಪುವಂತಹ ಉತ್ತರವನ್ನು ಪಾರದರ್ಶಕವಾಗಿ ಕೊಡುತ್ತೇವೆಂದು ಹೇಳುತ್ತಿದ್ದೇವೆ.

**(ಗೊಂದಲ)**

**ಡಾಃಕೆ.ಸುಧಾಕರ್ಃ–** ಸನ್ಮಾನ್ಯ ಸಭಾಪತಿಯವರೇ, ಜಿಲ್ಲಾವಾರು ಮತ್ತು ತಾಲ್ಲೂಕುವಾರು ಎಲ್ಲ ಇಲಾಖೆಗಳಿಂದ ಎಷ್ಟು ಖರ್ಚು ಮಾಡಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಆ ಮಾಹಿತಿಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಇತರ ಅಧಿಕಾರಿಗಳಿಂದ ಸಂಗ್ರಹಿಸಿ ಕೊಡಬೇಕಾಗುತ್ತದೆ. ಇದಕ್ಕಾಗಿ ಕಾಲಾವಕಾಶ ಬೇಕಾಗುತ್ತದೆ. ಅವರಿಗೆ ನಿಜವಾಗಿಯೂ ಉತ್ತರ ಬೇಕು ಎನ್ನುವುದಾದರೆ, ಈ ರೀತಿ ಗಲಾಟೆ ಗದ್ದಲ ಮಾಡುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ರವಿ:–** ಸನ್ಮಾನ್ಯ ಸಭಾಪತಿಯವರೇ, ಅವರ ಕೈಯಲ್ಲಿ ಉತ್ತರ ಹೇಳುವುದಕ್ಕೆ ಆಗುವುದಿಲ್ಲವೆಂದು ಇವರು ಹೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ನಸೀರ್ ಅಹ್ಮದ್ ಅವರದು.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತಾವು ಆದೇಶವನ್ನು ನೀಡಬೇಕಾಗುತ್ತದೆ. ಏಕೆಂದರೆ, time is very valuable.

**ಸಭಾಪತಿಯವರು:–** ಸರ್ಕಾರದವರು ಸದನ ಮುಗಿಯುವುದರೊಳಗಾಗಿ ಉತ್ತರವನ್ನು ನೀಡುವುದಾಗಿ ಹೇಳಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:–** ಸನ್ಮಾನ್ಯ ಸಭಾಪತಿಯವರೇ, ಈ ವಾರದೊಳಗಾಗಿ ಉತ್ತರವನ್ನು ಕೊಡುತ್ತೇವೆಂದು ಹೇಳಿದರೂ ಅವರು ಒತ್ತಾಯ ಮಾಡಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸದನವನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ಮುಗಿಸಬೇಕು ಯಾವುದು ಮಹತ್ವದ ವಿಚಾರಗಳಿವೆ ಅವುಗಳನ್ನು ಚರ್ಚೆ ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಮನವಿ ಮಾಡಿಕೊಂಡಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ, ಇವರು by the end of this week ಎಂದು ಹೇಳುತ್ತಿದ್ದಾರೆ. ಆದ್ದರಿಂದ ಸದನ ನಡೆಯುವುದರ ಬಗ್ಗೆಯೇ ನಮಗೆ ಅನುಮಾನ ಬರುತ್ತಿದೆ.

**ಸಭಾಪತಿಯವರು:–** ಸದನ ಮುಗಿಯುವುದರೊಳಗೆ ಎಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬೇರೆ ಬೇರೆ ಕಾರಣಗಳಿಂದ ಕೋವಿಡ್ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ಮುಖಂಡರ ಜೊತೆಗೆ ಮಾತನಾಡಿ, ಸದನವನ್ನು ಸ್ವಲ್ಪ ಮಟ್ಟಿಗೆ ಮೊಟಕುಗೊಳಿಸಬಹುದೇ ಎನ್ನುವುದರ ಬಗಗೆ ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾತುಕತೆಯೂ ಆಗಿದೆ. ಅವರ ಸಹಮತ ಯಾವ ರೀತಿ ಇರುತ್ತದೆ ಆ ರೀತಿ ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಇಂತಹ ಸಂದರ್ಭದಲ್ಲಿ ಅವರುಗಳು ಅದೆಲ್ಲವನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು. ಸಚಿವರ ಜೊತೆಗೆ ವಾದವಿವಾದ ಮಾಡುವ ಮನಸ್ಸಿಲ್ಲ. ಆದರೆ, ಸದರಿ ಪ್ರಶ್ನೆ ಕೇಳಿ 6 ತಿಂಗಳುಗಳಾಗಿವೆ. ಇಡೀ ಪ್ರಪಂಚದಲ್ಲಿ ಪ್ರತಿ ಸೆಕೆಂಡ್‌ಗೆ ಪ್ರತಿ ನಿಮಿಷಕ್ಕೆ ಸೋಂಕಿತರ ಸಂಖ್ಯೆ ಎಷ್ಟು, ಗುಣಮುಖರಾದವರ ಸಂಖ್ಯೆ ಎಷ್ಟು ಮತ್ತು ಮೃತ ಹೊಂದಿದವರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಖ್ಯೆಯೆಷ್ಟು ಎನ್ನುವ ಮಾಹಿತಿ ದೊರೆಯುತ್ತದೆ. We are in the threshold of 21st century. ನಾವು ಐ.ಟಿ. ಯುಗದಲ್ಲಿದ್ದೇವೆ. You collect all the information. ಡಿಜಿಟಲ್ ವ್ಯವಸ್ಥೆಯಲ್ಲಿದ್ದೇವೆ. ಇದಕ್ಕಾಗಿ ಒಂದು ವಾರದ ಕಾಲಾವಕಾಶವನ್ನು ಕೇಳಿದರೆ ಹೇಗೆ? You cut short and tell.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಈ ವಾರದ ಅಂತ್ಯದೊಳಗೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದೇನೆ. ಒಂದು ವಾರದೊಳಗಾಗಿ ಈ ಸದನ ಮುಗಿಯುತ್ತದೆಂದು ಅವರಿಗೆ ಭಾಸವಾದರೆ, ಮಾನ್ಯ ಸಚಿವರೊಂದಿಗೆ ಕುಳಿತುಕೊಂಡು ಮಾತನಾಡಿದರೆ ಎಲ್ಲವೂ ಸರಿಯಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಸದನವನ್ನು ಬೇಗ ಮುಗಿಸುವುದಕ್ಕೆ ನಾವು ಬಿಡುವುದಿಲ್ಲ. ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ಅಕ್ಟೋಬರ್ 15ರವರೆಗೆ ನಡೆಸಿ ಎಂದು ಕೇಳಿಕೊಂಡಿದ್ದೇನೆ. I have written a letter to the Chief Minister that, the session should not conclude till the end of this month. But it should be extended upto 15th October 2020. ಮಾನ್ಯ ಸಭಾ ನಾಯಕರು, you pull up all the Ministers.

**ಸಭಾಪತಿಯವರುಃ–** ಮುಂದಿನ ಪ್ರಶ್ನೆ ಮಾನ್ಯ ನಸೀರ್ ಅಹ್ಮದ್ ಅವರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ:130**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಸೀರ್ ಅಹ್ಮದ್:-** ಸನ್ಮಾನ್ಯ ಸಭಾಪತಿಯವರೇ, 2020-21ನೇ ಸಾಲಿನ ಆಯವ್ಯಯದಲ್ಲಿ 'ರಾಜ್ಯಾದ್ಯಂತ ಕಟ್ಟಡ ನಿರ್ಮಾಣ ಕಾರ್ಮಿಕರ 6 ವರ್ಷದೊಳಗಿನ ಮಕ್ಕಳ ಪಾಲನೆ ಮಾಡಲು ಕಟ್ಟಡ ನಿರ್ಮಾಣ ಸ್ಥಳಗಳಲ್ಲಿ 10 ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ಒಳಗೊಂಡಂತೆ ಒಟ್ಟು 110 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಜಿಲ್ಲಾವಾರು ಸ್ಥಾಪಿಸಲಾಗುತ್ತದೆಂದು ಘೋಷಣೆ ಮಾಡಲಾಗಿತ್ತು. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವ ನನ್ನ ಪ್ರಶ್ನೆಗೆ ಅವರು ಉತ್ತರವನ್ನು ಕೊಟ್ಟಿಲ್ಲ. ಆದರೆ, 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವುದನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ, ಜಿಲ್ಲಾವಾರು ಎಷ್ಟು ಶಿಶುಪಾಲನಾ ಕೇಂದ್ರಗಳನ್ನು ತೆರೆಯಲಾಗಿದೆ ಮತ್ತು ಅದಕ್ಕೆ ಎಷ್ಟು ಅನುದಾನವನ್ನು ನೀಡಲಾಗಿದೆ ಎನ್ನುವುದರ ಬಗ್ಗೆ ವಿವರವನ್ನು ಕೊಟ್ಟಿಲ್ಲ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಸನ್ಮಾನ್ಯ ಸಭಾಪತಿಯವರೇ, 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ಪ್ರಾಯೋಗಿಕವಾಗಿ 10 ಶಿಶಿಪಾಲನಾ ಕೇಂದ್ರಗಳನ್ನು ತೆರೆಯಲಾಗಿತ್ತು. ಉಳಿದ 110 ಕೇಂದ್ರಗಳನ್ನು 2020-21ನೇ ಸಾಲಿನಲ್ಲಿ ಪ್ರಾರಂಭಿಸಲಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಘೋಷಣೆ ಮಾಡಿದ್ದರು. ಶಿಶುಪಾಲನಾ ಕೇಂದ್ರಗಳು ಮಕ್ಕಳ ಪಾಲನೆ ಮಾಡುವ ಕೇಂದ್ರಗಳಾಗಿವೆ. ನಮ್ಮ ಆಯವ್ಯಯದ ಅಧಿವೇಶನ ಮುಕ್ತಾಯವಾದ ಮರುದಿನದಿಂದ ಕೋವಿಡ್-19 ಪ್ರಾರಂಭವಾಯಿತು. ಕೋವಿಡ್-19 ಪ್ರಾರಂಭವಾದ ಹಿನ್ನೆಲೆಯಲ್ಲಿ ಯಾವ ಕಾರಣಕ್ಕೂ ನಾವು ಶಿಶುಪಾಲನಾ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ತಯಾರಿರಲಿಲ್ಲ. ಅಂಗನವಾಡಿಯಿಂದ ಹಿಡಿದು ಶಾಲೆಯವರೆಗೆ ಯಾವುದೂ ಕೂಡ ಇಲ್ಲಿಯವರೆಗೆ ಪ್ರಾರಂಭವಾಗಿಲ್ಲ. ಶಿಶುಪಾಲನಾ ಕೇಂದ್ರ ತೆರೆಯುವುದಕ್ಕೆ ಆರ್ಥಿಕ ತೊಂದರೆ ಇಲ್ಲ. ಜಾಗವನ್ನು ಗುರುತು ಮಾಡುವುದಕ್ಕೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟು ಅನೇಕ ಸ್ಥಳಗಳನ್ನು ಸಹ ಆಯ್ಕೆ ಮಾಡಿದ್ದೇವೆ. ಕೋವಿಡ್-19 ಸ್ವಲ್ಪ ಮಟ್ಟಿಗೆ ತಹಬದಿಗೆ ಬಂದ ಮೇಲೆ ಪೋಷಕರಿಗೆ ಮಕ್ಕಳನ್ನು ಕಳುಹಿಸಬಹುದು ಎನ್ನುವ ವಿಶ್ವಾಸ ಮೂಡಿದ ಮೇಲೆ ಅತಿ ಶೀಘ್ರದಲ್ಲಿಯೇ ನಾವು ಈ ಕೇಂದ್ರಗಳನ್ನು ಪ್ರಾರಂಭಿಸುತ್ತೇವೆ. ಸರ್ಕಾರ ಕೊಟ್ಟ ಮಾತಿಗೆ ತಪ್ಪುವಂತಹ ಪ್ರಶ್ನೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(719) 21.9.2020 : 1.40 ಪಿಕೆ:ಎಕೆ**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಕಾರ್ಮಿಕರು ಎಲ್ಲಾ ಪ್ರಾಜೆಕ್ಟ್‌ಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳ ವಿಚಾರವೇ ಬೇರೆ. ಕೆಲಸ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಗೋಸ್ಕರ ಮಾಡಿರುವಂತಹ ಕಾರ್ಯಕ್ರಮ ಇದಾಗಿದೆ. ಆದರೆ ನೀವು, ಪ್ಯಾಂಡಮಿಕ್ ಇದೆ, 6 ತಿಂಗಳು ಆಗಿಹೋಗಿದೆ, ಇನ್ನೂ 6 ತಿಂಗಳು ಕಾಯಬೇಕು ಎಂದು ಹೇಳುವುದು ಸರಿಯಾದ ಉತ್ತರವಲ್ಲ. 2 ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ ಎಂದು commitment ಮಾಡಿದರೆ ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರ ಸಲಹೆಗಳನ್ನು ಸ್ವೀಕಾರ ಮಾಡುತ್ತೇವೆ. ಇಡೀ ರಾಜ್ಯದಲ್ಲಿ, ಮತ್ತು ದೇಶದಲ್ಲಿ ಮಕ್ಕಳ ಭವಿಷ್ಯದ ಕಾರಣಕ್ಕಾಗಿ ಎಲ್ಲಾ ಕಾರ್ಮಿಕರಾಗಲಿ ಅಥವಾ ಇತರ ಪಾಲಕರು ತಮ್ಮ ಮಕ್ಕಳುಗಳನ್ನು ಶಾಲೆಗೆ ಕಳುಹಿಸುವುದಕ್ಕೆ ತಯಾರಾಗುತ್ತಿಲ್ಲ. ಕೆಎಸ್‌ಆರ್‌ಟಿಸಿ ಬಸ್ ಬಿಟ್ಟರೆ ಮಕ್ಕಳು ಆ ಬಸ್ ಹತ್ತುವುದಕ್ಕೆ ತಯಾರಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಚಿಕ್ಕ ಮಕ್ಕಳ ಬಗ್ಗೆ ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಮತ್ತು ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅತೀ ಶೀಘ್ರದಲ್ಲಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯುವ ಕೆಲಸ ಮಾಡುತ್ತೇವೆ.

ಶ್ರೀ **ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಾನು ಒಂದು ಸಲಹೆ ಕೊಡಬಯಸುತ್ತೇನೆ. ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿಯನ್ನು ತಂದಿದ್ದು ಅದಕ್ಕೆ ಕ್ಯಾಬಿನೆಟ್ ಅಪ್ರೂವಲ್ ಕೊಟ್ಟಿದೆ. ಡಾ.ಕಸ್ತೂರಿರಂಗನ್ ವರದಿ ಪ್ರಕಾರ Pre-Primary education ಗೆ ಒತ್ತು ಕೊಡಲಾಗಿದೆ. ನಗರ ಪ್ರದೇಶಗಳಲ್ಲಿ Playgroup-1,2,3 ಅಥವಾ LKG, UKG ಗಳಲ್ಲಿ ಏನು ಮಾಡುತ್ತಾರೋ ಅದೇರೀತಿ ಗ್ರಾಮಂತರ ಪ್ರದೇಶಗಳಲ್ಲಿ, ಶಿಶುಪಾಲನಾ ಕೇಂದ್ರ ಇರಬಹುದು, ಅಂಗನವಾಡಿ ಕೇಂದ್ರಗಳು ಇರಬಹುದು ಈ ರೀತಿ ಬೇರೆ ಬೇರೆ ಇಲಾಖೆಗೆ ಸಂಬಂಧಪಟ್ಟಂತೆ ಅಂದರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇರಬಹುದು, ಶಿಕ್ಷಣ ಇಲಾಖೆ ಇರಬಹುದು, ಕಾರ್ಮಿಕ ಇಲಾಖೆ ಇರಬಹುದು, ಇವುಗಳಲ್ಲೆವನ್ನು ಅಪ್‌ಡೇಟ್ ಮಾಡಬೇಕಾಗುತ್ತದೆ. Pre-School ವ್ಯವಸ್ಥೆ ಹೊಂದಿರುವಂತಹ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ತರಬೇತಿ ಕೊಡುವ ಕೆಲಸ ಮಾಡಬೇಕು. ನಾಳೆ ಗ್ರಾಮಾಂತರ ಪ್ರದೇಶಗಳಿಂದ, 1ನೇ ತರಗತಿಯಿಂದ ಬರುವ ಮಕ್ಕಳು ನಗರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರದೇಶಗಳ ಮಕ್ಕಳುಗಳ ಜೊತೆ ಕಾಂಪೀಟ್ ಮಾಡುವ ಹಾಗೆ ಇರಬೇಕು ಅಥವಾ ಇರುವಂತಹ ಪಠ್ಯ-ಪುಸ್ತಕಗಳನ್ನು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಇರಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮುತುವರ್ಜಿ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 70**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ್ ಸಿಂಗ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಎರಡನೆಯ ಪ್ರಶ್ನೆಗೆ, ಒಟ್ಟು 117 ನೇಮಕಾತಿ ಪ್ರಾಧಿಕಾರಿಗಳ ಪೈಕಿ 41 ಪ್ರಾಧಿಕಾರಗಳಿಂದ ಮಾಹಿತಿ ಸ್ವೀಕರಿಸಲಾಗಿದೆ ಎಂದು ಹೇಳಿದ್ದಾರೆ. 76 ನೇಮಕಾತಿ ಪ್ರಾಧಿಕಾರಗಳು ಮಾಹಿತಿ ಸಲ್ಲಿಸಿಲ್ಲ; ಅವರು, ತಮ್ಮಗೆ ಅವಶ್ಯತೆ ಇಲ್ಲವೆಂದು ಹೇಳಿದ್ದಾರೆ ಎಂದು ತಿಳಿಸಿದ್ದಾರೆ. ಮಾನ್ಯ ಸಚಿವರೇ, ಈ ಕುರಿತು ನೀವು ಕ್ರಾಸ್-ಚೆಕ್ ಮಾಡಿದ್ದೀರಾ? ಅಲ್ಲದೇ, 41 ಇಲಾಖೆಗಳ ಪೈಕಿ ಬಹಳಷ್ಟು ಇಲಾಖೆಗಳು "ಬ್ಯಾಕ್‌ಲಾಗ್‌ಗಳ ಬಗ್ಗೆ ಮಾಹಿತಿ" ಎನ್ನುವ ಕಾಲಂನಲ್ಲಿ "ಶೂನ್ಯ ವರದಿ" ಎಂದು ಹಾಕಿದ್ದಾರೆ. ಇದರ ಬಗ್ಗೆ ಸಚಿವರು ವಿವರವಾಗಿ ಆಗಿ ತಿಳಿಸಬೇಕು.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, 117 ಪ್ರಾಧಿಕಾರಗಳಿಗೆ ಇಲಾಖೆಗಳ ವತಿಯಿಂದ ಪತ್ರ ಬರೆಯಲಾಗಿದೆ. ಅದರಲ್ಲಿ 41 ನೇಮಕಾತಿ ಪ್ರಾಧಿಕಾರಗಳಿಂದ ಮಾಹಿತಿ ಬಂದಿವೆ. ಇನ್ನು ಬಾಕಿ ಉಳಿದಿರುವ ಪ್ರಾಧಿಕಾರಗಳಿಂದ ಮಾಹಿತಿ ಬರಬೇಕಾಗಿದೆ. ಮಾಹಿತಿ ತೆಗೆದುಕೊಂಡು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಮಾಡುತ್ತೇವೆ.

**ಶ್ರೀ ವಿಜಯ್ ಸಿಂಗ್:-** "ಶೂನ್ಯ ವರದಿ" ಎಂದು ಹಾಕಿರುವುದರ ಬಗ್ಗೆ ನಮಗೆ ಕ್ಲ್ಯಾರಿಟಿ ಬೇಕು.

**ಶ್ರೀ ಬಿ.ಶ್ರೀರಾಮುಲು:-** ಆ ಕುರಿತು ತಮಗೆ ಮಾಹಿತಿ ಬಂದಿಲ್ಲ ಎಂದರೆ ಆ ಮಾಹಿತಿಗಳನ್ನು ಕಳುಹಿಸಿಕೊಡುತ್ತೇನೆ. ಇದುವರೆಗೂ 41 ಇಲಾಖೆಗಳಿಂದ ಮಾಹಿತಿ ಬಂದಿದೆ.

**ಶ್ರೀ ವಿಜಯ್ ಸಿಂಗ್:-** ಬಹಳಷ್ಟು ಇಲಾಖೆಯವರು " ಶೂನ್ಯ ವರದಿ" ಎಂದು ಹಾಕಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:-** ಬಹುಶಃ ಅದು ಮಿಸ್ಟೇಕ್ ಆಗಿರಬಹುದು. ಅದರ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ 160**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ **ಅ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಪ್ರಾರಂಭಿಸಲು 2010ರಲ್ಲಿ 100 ಎಕರೆ ಜಮೀನನ್ನು ತೆಗೆದುಕೊಂಡಿದ್ದರೂ, ಇಲ್ಲಿಯವರೆಗೂ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಇದರ ಬಗ್ಗೆ ಅತಿ ಶೀಘ್ರದಲ್ಲೇ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ **ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಕೇಳಿದ್ದಾರೆ. ಈಗಾಗಲೇ ರೂ. 369.00 ಕೋಟಿಗಳ ಅಂದಾಜಿನ ಪ್ರಸ್ತಾವನೆಯನ್ನು ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿರುತ್ತದೆ. ಈ ಒಂದು ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಬಂದ ತಕ್ಷಣ ಕಟ್ಟಡ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡಲಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**<u>ಪ್ರಶ್ನೆ ಸಂಖ್ಯೆ : 112 + 113</u>**

**(ಉತ್ತರವನ್ನು ಲಗತ್ತಿಸಲಾಗಿದೆ.**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಬಹಳಷ್ಟು ದೊಡ್ಡದಾಗಿದೆ. ಕೊರೋನಾ ಸಂಬಂಧವಾಗಿ ಖರೀದಿಸಿದ ಪಿಪಿಇ ಕಿಟ್, ವೆಂಟಿಲೇಟರ್, ಸ್ಯಾನಿಟೈಸರ್, ಔಷಧಗಳು, ಟೆಸ್ಟ್ ಕಿಟ್‌ಗಳು, ಮಾಸ್ಕ್‌ಗಳು, ಆಂಬ್ಯುಲೆನ್ಸ್ ಹಾಗೂ ಇತರೇ ಖಾಸಗಿ ಸೇವೆಗಳನ್ನು ಹೇಗೆ ಪಡೆಯಲಾಗಿದೆ/ಖರೀದಿಸಲಾಗಿದೆ; ಟೆಂಡರ್ ಕರೆಯಲಾಗಿದೆಯೇ ಅಥವಾ ಕೊಟೇಷನ್ ಕರೆಯಲಾಗಿದೆಯೇ ಎಂದು ಕೇಳಿದ್ದೇನೆ.

ಉತ್ಪಾದಕರಿಂದ ಖರೀದಿ ಮಾಡಲಾಗಿದೆಯೇ; ಸರಬರಾಜುದಾರರಾಗಿದ್ದಲ್ಲಿ ಅವರುಗಳು ಯಾರು ಯಾರು; ಹಿಂದೆ ಸರಬರಾಜು ಮಾಡಿದ ವಿವರಗಳನ್ನು ಕಂಪನಿವಾರು, ಸಾಮಾಗ್ರೀವಾರು, ಸರಬರಾಜು ಮಾಡಿದ ದಿನಾಂಕವಾರು ಮಾಹಿತಿ ನೀಡುವುದು ಎಂದು ಕೇಳಿದ್ದೇವೆ.

ಸಾಮಗ್ರಿಗಳನ್ನು ಸರಬರಾಜು ಮಾಡಿದ ಕಂಪನಿಗಳಲ್ಲಿ ವೈದ್ಯಕೀಯ ರಂಗದಲ್ಲಿ ಅನುಭವವಿಲ್ಲದ ಕಂಪನಿಗಳೆಷ್ಟು; ಸಾಫ್ಟ್‌ವೇರ್ ತಯಾರಿಕೆ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಕಂಪನಿಗಳು ಹೇಗೆ ಕೊರೋನಾ ಸಂಬಂಧಿತ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಾಧ್ಯ? ಖಾಸಗಿ ಸಂಸ್ಥೆಗಳಿಗೆ ವೈದ್ಯಕೀಯ ಸಲಕರಣೆಗಳು ಹಾಗೂ ಸೇವೆಗಳ ಸರಬರಾಜು ಮಾಡುವಂತೆ ನೀಡಲಾದ ಖರೀದಿ ಆದೇಶಗಳ (Purchase/Work Order) ಮಾಹಿತಿ ಕೊಡಿ ಎಂದು ಕೇಳಿದ್ದೇವೆ.

ನಾವು ಕೇಳಿರುವ 7–8 ಪ್ರಶ್ನೆಗಳಿಗೆ ಒಂದೊಂದರಂತೆ ಉತ್ತರ ಕೊಟ್ಟರೆ, ಅದಕ್ಕೆ ಸಂಬಂಧಪಟ್ಟಂತೆ ಉಪಪ್ರಶ್ನೆಯನ್ನು ಕೇಳುತ್ತೇನೆ. ಇಲ್ಲದಿದ್ದರೆ ಈಗಲೇ ಒಂದೇ ಸಲ ಒಟ್ಟಾಗಿ ಪ್ರಶ್ನೆ ಕೇಳಬಯಸುತ್ತೇನೆ.

**ಶ್ರೀ ಬಿ. ಶ್ರೀರಾಮುಲು, (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಕೊರೋನಾ ಪ್ರಾರಂಭವಾಗುವಂಥ ಸಂದರ್ಭದಲ್ಲಿ, ಈ ಸಮಸ್ಯೆ ಇಷ್ಟೊಂದು ದೊಡ್ಡದಾಗುತ್ತದೆ ಎಂದು ಭಾವಿಸಿರಲಿಲ್ಲ. ಕೋವಿಡ್ ಪ್ರಾರಂಭವಾದ ನಂತರ, ಇಡೀ ರಾಜ್ಯದಲ್ಲಿ ಪ್ಯಾಂಡಮಿಕ್ ಆಗಿ ಬದಲಾದ ನಂತರ ಇಡೀ ರಾಜ್ಯದಲ್ಲಿ ಸೇವೆಗಳ ಬೇಡಿಕೆ ಹೆಚ್ಚಾಯಿತು. ಮಾರ್ಚ್ ತಿಂಗಳ ಅಧಿವೇಶನ ಸೇರಿದಂತಹ ಸಂದರ್ಭದಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಎಲ್ಲಾ ಸದಸ್ಯರು, ‘ಮಾನ್ಯ ಶ್ರೀರಾಮುಲುರವರೇ ತಾವು ಇಡೀ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದ ಪ್ರವಾಸ ಮಾಡಿ; ನಿಮಗೆ ಸಂಬಂಧಪಟ್ಟಂಥ ಪ್ರಶ್ನೆಗಳು ಒಂದುವೇಳೆ ಸದನದಲ್ಲಿ ಬಂದರೆ ನಿಮ್ಮ ಪರವಾಗಿ ಬೇರೆಯವರು ಉತ್ತರ ಕೊಡುತ್ತಾರೆ' ಎನ್ನುವ ಸಲಹೆಗಳನ್ನು ಕೊಟ್ಟರು. ನಾನು 30 ಜಿಲ್ಲೆಗಳಿಗೆ ಪ್ರವಾಸ ಮಾಡಿ ಬಂದೆ. ಪಿಪಿಇ ಕಿಟ್‌ಗಳು, ವೆಂಟಿಲೇಟರ್‌ಗಳು, ಸ್ಯಾನಿಟೈಸರ್‌ಗಳು, ಟೆಸ್ಟಿಂಗ್ ಕಿಟ್‌ಗಳು ಈ ಎಲ್ಲವೂ Karnataka Transparency in Public Procurement Act ಏನಿದೆಯೋ ಅದರ ಅಡಿಯಲ್ಲಿ ಖರೀದಿ ಮಾಡುವ ಕೆಲಸ ಮಾಡಿದ್ದೇವೆ. ಕೊರೋನಾ ಪ್ಯಾಂಡಮಿಕ್ ಆಗಿದ್ದರಿಂದ ಸೆಕ್ಷನ್ 4(ಜಿ) ಕೆಳಗೆ, ಉಪಕರಣಗಳನ್ನು ಖರೀದಿ ಮಾಡಿದೆವು. ಅದೇರೀತಿ, ರಾಷ್ಟ್ರೀಯ ವಿಪತ್ತು ಘೋಷಣೆಯಾದ ಸಮಯದಲ್ಲಿ 4(ಎ) ಅಡಿಯಲ್ಲೂ ಕೂಡ ಖರೀದಿ ಮಾಡಲಾಗಿದೆ. ಕೇಂದ್ರ ಸರ್ಕಾರದ ಏನು GeM (Government e-Marketplace) portal ಇದೆಯೋ ಆ ಮೂಲಕ ಕೂಡ ಖರೀದಿ ಮಾಡುವ ಕೆಲಸ ಮಾಡಿದ್ದೇವೆ. ಏಕೆಂದರೆ, ಕೊರೋನಾ ಫೇಸ್-1 ಹಂತ ಇದ್ದಾಗ, ದೇಶದಲ್ಲೇ ಪ್ರಥಮವಾಗಿ ಗುಲ್ಬರ್ಗಾದಲ್ಲಿ ಒಬ್ಬ ರೋಗಿಯ ಸಾವಾಯಿತು. ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಕರೊನಾ ಪ್ಯಾಂಡಮಿಕ್ ಆಗಿತ್ತು, ಬಹಳಷ್ಟು ಕಡಿಮೆಯೆಂದರೆ ಕೂಡ ಆಗಿತ್ತು. ಫೇಸ್-2, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಇನ್ನಷ್ಟು ಈ ಸಮಸ್ಯೆ ಹೆಚ್ಚಾಯಿತು. ಫೇಸ್-3, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಜಾಸ್ತಿ ಕಾಣಿಸಿಕೊಂಡಿರುವುದು ನಿಮಗೆಲ್ಲರಿಗೂ ಗೊತ್ತಿರುವಂಥದ್ದಾಗಿದೆ. ಇಡೀ ರಾಜ್ಯದಲ್ಲಿ, ಹೆಚ್ಚಿದ್ದ ಬೇಡಿಕೆಗೆ ತಕ್ಕಂತೆ ಉತ್ಪಾದಕರು ಮತ್ತು ಸರಬರಾಜುದಾರರು ಇರಲಿಲ್ಲ. ಇಡೀ ರಾಜ್ಯದಲ್ಲಿ, ಇಡೀ ದೇಶದಲ್ಲಿ ಕೊರೋನಾ ಜಾಸ್ತಿ ಆದ ಸಮಯದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ Personal Protection Kit ನ ಅವಶ್ಯಕತೆ ಇತ್ತು. ಅದೇರೀತಿ ಮಾಸ್ಕ್, Personal Protection Kit ಗಳು, ಸ್ಯಾನಿಟೈಸರ್ ಬೇಕು ಎನ್ನುವ ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಬಂದಾಗ ನಮ್ಮ ರಾಜ್ಯದಲ್ಲಿ ಸದರಿ ವಸ್ತುಗಳನ್ನು ಸರಬರಾಜು ಮಾಡಲು ಯಾರೂ ಮುಂದೆ ಬರಲಿಲ್ಲ. ಆ ಸಂದರ್ಭದಲ್ಲಿ, ನಮ್ಮ ಮುಖ್ಯಮಂತ್ರಿಗಳು ಚೀನಾ ದೇಶದಿಂದ, ಪಿಪಿಇ ಕಿಟ್, ಮಾಸ್ಕ್ ಇತ್ಯಾದಿಗಳನ್ನು ತರಿಸಿಕೊಳ್ಳುವಂತಹ ಕೆಲಸ ಮಾಡಿದರು. Personal Protection Kit ಗಳನ್ನು ಏಡ್ಸ್ ಬಂದ ಸಂದರ್ಭದಲ್ಲಿ ಅಲ್ಲಿಯೂ ಬಳಕೆ ಮಾಡುತ್ತಿದ್ದರು. ಪ್ಯಾಂಡಮಿಕ್ ಪ್ರಾರಂಭವಾದ ನಂತರ, ಕೊರತೆಯಾದ ಮಾಸ್ಕ್, Personal Protection Kit ಬೇಕು ಎನ್ನುವ ಪ್ರಶ್ನೆ ಬಂದು, ಇವುಗಳನ್ನು ಸರಬರಾಜು ಮಾಡಲು ಯಾರು ಮುಂದೆ ಬಾರದೇ ಇದ್ದಾಗ Karnataka State Drugs, Logistics and Warehousing Society ಮೂಲಕ, ಬೇರೆ ದೇಶಗಳಿಂದ ಖರೀದಿ ಮಾಡಿಕೊಂಡ ಬಳಸಿಕೊಳ್ಳುವಂತಹ ಕೆಲಸವಾಯಿತು. ರಾಜ್ಯದಲ್ಲಿ ಮೊದಲನೆಯದಾಗಿ ಗುಲ್ಬರ್ಗಾದಲ್ಲಿ ಕೊರೋನಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣ ಕಂಡುಬಂತು. ಮಾನ್ಯ ಸಭಾಪತಿಯವರೇ, ಕೊರೋನಾದಿಂದ ಪಾರು ಮಾಡಲು ಆಕ್ಸಿಜನ್‌ನ ಅವಶ್ಯಕತೆ ಹೆಚ್ಚಾಗಿರುತ್ತದೆ. **(ಮುಂದು . . .)**

**(720)21.09.2020 1.50 ಡಿಎಸ್-ಎಕೆ**

**ಶ್ರೀ ಬಿ.ಶ್ರೀರಾಮುಲು(ಮುಂದು):-**

ಆಕ್ಸಿಜನ್ ಇದ್ದಂತಹ ಸಂದರ್ಭದಲ್ಲಿ ಜನರು ಬದುಕುತ್ತಾರೆ. ನಂತರ ಅವರಿಗೆ ಚಿಕಿತ್ಸೆ ಕೊಡುವಾಗ ಬಹಳಷ್ಟು ವೈದ್ಯರು, ನರ್ಸ್‌ಗಳು ಸಾವನ್ನಪ್ಪಿದ್ದಾರೆ. ಅಂತಹ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಅನುಕೂಲವಾಗಬೇಕೆನ್ನುವ ಕಾರಣದಿಂದ ಅವತ್ತಿನ ಸಂದರ್ಭದಲ್ಲಿ ಪಿಪಿಇ ಕಿಟ್‌ಗಳು, ವೆಂಟಿಲೇಟರ್, ಸ್ಯಾನಿಟೈಸರ್‌ಗಳು, ಟೆಸ್ಟ್ ಕಿಟ್‌ಗಳು, ಮಾಸ್ಕ್‌ಗಳು, ಇವೆಲ್ಲಾ ಮಾರ್ಕೆಟ್‌ನಲ್ಲಿ ಬಹಳಷ್ಟು ಕೊರತೆ ಇದ್ದ ಕಾರಣ ಸರಬರಾಜು ಮಾಡುವವರು ಮುಂದೆ ಬರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಬೇರೆ ಕಡೆಯಿಂದಲೂ ತರಿಸಿಕೊಂಡು ಇಡೀ ರಾಜ್ಯದಲ್ಲಿರುವಂತಹ ಎಲ್ಲಾ ಆಸ್ಪತ್ರೆಗಳಿಗೆ ವಿತರಿಸುವಂತಹ ಕೆಲಸ ಮಾಡಿದ್ದೇವೆ. Manufacturers, Suppliers ಮತ್ತು Distributors ಎಂದು ಮೂರು ಭಾಗ ಮಾಡಿಕೊಳ್ಳಬೇಕು. ಮೂರು ಭಾಗ ಮಾಡಿಕೊಂಡಂತಹ ಪ್ರಕಾರ I.C.M.R. (Indian Council of Medical Research) ಗೈಡ್‌ಲೈನ್ಸ್ ಪ್ರಕಾರ, ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಎಲ್ಲಾ ರೀತಿಯಲ್ಲೂ ಮಾಡಿದ್ದೇವೆ. ತಜ್ಞರ ಸಮಿತಿಯನ್ನು ರಚನೆ ಮಾಡಿದ್ದೇವೆ. ಇವೆಲ್ಲಾ ನಾವು ಖರೀದಿ ಮಾಡಿರುವುದಲ್ಲ. ವೈದ್ಯರುಗಳು, ಎಕ್ಸ್‌ಪರ್ಟ್‌ಗಳೆಲ್ಲಾ ಸೇರಿಕೊಂಡು ಸಮಿತಿಯನ್ನು ಮಾಡಿಕೊಂಡು ಪಿಪಿಇ ಕಿಟ್‌ಗಳು, ಸ್ಯಾನಿಟೈಸರ್‌ಗಳು, ಟೆಸ್ಟ್ ಕಿಟ್‌ಗಳು, ಮಾಸ್ಕ್‌ಗಳು, ಇವೆಲ್ಲಾ ಖರೀದಿ ಮಾಡುವಂತಹ ಕೆಲಸ ಮಾಡಿದರು. ಅದರ ಬಗ್ಗೆ ಅನುಬಂಧ-1 ರಲ್ಲಿ ಎಲ್ಲಾ ವಿವರಗಳನ್ನು ಒದಗಿಸಲಾಗಿದೆ. ನಂತರದ ದಿನಗಳಲ್ಲಿ ತಾವೆಲ್ಲಾ ನೋಡಿರಬಹುದು, ಬಹಳಷ್ಟು ತೊಂದರೆಯಾಗಿದ್ದಂತಹ ಸಂದರ್ಭದಲ್ಲಿ ಕಿಟ್‌ಗಳು, ಮಾಸ್ಕ್‌ಗಳು ಸರಿಯಾಗಿ ಸಿಗುತ್ತಿಲ್ಲ, ಕಳಪೆ ಗುಣಮಟ್ಟದ ಸಾಮಾಗ್ರಿಗಳು ಖರೀದಿಯಾಗುತ್ತಿದೆ ಎಂದು ಮಾಧ್ಯಮದಲ್ಲಿ ದೊಡ್ಡ ಪ್ರಚಾರವಾಗುತ್ತಿದ್ದಂತಹ ಸಂದರ್ಭದಲ್ಲಿ ಕೆಲವೊಂದು ಕಂಪನಿಗಳು, CSR Fund ನಿಂದ ಕಿಟ್‌ಗಳನ್ನು, ಮಾಸ್ಕ್‌ಗಳನ್ನು ದಾನ ಮಾಡಿದರು. ನಂತರ ಬೇರೆ ಬೇರೆ ರೀತಿಯಲ್ಲಿ ಕೆಲವರು ದಾನ ಮಾಡಿದರು. ಕಳಪೆ ಕಿಟ್‌ಗಳು ಸರಬರಾಜು ಆದಂತಹ ಸಂದರ್ಭದಲ್ಲಿ ವಾಪಸ್ ಕೊಡುವಂತಹ ಕೆಲಸವನ್ನು ನಾವು ಮಾಡಿದ್ದೇವೆ. ಉಪಕರಣಗಳಾಗಿರಬಹುದು, ಕಿಟ್‌ಗಳಾಗಿರಬಹುದು, ಅವುಗಳ ಗುಣಮಟ್ಟವನ್ನು ನೋಡಬೇಕಾದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Need Assessment Committee ಎಂದು ಮಾಡಿಕೊಂಡಿದ್ದೇವೆ. ಪಿಪಿಇ ಕಿಟ್, ಮಾಸ್ಕ್, ಸ್ಯಾನಿಟೈಸರ್, ಔಷಧಿ, ಉಪಕರಣಗಳಾಗಿರಬಹುದು, ಅದನ್ನು ಪರಿಶೀಲನೆ ಮಾಡುವುದಕ್ಕೆ Need Assessment Committee ನಂತರ Technical Specification Committee ಮಾಡಿಕೊಂಡಿದ್ದೇವೆ. ಈ ಸಮಿತಿಯಲ್ಲಿ ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರೇ ಅಧ್ಯಕ್ಷರಾಗಿರುತ್ತಾರೆ. Technical specification ಅಂದರೆ ಮಾಸ್ಕ್, ವೆಂಟಿಲೇಟರ್, ಸ್ಯಾನಿಟೈಸರ್ ತೆಗೆದುಕೊಂಡರೆ ಯಾವ ರೀತಿ ಇರಬೇಕು, Personal Protection Kit ಗಳು ತೆಗೆದುಕೊಂಡರೆ ಯಾವ ರೀತಿ ಇರಬೇಕೆಂದು Technical Specification Committee ಎಂದು ಮಾಡಿಕೊಂಡು ಅದಕ್ಕೆ ನಮ್ಮ ನಿದೇಶಕರೇ ಅಧ್ಯಕ್ಷರಾಗಿರುತ್ತಾರೆ. Procurement Committee ಎಂದು ಮಾಡಿಕೊಂಡಿದ್ದೇವೆ. Procurement Committee ಯಲ್ಲಿ ನಮ್ಮ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಯಾವ್ಯಾವ ರೀತಿಯಲ್ಲಿ procurement ಮಾಡಬೇಕು, ಎಲ್ಲಿಂದ ಮಾಡಬೇಕೆಂದು ನೋಡಿಕೊಂಡು procurement ಆಗುತ್ತದೆ. ದರ ನಿಗದಿ ಯಾವ ರೀತಿಯಲ್ಲಿರಬೇಕೆಂಬ ವಿಚಾರದಲ್ಲೂ ಕೂಡ ಸಮಿತಿಯನ್ನು ರಚನೆ ಮಾಡಲಾಗಿದೆ. ಬೇರೆ ಬೇರೆ ರಾಜ್ಯದಲ್ಲಿ ದರ ಯಾವ ರೀತಿ ಇದೆ, ಬೇರೆ ಬೇರೆ ದೇಶದಲ್ಲಿ ಯಾವ ರೀತಿ ಇದೆ ಎಂಬುದನ್ನು ಪರಿಶೀಲಿಸುವುದಕ್ಕೆ ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ದರ ನಿಗದಿ ಸಮಿತಿ ಕೂಡ ಕಾರ್ಯನಿರ್ವಹಿಸುತ್ತಿದೆ. ನಂತರ ನಮ್ಮ ಇಲಾಖೆಯಲ್ಲಿ ಇವತ್ತು ಯಾವುದೇ ಉಪಕರಣಗಳನ್ನು ಬೇರೆ ಬೇರೆ ರಾಷ್ಟ್ರಗಳಿಂದ ತರಿಸಿಕೊಳ್ಳಬೇಕೆನ್ನುವ ಸಂದರ್ಭದಲ್ಲಿ ಸಮಿತಿಯಲ್ಲಿ ಅಧ್ಯಕ್ಷರು, ತಜ್ಞರುಗಳು, ಅವರೆಲ್ಲಾ ಮಾಹಿತಿಯನ್ನು ಕೊಟ್ಟ ನಂತರ ತರಿಸಿಕೊಳ್ಳುವ ಕೆಲಸವನ್ನು ಮಾಡಿದ್ದಾರೆ.

ಪಿಪಿಇ ಕಿಟ್‌ಗಳಿಗೆ ಸಂಬಂಧಿಸಿಂತಹ ವಿಚಾರದಲ್ಲಿ, ಯಾವ ಕಂಪನಿಗಳು ಕಳಪೆ ಗುಣಮಟ್ಟದ ಮಾಸ್ಕ್‌ಗಳು ಕೊಟ್ಟಿದ್ದಾರೆಯೋ ಅದರ ಬಗ್ಗೆ ನಾವೇ ಸ್ವಂತ ನಿರ್ಧಾರವನ್ನು ತೆಗೆದುಕೊಂಡಿರುವಂಥದ್ದಲ್ಲ. ಕೇಂದ್ರ ಸರ್ಕಾರವೇ ಯಾರ್ಯಾರು ಹಂಚಿಕೆದಾರರು ಇದ್ದಾರೆಂದು ಪಟ್ಟಿ ಕಳುಹಿಸಿದಂತಹ ಸಂದರ್ಭದಲ್ಲಿ ಅದರಲ್ಲಿ ಕೆಲವು ಕಂಪನಿಗಳು ಅಂದರೆ ಕೇಂದ್ರ ಸರ್ಕಾರದ Ministry of Health and Family Welfare, Ministry of Textiles ಅವರು ಜಿ.ಓ. ದಲ್ಲಿ ಮಾರ್ಗಸೂಚಿಯನ್ನು ಹೊರಡಿಸುತ್ತಾರೆ. ಇಂಥಿಂಥ ಕಂಪನಿಗಳು ಇಂಥಿಂಥವುಗಳನ್ನು ಸರಬರಾಜು ಮಾಡುತ್ತಾರೆನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಅವರೆಲ್ಲಾ ವಿಶೇಷವಾಗಿ ತರಿಸಿಕೊಂಡು ಪಿಪಿಇ ಕಿಟ್‌ಗಳು, ಮಾಸ್ಕ್‌ಗಳನ್ನು ಕೊಡಬೇಕೆಂದು ಆರ್ಡರ್ ಕೊಟ್ಟಂಥ ಸಂದರ್ಭದಲ್ಲಿ ಅವರುಗಳು ಇವತ್ತಿನವರೆಗೆ ಸರಿಯಾಗಿ ಸರಬರಾಜನ್ನು ಮಾಡಿಲ್ಲ. Indus Bio ಎನ್ನುವ ಕಂಪನಿ ಏನಿದೆ 656 ರೂಪಾಯಿಗೆ ಅವೊತ್ತು ನಾವೇನು 500 ಪಿಪಿಇ ಕಿಟ್‌ಗಳಿಗೆ ಆದೇಶವನ್ನು ಮಾಡಿದ್ದೆವು ಇಲ್ಲಿಯವರೆವಿಗೂ ಸರಬರಾಜು ಮಾಡುವಂತಹ ಕೆಲಸ ಮಾಡಿಲ್ಲ. ಅದಕ್ಕೋಸ್ಕರ ನಾವು ಪಿಪಿಇ ಕಿಟ್, ಸ್ಯಾನಿಟೈಸರ್, ರ್‍ಯಾಪಿಡ್ ಕಿಟ್, ವೆಂಟಿಲೇಟರ್, High Flow Nasal kit ಗಳಾಗಿರಬಹುದು, ಗ್ಲೌಸ್‌ಗಳಾಗಿರಬಹುದು, Oximeter ಆಗಿರಬಹುದು, ಇದೆಲ್ಲವನ್ನು ಪರಿಶೀಲನೆ ಮಾಡುವುದಕ್ಕೆ ಸಮಿತಿಗಳನ್ನು ಮಾಡಿಕೊಂಡು ಎಕ್ಸ್‌ಪರ್ಟ್‌ಗಳು, ತಾಂತ್ರಿಕ ತಜ್ಞರುಗಳು ಕುಳಿತು ಬೇರೆ ಬೇರೆ ರಾಜ್ಯಗಳ ಬಗ್ಗೆ ಪರಿಶೀಲನೆ ಮಾಡಿ ಖರೀದಿ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಅವರು ಇವತ್ತು ಎರಡು ಕಂಪನಿಗಳ ಬಗ್ಗೆ ಹೇಳಿದರು. ಆ ಎರಡು ಕಂಪನಿಗಳನ್ನು ನಾವು ಗುರುತಿಸಿರುವಂತಹ ಕಂಪನಿಗಳಲ್ಲ. ಕೇಂದ್ರ ಸರ್ಕಾರ ಗುರುತಿಸಿರುವಂತಹ ಕಂಪನಿಗಳು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಸರ್ಕಾರವನ್ನು ಸಮರ್ಥಿಸಿಕೊಂಡು ಮಾತನಾಡುತ್ತಿದ್ದಾರೆ. ಇವೆಲ್ಲಾ ನಾವು ಪಾರದರ್ಶಕವಾಗಿ ಖರೀದಿ ಮಾಡಿದ್ದೇವೆ. ದರ ನಿಗದಿ ಮಾಡುವುದಕ್ಕೆ ಸಮಿತಿಯನ್ನು ಮಾಡಿದ್ದೇವೆ. Specification ನಿರ್ಧಾರ ಮಾಡುವುದಕ್ಕೆ ಸಮಿತಿಯನ್ನು ರಚನೆ ಮಾಡಿದ್ದೇವೆ. ಮಾನ್ಯ ಸಚಿವರೇ, ಸರ್ಕಾರ ಖರೀದಿ ಮಾಡಿರುವಂತಹ ವೆಂಟಿಲೇಟರ್‌ಗಳ ಬಗ್ಗೆ ನಾನು ಉದಾಹರಣೆಯನ್ನು ಹೇಳುತ್ತೇನೆ. ಅದರಲ್ಲಿ ತಮಗೆ R.K. Medical Solution Company, New Delhi ಎಂಬ ಒಂದು ಕಂಪನಿಯ ಉದಾಹರಣೆಯನ್ನು ಹೇಳುತ್ತೇನೆ. ನಿಮ್ಮ ಪಕ್ಷದ ಮಾಜಿ ಶಾಸಕರಾದಂತಹ ಡಾ॥ ಸಾರ್ವಭೌಮ ಬಗಲಿ ರವರು ಲೋಕಾಯುಕ್ತರ ಮುಂದೆ ಒಂದು ದೂರನ್ನು ಕೊಡುತ್ತಾರೆ. ಸದರಿಯವರು ವೈದ್ಯರು ಕೂಡ ಆಗಿದ್ದು, ಅವರ ದೂರಿನಲ್ಲಿ "R.K. Medical Solution Company, New Delhi supplied 15 ventilators. These ventilators were found to be already used and second-hand ventilators. These ventilators did not possess any standard certificates and proof of model number and manufacturing details. These ventilators were found to be used and tampered with broken/old stands. One of the machines supplied was having 46,583 hours of running

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

equivalent to five years." ಇಂತಹ ಕಳಪೆ ವೆಂಟಿಲೇಟರ್‌ನ್ನು ಸರಬರಾಜು ಮಾಡಿರುವಂಥವರನ್ನು ಆಯ್ಕೆ ಮಾಡಿದ್ದಾರೆ. ಹಾಗಾದರೆ specification ನೋಡುವುದಕ್ಕೆ ಸಮಿತಿ ಇತ್ತು ಎಂದು ಹೇಳುತ್ತಿದ್ದೀರಿ ಮತ್ತು ದರವನ್ನು ಅಂತಿಮಗೊಳಿಸಬೇಕಾದರೆ PM-CARES (Prime Minister's Citizen Assistance and Relief in Emergency Situations Fund) ನಿಂದ ಈ ರಾಷ್ಟ್ರದ ಪ್ರಧಾನ ಮಂತ್ರಿಗಳು ಭಾರತ ದೇಶಕ್ಕೆ 50,000 ವೆಂಟಿಲೇಟರ್‌ಗಳನ್ನು ಖರೀದಿ ಮಾಡುತ್ತಾರೆ. They purchase it at the rate of Rs.4 lakhs per ventilator. ಕರ್ನಾಟಕ ರಾಜ್ಯಕ್ಕೂ ಕೂಡ ಸುಮಾರು 1,615 ವೆಂಟಿಲೇಟರ್‌ಗಳನ್ನು ಸರಬರಾಜು ಮಾಡುತ್ತಾರೆ, ಆದರೆ ನಮ್ಮ ಕರ್ನಾಟಕ ಸರ್ಕಾರ 5,60,000 ದಿಂದ ಪ್ರಾರಂಭ ಮಾಡಿ 11,92,000, 12,32,000, ಕೊನೆಗೆ 18,20,000 ರೂಪಾಯಿಯವರೆಗೆ ವೆಂಟಿಲೇಟರ್ ತೆಗೆದುಕೊಳ್ಳುತ್ತಾರೆ. ನಾವು ಮಾಹಿತಿಯನ್ನು ಕೇಳಿದರೆ ಸರಬರಾಜು ಮಾಡಿರುವಂಥದ್ದು ಉತ್ತಮ ಗುಣಮಟ್ಟದ್ದು ಎಂದು ಹೇಳುತ್ತಾರೆ. ಹಾಗಾದರೆ ಪ್ರಧಾನ ಮಂತ್ರಿಯವರು ಸರಬರಾಜು ಮಾಡಿರುವಂಥದ್ದು ಕಳಪೆ ಎನ್ನುವುದನ್ನು ಇವರು ಒಪ್ಪಿಕೊಳ್ಳುತ್ತಾರೆಯೇ? 4,00,000 ರೂಪಾಯಿಗಳಿಗೆ ಇಡೀ ದೇಶಕ್ಕೆ ವೆಂಟಿಲೇಟರ್‌ಗಳನ್ನು ಇವರು ಸರಬರಾಜು ಮಾಡಿದ್ದಾರೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆ ಮಾಡೋಣವೆಂದರೆ ಚರ್ಚೆ ಮಾಡೋಣ. ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೆ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ನಮ್ಮ ಹತ್ತಿರ ಬಹಳಷ್ಟು ದಾಖಲೆಗಳಿವೆ. ಅವರಿಗೆ ನಾವು ಸಂತೃಪ್ತಿಯಾಗಿದೆ ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧವಿದೆ. ಈ ವಿಚಾರವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹಾಕಿಕೊಳ್ಳಿ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರುವಂತಹ ವಿಚಾರ. ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಮುಂದು)

**(721) 02.00 21.09.2020 ಎಸ್‌ವಿ-ಆರ್‌ಎನ್**

**ಶ್ರೀ ಎಂ.ನಾರಾಯಣಸ್ವಾಮಿ:-** ಚೀನಾ ದೇಶದ ಯಾವುದೇ ವಸ್ತುಗಳನ್ನು ನಾವು ತೆಗೆದುಕೊಳ್ಳಬಾರದು ಎಂದು ಕೇಂದ್ರ ಸರ್ಕಾರ ಒಂದು ಕಡೆ ಹೇಳುತ್ತದೆ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಮಾತು ಈಗ ಏಕೆ?

(ಗೊಂದಲ)

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಕೋವಿಡ್ ರಾಜಕಾರಣ ಬೇಡ.

**ಡಾ:ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಕೋವಿಡ್ ವಿಚಾರದಲ್ಲಿ ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಲು ನಾವು ತಯಾರಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಚೀನಾದಿಂದ ಸುಮಾರು 5 ಲಕ್ಷ ಪಿ.ಪಿ.ಇ. ಕಿಟ್‌ಗಳನ್ನು ಖರೀದಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಅದನ್ನು ಯಾರಿಗೆ ವಿತರಿಸಲಾಯಿತು? ಕೊರೊನಾ ವಾರಿಯರ್ಸ್‌ಗಳಾದ ಕರ್ನಾಟಕ ರಾಜ್ಯದ ಆಶಾ ಕಾರ್ಯಕರ್ತೆಯರು ಇರಬಹುದು, ಬಿ.ಬಿ.ಎಂ.ಪಿ. ಕಾರ್ಯಕರ್ತರಿರಬಹುದು, ವೈದ್ಯರು ಮತ್ತು ನರ್ಸ್‌ಗಳಿರಬಹುದು. ಸರ್ಕಾರ ವಿತರಿಸಿದ ವಸ್ತುಗಳು ಕಳಪೆ ಗುಣಮಟ್ಟದ್ದು ಎಂದು ರಸ್ತೆಯಲ್ಲಿ ಬಿಸಾಕಿ ವೈದ್ಯರು ಧರಣಿ ಮಾಡಿದರು. ನಮ್ಮ ಆರೋಗ್ಯದ ಬಗ್ಗೆ ನಾವು ಗಮನ ನೀಡಬೇಕು. ನಮ್ಮ ಆರೋಗ್ಯವನ್ನು ನಾವು ಕಾಪಾಡಿಕೊಳ್ಳಲು ಆಗುತ್ತಿಲ್ಲ. ಇಂತಹ ಕಳಪೆ ಸಾಮಗ್ರಿಗಳನ್ನು ಸರ್ಕಾರ ಸರಬರಾಜು ಮಾಡಿದೆ ಎಂದು ರಸ್ತೆಯಲ್ಲಿ ಬಿಸಾಕಿದ್ದರು. ಸರ್ಕಾರವು ಇವು ಕಳಪೆ ಗುಣಮಟ್ಟ ಹೊಂದಿದೆ ಒಂದೂವರೆ ಲಕ್ಷ ಪಿ.ಪಿ.ಇ. ಕಿಟ್‌ಗಳನ್ನು ವಾಪಸ್ ಕಳುಹಿಸಲಾಯಿತು ಎಂಬ ಸರ್ಕಾರ ಸತ್ಯವನ್ನು ಒಪ್ಪಿಕೊಳ್ಳಬೇಕು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, specification ಮಾಡಲು ಮತ್ತು ದರ ನಿಗದಿ ಪಡಿಸಲು ನಮ್ಮ ಬಳಿ ಸಮಿತಿ ಇತ್ತು ಎಂದು ಮಾನ್ಯ ಸಚಿವರು ಹೇಳಿದರು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ನೀಡಲು ಸರ್ಕಾರ ಸಿದ್ಧವಿದೆ.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಚರ್ಚೆ ಮಾಡುವ ವಿಷಯವಲ್ಲ. ಚರ್ಚೆಗೆ ಬೇರೆ ಸಮಯದಲ್ಲಿ ಅವಕಾಶವಿರುತ್ತದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ವೇಳೆಯೇ ಅಥವಾ ಚರ್ಚೆಯೇ? ತಾವು ಹೇಳಬೇಕು.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ನೀವು ಪ್ರಶ್ನೆ ಕೇಳಲು ಪ್ರಾರಂಭ ಮಾಡಿ ಹದಿನೈದು ನಿಮಿಷಗಳಾಯಿತು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಜ್ವಲಂತ ವಿಷಯವಾಗಿದ್ದು, ರಾಜ್ಯದ ಜನ ಕೋವಿಡ್ ರೋಗದಿಂದ ಸಾಯುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯು ದೀರ್ಘವಾದ ಸಮಯವನ್ನು ತೆಗೆದುಕೊಳ್ಳುವ ಪ್ರಶ್ನೆಯಾಗಿದೆ. ಅದಕ್ಕಾಗಿ ತಾವು ಇದನ್ನು ಮೂವತ್ತು ನಿಮಿಷಗಳಿಗೆ ಪರಿವರ್ತಿಸಬೇಕೆಂದು ಕೋರುತ್ತೇನೆ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ. ಇಲ್ಲಿ ಚರ್ಚೆ ಮಾಡಲು ಅವಕಾಶವಿಲ್ಲ. ಬೇರೆ ನೋಟಿಸ್ ಅನ್ನು ಕೊಟ್ಟು ಪರಿವರ್ತನೆ ಮಾಡಿಸಿಕೊಳ್ಳಲು ಹೇಳಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂಬಂತಾಗಿದೆ. ಈಗ ಮಂತ್ರಿಗಳು ಚರ್ಚೆ ಮಾಡಲು ಸಿದ್ಧರಿದ್ದಾರೆ. ಇವರೇಕೆ ಅಡ್ಡಿ ಪಡಿಸುತ್ತಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ನಾರಾಯಣಸ್ವಾಮಿಯವರೇ, ನೀವು ಒಂದು ಗಂಟೆ ಪ್ರಶ್ನೆಯನ್ನೇ ಕೇಳುತ್ತಿದ್ದರೆ ಸರ್ಕಾರ ಉತ್ತರ ಕೊಡುವುದು ಯಾವಾಗ? ಸರ್ಕಾರ ಎದ್ದು ನಿಂತು ಉತ್ತರಿಸುತ್ತಿದೆ. ನೀವು ಕೇವಲ ಆಪಾದನೆ ಮಾಡುತ್ತಾ ನಿಲ್ಲುವುದಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಎಷ್ಟು ಪ್ರಶ್ನೆಗಳು, ಎಷ್ಟು ಉಪ ಪ್ರಶ್ನೆಗಳನ್ನು ಕೇಳಬಹುದು ಎಂಬುದಾಗಿ ಇದೆ. ಒಂದು ಪ್ರಶ್ನೆಗಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯವನ್ನು ವ್ಯರ್ಥ ಮಾಡಲು ಸಾಧ್ಯವಿಲ್ಲ. ನೀವು ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ನಿಯಮ 72ರ ಅಡಿಯಲ್ಲಿಯೋ, ನಿಯಮ 330ರ ಅಡಿಯಲ್ಲಿಯೋ ಅಥವಾ ಅರ್ಧಗಂಟೆ ಕಾಲಾವಧಿಯ ಚರ್ಚೆಯ ರೂಪದಲ್ಲಿಯೋ ತೆಗೆದುಕೊಂಡು ಬನ್ನಿ. ಎಲ್ಲಾ ಪ್ರಶ್ನೆಗಳನ್ನು ಇಲ್ಲಿ ಕೇಳುವ ಅಗತ್ಯವಿಲ್ಲ. ಇದು ಪ್ರಶ್ನೋತ್ತರ ವೇಳೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಅರ್ಧಗಂಟೆ ಕಾಲಾವಧಿಯ ಚರ್ಚೆಯಡಿಯಲ್ಲಿ ಅವಕಾಶವನ್ನು ನೀಡಲಾಗುವುದು. ಬೇರೆ ನೋಟಿಸ್ ಅನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 85**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಗ್ರಾಮೀಣ ಭಾಗಗಳಲ್ಲಿ 'ಜಾಣ ಕಿವುಡು' ಎಂದು ಹೇಳುತ್ತಾರೆ. ಹಾಗೆ ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾನು ಕೇಳಿರುವುದನ್ನು ಬಿಟ್ಟು ಉಳಿದಿರುವುದಕ್ಕೆ ಉತ್ತರವನ್ನು ನೀಡಿದ್ದಾರೆ.

ಮಾನ್ಯ ಸಚಿವರೇ, ಮಾನ್ಯ ಕುಮಾರಸ್ವಾಮಿಯವರು ಮತ್ತು ಮಾನ್ಯ ಯಡಿಯೂರಪ್ಪನವರ 50:50 ಸರ್ಕಾರವಿದ್ದ ಸಂದರ್ಭದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು ಶಿಕ್ಷಣ ಸಚಿವರಾಗಿದ್ದಾಗ ಶಿಕ್ಷಕರಿಗೆ ವೇತನ ತಾರತಮ್ಯ ಇದೆಯೆಂದು ಹೇಳಿ ex-gratia ಎಂದು ಶಿಕ್ಷಕರಿಗೆ ರೂ.200/- ಗಳನ್ನು ನೀಡಲು ಪ್ರಾರಂಭಿಸಿದರು. 2012ರಲ್ಲಿ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಬಂದಾಗ ರೂ.300/-, ರೂ.400/-, ರೂ.500/- ಗಳನ್ನು ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಶಿಕ್ಷಕರಿಗೆ, ದೈಹಿಕ ಶಿಕ್ಷಕರಿಗೆ, ಟಿ.ಜಿ.ಟಿ. ಶಿಕ್ಷಕರಿಗೆ ಎಲ್ಲರಿಗೂ ನೀಡಲಾಯಿತು. ಪುನಃ ವೇತನ ತಾರತಮ್ಯ ಎಂಬ ಕೂಗೆದ್ದಿತು. ಹಿಂದೆ ಇದ್ದಂತಹ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರವು ಜಿ.ಕುಮಾರನಾಯಕ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ ವೇತನ ತಾರತಮ್ಯದ ಕುರಿತು ವರದಿಯನ್ನು ನೀಡುವಂತೆ ಹೇಳಿತು. ಸರ್ಕಾರಕ್ಕೆ ಆ ವರದಿಯನ್ನು ಕೊಟ್ಟರೂ ಸಹ ಅದನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ. ಮುಂದೆ ಬಂದಂತಹ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಈ ವೇತನ ತಾರತಮ್ಯವನ್ನು ಸರಿದೂಗಿಸುವ ಸಲುವಾಗಿ ಕುಮಾರನಾಯಕ್ ಅವರ ವರದಿಯ ಪ್ರಕಾರ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ವಿಶೇಷ ಭತ್ಯೆಯ ಬದಲಾಗಿ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು 2016ರಲ್ಲಿ ನೀಡಿದರು. ಹೆಚ್ಚುವರಿ ವೇತನ ಬಡ್ತಿಯ ಜೊತೆಗೆ ex-gratia ಮುಂದುವರೆಯಿತು. 2018ನೇ ಸಾಲಿನಲ್ಲಿ 6ನೇ ವೇತನ ಸಮಿತಿಯ ವರದಿಯ ಪ್ರಕಾರ ವೇತನ ನಿಗದಿಗೊಳಿಸುವ ಸಂದರ್ಭದಲ್ಲಿ 6ನೇ ವೇತನ ಸಮಿತಿಯ ಶಿಫಾರಸ್ಸಿನಂತೆ ಹಾಲಿ ನೀಡುತ್ತಿದ್ದ ex-gratia ಅನ್ನು ಒಂದು increment ಎಂದು ಪರಿಗಣಿಸಿ ಮೂಲ ವೇತನದಲ್ಲಿ ಸೇರಿಸಿ ನಿಗದಿ ಪಡಿಸುವುದು ಎಂದು ವೇತನ ಸಮಿತಿ ಶಿಫಾರಸ್ಸಿನಂತೆ ಮತ್ತೊಂದು increment ಈ ವಿಶೇಷ ಭತ್ಯೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತೆಗೆದುಕೊಳ್ಳುತ್ತಿದ್ದವರಿಗೆ ದೊರೆಯಿತು. ಸಹ ಶಿಕ್ಷಕರಿಗೆ, ಪ್ರಾಂಶುಪಾಲರಿಗೆ, ಉಪನ್ಯಾಸಕರಿಗೆ ಎಲ್ಲರಿಗೂ ವಿಶೇಷ ಭತ್ಯೆ ಇತ್ತು. ಆದರೆ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ವಿಶೇಷ ಭತ್ಯೆ ಕೊಡಲಿಲ್ಲ. ಇದಕ್ಕೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅದರಲ್ಲಿಯೂ ಸಹ ಮುಖ್ಯ ಶಿಕ್ಷಕರಿಗೆ ಇದುವರೆವಿಗೂ ವಿಶೇಷ ಭತ್ಯೆಯನ್ನು ನೀಡದೆ ಅನ್ಯಾಯವಾಗಿದೆ. ಅವರಿಗೂ ಸಹ ವಿಶೇಷ ಭತ್ಯೆಯನ್ನು ನೀಡಲಾಗುವುದು ಮತ್ತು ಆರನೇ ವೇತನ ಸಮಿತಿಯಲ್ಲಿ ಕುಮಾರನಾಯ್ಕ್ ಸಮಿತಿಯ ಶಿಫಾರಸ್ಸನ್ನು ಜಾರಿ ಮಾಡಲಾಗುವುದು ಎನ್ನುವ ತೀರ್ಮಾನವನ್ನು ಕೊಟ್ಟರು. ಇದುವರೆವಿಗೂ ವಿಶೇಷ ಭತ್ಯೆ ನೀಡಿರುವುದಿಲ್ಲ. ಮಾನ್ಯ ಸಚಿವರೇ, ಸಹ ಶಿಕ್ಷಕರಿಗೆ ಮತ್ತು ಮುಖ್ಯ ಶಿಕ್ಷಕರಿಗೆ ವೇತನ ಒಂದೇ. ಈಗ ಸಹಶಿಕ್ಷಕರು ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿಯನ್ನು ಪಡೆದರು. ಅದರ ಜೊತೆಗೆ ಆರನೇ ವೇತನ ಸಮಿತಿಯ ಶಿಫಾರಸ್ಸಿನಂತೆ ex-gratia ಅನ್ನು merge ಮಾಡಿರುವುದರಿಂದ ಒಂದು increment ಅವರಿಗೆ ದೊರೆಯಿತು. ಆದರೆ ವಿಶೇಷ ಭತ್ಯೆಯನ್ನು ತೆಗೆದುಕೊಳ್ಳದ ಮುಖ್ಯ ಶಿಕ್ಷಕರಿಗೆ ಸಹಶಿಕ್ಷಕರಿಗಿಂತಲೂ ವೇತನ ಕಡಿಮೆಯಾಗಿದೆ. ಇದು ತೀರಾ ಅನ್ಯಾಯದ ಸಂಗತಿ. ಪ್ರಾಂಶುಪಾಲರಿಗೆ ರೂ.1000/- ಹೆಚ್ಚುವರಿ ಭತ್ಯೆಯನ್ನು ಸರ್ಕಾರ ನೀಡಿದೆ. ಅದಕ್ಕಾಗಿ ನಾವು ಸರ್ಕಾರವನ್ನು ಅಭಿನಂದಿಸುತ್ತೇವೆ. ಹಿಂದೆಯೂ ಸಹ ಇದನ್ನು ನಿಮ್ಮ ಸರ್ಕಾರವೇ ಕೊಟ್ಟಿದೆ. ಎಲ್ಲಾ ವರ್ಗಗಳಿಗೂ ಕೊಡಲಾಗಿದ್ದು, ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಇದರಿಂದ ಬಹಳ ಅನ್ಯಾಯವಾಗಿದೆ. ಅವರಿಗೆ ವೇತನದಲ್ಲಿ ಬಹಳ ನಷ್ಟವಾಗಿದೆ. ಸಹಶಿಕ್ಷಕರಿಗಿಂತಲೂ ಕಡಿಮೆ ವೇತನವನ್ನು ತೆಗೆದುಕೊಳ್ಳುತ್ತಿದ್ದಾರೆ. ತಾವು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದೀರಿ. ಮುಖ್ಯ ಶಿಕ್ಷಕರಿಗೆ ಈ ವಿಶೇಷ ಭತ್ಯೆಯನ್ನು ನೀಡಿ ವೇತನ ನಿಗದಿ ಪಡಿಸಿ ಎಂದು ಕೇಳಿರುವುದಕ್ಕೆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿಬಿಟ್ಟಿದ್ದೀರಿ. ಮತ್ತೊಮ್ಮೆ ಬೇಕಾದರೆ ಪರಿಶೀಲನೆ ಮಾಡಿ. ದಯವಿಟ್ಟು ಈ ವರ್ಗಕ್ಕೆ ಆಗಿರತಕ್ಕಂತಹ ಅನ್ಯಾಯವನ್ನು ಸರಿಪಡಿಸಬೇಕು. ಎಲ್ಲಾ ವರ್ಗಗಳಿಗೂ ಯಾವ ದಿನಾಂಕದಿಂದ ವಿಶೇಷ ಭತ್ಯೆಯನ್ನು ನೀಡಲಾಗಿದೆಯೋ ಅದೇ ದಿನಾಂಕದಿಂದ ಇವರಿಗೂ ಸಹ ವಿಶೇಷ ಭತ್ಯೆಯನ್ನು ನೀಡಿ, ವೇತನ ಸಮಿತಿಯ ಶಿಫಾರಸ್ಸಿನಂತೆ ಇವರಿಗೂ ವೇತನ ನಿಗದಿಗೊಳಿಸಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

**(...ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(722)21.09.2020 2.10 ಕೆಜಿ/ಆರ್‌ಎನ್**

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಬಹಳ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಸರ್ಕಾರಕ್ಕೆ ಜಾಣ ಕಿವುಡು ಇಲ್ಲ. ಯಾರೂ ಸಹ ಜಾಣ ಕಿವುಡರು ಇರಬಾರದು. ಮುಖ್ಯೋಪಾಧ್ಯಯರು ಹೇಗೆ ಸೇರಿರಲಿಲ್ಲ ಎನ್ನುವುದರ ಬಗ್ಗೆ ವಿವರ ಕೊಟ್ಟಿದ್ದೇನೆ. ಇಷ್ಟಾದ ಮೇಲೂ ಸಹ ಮಾನ್ಯ ಸದಸ್ಯರು ಒಂದಷ್ಟು ವಿಷಯಗಳನ್ನು ಚರ್ಚೆ ಮಾಡಿದ್ದಾರೆ ಎಂದರೆ, ನಾನೇ ಮಾನ್ಯ ಸದಸ್ಯರ ಜೊತೆಗೆ ಖುದ್ದಾಗಿ ಕುಳಿತುಕೊಂಡು ಚರ್ಚೆ ಮಾಡುತ್ತೇನೆ. ಇದು ಯಾವ ರೀತಿ ಸರಿ ಬರುತ್ತದೆಯೋ, ಆ ರೀತಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 89**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ನನ್ನ ಎರಡು ಪ್ರಶ್ನೆಗಳಿಗೆ ಯಾವುದೇ ಆರೋಪಗಳು ಮತ್ತು ದೂರುಗಳು ಬಂದಿಲ್ಲವೆಂದು ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಯಾವುದೇ ರೋಗಿಗಳು ವೈದ್ಯರ ಮೇಲೆ ದೂರುಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ದಯಮಾಡಿ ಇದರ ಬಗ್ಗೆ ಒಂದು ವಿಶೇಷವಾದಂತಹ ಘಟಕವನ್ನು ನೇಮಕ ಮಾಡಬೇಕು ಮತ್ತು ಸರ್ಕಾರ ಇದರ ಬಗ್ಗೆ ನಿಗಾ ಮಾಡಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ನನ್ನ ಮೂರನೇ ಪ್ರಶ್ನೆಗೆ ಮಾನ್ಯ ಸಚಿವರು ಅಗತ್ಯಕ್ಕೆ ಅನುಗುಣವಾಗಿ ಔಷಧಿ, ವೈದ್ಯಕೀಯ ಸಲಕರಣೆಗಳನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ನಾನೀಗ ಇದರ ಬಗ್ಗೆ ಮೈಸೂರಿಗೆ ಸೀಮಿತವಾಗಿ ಮಾತನಾಡುತ್ತೇನೆ. ಮೈಸೂರಿನ ಸುತ್ತಮುತ್ತ 6 ರಿಂದ 7 ಜಿಲ್ಲೆಗಳು ನಮ್ಮ ಮೇಲೆ ಒತ್ತಡ ಹೇರಿವೆ. Plasma ಏನಾದರೂ ಬೇಕಾದರೆ, ನಾವು ಮಂಡ್ಯಕ್ಕೆ ಬರಬೇಕಾಗುತ್ತದೆ. ಮೈಸೂರಿನಲ್ಲಿ ಇಲ್ಲ. ತಕ್ಷಣ ಅದನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಿಕೊಡಿ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಗುತ್ತಿಗೆ ಆಧಾರದ ವೈದ್ಯರನ್ನು ನೇಮಕ ಮಾಡಿಕೊಳ್ಳುವುದರ ಬಗ್ಗೆ ಸರ್ಕಾರ ಯಾವ ತೀರ್ಮಾನ ತೆಗೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕು. ನಾವು SDRF ಮೇಲೆ ಅವಲಂಬನೆಯಾಗಬೇಕಾಗುತ್ತದೆ. ಇದಕ್ಕೆ ವಿಶೇಷವಾದಂತಹ ಹಣಕಾಸಿನ ನೆರವನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಈಗ ಯಾವುದೇ ಕಾಯಿಲೆ ಬಂದರೂ ಸಹ, ಪ್ರತಿಯೊಬ್ಬರು ಕರೋನಾ ಪರೀಕ್ಷೆ ಮಾಡಿಸಿಕೊಂಡು ಪ್ರಮಾಣ ಪತ್ರವನ್ನು ತರಬೇಕಾಗುತ್ತದೆ. ಈಗ ನಮ್ಮನ್ನು ಸಹ ಕರೋನಾ ಪರೀಕ್ಷೆಯ ಪ್ರಮಾಣ ಪತ್ರವನ್ನು ನೋಡಿ ಸದನದ ಒಳಗಡೆ ಬಿಟ್ಟಿದ್ದಾರೆ, ಈಗ ಕರೋನಾ ರೋಗ ಲಕ್ಷಣಗಳು ಇಲ್ಲದವರು ಸಹ ಅನವಶ್ಯಕವಾಗಿ ನೋವವನ್ನು ಅನುಭವಿಸುವಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಮತ್ತು ದೇಶದಲ್ಲಿ ಇದೆ ಎನ್ನುವಂತಹ ವಿಷಯವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದಕ್ಕೆ ಏನಾದರೂ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಈಗ ಕರೋನಾ ಬಂದಿರುವವರಿಗೆ ರೋಗ ಲಕ್ಷಣಗಳು ಗೊತ್ತಾಗುತ್ತದೆ. ಕರೋನಾ ರೋಗ ಲಕ್ಷಣಗಳು ಇಲ್ಲದವರಿಗೂ ಸಹ ಬೇರೆ ಕಾಯಿಲೆಗಳಿಗೆ ಚಿಕಿತ್ಸೆ ಸಿಗುತ್ತಿಲ್ಲ. ಇವತ್ತಿನ ದಿವಸ ಖಾಸಗೀ ಆಸ್ಪತ್ರೆಗಳಲ್ಲಿ ಕರೋನಾ ಬಂದವರು ಸೇರಿದರೆ ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಸಕ್ಕೆ ಕನಿಷ್ಠ 10 ಸಾವಿರ ರೂಪಾಯಿಗಳ ಬಿಲ್ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಪ್ರಪ್ರಥಮವಾಗಿ ಒಬ್ಬ ರೋಗಿ ಖಾಸಗಿ ಆಸ್ಪತ್ರೆಗೆ ಸೇರಿದರೆ ಕೊನೆಗೆ ಒಂದರಿಂದ ಎರಡು ಲಕ್ಷ ರೂಪಾಯಿಗಳಿಲ್ಲದೆ ಹೊರಗಡೆ ಬರುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ಮಾಧ್ಯಮದವರು ಸಹ ವರದಿಗಳನ್ನು ಮಾಡುತ್ತಿದ್ದಾರೆ. ಹಾಗಾಗಿ, ಇದಕ್ಕೆ ಏನಾದರೊಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತಿನವರೆಗೂ Corona Warriors ಗಳಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ಕೊಟ್ಟಿಲ್ಲವೆಂಬ ಆಪಾದನೆಗಳನ್ನು ಮಾಡುತ್ತಿದ್ದಾರೆ.

ಶ್ರೀ **ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಲವು ವೈದ್ಯರು ಖಾಸಗೀ ಕ್ಲಿನಿಕ್‌ಗಳನ್ನು ತೆಗೆದು ಅಲ್ಲಿಗೆ ರೋಗಿಗಳನ್ನು ಬರಮಾಡಿಕೊಳ್ಳುತ್ತಿದ್ದಾರೆಂದು ಆರೋಪ ಮಾಡಿದ್ದಾರೆ. ವೈದ್ಯರಿಗೆ 5 ಗಂಟೆಯ ಮೇಲೆ private practice ಮಾಡುವುದಕ್ಕೆ ಅವಕಾಶವಿದೆ. ಈ ರೀತಿಯ ದೂರುಗಳು ಬಂದಂತಹ ಸಮಯದಲ್ಲಿ ಸಾಕಷ್ಟು ವೈದ್ಯರುಗಳ ಮೇಲೆ ನಾವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ರೀತಿ ಖಾಸಗಿ ಆಸ್ಪತ್ರೆಗಳಿಗೆ ರೋಗಿಗಳನ್ನು ಬರಮಾಡಿಕೊಂಡಂತಹ ಸಂದರ್ಭದಲ್ಲಿ ಏನಾದರೂ ತೊಂದರೆಯಾಗಿ ಆ ಬಗ್ಗೆ ದೂರುಗಳು ಬಂದಂತಹ ಸಮಯದಲ್ಲಿ ಆ ಬಗ್ಗೆಯೂ ಸಹ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅಲದೇ, PPE Kits ಬಗ್ಗೆ, Masks ಬಗ್ಗೆ ಜೊತೆಗೆ Corona Warriors ಪ್ರಾಣ ಕಳೆದುಕೊಂಡಂತಹವರ ಬಗ್ಗೆ ವರದಿಗಳನ್ನು ಕೇಳಿದ್ದೇವೆ. ಆ ವರದಿಗಳು ಬಂದ ತಕ್ಷಣ ಆ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 104 + 71**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 2 ಮತ್ತು 3 ನೇ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಟ್ಟಿದ್ದಾರೆ. 4ನೇ ಪ್ರಶ್ನೆ ಏನೆಂದರೆ, ಬೀದರ್ ವೈದ್ಯಕೀಯ ವಿಜ್ಞಾನ ಕಾಲೇಜಿನಲ್ಲಿ 578 ವಿದ್ಯಾರ್ಥಿಗಳಿದ್ದಾರೆ. ಅದಕ್ಕೆ ಸಹ-ಪ್ರಧ್ಯಾಪಕರುಗಳು ಮತ್ತು ಸಹಾಯಕ-ಪ್ರಧ್ಯಾಪಕರುಗಳು ಬೇಕೇ? Data Operators and Lab Technicians ತೆಗೆದುಕೊಂಡಿದ್ದಾರೆ, ಅದಕ್ಕೆ ಯಾವ measures ನಿಂದ ತೆಗೆದುಕೊಂಡಿದ್ದಾರೆ. ಅದಕ್ಕೆ advertisement ಹಾಕಿದ್ದರು, ಮತ್ತು ಅದಕ್ಕೆ ಏನು criteria ಇಟ್ಟಿದ್ದರು ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತಿದ್ದೇನೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಎಲ್ಲಾ 150 ಎಂ.ಬಿ.ಬಿ.ಎಸ್., ಸೀಟುಗಳಿಗೆ ಪ್ರವೇಶಕ್ಕೆ ಅವಕಾಶ ಇದೆ ಮತ್ತು ಪಿ.ಜಿ ಒಟ್ಟು 7 ಸೀಟುಗಳಿದೆ. ಒಟ್ಟಾರೆಯಾಗಿ 578 ವಿದ್ಯಾರ್ಥಿಗಳಿಗೆ MCI ನವರು norms fix ಮಾಡುತ್ತಾರೆ. ಈ norms ಅನ್ವಯವೇ ನಾವು 'ಎ' ವೃಂದ, 'ಬಿ' ವೃಂದ, 'ಸಿ' ವೃಂದ ಮತ್ತು 'ಡಿ' ವೃಂದ ಎಂದು ಮಾಡಿದ್ದೇವೆ. ಈ 4 ವೃಂದಗಳಲ್ಲಿ ಒಟ್ಟಾರೆಯಾಗಿ ಮಂಜೂರಾದ ಹುದ್ದೆಗಳು ಬೋಧಕ ಮತ್ತು ಬೋಧಕೇತರ ಈ ರೀತಿಯಲ್ಲಿ ನಾವು ನಿಗದಿ ಮಾಡಿ ಒಟ್ಟಾರೆಯಾಗಿ ಬೋಧಕ ಆಸ್ಪತ್ರೆಯಿಂದ ಒಟ್ಟು 111 'ಡಿ' ವೃಂದದವರಿಗೆ ಮತ್ತು 'ಸಿ' ವೃಂದದವರಿಗೆ 158, 'ಬಿ' ವೃಂದ 3 ಹಾಗೂ 'ಎ' ವೃಂದ 33 ಅನ್ನು ನೇರನೇಮಕಾತಿ ಅಡಿಯಲ್ಲಿ ನೇಮಕ ಮಾಡಿದ್ದೇವೆ. ಇದರಲ್ಲಿ 33 ಹುದ್ದೆಗಳಲ್ಲಿ 31 ಹುದ್ದೆಗಳು ನೇಮಕಾತಿ ಆಗಿದೆ. 2 ಹುದ್ದೆಗಳು ಮಾತ್ರ ಖಾಲಿ ಉಳಿದಿವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು house keeping ಗೆ ಯಾವ ರೀತಿ ಟೆಂಡರ್ ಮಾಡಿದ್ದೀರಿ ಎಂದು ಕೇಳಿದ್ದಾರೆ. E-tender ಮೂಲಕ 96 ಜನರ ಸೇವೆಗೆ ಸ್ವಚ್ಛತಾ ಕಾರ್ಯ ಏಪ್ರಿಲ್-2020ರಿಂದ ಪ್ರಾರಂಭವಾಗಿದೆ ಈ ಸೇವೆಯನ್ನು Manjeera Engineering and Constructions ಇವರ ಮೂಲಕ ನಿರ್ವಹಿಸಲಾಗುತ್ತಿದೆ. ನಮ್ಮ ಎಲ್ಲಾ ವೈದ್ಯಕೀಯ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳು ಸ್ವಯತ್ತತೆ ಇರುವಂತಹ ಸಂಸ್ಥೆಗಳು. ಹಾಗಾಗಿ, ಅಲ್ಲಿನ ನಿರ್ದೇಶಕರು ಇದನ್ನು ಮಾಡುತ್ತಾರೆ. ಕೇವಲ ಆಡಳಿತ ಮಂಜೂರಾತಿಯನ್ನು ಸರ್ಕಾರ ಕೊಡುತ್ತದೆ.

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಳೆದ ಎರಡು ತಿಂಗಳ ಹಿಂದೆ ಬೀದರ್‌ಗೆ ಭೇಟಿ ನೀಡಿದ್ದರು. Are your satisfied with the condition of the Hospital Buildings?

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಸದರಿ ವೈದ್ಯಕೀಯ ಕಾಲೇಜಿನ ಬಗ್ಗೆ ಕೆಲವು ನ್ಯೂನತೆಗಳು ನನಗೆ ಕಂಡು ಬಂದಿದೆ. ಕಳೆದ ಬಾರಿ ಬೀದರ್‌ಗೆ ಹೋಗಿದ್ದಾಗ ಸಂಪೂರ್ಣವಾದಂತಹ ವೀಕ್ಷಣೆಯನ್ನು, ಸಮಾಲೋಚನೆಯನ್ನು ಮತ್ತು ಸಭೆಗಳನ್ನು ಮಾಡಿ ಬಂದಿದ್ದೇನೆ. ಹಾಗಾಗಿ, ಕೆಲವು ಮೂಲಭೂತ ಸೌಕರ್ಯಗಳಲ್ಲಿ ನ್ಯೂನತೆಗಳು ಹಾಗೂ ಸಿಬ್ಬಂದಿಗಳಲ್ಲಿ ನ್ಯೂನತೆಗಳು ಇದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ನಾವು ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಾನು ಅಲ್ಲಿ ಸಭೆ ಮಾಡಿದಾಗಲೂ ಸಹ ಇದಕ್ಕೆ 3 ರಿಂದ 4 ತಿಂಗಳು ಬೇಕಾಗುತ್ತದೆ ಎಂದು ಹೇಳಿದ್ದೇನೆ. ಆ ಸಮಯದಲ್ಲಿ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಒಂದು ಉತ್ತಮ ಸಂಸ್ಥೆಯನ್ನಾಗಿ ರೂಪುಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ ಬಂದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 30**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಸ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೋಧಕೇತರ ಹುದ್ದೆಗಳು ಎಷ್ಟು ಖಾಲಿ ಇವೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಯಾವುದೇ ಹುದ್ದೆಗಳು ಖಾಲಿ ಇಲ್ಲವೆಂದು ಹೇಳಿದ್ದಾರೆ. ಬೋಧಕೇತರ ಹುದ್ದೆಗಳು ಏಕೆ ಖಾಲಿ ಇಲ್ಲವೆಂದರೆ, ಬೋಧಕೇತರ ಹುದ್ದೆಗಳನ್ನು merge ಮಾಡುತ್ತಿದ್ದಾರೆ. ಉದಾಹರಣೆಗೆ ಒಬ್ಬ peon ನಿವೃತ್ತಿ ಹೊಂದಿದರೆ ಅಥವಾ clerk ನಿವೃತ್ತಿ ಹೊಂದಿದರೆ ಆ ಹುದ್ದೆಗಳನ್ನು merge ಮಾಡುತ್ತಿದ್ದಾರೆ. ಆ ಹುದ್ದೆಗಳನ್ನು merge ಮಾಡಿರುವುದರಿಂದ ಹುದ್ದೆಗಳು ಖಾಲಿ ಇಲ್ಲವೆಂದು ತೋರಿಸುತ್ತಿದೆ. ಪ್ರೌಢ ಶಾಲೆಗಳಲ್ಲಿ 4474 ಬೋಧಕ ಹುದ್ದೆಗಳು ಖಾಲಿ ಇವೆ ಮತ್ತು ಬೋಧಕೇತರ 1028 ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಅನುದಾನಿತ ಶಿಕ್ಷಣ ಸಂಸ್ಥೆಗಳು ಎಲ್ಲಿ ನಡೆಯುತ್ತಿವೆ, ಅಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೋಧಕ ಹುದ್ದೆಗಳಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದನ್ನು ಭರ್ತಿ ಮಾಡುವುದಕ್ಕೆ ಅವಕಾಶಕ ಇಲ್ಲ. 2015 ರವರೆಗೂ ಬೋಧಕರನ್ನು ನೇಮಕ ಮಾಡಿಕೊಳ್ಳಬಹುದೆಂದು ಆದೇಶವಾಗಿದೆ. ಆದರೆ, ಇವತ್ತಿನವರೆಗೂ ಯಾವುದೇ ಪ್ರಕ್ರಿಯೇ ಆಗಿಲ್ಲ. ಅದು ಹಾಗೆಯೇ ಉಳಿದಿದೆ.

**(723)21–09–2020(2–20)ಎಂವಿ–ಎಕೆ**

**ಪ್ರಕಾಶ್ ಕೆ. ರಾಥೋಡ್ (ಮುಂದು):–**

2014ರಿಂದ ಇವತ್ತಿನವರೆಗೂ ಅನುದಾನಿತ ಶಿಕ್ಷಣ ಸಂಸ್ಥೆಗಳು ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಇದರಿಂದ ವಿಶೇಷವಾಗಿ ಹಳ್ಳಿ ಜನರಿಗೆ ಮತ್ತು ಕಡುಬಡವರ ಮಕ್ಕಳಿಗೆ ಶಿಕ್ಷಣದ ಕೊರತೆಯಾಗುತ್ತಿದೆ. ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳು ಗ್ರಾಮೀಣ ಭಾಗದಲ್ಲಿವೆ. ಅವುಗಳಲ್ಲಿ ಇರುವಂತಹ ನ್ಯೂನತೆಗಳನ್ನು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಕೋವಿಡ್–19 ಇರುವುದರಿಂದ ಅವುಗಳಿಗೆ ನಿರ್ಬಂಧ ಮಾಡಿದ್ದಾರೆಂದು ಹೇಳುತ್ತಾರೆ. ಈಗ ಕೋವಿಡ್–19 ನಿಂದ 2020–21 ಸಾಲಿಗೆ ನಿರ್ಬಂಧ ಮಾಡಿರಬಹುದು. ಆದರೆ 2014ರಿಂದ ಅಂದರೆ ಐದಾರು ವರ್ಷದಿಂದ ಈ ಅನುದಾನಿತ ಸಂಸ್ಥೆಗಳಲ್ಲಿ ಬೋಧಕರನ್ನು ನೇಮಕಾತಿ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಹೆಚ್ಚುವರಿ ಬೋಧಕರನ್ನು ಕೆಲವು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಿದ್ದಾರೆ. ಆದರೆ, ಅದು ಸಹ ಸರಿಯಾಗಿ ಆಗಿಲ್ಲ. ಅಲ್ಲಿಗೆ ಯಾರೂ ಸಹ ಹೋಗಿಲ್ಲ. ಇಂತಹ ಸಮಯದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಡವರಿಗೆ ತುಂಬಾ ತೊಂದರೆಯಾಗುತ್ತಿದೆ, ಅದಕ್ಕೆ ಸರ್ಕಾರ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತದೆ. ಆರ್ಥಿಕ ಇಲಾಖೆಯವರಿಂದ ಏನಾದರೂ ಆದೇಶವಿರಬಹುದು. ಆದರೆ, ಮಾನ್ಯ ಮಂತ್ರಿಗಳು ನಿರ್ಣಯ ತೆಗೆದುಕೊಂಡು, ಅದನ್ನು ಶೀಘ್ರದಲ್ಲೇ ಇವರಿಗೆ ಅವಕಾಶ ಮಾಡಿಕೊಡಬೇಕು. ಆರ್ಥಿಕ ಇಲಾಖೆಯವರು ಹಾಗೆಯೇ ವಿಳಂಬ ಮಾಡುತ್ತಾರೆ. ಈಗ ಆರ್ಥಿಕ ಇಲಾಖೆಗೆ ಕಡತ ಹೋದರೆ, ಆ ಕಡತ ವಾಪಸ್ಸು ಬರಬೇಕಾದರೆ ಅದು ಇನ್ನೊಂದು ಜನ್ಮ ತೆಗೆದುಕೊಳ್ಳುತ್ತದೆ. ಅಲ್ಲಿ ಅಷ್ಟೊಂದು ವಿಳಂಬವಾಗುತ್ತದೆ. ಮಾನ್ಯ ಮಂತ್ರಿಗಳು ಶಿಕ್ಷಣ ಸಚಿವರಾಗಿ ಬಹಳ ಸಮರ್ಥವಾಗಿ ಶಿಕ್ಷಣ ಇಲಾಖೆಯನ್ನು ನಡೆಸುತ್ತಿದ್ದಾರೆ. ಖಾಲಿ ಇರುವಂತಹ ಹುದ್ದೆಗಳನ್ನು ಆದಷ್ಟು ಬೇಗ ತುಂಬಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಪೂರಕವಾಗಿ ಚರ್ಚೆ ಮಾಡೋಣ. ದಯಮಾಡಿ ಸರ್ಕಾರದ ಹಂತಕ್ಕೆ ಬಂದಿರುವಂತಹ ಕಡತಗಳಿಗಾದರೂ ಅನುಮೋದನೆ ಕೊಡಿಸಬೇಕು. ಅದಕ್ಕೆ ಕಾರಣವೇನೆಂದರೆ, ಸರ್ಕಾರದ ಹಂತಕ್ಕೆ ಬಂದಿರತಕ್ಕಂಥ ಕಡತಗಳ ಸಂಬಂಧ ಅವರ್ಯಾರಿಗೂ ಕೂಡ ಎರಡು-ಮೂರು ವರ್ಷದಿಂದ ವೇತನವನ್ನು ಕೊಡುತ್ತಿಲ್ಲ. ಏಕೆಂದರೆ, ನಿಮ್ಮ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ನಿಮಗೆ ಅನುದಾನವನ್ನು ಸರ್ಕಾರ ಕೊಡುತ್ತದೆಂದು. ಈಗ ಅವರು ಪುಕ್ಕಟೆಯಾಗಿ ಕೆಲಸ ಮಾಡುತ್ತಿದ್ದಾರೆ ಮತ್ತೆ ಕೆಲವರಿಗೆ ವಯೋಮಿತಿ ಮೀರುತ್ತಿದೆ. ಈಗ ಅನುದಾನವನ್ನು ಅನುಮೋದನೆ ಮಾಡಲಿಲ್ಲವೆಂದರೆ ಕೆಲವರಿಗೆ ವಯೋಮಿತಿ ಮೀರುತ್ತದೆ. ಅವರುಗಳಿಗೆ ಉದ್ಯೋಗ ಸಿಗುವುದಿಲ್ಲ. ಅವರು 10, 15 ಮತ್ತು 20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವತ್ತು ಅದು ಸರ್ಕಾರದ ಅನುದಾನಕ್ಕೆ ಬಂದಿದೆ. ಈಗ ಸರ್ಕಾರದ ಹಂತಕ್ಕೆ ಬಂದಿರುವಂತಹವುಗಳಿಗಾದರೂ ದಯಮಾಡಿ ಆರ್ಥಿಕ ಮಿತವ್ಯಯವನ್ನು ಸಡಿಲಗೊಳಿಸಿ, ಸರ್ಕಾರದ ಹಂತಕ್ಕೆ ಬಂದಿರುವಂತಹ ಕಡತಗಳಿಗೆ ಅನುಮೋದನೆ ಕೊಡಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಸದಸ್ಯರಾದಂತಹ ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಬಹಳ ಕಳಕಳಿಯಿಂದ ವಿಶೇಷವಾಗಿ ಗ್ರಾಮೀಣ ಭಾಗದಲ್ಲಿರುವ ಅನುದಾನಿತ ಶಾಲೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅವರ ಕಳಕಳಿಯನ್ನು ನೂರಕ್ಕೆ ನೂರರಷ್ಟು ಒಪ್ಪಿಕೊಳ್ಳುತ್ತೇನೆ. ಈಗಾಗಲೇ 2019ನೇ ಇಸವಿಯಲ್ಲಿ 2015ರವರೆಗೆ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದ್ದವು ಅವುಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ನೀಡಿದ್ದೆವು. ಬಹುತೇಕ ಹುದ್ದೆಗಳು ಭರ್ತಿಯಾಗಿವೆ. ಆದರೆ, ಇನ್ನೂ ಬಹಳಷ್ಟು ಹುದ್ದೆಗಳು ಖಾಲಿಯಿವೆ. ಅದರ ಸಂಖ್ಯೆಗಳನ್ನು ಒದಗಿಸಿದ್ದೇವೆ. ಆರ್ಥಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯವರು ಏನು ಆರ್ಥಿಕ ಮಿತವ್ಯಯವನ್ನು ಹೇರಿದ್ದಾರೆ. ಅದನ್ನು ಸಡಿಲಗೊಳಿಸುವುದಕ್ಕೆ ನಾವು ನಿರಂತರ ಪ್ರಯತ್ನಪಡುತ್ತೇವೆ. ಸಾಧ್ಯವಾದಷ್ಟು ಬೇಗ ಆರ್ಥಿಕ ಮಿತವ್ಯಯವನ್ನು ಸಡಿಲಗೊಳಿಸಿ, ವಿಶೇಷವಾಗಿ ಶಿಕ್ಷಣ ಕ್ಷೇತ್ರಕ್ಕೆ ಮತ್ತು ಶಾಲೆಗಳಿಗೆ ಅದನ್ನು ಸಡಿಲಗೊಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಅದನ್ನು ಆದಷ್ಟು ಬೇಗ ಮಾಡುತ್ತೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಅದರ ಜೊತೆಗೆ ಕೆಲವೊಂದು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ಕೊಡುತ್ತಿಲ್ಲ. ಯಾರು 1995ರಿಂದ ಅನುದಾನಿತ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ, ಅಂತಹ ಶಾಲೆಗಳಿಗೆ ಅನುದಾನ ಕೊಡುವುದನ್ನು ನಿಲ್ಲಿಸಿದ್ದಾರೆ. ಪದೇಪದೇ ಕೇಳಿದರೂ ಸಹ ಆಗಿಲ್ಲ. ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯೇ? ಏಕೆಂದರೆ, ಗ್ರಾಮೀಣ ಪ್ರದೇಶದಲ್ಲಿ ಹೊಸ ಶಾಲೆಗಳನ್ನು ನಡೆಸುತ್ತಿರುವವರಿಗೆ ಅನುದಾನವನ್ನು ಕೊಟ್ಟಿಲ್ಲ. ಆದಷ್ಟು ಬೇಗ ಅನುದಾನ ಕೊಡಬೇಕೆಂದು ನನ್ನ ಮನವಿ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಅದರ ಮಾಹಿತಿ ನೀಡಿದರೆ, ಅದನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 129**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಉತ್ತರವನ್ನು ಬಹಳ ಸಮಗ್ರವಾಗಿ ಒದಗಿಸಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ನಡೆದಿರುವಂತಹ ಅಕ್ರಮ ಪದೋನ್ನತಿ ಏನಿದೆ, ಆ ರೀತಿಯಾಗಿರುವುದು ನಿಜ ಎಂದು ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ, ಸರ್ಕಾರ ದಿನಾಂಕ:18.06.2020 ಮತ್ತು 17.07.2020ರಂದು ವಿಶ್ವವಿದ್ಯಾಲಯಕ್ಕೆ ಎರಡು ಪತ್ರ ಬರೆದಿದೆ. ಆದರೆ, ಅಲ್ಲಿಂದ ಇಲ್ಲಿಯವರೆಗೂ ಸಹ ಉತ್ತರ ಬಂದಿರುವುದಿಲ್ಲ. ಇದನ್ನು ರದ್ದುಗೊಳಿಸುವುದಕ್ಕೆ ಕಾಯ್ದೆಯಲ್ಲಿ ಸರ್ಕಾರಕ್ಕೆ ಅವಕಾಶವಿದೆ. ವಿಶ್ವವಿದ್ಯಾಲಯಗಳಲ್ಲಿ ಕಾನೂನುಬಾಹಿರ ಪದೋನ್ನತಿ ಮತ್ತು ನೇಮಕಾತಿ ನಡೆದಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ ಮತ್ತು ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಇದನ್ನು ರದ್ದುಗೊಳಿಸುವುದಕ್ಕೆ ಡಿ.ಪಿ.ಎ.ಆರ್.ನಲ್ಲಿ provision ಇದೆ. ಅದನ್ನು ಇನ್ನು ಏಕೆ ಮಾಡಿಲ್ಲವೆನ್ನುವುದು ನನ್ನ ಪ್ರಶ್ನೆ?

**ಶ್ರೀ ಎಸ್.ಸುರೇಶ್ ಕುಮಾರ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು (ಡಾ॥ಅಶ್ವಥ್ ನಾರಾಯಣ, ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟ ಸಚಿವರ ಪರವಾಗಿ ಉತ್ತರ ನೀಡಿದ್ದೇನೆ. ಇದನ್ನು ಸಂಬಂಧಪಟ್ಟ ಸಚಿವರಿಗೆ ತಲುಪಿಸಿ ಉತ್ತರ ಒದಗಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳೇ ಉತ್ತರ ನೀಡಬಹುದು. ಇದರಲ್ಲಿ ಹೆಚ್ಚಿನ ಸ್ಪಷ್ಟೀಕರಣ ಏನು ಇಲ್ಲ. ಇದನ್ನು ರದ್ದುಗೊಳಿಸಬಹುದು ಎಂದು ಡಿ.ಪಿ.ಎ.ಆರ್.ನಲ್ಲಿ ಇದೆ. ತಪ್ಪಾಗಿದೆ ಎಂದು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಎಸ್.ಸುರೇಶ್ ಕುಮಾರ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು (ಡಾ॥ಅಶ್ವಥ್ ನಾರಾಯಣ, ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ನಾವು ಉತ್ತರವನ್ನು ಒದಗಿಸಿದ್ದೇವೆ. ಅದು ಉತ್ತರದ ಕೊನೆಯ ಭಾಗದಲ್ಲಿ ಇದೆ. ಅದರ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ನಾನು ಸಚಿವರ ಉತ್ತರವನ್ನು ಪ್ರಶಂಸಿಸುತ್ತೇನೆ. ಆದರೆ, ಅದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 62**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ವೃಕ್ಷ ಸಂರಕ್ಷಣಾ ಕಾಯ್ದೆಯಲ್ಲಿ, 65 ನಗರ ಪ್ರದೇಶಗಳ ಪಟ್ಟಿಯನ್ನು ಒದಗಿಸಿದ್ದಾರೆ. ಆದರೆ, 44 ವರ್ಷದ ನಂತರ 2019ರಲ್ಲಿ 252 ನಗರ ಪ್ರದೇಶಗಳನ್ನು ವಿಸ್ತರಣೆ ಮಾಡಿದ್ದೇವೆಂದು ಹೇಳಿದ್ದಾರೆ. ಅದರ ಪಟ್ಟಿ ಇಲ್ಲಿ ಇಲ್ಲ. ಆದರೆ, ಅದು ನನ್ನ ಬಳಿ ಇದೆ. 252 ನಗರ ಪ್ರದೇಶಗಳಲ್ಲಿ 65 ನಗರ ಪ್ರದೇಶಗಳು ಸಹ ಸೇರಿಕೊಂಡಿದೆ. ಇದನ್ನು ವಿಸ್ತರಣೆ ಮಾಡಬಹುದೆ, ಇದರಲ್ಲಿ ನಮ್ಮ ರಾಜ್ಯದ ಅನೇಕ ನಗರ ಪ್ರದೇಶಗಳು ಬಿಟ್ಟುಹೋಗಿವೆ. ಇಲ್ಲಿ ಅದಕ್ಕೆ ಅವಕಾಶವಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಅವಕಾಶವನ್ನು ಯಾವಾಗ ಮಾಡಿಕೊಡುತ್ತಾರೆ. ಇವತ್ತು ವೃಕ್ಷ ನೆಡುವಂತಹ ಕಾರ್ಯಕ್ರಮಗಳನ್ನು ಮಾಡಿಕೊಂಡು, ವಿ.ಐ.ಪಿ.ಗಳನ್ನು ಕರೆದು, ದೊಡ್ಡ ದೊಡ್ಡ ಪೋಸ್ಟರ್ ಮತ್ತು ಬ್ಯಾನರ್ ಹಾಕಿಕೊಂಡು ಕಾರ್ಯಕ್ರಮಗಳನ್ನು ಮಾಡುತ್ತೇವೆ. ಕಳೆದ 44 ವರ್ಷಗಳಲ್ಲಿ ಪ್ರತಿ ವರ್ಷ 200, 300 ಮತ್ತು 500 ಗಿಡಗಳನ್ನು ಅರಣ್ಯ ಇಲಾಖೆಯವರು ನೀಡುತ್ತಾರೆ. ಅದನ್ನು ಸ್ಥಳೀಯ ಸಂಸ್ಥೆಗಳು ನೆಡುವಂತಹ ಕೆಲಸವನ್ನು ಮಾಡುವಂಥದ್ದು ಪ್ರವೃತಿಯಾಗಿದೆ. ಆದರೆ, ಅದರ ವೆಚ್ಚವನ್ನು ಸ್ಥಳೀಯ ಸಂಸ್ಥೆಗಳೇ ಕೊಡುವಂತಹ ಕೆಲಸ ಇವತ್ತಿನವರೆಗೆ ನಡೆದುಕೊಂಡು ಬಂದಿದೆ. ಆದರೆ, ನೆಟ್ಟಿರುವಂತಹ ಗಿಡಗಳು ಶೇಕಡಾ 10ರಷ್ಟು ಕೂಡ ಜೀವಂತವಾಗಿರುವುದಿಲ್ಲ. ಅದರ ಪೋಷಣೆ ಮಾಡುವುದಿಲ್ಲ. ನಾವು ಕೂಡ ಗಡಿಬಿಡಿಯಲ್ಲಿ ಕಾರ್ಯಕ್ರಮಕ್ಕೆ ಬಂದು ಗಿಡಗಳನ್ನು ನೆಟ್ಟು ಅದಕ್ಕೆ ನೀರನ್ನು ಹಾಕದೇ ಮತ್ತೊಂದು ಕಾರ್ಯಕ್ರಮಕ್ಕೆ ಓಡುವಂತಹ ಪರಿಸ್ಥಿತಿ ಇದೆ. ನಾವು ಈ ಗಿಡ ನೆಡುವ ಕಾರ್ಯಕ್ರಮಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಗಿಡ ನೆಡುವ ಕಾರ್ಯಕ್ರಮವನ್ನು ಬೇಸಿಗೆಯಲ್ಲಿ ಮಾಡುತ್ತಾರೆ. ಇದನ್ನು ಮಳೆಗಾಲ ಪ್ರಾರಂಭವಾಗುವ ಸಮಯದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡರೆ, ಇದು ಬಹಳ ವ್ಯವಸ್ಥಿತವಾಗಿ ಉಪಯೋಗವಾಗುವಂತಹ ರೀತಿಯಲ್ಲಿ ಆಗುತ್ತದೆ. ಈಗಾಗಲೇ ಅರಣ್ಯ ಇಲಾಖೆಯವರು ಕೊಟ್ಟಂತಹ ಗಿಡವನ್ನು ನಮ್ಮ ರಾಜ್ಯದ ಯಾವುದೇ ಸ್ಥಳೀಯ ಸಂಸ್ಥೆಗಳು ಇನ್ನೂ ನೆಟ್ಟಿಲ್ಲ. ಅದು ಹಾಗೆಯೇ ಇದೆ. ನಾನು ಸ್ಥಳೀಯ ಸಂಸ್ಥೆಗಳಲ್ಲಿ ಈ ವಿಚಾರವನ್ನು ವಿಚಾರಿಸಿದಾಗ ನನಗೆ ಅದರ ಮಾಹಿತಿ ಸಿಕ್ಕಿದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಮುಂದಿನ ದಿನಗಳಲ್ಲೂ ಕೂಡ ವೃಕ್ಷ ಸಂರಕ್ಷಣೆ ಬರೀ ಕಾಯಿದೆಯಾಗಿ ಫೋಟೋದಲ್ಲಿ ಇರದೇ ಅದಕ್ಕೊಂದು ಪೂರಕವಾದ ರೀತಿಯಲ್ಲಿ ಅದನ್ನು ಪೋಷಣೆ ಮಾಡುವಂತಹ ನಿಟ್ಟಿನಲ್ಲಿ ಮಾಡಬೇಕೆಂದು, ತಮ್ಮ ಮೂಲಕ ವಿನಂತಿಯನ್ನು ಮಾಡುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆನಂದ್ ಸಿಂಗ್, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ 1976ನೇ ಇಸವಿಯಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣೆ ಕಾಯ್ದೆ ಅಡಿಯಲ್ಲಿ 65 ನಗರಗಳನ್ನು ಸೇರಿಸಿಕೊಂಡಿದ್ದೆವು. ಆದಾದನಂತರ, ಮತ್ತೊಮ್ಮೆ ಹೊಸದಾಗಿ 2019ರಲ್ಲಿ ಅಧಿಸೂಚನೆಯನ್ನು ಹೊರಡಿಸಿ, ನಗರದ ಭಾಗದಲ್ಲಿ ಇರತಕ್ಕಂಥ 252 ನಗರಗಳನ್ನು ಸೇರಿಸಿಕೊಂಡಿದ್ದೇವೆ. ಅದರ ಜೊತೆಗೆ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಅರಣ್ಯದ ಬಗ್ಗೆ ಮತ್ತು ನಾವು ಯಾವ ರೀತಿ ಆ ವೃಕ್ಷಗಳನ್ನು ರಕ್ಷಣೆ ಮಾಡಬೇಕು ಎನ್ನತಕ್ಕಂಥ ವಿಚಾರಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಖಂಡಿತವಾಗಿ ನಾವು ಮಾನ್ಯ ಸದಸ್ಯರ ಸಲಹೆಯನ್ನು ಸ್ವೀಕಾರ ಮಾಡಿಕೊಂಡು, ಅದರ ಪ್ರಕಾರ ನಾವು ವೃಕ್ಷಗಳನ್ನು ರಕ್ಷಣೆ ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತೇವೆ. ಅದರ ಜೊತೆಗೆ ಇನ್ನೂ ಹೆಚ್ಚಿಗೆ ಗ್ರಾಮೀಣ ಭಾಗದಿಂದ ಪಟ್ಟಣ ಪಂಚಾಯತ್, ಈಗ ತಾಲ್ಲೂಕ್ ಪಂಚಾಯತ್‌ಗಿಂತ ಮೇಲ್ದರ್ಜೆಗೆ ಬಂದಾಗ, ಆ ನಗರದ ಭಾಗದಲ್ಲಿ ಬಂದಾಗ ಅಂತಹ ಗ್ರಾಮಗಳನ್ನು ನಾವು ಈ ಪಟ್ಟಿಯಲ್ಲಿ 2019ರ ಅಧಿಸೂಚನೆಯ ಪ್ರಕಾರ ಅದನ್ನು ಸಹ ನಗರ ಭಾಗದಲ್ಲಿ ಸೇರಿಸಿಕೊಳ್ಳುತ್ತೇವೆ.

(ಮುಂದು...)

**(724) 21.09.2020 02.30 ಎಲ್‌ಎಲ್/ವಿಕೆ**

**ಶ್ರೀ ಆನಂದಸಿಂಗ್(ಮುಂದು):-**

ನೋಟಿಫಿಕೇಷನ್ 2019ರ ಪ್ರಕಾರ ಅದನ್ನು ಸಹ ನಾವು ನಗರ ಭಾಗದಲ್ಲಿ ಸೇರಿಸಿಕೊಳ್ಳುತ್ತೇವೆ. ಹಾಗಾಗಿ, ಅವರು ಹೇಳಿರುವಂತಹ ಸಲಹೆಗಳನ್ನು ನಾವು ತೆಗೆದುಕೊಂಡು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಗಿಡಗಳನ್ನು ನೆಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:46**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನನಗೆ ಮಾನ್ಯ ಸಚಿವರಿಂದ ಇಂತಹ ಉತ್ತರ ಸಿಗುತ್ತದೆಯೆಂದ ನಾನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ, ಶಾಲೆಗಳು ಅನಧಿಕೃತವಾಗಿ ನಡೆಯುತ್ತಿವೆ ಹಾಗೂ ಶೆಡ್‌ಗಳಲ್ಲಿ ನಡೆಯುತ್ತಿವೆ ಎಂಬ ವಿಷಯದ ಬಗ್ಗೆ ಕಳೆದ ಫೆಬ್ರವರಿ ತಿಂಗಳಿನಲ್ಲಿ ಮನವಿ ಕೊಟ್ಟಿದ್ದೆವು. ಅದಕ್ಕೆ ಮಾನ್ಯ ಸಚಿವರು ಮಾಹಿತಿ ಇಲ್ಲವೆಂದು ಉತ್ತರ ನೀಡಿರುತ್ತಾರೆ. ಆ ಷರತ್ತುಗಳನ್ನು ಪೂರೈಕೆ ಮಾಡಿರುವುದಿಲ್ಲ. ಶೆಡ್‌ನಲ್ಲಿ ನಡೆಯುವ ಮಕ್ಕಳಿಗೆ ನೀರಿನ ಕೊರತೆ ಸೇರಿದಂತೆ ಇತರ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಆದರೂ ಕೂಡ, 3 ಶಾಲೆಗಳು ಶೆಡ್‌ನಲ್ಲಿ ನಡೆಯುತ್ತಿವೆಯೆಂದು ಉತ್ತರ ನೀಡಿರುತ್ತಾರೆ. ಅವು 20 ಕ್ಕಿಂತಲೂ ಜಾಸ್ತಿ ಇವೆ. ಎರಡನೆಯದಾಗಿ, ಮಾನ್ಯ ಸಚಿವರು ಅನಧಿಕೃತವಾಗಿ ನಡೆಯುವಂತಹ ಶಾಲೆಗಳ ಸಂಖ್ಯೆ 17 ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಡಿ.ಡಿ.ಪಿ.ಐ. ಮತ್ತು ಬಿ.ಇ.ಓ. ರವರು ಅನಧಿಕೃತ ಶಾಲೆಗಳ ಸಂಖ್ಯೆ 26 ಎಂದು ಹೇಳಿದ್ದಾರೆ. ಸಚಿವರು ತಪ್ಪು ಮಾಡಿದಂತಹವರ ವಿರುದ್ಧ ಯಾವ ಕ್ರಮ ಕೈಗೊಂಡಿದ್ದಾರೆಂಬ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಈ ರೀತಿ ಸುಮಾರು 2 ವರ್ಷಗಳಿಂದಲೂ ನಡೆಯುತ್ತಿದೆ. ಜೊತೆಗೆ, ಈ ಬಗ್ಗೆ ಹೋರಾಟಗಳು ಸಹ ನಡೆದಿವೆ. ಆದರೂ ಕೂಡ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಅಥವಾ ಕ್ರಮ ಕೈಗೊಳ್ಳುತ್ತೇವೆಂಬ ಬಗ್ಗೆ ಉಲ್ಲೇಖ ಸಹ ಮಾಡಿರುವುದಿಲ್ಲ. ಅದಕ್ಕಾಗಿ, ಮಾನ್ಯ ಸಚಿವರು ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದಾರೆ ಅಥವಾ ಮುಂದೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಮಾಹಿತಿ ನೀಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಎಸ್. ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯ ಶಾಲೆಗಳ ಬಗ್ಗೆ ಎರಡು ವಿಚಾರಗಳು ಇವೆ. ಅದರಲ್ಲಿ, ಶಾಲೆ ನಡೆಸುವುದಕ್ಕೆ ಸರ್ಕಾರದಿಂದ ಪರವಾನಗಿ ತೆಗೆದುಕೊಂಡು ಮೂಲಭೂತ ಸೌಲಭ್ಯಗಳು ಇಲ್ಲದೇ ಇರುವುದು. ಇನ್ನೊಂದು ಶಾಲೆಗಳು ಅನಧಿಕೃತವಾಗಿ ನಡೆಯುತ್ತಿರುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಸದಸ್ಯರು ನಾವು ನೀಡಿರುವಂತಹ ಉತ್ತರದ ಅಂಕಿ–ಅಂಶಗಳ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ, ನಾನು ಸದನದಲ್ಲಿ ಮಾತು ಕೊಡುವುದೇನೆಂದರೆ, ಈ ಅಧಿವೇಶನ ಮುಕ್ತಾಯವಾದ ಬಳಿಕ, ಬೀದರ್ ಜಿಲ್ಲೆಗೆ ಸ್ವತಃ ನಾನೇ ಭೇಟಿ ನೀಡುತ್ತೇನೆ. ಆ ಸಂದರ್ಭದಲ್ಲಿ ಯಾವ್ಯಾವ ಅನಧಿಕೃತ ಶಾಲೆಗಳಿವೆ ಅಥವಾ ಮೂಲಭೂತ ಸೌಲಭ್ಯಗಳಿಲ್ಲ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದನ್ನು ಪರಿಶೀಲಿಸುತ್ತೇನೆ. ಜೊತೆಗೆ, ಯಾವುದೇ ಶಾಲೆ ಮೂಲಭೂತ ಸೌಲಭ್ಯಗಳು ಇಲ್ಲದೇ ಹಾಗೂ ಪರವಾನಗಿ ಇಲ್ಲದೇ ನಡೆಯದ ರೀತಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 121**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎಂ. ಲಿಂಗಪ್ಪ:-** ಮಾನ್ಯ ಸಭಾಪತಿಯವರೇ, ಬಹುಶಃ ನನ್ನ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೆನು. ಬಹುಶಃ ಯಾವ ಹಿಂದಿನ ಆತ್ಮೀಯತೆಯಿಂದ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಸಿದ್ಧರಾಗಿದ್ದೀರೆಂದು ನನಗೆ ಗೊತ್ತಿರುವುದಿಲ್ಲ.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಆತ್ಮೀಯತೆಯಿಂದ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಕೋವಿಡ್-19 ಸಾಂಕ್ರಾಮಿಕ ರೋಗದ ಪಾಸಿಟಿವ್ ಆಗಿರುವುದಿಲ್ಲ.

**ಶ್ರೀ ಸಿ.ಎಂ. ಲಿಂಗಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರದವರು ನೀಡಿರುವ ಉತ್ತರದಲ್ಲಿ ಬಹಳ ನಿರ್ದಿಷ್ಟವಾಗಿ ಏನು ಮಾಡಿಲ್ಲ ಎನ್ನುವುದರ ಬದಲಾಗಿ, ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ ಎಂದು ಉತ್ತರ ನೀಡಿದ್ದಾರೆ. ಸರ್ಕಾರ ಅಧಿಕಾರಕ್ಕೆ ಬಂದ ತರುವಾಯ ಈ ಸಾಲಿನ ಆರ್ಥಿಕ ವರ್ಷದಲ್ಲಿ ಈಗಾಗಲೇ 6 ತಿಂಗಳ ಕಾಲಾವಧಿ ಮುಗಿದಿರುತ್ತದೆ. ಇನ್ನೂ ಕೇವಲ 6 ತಿಂಗಳು ಮಾತ್ರ ಉಳಿದಿದೆ. ಆದರೆ, ಇನ್ನೂ ಉತ್ತರದಲ್ಲಿ ಪರಿಶೀಲನಾ ಹಂತದಲ್ಲಿದೆ ಎಂದು ಉತ್ತರ ನೀಡುತ್ತಾರೆ. ಇದರಲ್ಲಿ ಒಂದು ಮೂಲಭೂತ ಪ್ರಶ್ನೆ ಇದೆ. ಅದೇನೆಂದರೆ, 2020-21ರ ಆಯವ್ಯಯದಲ್ಲಿ ಘೋಷಿಸಿದಂತೆ, ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ತಲಾ 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ Geospatial ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪಿಸುತ್ತೇವೆಂದು ಸರ್ಕಾರ ಏನು ಯೋಜನೆ ಹಾಕಿಕೊಂಡಿತ್ತು, ಅವುಗಳಲ್ಲಿ ಒಂದೂ ಆಗಿರುವುದಿಲ್ಲ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈ ತಂತ್ರಜ್ಞಾನ ಕೇಂದ್ರಗಳು ಬೇಡವೇ ಅಥವಾ ಇವುಗಳ ಅವಶ್ಯಕತೆ ಇಲ್ಲವೇ ಎಂದು ಕೇಳುವುದಕ್ಕೆ ಬಯಸುತ್ತೇನೆ. ಅಲ್ಲದೇ, ಈ ವರ್ಷದಲ್ಲಾದರೂ ಈ ಕೇಂದ್ರಗಳನ್ನು ಪ್ರಾರಂಭ ಮಾಡುವಂತಹ ಭರವಸೆಯನ್ನು ಸದನಕ್ಕೆ ಕೊಡುತ್ತಾರೆಯೇ ಎಂಬ ಬಗ್ಗೆ ಸಹ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ನೀಡಿರುವ ಉತ್ತರದ 2ನೇ ಪ್ಯಾರಾದಲ್ಲಿ ವಿವರವಾಗಿ ನೀಡಲಾಗಿದೆ. ಅದೇನೆಂದರೆ, "...ಹಣಕಾಸಿನ ಕೊರತೆ ಇದ್ದುದರಿಂದ ಅನುಷ್ಠಾನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಳಂಬವಾಗಿದ್ದು, ಪ್ರಸ್ತುತ ಎರಡೂ ಕೇಂದ್ರಗಳ ಸ್ಥಾಪನೆ ಬಗ್ಗೆ ಅನುದಾನದ ಲಭ್ಯತೆ ಆಧಾರ ಮೇಲೆ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಆದಾಗ್ಯೂ, Geospatial ತಂತ್ರಜ್ಞಾನ ಕೇಂದ್ರವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಇಲ್ಲಿ ಸ್ಥಾಪಿಸುವ ಪ್ರಯುಕ್ತ ಪೂರ್ವಭಾವಿ ಕಾರ್ಯಚಟುವಟಿಕೆಗಳಿಗೆ 50 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ" ಎಂದು ಪೂರ್ಣ ವಿವರಗಳನ್ನು ನೀಡಲಾಗಿದೆ. ಬಜೆಟ್‌ನಲ್ಲಿ ಸರ್ಕಾರ ಹೇಳಿರುವುದು ನಿಜ. ಅದರಂತೆ, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಅದನ್ನು ನಾವು ನೂರಕ್ಕೆ ನೂರರಷ್ಟು ಮಾಡುತ್ತೇವೆಂದು ಭರವಸೆ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:01**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಒದಗಿಸಿದ್ದಾರೆ. ಆದರೆ, ನಾನು ತಮ್ಮಲ್ಲಿ ಕಳಕಳಿಯಾಗಿ ವಿನಂತಿ ಮಾಡುವುದೇನೆಂದರೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಅತ್ಯಂತ ಕಡಿಮೆ ಸಾಕ್ಷರತೆ ಪ್ರಮಾಣ ಇರುವಂತಹ ಜಿಲ್ಲೆಗಳಾಗಿವೆ. ರಾಯಚೂರು ಜಿಲ್ಲೆಯಲ್ಲಿ 2679 ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿಯಾಗಿವೆ. ಅದೇ ರೀತಿ ಕೊಪ್ಪಳ ಜಿಲ್ಲೆಯಲ್ಲಿ ಸುಮಾರು 1829 ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿಯಾಗಿವೆ. ಒಟ್ಟಾರೆಯಾಗಿ, ಸುಮಾರು 5500 ರಿಂದ 6000 ಶಿಕ್ಷಕರ ಹುದ್ದೆಗಳು ಖಾಲಿಯಿರುತ್ತವೆ. ಈ ರೀತಿಯಾದರೆ, ನಮ್ಮ ಭಾಗದ ಮಕ್ಕಳು ಯಾವಾಗ ಉದ್ಧಾರವಾಗುತ್ತಾರೆ ಎಂಬ ಪ್ರಶ್ನೆ ನಮ್ಮಲ್ಲಿ ಮೂಡುತ್ತದೆ. ಏಕೆಂದರೆ, ನಮ್ಮ ಭಾಗ SC/ST and other Backward Classes ಇರುವಂತಹ ಪ್ರದೇಶವಾಗಿದೆ. ಅವರಿಗೆ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಿ ಶಿಕ್ಷಣ ಕೊಡಿಸುವಂತಹ ಸಾಮರ್ಥ್ಯ ಇರುವುದಿಲ್ಲ. ಅವರಿಗೆ ಶಿಕ್ಷಣದಲ್ಲಾದರೂ ಅನುಕೂಲ ಮಾಡಿಕೊಡಬೇಕಾದರೆ ಖಾಲಿ ಇರುವಂತಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು. ಈ ಜಿಲ್ಲೆಗಳಲ್ಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡದೇ ಇದ್ದರೆ, ಆ ಮಕ್ಕಳು ಬಹಳಷ್ಟು ತೊಂದರೆಯಲ್ಲಿ ಸಿಲುಕುತ್ತಾರೆಂಬ ಮನವಿಯನ್ನು ತಮ್ಮ ಮುಖಾಂತರ ಸದನಕ್ಕೆ ಮಾಡುತ್ತಿದ್ದೇನೆ.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಕಳೆದ 3 ವರ್ಷಗಳಲ್ಲಿ ಎರಡು ಬಾರಿ ಶಿಕ್ಷಕರ ನೇಮಕಾತಿ ಮಾಡಿರುತ್ತೇವೆ. ಒಂದು ಬಾರಿ 10600 ಶಿಕ್ಷಕರಿಗೋಸ್ಕರ, ಮತ್ತೊಂದು ಬಾರಿ 10000 ಶಿಕ್ಷಕರಿಗೋಸ್ಕರ ನೇಮಕಾತಿ ಮಾಡಿರುತ್ತೇವೆ. ಆದರೆ, ಬಹಳ ವೇದನೀಯ ವಿಷಯ ಏನೆಂದರೆ, ಎರಡೂ ಸಲ ನಮಗೆ ಬೇಕಾದ ಸಂಖ್ಯೆಯ ಶಿಕ್ಷಕರು ಸಿಕ್ಕಿರುವುದಿಲ್ಲ. ಒಂದು ಬಾರಿ ಸುಮಾರು 2000 ಶಿಕ್ಷಕರು ಮತ್ತೊಂದು ಬಾರಿ 3000 ಶಿಕ್ಷಕರು ಸಿಕ್ಕಿದರು. ಪ್ರತಿ ವರ್ಷ ಎಷ್ಟು ಶಿಕ್ಷಕರ ಅಗತ್ಯ ಇದೆ ಎನ್ನುವಂತಹ ಆಧಾರದ ಮೇರೆಗೆ ಪುನಃ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಈ ಬಾರಿ ಕಲ್ಯಾಣ ಕರ್ನಾಟಕ ಭಾಗಕೋಸ್ಕರವೇ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು ಹಾಗೂ ಅಲ್ಲಿನ ವಿದ್ಯಾವಂತ ಯುವಕರಿಗೆ ಅವಕಾಶ ಕೊಡಬೇಕೆಂದು ನಾವು ಚಿಂತನೆ ಮಾಡುತ್ತಿದ್ದೇವೆ. ಅದಕೋಸ್ಕರವಾಗಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ನಾವು ಮಾಡುತ್ತಿದ್ದೇವೆ. ಆದಾಗ್ಯೂ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರ ಆತಂಕವನ್ನು ನಾನು ಖಂಡಿತವಾಗಿ ನಿವಾರಿಸುತ್ತೇನೆ. ಜೊತೆಗೆ, ಶಿಕ್ಷಕರ ಅಗತ್ಯ ಏನಿದೆ ಅದನ್ನು ಮುಂಬರುವ ನೇಮಕಾತಿ ಪ್ರಕ್ರಿಯೆಯಲ್ಲಿ ಪೂರೈಸುತ್ತೇನೆ. ಇನ್ನೊಂದು ವಿಷಯದ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಶ್ರಿ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ಈ ಸದನದಲ್ಲಿ ಹಾಜರಿದ್ದಾರೆ. ಬಹಳಷ್ಟು ಶಿಕ್ಷಕರು ಕಲ್ಯಾಣ ಕರ್ನಾಟಕ ಭಾಗಕ್ಕೆ ಶಿಕ್ಷಕ ಕೆಲಸಕ್ಕೆ ಹೋದ ತರುವಾಯ, ತಮ್ಮ ಊರಿಗೆ ವಾಪಸ್ಸು ಬರುವಂತಹ ಪ್ರಕ್ರಿಯೆ ಅಥವಾ ಮನಸ್ಥಿತಿ ಬೆಳೆಸಿಕೊಂಡಿದ್ದಾರೆ. ಅದು ಏನೋ ನನಗೆ ಗೊತ್ತಿಲ್ಲ. ಅದಕೋಸ್ಕರ, ಈ ಬಾರಿ ಆಯಾ ಭಾಗದ ವಿದ್ಯಾವಂತ ಯುವಕರಿಗೆ ಅವಕಾಶ ಕೊಡಬೇಕು ಮತ್ತು ಅವರನ್ನೇ ನೇಮಕಾತಿ ಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿರುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, " ಶಿಕ್ಷಕರ ನೇಮಕಾತಿ ಆಗುವಂತಹ ಸಂದರ್ಭದಲ್ಲಿ ಹಾಸನ, ಶಿವಮೊಗ್ಗ ಹಾಗೂ ಇತರ ಜಿಲ್ಲೆಯವರು ಶಿಕ್ಷಕರ ಹುದ್ದೆಗೆ ಮೊದಲು ನೇಮಕಾತಿ ಆಗುತ್ತಾರೆ. ತದನಂತರ, ಒಂದು ವರ್ಷ ಕಳೆದ ತರುವಾಯ, ಅಲ್ಲಿನ ಡಿ.ಡಿ.ಪಿ.ಐ. ಅವರಿಗೆ ಹಣ ನೀಡಿ ವರ್ಗಾವಣೆ ಆಗುವುದು ಅಥವಾ ಇನ್ನೂ ಬೇಗ ವರ್ಗಾವಣೆಯಾಗಬೇಕು ಎನ್ನುವಂತಹ ಉದ್ದೇಶದಿಂದ ತಮ್ಮ ಕುಟುಂಬ ಸದಸ್ಯರಿಗೆ ಕ್ಯಾನ್ಸರ್ ರೋಗದಂತಹ ಮಾರಕ ರೋಗಗಳ ಬಗ್ಗೆ bogus certificate ನೀಡಿ ವರ್ಗಾವಣೆಯಾಗುತ್ತಾರೆ. ಇಂತಹ ಒಂದು ದಂಧೆ ಶಿಕ್ಷಣ ಇಲಾಖೆಯ ಕಮೀಷನರೇಟ್ ನಲ್ಲಿ ನಡೆಯುತ್ತಿದೆ.

**ಶ್ರೀ ಎಸ್. ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ನನಗೆ ಸಂಪೂರ್ಣ ಅರಿವಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಿರ್ಬಂಧ ಹಾಕಲೇಬೇಕು.

**(ಮುಂದು)**

**(725)21.09.2020/2.40/ವೈಎಲ್-ಬಿಎಸ್ಎಸ್**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-** ತಾವು ಇದಕ್ಕೆ ನಿರ್ಬಂಧ ಹಾಕಬೇಕು. ಅಲ್ಲಿನವರೇ ಆದರೂ ಸಹ ಸುಮ್ಮನೆ ನಿಯಂತ್ರಣ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಕೌನ್ಸಿಲಿಂಗ್ ಮಾಡುವಂಥ ಕೆಲಸ ಮಾಡಬೇಕೆಂದು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 90**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ಗೊಂದಲಮಯವಾದ ಉತ್ತರವನ್ನು ನೀಡಿದ್ದಾರೆ. ರಾಜ್ಯದಲ್ಲಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು ಎಷ್ಟು ಎಂದು ಪ್ರಶ್ನೆ ಕೇಳಿದ್ದು, ಒಟ್ಟು 24,721 ಖಾಸಗಿ ಆಸ್ಪತ್ರೆ/ಕ್ಲಿನಿಕ್‌ಗಳಿವೆ ಹಾಗೂ ನಮ್ಮ ಸರ್ಕಾರಿ ಆಸ್ಪತ್ರೆಗಳು 11757 ಇವೆ ಎಂದು ಉತ್ತರ ನೀಡಿದ್ದಾರೆ. ತಮಗೂ ತಿಳಿದಿರುವ ಹಾಗೆ ಕೋವಿಡ್-19 ಸಮಸ್ಯೆಯಿಂದ ಕೂಡಿರುವಂಥ ಸರ್ಕಾರಿ ಆಸ್ಪತ್ರೆಗಳು ಜನರ ಹತ್ತಿರ ಯಾವ ರೀತಿ ನಡೆಯುಕೊಳ್ಳುತ್ತಿದೆ ಎಂದರೆ, ವಿಕ್ಟೋರಿಯಾ, ಬೌರಿಂಗ್ ಆಸ್ಪತ್ರೆಗೆ ಹೋಗಿರುವ ಜನರು ನಾವು ಕೋವಿಡ್-19ನಿಂದಾಗಿ ಸಾಯುವುದಿಲ್ಲ, ಆ ಆಸ್ಪತ್ರೆಯ ವಾತಾವರಣದಿಂದಾಗಿ ಸಾಯುತ್ತೇವೆ ಎನ್ನುವಂಥ ಭಾವನೆ ವ್ಯಕ್ತಪಡಿಸಿದರು. ಇದರ ಅರ್ಥ ಏನೆಂದರೆ, ಉತ್ತಮ ಆರೋಗ್ಯ ಸೇವೆಯನ್ನು ನೀಡುತ್ತಿದ್ದೇವೆಯೇ ಎನ್ನುವುದು ಬಹಳ ಪ್ರಮುಖವಾದದು. ಈ ದಿಸೆಯಲ್ಲಿ ಕೇಂದ್ರ ಸರ್ಕಾರದ **NABH (National Accreditation Board for Hospitals & Healthcare Providers)** ಸಂಸ್ಥೆಯಿಂದ ಮಾನ್ಯತೆ ಪಡೆದಿರುವುದು ಮತ್ತು **NQAS (National Quality Assurance Standards)** ಸಹ ಇರಬಹುದು. ಇವೆರಡೂ ನಮ್ಮ ರಾಜ್ಯಕ್ಕೆ ಉತ್ತಮ ರೀತಿಯಲ್ಲಿ ಆರೋಗ್ಯ ಸೇವೆಯನ್ನು ನೀಡುವುದಕ್ಕೆ ಒಂದು protocol, vision and mission ಇರುತ್ತದೆ. ಆ ಎಲ್ಲಾವನ್ನು ಸರಿಪಡಿಸಿಕೊಂಡು ಹೋಗುವುದಕ್ಕೆ ಇರುವಂಥದಾಗಿದೆ. ಆದರೆ, ತಾವು **NABH** ನಲ್ಲಿ ಜಾರಿಯಲ್ಲಿದೆ ಎಂದು ಉತ್ತರ ನೀಡಿದ್ದಾರೆ. ನಾವು **NQAS** ನಲ್ಲಿ ಅಂಗೀಕಾರ ಮಾಡುವುದಕ್ಕೆ ನಮ್ಮ ಆಸ್ಪತ್ರೆಗಳನ್ನು ನೀಡಲಾಗುತ್ತದೆ ಎಂದು ಹೇಳುತ್ತಾರೆ. ಜಾರಿಯಲ್ಲಿದೆ ಎಂದು ಹೇಳಲಾಗುತ್ತದೆ ಮತ್ತು **NQAS** ನಲ್ಲಿ ಕೆಲವು ಆಸ್ಪತ್ರೆಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಹೇಳುತ್ತಿದ್ದಾರೆ. ಹಾಗಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೇರಳ ಮತ್ತು ತಮಿಳುನಾಡಿನ ವೆಲ್ಲೂರು ಜಿಲ್ಲೆಯಲ್ಲಿನ ಆಸ್ಪತ್ರೆಗಳು ಪ್ರಮಾಣಪತ್ರವನ್ನು ತೆಗೆದುಕೊಂಡು ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣವನ್ನು ಪಡೆದುಕೊಳ್ಳುತ್ತಿದೆ. ಮಾನ್ಯ ಸಚಿವರು ಉತ್ತರ ನೀಡಿರುವಂತೆ ನಮ್ಮ ರಾಜ್ಯದಲ್ಲಿ **NQAS** ಯೋಜನೆ ಅಡಿಯಲ್ಲಿ ಇರುವಂಥ 18 ಆಸ್ಪತ್ರೆಗಳನ್ನು ತೆಗೆದುಕೊಳ್ಳುವುದಕ್ಕೆ ಸಮುದಾಯ ಕೇಂದ್ರಗಳು ಮುಂದಾಗಿವೆ. ಪ್ರಮಾಣಪತ್ರ ತೆಗೆದುಕೊಳ್ಳುವಂಥ ಮಟ್ಟದಲ್ಲಿ ನಮ್ಮ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಜನರಿಗೆ ನೀಡುವಂಥ ಸೇವೆಗಳು ಉತ್ತಮ ರೀತಿಯಲ್ಲಿ ನೀಡುವುದಕ್ಕೆ ತಮ್ಮ ಪ್ರಯತ್ನ ಇದುವರೆಗೂ ಆಗಿಲ್ಲ. ಇದು ಒಂದು ರೀತಿ ವಿಪರ್ಯಾಸವಾಗಿದೆ. ನಮ್ಮ ಪಕ್ಕದ ರಾಜ್ಯಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದು, ಆ ನಿಟ್ಟಿನಲ್ಲಿ ನಮ್ಮ ರಾಜ್ಯ ಏತಕ್ಕೆ ಕೆಲಸ ಮಾಡುತ್ತಿಲ್ಲ. ಕೋವಿಡ್-19 ಸಮಸ್ಯೆ ಬಗ್ಗೆ ಈಗಾಗಲೇ ತಮಗೆಲ್ಲಾ ತಿಳಿದಿದೆ. ನಮ್ಮ ರಾಜ್ಯದಲ್ಲಿ ಸಾವಿರಾರು ಜನರು ಮರಣ ಹೊಂದಿದ್ದು, 5 ಲಕ್ಷಕ್ಕಿಂತ ಹೆಚ್ಚು ಜನರು ಕೋವಿಡ್-19 ರೋಗ ತಗಲಿದೆ. ಅದರಿಂದ ಹೊರಗೆ ಬರುವುದಕ್ಕೆ ನಾವು ನೀಡುವಂಥ ಆರೋಗ್ಯ ಸೇವೆಗಳು ಎಷ್ಟರ ಮಟ್ಟಿಗೆ ಬಹಳ ಮುಖ್ಯವಾಗಿದೆ ಎಂಬುದನ್ನು ನೋಡಬೇಕು. ಇವತ್ತು ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆಯಾಗಿರಬಹುದು, ಬೆಂಗಳೂರನ್ನು ಗ್ಲೋಬಲ್ ಬ್ರ್ಯಾಂಡ್ ಆಗಿ ನಾವು ನೋಡುತ್ತೇವೆ. ಆದರೆ, ಬೆಂಗಳೂರಿನಲ್ಲಿರುವ ದೊಡ್ಡ-ದೊಡ್ಡ ಆಸ್ಪತ್ರೆಗಳು ಯಾವ ಮಟ್ಟದಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳುವುದಕ್ಕೆ ನೋವಾಗುವಂಥ ಪರಿಸ್ಥಿತಿ ಬಂದಿದೆ. ತಮ್ಮ ಮೂಲಕ ವಿನಂತಿಸುವುದೇನೆಂದರೆ, ಈ ಪ್ರಮಾಣ ಪತ್ರ 3 ವರ್ಷ ಮಾತ್ರ ಚಾಲ್ತಿಯಲ್ಲಿ ಇರುತ್ತದೆ. ಯಾವಾಗ certify ಮಾಡಲಾಗಿದೆ ಎಂಬುದರ ವಿವರವನ್ನು ನೀಡಿಲ್ಲ. ಸುಮ್ಮನೆ **NQAS** ಅಡಿಯಲ್ಲಿ ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ ಎಂದು ಉತ್ತರ ನೀಡಿದ್ದಾರೆ. ಯಾವ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರದಿಂದ ಹಣ ಬರುತ್ತದೆಯೋ ಅಥವಾ ಹಣ ಬರುವುದಿಲ್ಲವೋ ಬೇರೆ ವಿಚಾರ. ಆದರೆ, ಜನರಿಗೆ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಆದ್ಯತೆ ಇಲ್ಲವೇ? ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ right to health, right to live; ಇದು ಪ್ರತಿ ಪ್ರಜೆಗೂ ಬಹಳ ಮುಖ್ಯವಾದುದಾಗಿದೆ. ಅವೆರಡಕ್ಕೂ ಸೀಮಿತವಾಗಿ ಇರಲಿಲ್ಲವೆಂದರೆ, ಖಂಡಿತವಾಗಿಯೂ ಯಾವುದೇ ಸರ್ಕಾರವೂ ನಾವು ಮಾಡತಕ್ಕಂಥ ಕೆಲಸದಲ್ಲಿ ಆ ಸರ್ಕಾರ ನಿಷ್ಕ್ರಿಯ ಆಗುವಂಥದಾಗುತ್ತದೆ. ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಉತ್ತರ ನೀಡಬೇಕು.

**ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವಂಥ ಆಸ್ಪತ್ರೆಗಳು, ಉಪ ಕೇಂದ್ರಗಳು ಮತ್ತು ಆರೋಗ್ಯ ವಿಸ್ತರಣಾ ಕೇಂದ್ರಗಳು ಒಳಗೊಂಡಂತೆ ಒಟ್ಟು 11757 ಇವೆ. ಅದರಲ್ಲಿ ರಾಜ್ಯದಲ್ಲಿ 24721 ಖಾಸಗಿ ಆಸ್ಪತ್ರೆ/ಕ್ಲಿನಿಕ್‌ಗಳಿವೆ. ಇದರ ಜೊತೆಗೆ 18 ಜಿಲ್ಲಾ ಆಸ್ಪತ್ರೆಗಳು, 34 ಸಮುದಾಯ ಆರೋಗ್ಯ ಕೇಂದ್ರಗಳು, 76 24X7 ಪ್ರಾಥಮಿಕ ಆರೋಗ್ಯ ಕೇಂದ್ರಗಳೆಲ್ಲವು ಏನು ಕೆಲಸ ನಿರ್ವಹಿಸಿದೆ **NABH** ಮಾನದಂಡಗಳನ್ವಯ ಅದು ಪ್ರಾಮಾಣಿಕತೆ ಆಗಿಲ್ಲ ಎನ್ನುವಂಥ ವಿಚಾರವನ್ನು ತೆಗೆದುಕೊಂಡು ಇದರ ಬಗ್ಗೆ **NQAS** ಮಾನದಂಡಗಳ ಪ್ರಕಾರ ಎಲ್ಲಾವನ್ನೂ ಅಳವಡಿಸಿಕೊಂಡು, ಈಗಾಗಲೇ ಭಾರತ ಸರ್ಕಾರದಿಂದ 10

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಸ್ಪತ್ರೆಗಳಿಗೆ ಅನುಮೋದನೆ ಸಿಕ್ಕಿದೆ. ಇನ್ನೂ 147 ಆಸ್ಪತ್ರೆಗಳು ರಾಜ್ಯ ಸರ್ಕಾರದಿಂದ ಅನುಮೋದನೆಯಾಗಿದೆ. ಜೊತೆಗೆ ಇವತ್ತು ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಯ ಬಗ್ಗೆ ತಕ್ಷಣ ತಜ್ಞರ ಸಮಿತಿಯನ್ನು ರಚನೆ ಮಾಡಿ, ತಜ್ಞರ ಸಮಿತಿಯಿಂದ ಸುಧಾರಣೆಗಾಗಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು, ಅವರ ಅಭಿಪ್ರಾಯದ ಮೇರೆಗೆ **NQAS** ಪ್ರಕಾರ ಮುಂದಿನ ದಿನಗಳಲ್ಲಿ ಯಾವ ನಿಟ್ಟಿನಲ್ಲಿ ಆಸ್ಪತ್ರೆಗಳ ಸುಧಾರಣೆ ಆಗಬೇಕು, ಆ ಸುಧಾರಣಾ ಕೆಲಸವನ್ನು ಮಾಡಿಕೊಡುತ್ತೇನೆ ಎಂಬು ತಮ್ಮ ಮೂಲಕ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ವಿನಂತಿಸುವುದೇನೆಂದರೆ, ನಮ್ಮ ಪಕ್ಕದ ರಾಜ್ಯಗಳು ಕೇಂದ್ರ ಸರ್ಕಾರದಿಂದ ಕೋಟಿಗಟ್ಟಲೆ ಅನುದಾನವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರ upgradation ಮಾಡುವುದಕ್ಕೆ ಪ್ರತಿ ವರ್ಷ ರೂ.10,000/- ಗಳ ವೆಚ್ಚದಲ್ಲಿ ಒಂದು ಹಾಸಿಗೆಗಳನ್ನು ಒದಗಿಸುತ್ತಿದ್ದಾರೆ. ಆದರೆ, ನಮ್ಮ ಸರ್ಕಾರವು ಇದುವರೆಗೂ ಅದರ ಸವಲತ್ತನ್ನು ತೆಗೆದುಕೊಂಡಿರುವುದಿಲ್ಲ. ಇದು ನಮಗೆ ನೋವಿನ ಸಂಗತಿಯಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿರುವಂಥ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ನಮ್ಮ ರಾಜ್ಯದ ಜನರು ಆಸ್ಪತ್ರೆಗಳ ಹಾಸಿಗೆಗೆ ಬೇಡಿಕೆಯನ್ನಿಡಬೇಕು ಅದರ ಬದಲು, ಅವರು ಹೊರಗೆ ಹೋಗುವಂಥ ಮನಸ್ಥಿತಿ ನಿರ್ಮಾಣವಾಗುತ್ತಿರುವುದು ದುರ್ದೈವ ಎಂದು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ 1ರಲ್ಲಿನ ಮೊದಲನೇ ಪಟ್ಟಿಯ 145 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**09. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ವಿಷಯ:- ರಾಜ್ಯದಲ್ಲಿ ಮಕ್ಕಳಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಡ್ರಗ್ಸ್ ಮತ್ತು ಗಾಂಜಾ ಪತ್ತೆಯಾಗಿ 'ಕೊಲ್ಲಬೇಡಿ ಮಕ್ಕಳನ್ನು' ಎಂಬ ಶೀರ್ಷಿಕೆಯಡಿ ಮಾಧ್ಯಮದಲ್ಲಿ ಪ್ರಸಾರವಾದ ವಿಷಯಕ್ಕೆ ಸಂಬಂಧಿಸಿದ ಬಗ್ಗೆ.

****

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ 6 ಮತ್ತು 7ನೇ ವಯಸ್ಸಿನ ಮಕ್ಕಳು ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ಮಕ್ಕಳು ಡ್ರಗ್ಸ್ ಜಾಲದ ಕಪಿಮುಷ್ಟಿಯಲ್ಲಿ ಸಿಕ್ಕಿ ಹಾಕಿಕೊಂಡು ಸಾವಿರಾರು ಮಕ್ಕಳು ಈ ಕೆಟ್ಟ ವಾತಾವರಣದಲ್ಲಿ ಚಟಕ್ಕೆ ಅಂಟಿಕೊಂಡಿದ್ದಾರೆಂಬುದು ಬಹಳಷ್ಟು ನೋವಿನ ಸಂಗತಿ. 2012 ರಲ್ಲಿ ಇದರ ಬಗ್ಗೆ ಸರಕಾರ ಒಂದು ಕಾನೂನನ್ನು ಮಾಡಿ ಇದನ್ನು ಮಾರಾಟ ಮಾಡುತ್ತಿರುವ ಹಾಗೂ ಬೆಳೆಯುತ್ತಿರುವ ಮತ್ತು ಸರಬರಾಜು ಮಾಡುತ್ತಿರುವವರ ಮೇಲೆ ಕಠಿಣ ಕ್ರಮ ಕೈಕೊಳ್ಳಲಾಗುವುದೆಂದು ಅದರಲ್ಲಿ ಇರುವ ಸಾರಾಂಶ. ಆದರೆ ಇದು ಯಾವುದೇ ರೀತಿಯಿಂದ ಪರಿಣಾಮಕಾರಿಯಾಗದೇ ಸಾಕಷ್ಟು ಸಂಖ್ಯೆಯಲ್ಲಿ ಮಕ್ಕಳು ಯಥೇಚ್ಛವಾಗಿ ಶಾಲಾ ಆವರಣದಲ್ಲಿ ಆಟದ ಮೈದಾನದಲ್ಲಿ ಮತ್ತು ಬೇರೆ ಬೇರೆ ಸಾರ್ವಜನಿಕ ಸ್ಥಳಗಳಲ್ಲಿ ಯಾವ ಭಯವಿಲ್ಲದೇ ಮಕ್ಕಳು ಡ್ರಗ್ಸ್ ಮತ್ತು ಗಾಂಜಾ ಸೇವನೆ ಮಾಡುತ್ತಾರೆ. ಇದು ನಿನ್ನೆ ಅಂದರೆ ದಿನಾಂಕ: 20.09.2020 ರಂದು ನ್ಯೂಸ್ ಫಸ್ಟ್ ಟಿವಿ ಚಾನಲ್‌ನಲ್ಲಿ ಸಾಕಷ್ಟು ರೀತಿಯಿಂದ ಚರ್ಚೆಯಾಗಿ ಇದನ್ನು ಸೇವಿಸುತ್ತಿರುವ ಮಕ್ಕಳ ಚಿತ್ರಣವನ್ನು ತೋರಿಸಿದ್ದಾರೆ ಹಾಗೂ ಮೂರು ಪಕ್ಷಗಳ ರಾಜಕೀಯ ಧುರೀಣರನ್ನು ಚರ್ಚೆಯಲ್ಲಿ ಭಾಗವಹಿಸಲು ಆಹ್ವಾನಿಸಿ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದು ಭಯೋತ್ಪಾದನೆಗಿಂತಲೂ ಕೆಟ್ಟ ಪರಿಣಾಮವನ್ನು ರಾಜ್ಯದ ಮಕ್ಕಳ ಮೇಲೆ ಬೀರಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇದು ಎಲ್ಲಿಂದ ಬರುತ್ತದೆ? ಅದರ ಮೂಲ ಎಲ್ಲಿ? ಎಂಬುದನ್ನು ಬೇದಿಸುವಲ್ಲಿ ಇನ್ನೂ ಸರ್ಕಾರ ಅದರಲ್ಲಿಯೂ ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ. ಇದು ಕೇವಲ ಒಂದೇ ಸರಕಾರಕ್ಕೆ ಸೀಮಿತವಾಗಿಲ್ಲ, ಎಲ್ಲ ಸರಕಾರಗಳಲ್ಲಿಯೂ ಇದು ನಡೆದು ಬಂದಿದೆ ಎಂಬುದು ಸಾರ್ವಜನಿಕರ ಅಂಬೋಣ. ಶ್ರೀಮಂತರ ಮಕ್ಕಳು ಡ್ರಗ್ಸ್‌ಗೆ ದಾಸರಾಗಿದ್ದಾರೆ. ಬಡವರ ಮಕ್ಕಳು ರಾಜ್ಯದಲ್ಲಿ ಗಾಂಜಾ ಬೆಳೆಯುವ ಕಸಬನ್ನು ಕೆಲವರು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಅಲ್ಲಿ ಬಡವರ, ರೈತ ಕಾರ್ಮಿಕರ ಮಕ್ಕಳು ಗಾಂಜಾ ಸೇದುವ ಚಟವನ್ನು ಬೆಳೆಸಿಕೊಂಡಿದ್ದಾರೆ. ಈ ಡ್ರಗ್ಸ್ ಜಾಲದ ಕಪಿ ಮುಷ್ಟಿಯಲ್ಲಿ ಮಕ್ಕಳು ಸಿಕ್ಕಿ ಹಾಕಿಕೊಂಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳಿಗೆ ಇಷ್ಟು ಸಲೀಸಾಗಿ ಡ್ರಗ್ಸ್ ಹಾಗೂ ಗಾಂಜಾ ಹೇಗೆ ಸಿಗುತ್ತದೆ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಆಟದ ಮೈದಾನದಲ್ಲಿ ಮಕ್ಕಳು ಆಟ ಆಡಬೇಕಾದವರು ಡ್ರಗ್ಸ್ ಹಾಗೂ ಗಾಂಜಾ ಸೇದಿ ನಶೆಯಲ್ಲಿಯೇ ಶಾಲೆಗೆ ಹೋಗುತ್ತಿರುವ ಅನೇಕ ಉದಾಹರಣೆಗಳು ಮಾಧ್ಯಮದಲ್ಲಿ ವರದಿಯಾಗಿರುತ್ತದೆ. ಇಷ್ಟು ಸಣ್ಣ ಮಕ್ಕಳು ಈ ರೀತಿ ಇದರ ದಾಸರಾದರೆ ಅವರ ಮುಂದಿನ ಭವಿಷ್ಯ ಕರಾಳವಾಗುತ್ತದೆಂಬುದು ನಿಸ್ಸಹಾಯಕರಾದ ತಂದೆ ತಾಯಿಗಳ ನೋವಾಗಿದೆ. ವಿದ್ಯಾರ್ಥಿಗಳಿಗೆ ದಾರಿ ತಪ್ಪಿಸುವ ಈ ವಾತಾವರಣವನ್ನು ಸಂಪೂರ್ಣವಾಗಿ ಕೆಲವು ಜನರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಒಂದು ಉದಾಹರಣ ಹೇಳಬೇಕೆಂದರೆ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ರಸ್ತೆಯಲ್ಲಿ ದೇಸಾಯಿ ಸರ್ಕಲ್‌ನಲ್ಲಿ ಆರು ತಿಂಗಳ ಹಿಂದೆ ಬಾಂಡ್ ಎನ್ನುವಂತಹ ಒಂದು ದ್ರವವನ್ನು ಮಕ್ಕಳಿಗೆ ಸರಬರಾಜು ಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಅಲ್ಲಿಯ ಶಿಕ್ಷಕರು ಹಿಡಿದು ಸಬ್ ಅರ್ಬನ್ ಪೊಲೀಸ್ ಸ್ಟೇಶನ್‌ಗೆ ದೂರು ಸಹಿತ ದಾಖಲೆ ಮಾಡಿದ್ದರು. ಇದು ಒಂದು ತಳ್ಳುವ ಗಾಡಿಯಲ್ಲಿ ಬೇರೆ ಬೇರೆ ಪದಾರ್ಥಗಳನ್ನು ಮಾರುತ್ತಿರುವ ವ್ಯಕ್ತಿಗಳು ಇದನ್ನು ಸಹ ಒಂದು ರೀತಿಯಿಂದ ನಶೆ ಬರುವಂತೆ ಮಾಡಿದ್ದು ನಾನು ಪೊಲೀಸ್ ಅಧಿಕಾರಿಗಳಿಗೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದೆ. ಅದು ಮುಂದೆ ಯಾವ ರೀತಿಯಿಂದ ಪ್ರಯೋಜನವಾಯಿತು ಗೊತ್ತಾಗಲಿಲ್ಲ. ತರಗತಿಯ ಕೋಣೆಯಲ್ಲಿಯೇ ಮತ್ತಿನಲ್ಲಿ ಮಕ್ಕಳು ಸಿಕ್ಕಿ ಹಾಕಿಕೊಂಡಿದ್ದು ಶಿಕ್ಷಕರು ಅವರ ತಂದೆ ತಾಯಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೂ ಉಂಟು. ಸದರಿ ವಿಷಯವು 1995ನೇ ಇಸ್ವಿಯಲ್ಲಿ ಚರ್ಚೆಗೆ ಬಂದಿತ್ತು. ಈಗ ನಾನು ಹೇಳುವುದಿಷ್ಟೆ ಮಕ್ಕಳು ಹಾಗೂ ತಂದೆ ತಾಯಿಗಳು ಅಪಾರವಾದಂತಹ ಚಿಂತೆಯಲ್ಲಿ ರಾಜ್ಯದ ತುಂಬಾ ಇದ್ದಾರೆ. ಸರಕಾರವು ಇದಕ್ಕೆ ಕಠಿಣವಾದಂತಹ ಕ್ರಮ ತೆಗೆದುಕೊಂಡು ಮುಂದೆ ಬದುಕಿ ಬಾಳುವ ಮಕ್ಕಳ ಭವಿಷ್ಯವನ್ನು ಸರಿಪಡಿಸಬೇಕೆಂದು ಕೋರುತ್ತೇನೆ. ಮಕ್ಕಳು ದೇವರ ಸಮಾನರೆಂದು ನಾವು ಹೇಳುತ್ತೇವೆ. ಇಂದಿನ ಮಕ್ಕಳು ನಾಳಿನ ನಾಗರಿಕರಾಗುವ, ದೇಶ ಕಟ್ಟುವ ಜವಾಬ್ದಾರರಾಗುತ್ತಾರೆಂದು ಕನಸು ಕಂಡವರು ಚಿಂತೆಗೀಡಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಸಂಪೂರ್ಣವಾಗಿ ತೆರೆ ಎಳೆಯಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು) . . .**

**(726) 21.09.2020 2.50 ಟಿಸಿಹೆಚ್-ಬಿಎನ್‌ಎಸ್**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ತಮ್ಮ ಕಚೇರಿಯಲ್ಲಿ scrutinise ಮಾಡುವುದನ್ನು ಅಭ್ಯಾಸ

ಮಾಡಬೇಕು. ಏಕೆಂದರೆ, ಈಗಾಗಲೇ ಡ್ರಗ್ಸ್ ಮಾಫಿಯಾ ವಿಚಾರದ ಬಗ್ಗೆ ಗಮನ ಸೆಳೆಯುವ ಸೂಚನೆಯಲ್ಲಿ ಇಟ್ಟುಕೊಳ್ಳಲಾಗಿದೆ. ಶೂನ್ಯ ವೇಳೆಯಲ್ಲಿ ಇದೇ ವಿಷಯವನ್ನು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪ್ರಸ್ತಾಪ ಮಾಡಿದ್ದಾರೆ. ನಾವು ಯಾವುದಕ್ಕೆ ಆದ್ಯತೆ ಕೊಟ್ಟು ಉತ್ತರ ಹೇಳಬೇಕೆಂದು ನಮಗೆ ಗೊತ್ತಾಗಬೇಕು. They have already raised the matter under Calling Attention Notice. ಶ್ರೀ ಲಹರ್ ಸಿಂಗ್ ಸಿರೋಯಾ ರವರು ಮತ್ತು ಶ್ರೀಮತಿ ಭಾರತಿ ಶೆಟ್ಟಿಯವರು ಗಮನ ಸೆಳೆಯುವ ಸೂಚನೆಯಲ್ಲಿ ಇದೇ ವಿಷಯದ ಬಗ್ಗೆ ಪ್ರಸ್ತಾಪಿಸಿರುವುದರಿಂದ, ಅವರು ಕೇಳಿದರೆ ಅದಕ್ಕೂ, ಇದಕ್ಕೂ ಒಟ್ಟಿಗೆ ಉತ್ತರ ಕೊಟ್ಟು ಹೋಗುತ್ತೇವೆ. ಹಾಗಾಗಿ, ಅವರು ಕೂಡ ಮಾತನಾಡಲಿ. ಗಮನ ಸೆಳೆಯುವ ಸೂಚನೆಯಲ್ಲಿರುವ ವಿಷಯವನ್ನು ಮತ್ತು ಶೂನ್ಯವೇಳೆಯಲ್ಲಿ ಎತ್ತಿರಕ್ಕಂಥ ವಿಷಯವನ್ನು ಈ ಎರಡನ್ನೂ ಕ್ಲಬ್ ಮಾಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಕಾನೂನು ಸಚಿವರೇ, ನಾನು ಶೂನ್ಯವೇಳೆಯಲ್ಲಿ ಎತ್ತಿರತಕ್ಕಂಥ ಪ್ರಶ್ನೆಗೆ ಬಹುಶಃ ನೀವು ಈಗ ಉತ್ತರವನ್ನು ಕೊಡುವುದಿಲ್ಲ. ಇದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಾಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರುಗಳು ಈ ಹಿಂದೆ ಪ್ರಶ್ನೆ ಕೇಳಿರುತ್ತಾರೆ, ಅದು ನಮಗೆ ಗೊತ್ತಿರುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ನಾನು ನಿಮ್ಮದು ತಪ್ಪು ಎಂದು ಹೇಳಲಿಲ್ಲ. ಕೌನ್ಸಿಲ್ ಸೆಕ್ರೆಟೇರಿಯಟ್‌ನಲ್ಲಿ ಈಗಾಗಲೇ ಇದೇ ವಿಚಾರದ ಬಗ್ಗೆ Calling Attention Notice ಇದೆ ಎಂಬುದು ಗೊತ್ತಾಗಬೇಕಾಗಿತ್ತು. ನಾವು ನಿಮಗೆ ಉತ್ತರವನ್ನು ನಾಳೆ ಕೊಡುತ್ತೇವೆಂದು ಹೇಳುವುದು, ಈಗ ಅವರಿಗೆ ಉತ್ತರ ಹೇಳುವುದು ಸಮಂಜಸವಾಗುವುದಿಲ್ಲ.

**ಸಭಾಪತಿಯವರು:-** ಅವರು ಕೇಳಿರುವಂತಹ ವಿಚಾರವು Calling Attention Notice ನಲ್ಲಿ ಇಲ್ಲ. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಟಿ.ವಿ. ಮಾಧ್ಯಮದಲ್ಲಿ ನಿರ್ದಿಷ್ಟವಾಗಿ ಬಂದಿರತಕ್ಕಂಥ ವರದಿಗಳ ಆಧಾರದ ಮೇಲೆ ಕೇಳಿರುತ್ತಾರೆ. ಆದ್ದರಿಂದ ತಾವು ಅದನ್ನು ಪರಿಶೀಲಿಸಿ ಉತ್ತರ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಹಳ ಮಹತ್ವವಾದಂತಹ ಪ್ರಶ್ನೆಯನ್ನು ಹಿರಿಯ ಸದಸ್ಯರಾದಂತಹ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೇಳಿದ್ದಾರೆ. ಅವರ ಪ್ರಶ್ನೆಗೆ ಸಮರ್ಪಕವಾದಂತಹ ಉತ್ತರವನ್ನು ಎರಡು ದಿವಸದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂಡಿಸುತ್ತೇವೆ. ಮತ್ತೆ ತಮ್ಮ ಮೂಲಕ ಸದನದ ಗಮನಕ್ಕೆ ತರುವುದೇನೆಂದರೆ, ಡ್ರಗ್ಸ್ ಮತ್ತು ಗಾಂಜಾ ಮಾಫಿಯಾದ ವಿಚಾರದಲ್ಲಿ ಸರ್ಕಾರ ನಿರ್ಧಯವಾದಂತಹ ಕ್ರಮವನ್ನು ಕೈಗೊಳ್ಳುತ್ತದೆ. ಇದರಲ್ಲಿ ಯಾವುದೇ ಮುಲಾಜಿಗೆ ಒಳಗಾಗುವಂತಹ ಪ್ರಶ್ನೆಯೇ ಇಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಡ್ರಗ್ಸ್ ಮತ್ತು ಗಾಂಜ ಮಾಫಿಯಾ ವಿಚಾರದಲ್ಲಿ ಅದನ್ನು ಬೇರು ಸಹಿತ ಕಿತ್ತು ಬಿಸಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಮಾಡಿದ್ದಾರೆ. ನಾವು ಯಾವುದೇ ಒತ್ತಡಕ್ಕೂ ಮಣಿಯುವುದಿಲ್ಲ. ಮಾನ್ಯ ಸಭಾಪತಿಯವರೇ, ಇದನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಇದಕ್ಕೆ ಸಮರ್ಪಕವಾದ ಉತ್ತರವನ್ನು ಎರಡು ದಿವಸಗಳಲ್ಲಿ ಮಂಡಿಸುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯವನ್ನು ಸದನದಲ್ಲಿ ಚರ್ಚೆ ಮಾಡುವುಕ್ಕೆ ಬರುವುದಿಲ್ಲ. ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿರುವುದರಿಂದ, ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ನಾನು ಇಷ್ಟು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರ ಬಹಳ ಗಂಭೀರವಾದುದು ಎನ್ನುವುದು ಅರ್ಥವಾಗಿದೆ. ಮಾನ್ಯ ಸದಸ್ಯರು ಕೇಳುತ್ತಿರುವ ವಿಚಾರಕ್ಕೆ ನಮ್ಮ ಸಹಮತವಿದೆ.

**10. ನೂತನ ಸದಸ್ಯರ ಪರಿಚಯ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ವಿಧಾನ ಪರಿಷತ್ತಿಗೆ ಶ್ರೀ ಸುನಿಲ್ ವಲ್ಯಾಪುರ್‌ರವರು ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಅವರು ಸದನಕ್ಕೆ ತಮ್ಮ ಪರಿಚಯ ಮಾಡಿಕೊಳ್ಳಬೇಕು.

**(ಈ ಹಂತದಲ್ಲಿ ಶ್ರೀ ಸುನೀಲ್ ವಾಲ್ಯಾಪುರ್ ರವರು ಸದನದಲ್ಲಿ ಎದ್ದು ನಿಂತು ನಮಸ್ಕರಿಸಿದರು)**

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಸಭಾಪತಿಯವರು:– ಈಗ ಸದನವನ್ನು ಮಧ್ಯಾಹ್ನ 3 ಗಂಟೆ 45 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(727)/21-9-2020/ಎಲ್‌ಎಂ/ಎಂಡಿ/4-10**

**(ಮಧ್ಯಾಹ್ನ 2 ಗಂಟೆ 54 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ ಸದನವು 4 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**11. ಗಮನ ಸೆಳೆಯುವ ಸೂಚನೆಗಳು**

**ವಿಷಯ:** ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟುಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಕುರಿತು.

------

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಸುಮಾರು ಒಂದು ವರ್ಷದಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲಿ ಕೊರೋನಾ ಎನ್ನುವ ಮಹಾಮಾರಿಯಿಂದ ತತ್ತರಿಸಿ ಹೋಗುತ್ತಿರುವ ಸಂದರ್ಭದಲ್ಲಿ ಕೊರೋನಾಗೆ ಔಷಧಿ ಸಿಗಬೇಕು ಎನ್ನುವ ಆಕಾಂಕ್ಷೆಯೊಂದಿಗೆ ಜನರು ನಿರೀಕ್ಷೆ ಮಾಡುತ್ತಿರುವ ಸಂದರ್ಭದಲ್ಲಿ ಕೊರೋನಾಕ್ಕೆ ಡ್ರಗ್ಸ್ ಬಂದಿಲ್ಲ, ಆದರೆ ನಮ್ಮ ಸಮಾಜದ ಅಸ್ತಿತ್ವವನ್ನೆ ಬುಡಮೇಲು ಮಾಡುವಂತಹ ಡ್ರಗ್ಸ್ ವ್ಯವಹಾರ ಬಯಲಾಗಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಮಾದಕ ವಸ್ತುಗಳ ಮಾರಾಟಕ್ಕೆ ಸೇರಿದಂತೆ ವಿವಿದ ಅಪರಾಧಿಗಳಿಗೆ ಹಾಗೂ ಆರೋಪಿಗಳನ್ನು ಗುರುತಿಸುವಂತಹ ಈ ಸರ್ಕಾರದ ಪ್ರಯತ್ನಕ್ಕೆ ನಾನು ಅಭಿನಂದನೆಳನ್ನು ಸಲ್ಲಿಸುತ್ತೇನೆ. ಇದು ಕೇವಲ ಪ್ರಯತ್ನ ಆಗಿರಬಾರದು. ಇದರ ಫಲಿತಾಂಶ ಒಳ್ಳೆಯದಾಗಿರಬೇಕು ಎನ್ನುವ ಅಪೇಕ್ಷೆ ನಮ್ಮಲ್ಲಿ ಇದೆ. ಏಕೆಂದರೆ 2017-18ನೇ ಸಾಲಿನ ಸರ್ವೇ ಪ್ರಕಾರ ಇಡೀ ನಮ್ಮ ದೇಶದಲ್ಲಿ

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, As per rule 72 the Hon'ble member has to draw the attention of the concerned Minister. Then the Minister will answer for it. After that the member can participate in the discussion. ಮಾನ್ಯ ಸದಸ್ಯರು ಗಮನ ಸೆಳೆಯಲಿ, ಮಂತ್ರಿಗಳು ಉತ್ತರವನ್ನು ನೀಡಿದ ಮೇಲೆ ಅದರ ಮೇಲೆ ವಿಸ್ತೃತವಾದ ಚರ್ಚೆ ಅವರಿಂದ ಪ್ರಾರಂಭವಾಗಲಿ. The only thing is the member has to draw the attention of the concerned Minister.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟುಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಕುರಿತು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಇದು ಬಹಳ ಗಹನವಾದ ವಿಚಾರ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ನಮಗೆ ಉತ್ತರಗಳು ಬಂದಿರುವುದಿಲ್ಲ. All members should be served with the reply. That is the procedure.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಉತ್ತರದ ಪ್ರತಿಯನ್ನು ಎಲ್ಲ ಮಾನ್ಯ ಸದಸ್ಯರಿಗೆ ಕೊಟ್ಟಮೇಲೆ ನಾನು ಉತ್ತರವನ್ನು ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಸಚಿವರು ಉತ್ತರದ ಹೇಳಿಕೆಯನ್ನು ಸದನದಲ್ಲಿ ಮಂಡಿಸಿ, ನಂತರ ಅದರ ಬಗ್ಗೆ ವಿವರಣೆಯನ್ನು ಕೊಡಬೇಕು. ನಮಗೆ ಲಿಖಿತ ಉತ್ತರ ಬಂದಿಲ್ಲ. ಸಭಾನಾಯಕರೆ ತಾವು ಹೇಳಬೇಕಾಗಿತ್ತು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಗಳೆ, ಇದನ್ನು defer ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಚಿವರು ಉತ್ತರ ಹೇಳಲು ತಯಾರಾಗಿ ಬಂದಿದ್ದಾರೆ. ತಾವು ಒಪ್ಪಿದರೆ ಅವರು ಉತ್ತರ ಹೇಳಿಬಿಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ಹೇಳಿಕೆ ಪತ್ರಗಳನ್ನು ಕೊಡುವುದು ಶತಮಾನಗಳಿಂದ ನಡೆದುಕೊಂಡು ಬರುತ್ತಿರುವ ಪದ್ಧತಿ. ಈಗ ಏಕೆ ಅದನ್ನು bulldoze ಮಾಡುತ್ತೀರಿ.

**ಸಭಾಪತಿಯವರು:-** ಸಭಾನಾಯಕರೆ, ಸರ್ಕಾರದಿಂದ ಉತ್ತರವನ್ನು ತರಿಸಿ. ಈಗ ನಿಯಮ 68ನ್ನು ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ನಿಯಮ 68ನ್ನು initiation ಮಾಡಬೇಕಾ ಅಥವಾ ತಾವು ರೂಲಿಂಗ್‌ನ್ನು ಕೊಟ್ಟಿದ್ದೀರಾ. ನಿಯಮ 59ರ ಅಡಿಯಲ್ಲಿ ಮಾತನಾಡಬೇಕಾ..

**ಸಭಾಪತಿಯವರು:–** ನಿಯಮ 68ಕ್ಕೆ convert ಮಾಡುತ್ತೇನೆ ಎಂದು ಹೇಳಿದ್ದೇನೆ. ತಾವು ಪ್ರಾರಂಭ ಮಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ತಾವು ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಂಡಿದ್ದೀರಿ. ನನ್ನದೂ ಒಂದು ಗಮನ ಸೆಳೆಯುವ ಸೂಚನೆ ಇದೆ, ಉತ್ತರ ಬಂದಿದೆ, ಮಂತ್ರಿಗಳು ಇದ್ದಾರೆ. ಅದನ್ನೆ ತೆಗೆದುಕೊಳ್ಳಿ.

**ಸಭಾಪತಿಯವರು:–** ಕಾನೂನು ಮಂತ್ರಿಗಳು ಕೆಳಮನೆಗೆ ಹೋಗಬೇಕಾಗಿತ್ತು ಅದಕ್ಕೆ ಅವರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಲಾಗಿತ್ತು. ಆದರೆ ಅದಕ್ಕೆ ಉತ್ತರವೇ ಬಂದಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ನಿಯಮ 68ಕ್ಕೆ convert ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

**12. ನಿಯಮ 68ರ ಮೇರೆಗೆ ಸಾರ್ವಜನಿಕ ಪ್ರಾಮುಖ್ಯತೆಯ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:–** ರಾಜ್ಯದಲ್ಲಿ ಭಾರಿ ಮಳೆಯಿಂದ ಉಂಟಾದ ಬೆಳೆ ಹಾನಿ ಮತ್ತು ಪ್ರವಾಹದಿಂದ ಮನೆ ಕಳೆದುಕೊಂಡವರಿಗೆ ಸರ್ಕಾರ ನೀಡಿರುವ ಪರಿಹಾರದ ಬಗ್ಗೆ.

– – –

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ನಿಯಮ 59ರ ಅಡಿಯಲ್ಲಿ ನಾನು ಪ್ರಸ್ತಾಪ ಮಾಡಿದಂತಹ ನಿಲುವಳಿ ಸೂಚನೆಗೆ ತಾವು ಒಪ್ಪಿ ಅದನ್ನು ನಿಯಮ 68ರಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಲು ಇಚ್ಛಿಸುತ್ತೇನೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(728)21-09-2020(04-20) ಬಿಎಸ್‌ಡಿ-ಎಂಡಿ**

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ನಿಯಮ 68ರಡಿಯಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಹಾಗೂ ಮಹಾರಾಷ್ಟ್ರದ ರಾಜ್ಯದ ಅಣೆಕಟ್ಟುಗಳಿಂದ ನದಿಗಳಿಗೆ ಭಾರಿ ಪ್ರಮಾಣದ ನೀರು ಹರಿದು ಬಂದ ಪರಿಣಾಮದಿಂದ ಉಂಟಾದ ಪ್ರವಾಹ ಪರಿಸ್ಥಿತಿಯಿಂದ ಅಪಾರ ಪ್ರಮಾಣದ ಹಾನಿಯಾಗಿದೆ. ಬೆಳೆ ಹಾನಿ, ಪ್ರಾಣ ಹಾನಿ ಹಾಗೂ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿದೆ. ಕಳೆದ ವರ್ಷವೂ ಸಹ 118 ವರ್ಷಗಳಲ್ಲಿಯೇ ದಾಖಲೆ ಮಳೆಯಿಂದಾಗಿ ಅತೀವ ನಷ್ಟ ಉಂಟಾಗಿದ್ದ ನಿದರ್ಶನ ಇದ್ದಾಗಲೂ ಈ ಬಾರಿ ಸರ್ಕಾರ ನಿರೀಕ್ಷಿತ, ಸುರಕ್ಷಿತ ಕ್ರಮಗಳನ್ನು ಕೈಗೊಂಡಿಲ್ಲ. ರಾಜ್ಯದಲ್ಲಿ ಬೆಳೆ ನಾಶದಿಂದ ರೈತರು ಕಂಗಾಲಾಗಿದ್ದು, ಅತ್ಯಂತ ದಯನೀಯ ಪರಿಸ್ಥಿತಿ ಎದುರಿಸುತ್ತಿದ್ದು, ಈ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ನಿಯಮ 59ರ ಕೆಳಗೆ ನಾನು ಸೂಚನೆ ಕೊಟ್ಟಿದ್ದು, ತಾವು ಅದನ್ನು ನಿಯಮ 68ಕ್ಕೆ convert ಮಾಡಿದ್ದೀರಿ. ಆ ವಿಚಾರವಾಗಿ ಹೇಳುವುದಾದರೆ ಹೋದಸಾರಿ ಅಂದರೆ 2019ರ ಆಗಸ್ಟ್ ತಿಂಗಳಲ್ಲಿ ಭಾರಿ ಪ್ರಮಾಣದ ಮಳೆಯಾಗಿತ್ತು. ಶತಮಾನದಲ್ಲಿ ಕಂಡರಿಯದ, ಕೇಳರಿಯದ ಅತಿವೃಷ್ಟಿಯಿಂದ ಬಹುತೇಕ 22 ಜಿಲ್ಲೆಗಳ 103 ತಾಲ್ಲೂಕುಗಳು ನೀರಿನಲ್ಲಿ ಮುಳುಗಿದ್ದವು. ಆಗ ನಾವು ಸರ್ಕಾರಕ್ಕೆ ಬಹಳಷ್ಟು ಕೇಳಿಕೊಂಡೆವು. ನದಿ ದಡದಲ್ಲಿರುವ ಎಲ್ಲಾ ಗ್ರಾಮಗಳನ್ನು ಎತ್ತರಕ್ಕೆ ಸ್ಥಳಾಂತರ ಮಾಡಿದರೆ ಅನುಕೂಲವಾಗುತ್ತದೆ. ಏಕೆಂದರೆ ಪ್ರತಿವರ್ಷ ಮಹಾಪೂರ ಬಂದೇ ಬರುತ್ತದೆ. ಎಲ್ಲಾ ನದಿಗಳು ಉಕ್ಕಿ ಹರಿಯುತ್ತವೆ. ಈ ಸಾರಿ ಎಲ್ಲಾ ನದಿಗಳು ಉಕ್ಕಿ ಹರಿಯುತ್ತಿವೆ. ಹೋದಸಾರಿ ಆದ ಘಟನೆ ಮತ್ತೆ ಪುನರಾವರ್ತನೆಯಾಗುತ್ತದೆ. ಒಂದೇ season ನಲ್ಲಿ ಎರಡು ಮೂರು ಸಾರಿ ಮಹಾಪೂರ ಬಂದ ಉದಾಹರಣೆಗಳಿವೆ. ಆ ದೃಷ್ಟಿಯಿಂದ ಇದೇ ಸದನದಲ್ಲಿ ಚೆನ್ನಾಗಿ ಪ್ರತಿಪಾದನೆ ಮಾಡಿದ್ದೆವು. ಮಾನ್ಯ ಕಂದಾಯ ಸಚಿವರು ಇದ್ದಾರೆ. 22 ಜಿಲ್ಲೆಯ 103 ತಾಲ್ಲೂಕುಗಳಲ್ಲಿನ ಗ್ರಾಮಗಳನ್ನು ಶಾಶ್ವತವಾಗಿ ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡಲಿ, ಮಾನ್ಯ ಕಂದಾಯ ಸಚಿವರು ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡಿದರೆ, ....... ಈ ಸಾರಿ ಮಹಾಪೂರ ಬೇಕಾದಷ್ಟು ಬರಲಿ, ಏನೇನು ಸಮಸ್ಯೆ ಆಗುತ್ತಿರಲಿಲ್ಲ, ಪ್ರಾಣ ಹಾನಿ ಆಗುತ್ತಿರಲಿಲ್ಲ, ಇನ್ನಿತರ ಬೆಳೆಗಳು ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ಬರುತ್ತಿರಲಿಲ್ಲ. ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ National Emergency Response Centre, Disaster Management Division, Ministry of

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Home Affairs ರವರು 15th August 2020 at 18:00 hours ಕೊಟ್ಟ ಮಾಹಿತಿಯಂತೆ 863 mm rainfall ಆಗಿದೆ. ಕರ್ನಾಟಕ ರಾಜ್ಯದಲ್ಲಿ ಈ ಸಾರಿ 24 ಜಿಲ್ಲೆಗಳು affect ಆಗಿವೆ. ಬೆಳಗಾವಿ, ಉತ್ತರ ಕನ್ನಡ, ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಶಿವಮೊಗ್ಗ, ಹಾಸನ, ಉಡುಪಿ, ಮಂಡ್ಯ, ಬಳ್ಳಾರಿ, ಮೈಸೂರು, ಹಾವೇರಿ, ಬಾಗಲಕೋಟೆ, ಗದಗ್, ಯಾದಗಿರಿ, ಬೀದರ್, ಕೊಪ್ಪಳ, ಚಿತ್ರದುರ್ಗ, ಕಲ್ಬುರ್ಗಿ, ದಾವಣಗೆರೆ, ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳಲ್ಲಿನ 130 ತಾಲ್ಲೂಕುಗಳು affect ಆಗಿವೆ. ಹೋದಸಾರಿ 22 ಜಿಲ್ಲೆಗಳಲ್ಲಿ 103 ತಾಲ್ಲೂಕುಗಳು ಮಾತ್ರ affect ಆಗಿದ್ದವು. ಈ ಸಾರಿ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ affect ಆಗಿದೆ. ಬಾರಿ ಪ್ರಮಾಣದ ಮಳೆಯಾಗಿದೆ. ಮಹಾಪೂರದಿಂದ 913 ಹಳ್ಳಿಗಳು affect ಆಗಿವೆ. Population 5,719 ಆಗಿದ್ದು, ಹೋದಸಾರಿ 7 ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಚೆನ್ನಾಗಿ shift ಮಾಡಿದರು. ಆಗ ನಾವು ಅಭಿನಂದಿಸಿದ್ದೆವು. ಒಳ್ಳೆಯ ಕೆಲಸ ಮಾಡಿದಾಗ ಒಳ್ಳೆಯದು ಎಂದು ಹೇಳುತ್ತೇವೆ. ವಿರೋಧ ಪಕ್ಷದಲ್ಲಿದ್ದಾಗ ಬರೀ ಟೀಕೆ ಮಾಡುವುದಕ್ಕೆ ಇಲ್ಲ, ಒಳ್ಳೆಯದ್ದಕ್ಕೆ ಶಹಭಾಸ್‌ಗಿರಿ ಕೊಡುತ್ತೇವೆ. ತಪ್ಪು ಮಾಡಿದಾಗ ನ್ಯೂನತೆಗಳನ್ನು ಹೇಳಿ ಸರಿದಾರಿಗೆ ತರುವ ಕೆಲಸ ಮಾಡುತ್ತೇವೆ. ಆಮೇಲೆ human lives ಬಗ್ಗೆ ಹೇಳಬೇಕೆಂದರೆ ಈ ಸಾರಿ 124 ಜನ ಸತ್ತಿದ್ದಾರೆ. ಹೋದಸಾರಿ ದೊಡ್ಡ ಮಳೆ ಆಗಿದ್ದರೂ 60 ಜನ ಜೀವ ಕಳೆದುಕೊಂಡಿದ್ದರು. ಈ ಬಾರಿ 124 ಮಂದಿ ಹಾಗೂ ಇನ್ನೂ 3 ಮಂದಿ missing ಆಗಿದ್ದಾರೆ. ದೇವರ ದಯದಿಂದ ಅವರು ವಾಪಸ್ಸು ಬರಲಿ ಎಂದು ನಾನು ಅಪೇಕ್ಷೆ ಮಾಡುತ್ತೇನೆ. Injured persons 6 ಜನ ಇದ್ದಾರೆ. ಮಾನ್ಯ ಸಭಾಪತಿಯವರೇ, damaged houses ಬಗ್ಗೆ ಹೇಳುವುದಾದರೆ fully damaged houses 2,953 ಪೂರ್ತಿಯಾಗಿ ಹಾನಿಯಾಗಿವೆ. Partially damaged houses 13,456 ಆಗಿವೆ. ಈ ವರ್ಷದ ಮಾಹಿತಿಯನ್ನು ಹೇಳುತ್ತಿದ್ದೇನೆ. ಪ್ರಾಣಿಗಳ affect ಬಗ್ಗೆ ಹೇಳುವುದಾದರೆ 500 ಪ್ರಾಣಿಗಳು ಜೀವ ಕಳೆದುಕೊಂಡಿವೆ. Number of persons evacuated ಈ ಬಾರಿ ಬಹಳ ಕಡಿಮೆ 2,418 ಇದೆ. ಅವರು Relief Centre open ಮಾಡಿದ್ದರು, ಅಲ್ಲಿ 103 Relief Centre open ಮಾಡಿ, food, clothing, medicine, clean water ಬಗ್ಗೆ ವ್ಯವಸ್ಥೆ ಮಾಡಿದ್ದಾರೆ. ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ infrastructure damage ಬಹಳಷ್ಟು ಆಗಿದೆ. Roads ಎಷ್ಟಾಗಿದೆ ಎಂದರೆ ಸುಮಾರು 20,439 km ರಸ್ತೆ ಹಾಳಾಗಿದೆ. ಅದರಲ್ಲಿ 3,380 km

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

State Highway and Major District Road ಆಗಿದ್ದು, 15,553 Village Roads ಆಗಿದ್ದು, 1,506 Urban Roads ಹಾಳಾಗಿದೆ. ಅದರ ಜೊತೆಗೆ Bridges and Culverts 2,713 ಹಾನಿಯಾಗಿವೆ. 711 Minor Irrigation and Zilla Panchayat tanks ಹಾಳಾಗಿವೆ. ಮಾನ್ಯ ಸಭಾಪತಿಯವರೇ, ಮಹಾಪೂರ ಬಂದಾಗ Electrical Poles uproot ಆಗಿ ಹೋಗುವುದು ಸರ್ವೆಸಾಮಾನ್ಯವಾಗಿದೆ. 14,986 Electrical Poles ಕಿತ್ತುಕೊಂಡು ಹಾಗೂ ಮುರಿದು ಹೋಗಿವೆ. Electric Supply Lines 2,931 km ಹಾಳಾಗಿವೆ. Transformer ಮುಳುಗಿ ಸುಟ್ಟು ಹೋಗಿದ್ದು, Transformer ಕಿತ್ತುಕೊಂಡು ಹೋಗಿದ್ದು 1,799 ಆಗಿವೆ. Number of school rooms ನೋಡಿ, ಮಕ್ಕಳು ಓದುವಂತಹ 1,830 school rooms damage ಆಗಿವೆ. 3,647 ಅಂಗನವಾಗಿ ಮತ್ತು Community Buildings ಹಾಳಾಗಿವೆ. 102 Public Health Centres ಹಾನಿಯಾಗಿವೆ. Water Supply Structure ಅಂದರೆ ಕುಡಿಯುವ ನೀರು ಕೊಡುವಂತಹ structure ಹಾನಾಗಿದೆ, 219 Water Supply Structure ಕೂಡ ಹಾನಿಯಾಗಿವೆ. ಮಾನ್ಯ ಸಭಾಪತಿಯವರೇ, ಇವತ್ತು ಬೆಳಗ್ಗೆ ದೂರದರ್ಶನದಲ್ಲಿ ನೋಡಿದಂತೆ ತಾವು ಪ್ರತಿನಿಧಿಸುವ ಜಿಲ್ಲೆಯಾದ ಉಡುಪಿ ನೀರಿನಲ್ಲಿ ಮುಳುಗಿ ಹೋಗಿದೆ. 38 ವರ್ಷಗಳ ದಾಖಲೆ ಮಳೆ ಉಡುಪಿಯಲ್ಲಿ ಆಗಿದೆ, 315 mm ನಷ್ಟು ಮಳೆಯಾಗಿ ಉಡುಪಿ ನೀರಿನಲ್ಲಿ ಮುಳುಗಿದೆ. ಉಡುಪಿ ನಗರ ಸಂಪೂರ್ಣ ಜಲಾವೃತ, ನೂರಾರು ಅಂಗಡಿಗಳಿಗೆ ನೀರು, ಲಕ್ಷಾಂತರ ರೂಪಾಯಿಗಳ ನಷ್ಟ, ಹೆದ್ದಾರಿ ಬಂದ್, ಕೃಷ್ಣ ಮಠ ಸೇರಿ ಹಲವು ದೇಗುಲಗಳಿಗೆ ನೀರು ನುಗ್ಗಿದೆ. ರಕ್ಷಣೆಗೆ NDRF (*National Disaster Response Force)* ಬಂದಿವೆ ಎಂದು ವರದಿಯಾಗಿದೆ. ಉಡುಪಿ ಸೇರಿದಂತೆ ದಕ್ಷಿಣ ಕನ್ನಡ, ಕೊಡಗಿನಲ್ಲಿ ಬಾರಿ ಪ್ರಮಾಣದ ಮಳೆಯಾಗಿದೆ. ನಾನು ಈಗ ಅಂಕಿ ಸಂಖ್ಯೆಗಳನ್ನು ಸದನದಲ್ಲಿ ನೀಡಿದ್ದೇನೆ, ಇದನ್ನು ನಾನು ಹೇಳುವಂತಹದ್ದಲ್ಲ. ಅದು ಎಲ್ಲಿಯವರೆಗೆ ಎಂದರೆ *15th September 2020* ಆದ ಹಾನಿ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ತದನಂತರ ನಮ್ಮಲ್ಲಿ ಪ್ರತಿ ದಿವಸ ಮಳೆ ಸುರಿಯುತ್ತದೆ. ಉತ್ತರಿ ಮಳೆ ಎಂದು ನಮ್ಮಲ್ಲಿ ಹೇಳುತ್ತಾರೆ. ಹೋದಸಾರಿ ನಮ್ಮ ಉತ್ತರ ಕರ್ನಾಟಕ, ಬಾಂಬೆ ಕರ್ನಾಟಕ, ಕಲ್ಯಾಣ ಕರ್ನಾಟಕದ ಎಂದೇಳುವ 13 ಜಿಲ್ಲೆಗಳಲ್ಲಿ 12 ಜಿಲ್ಲೆಗಳು ಪೂರಾ ನೀರಿನಲ್ಲಿ ಮುಳುಗಿ ಹೋಗಿದ್ದವು. ಈ ಸಾರಿ ಕೂಡ *Coastal Line* ನಲ್ಲಿ ದೊಡ್ಡ ಪ್ರಮಾಣದ ಮಳೆಯಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(729)/21.09.2020/4.30/ಹೆಚ್‌ವಿಃಎಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ರಾಯಚೂರು, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಭಾರಿ ಪ್ರಮಾಣದಲ್ಲಿ ಮಳೆಯಾಗಿದೆ. ಭಾರಿ ಮಳೆಯಿಂದಾಗಿರುವ ಅನಾಹುತಗಳನ್ನು ನಾನು ಸದನದ ಮುಂದೆ ಮಂಡಿಸುತ್ತಿದ್ದೇನೆ. ಹವಾಮಾನ ವರದಿಯ ಪ್ರಕಾರ ಇನ್ನೂ 2-3 ದಿನಗಳ ಕಾಲ ಮಳೆಯಾಗುವ ಸಾಧ್ಯತೆಗಳಿವೆ. ಇದರಿಂದಾಗಿ ಇನ್ನೂ 2-3 ಪಟ್ಟು ಹೆಚ್ಚಿನ ಅನಾಹುತಗಳಾಗುವ ಸಾಧ್ಯತೆಗಳಿವೆ. ಕೊಡಗಿನಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ಬೀದರ್ ಜಿಲ್ಲೆಯಲ್ಲಿ ನಿನ್ನೆ ರಾತ್ರಿ ಸುರಿದಂತಹ ಭಾರಿ ಮಳೆಯಿಂದಾಗಿ ಹಳೆ ಬೀದರ್ ಸಿಟಿ ಸಂಪೂರ್ಣವಾಗಿ ಜಲಾವೃತವಾಗಿದೆ. ಈ ಸಂದರ್ಭದಲ್ಲಿ ತಕ್ಷಣ ಬೆಳೆ ಹಾನಿ ಎಷ್ಟಾಗಿದೆ, ಮನೆಗಳಿಗೆ ಎಷ್ಟು ಹಾನಿಯಾಗಿದೆ ಎನ್ನುವುದರ ಬಗ್ಗೆ ಸರ್ವೆ ಮಾಡುವುದಕ್ಕೆ ಸರ್ಕಾರಕ್ಕೂ ಕಷ್ಟವಾಗುತ್ತದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಇದು ರಾಜ್ಯದ ಅತ್ಯಂತ ಜ್ವಲಂತ ಸಮಸ್ಯೆಯಾಗಿದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ನಮ್ಮ ಜಿಲ್ಲೆಗೆ ಭೇಟಿ ನೀಡಿದ್ದರು. ಮಾನ್ಯ ಮುಖ್ಯಮಂತ್ರಿಗಳು ವೈಮಾನಿಕ ಸರ್ವೆ ನಂತರ ಆಲಮಟ್ಟಿ, ಗದಗ್, ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಎಲ್ಲ ಜನಪ್ರತಿನಿಧಿಗಳ ಜೊತೆಗೆ ಸಭೆ ನಡೆಸಿದ್ದರು. ಆಗ ಅವರು ಕೊಟ್ಟಂತಹ ಅಂಕಿಸಂಖ್ಯೆಗಳನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಬೆಳಗಾವಿ ಜಿಲ್ಲೆಯಲ್ಲಿ ಆಗಸ್ಟ್ 4ನೇ ತಾರೀಖಿನಿಂದ 18ರವರೆಗೆ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣ 81 ಎಂ.ಎಂ. ಆಗಬೇಕಾಗಿತ್ತು ಆದರೆ, ಈಗ ಬಿದ್ದಿರುವ ಮಳೆಯ ಪ್ರಮಾಣ 234 ಎಂ.ಎಂ. ಆಗಿದೆ. ಶೇಕಡಾ 188ರಷ್ಟು ಹೆಚ್ಚುವರಿ ಮಳೆಯಾಗಿದೆ. ಜೂನ್ 1 ರಿಂದ 23 ಆಗಸ್ಟ್‌ರವರೆಗೆ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣ 432 ಎಂ.ಎಂ. ಆಗಬೇಕಾಗಿತ್ತು ಆದರೆ, ಈಗ ಬಿದ್ದಿರುವ ಮಳೆಯ ಪ್ರಮಾಣ 587 ಎಂ.ಎಂ. ಆಗಿದೆ. ಶೇಕಡಾ 30ರಷ್ಟು ಹೆಚ್ಚುವರಿ ಮಳೆಯಾಗಿದೆ. ಕಳೆದ 50 ವರ್ಷಗಳ ಸರಾರಿಯ ಮಳೆಯ ಪ್ರಮಾಣವನ್ನು ತೆಗೆದುಕೊಂಡರೆ ಶೇಕಡಾವಾರು ಇಷ್ಟು ಹೆಚ್ಚುವರಿ ಮಳೆಯಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಆಗಸ್ಟ್ 4ನೇ ತಾರೀಖಿನಿಂದ 18ರವರೆಗೆ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣ 35 ಎಂ.ಎಂ. ಆಗಬೇಕಾಗಿತ್ತು. ಈಗ ಬಿದ್ದಿರುವ ಮಳೆಯ ಪ್ರಮಾಣ 60 ಎಂ.ಎಂ. ಆಗಿದೆ. ಶೇಕಡಾ 71ರಷ್ಟು ಹೆಚ್ಚುವರಿ ಮಳೆಯಾಗಿದೆ. ಜೂನ್ 1 ರಿಂದ 23 ಆಗಸ್ಟ್‌ರವರೆಗೆ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣ 204 ಎಂ.ಎಂ. ಆಗಬೇಕಾಗಿತ್ತು. ಈಗ ಬಿದ್ದಿರುವ ಮಳೆಯ ಪ್ರಮಾಣ 316 ಎಂ.ಎಂ. ಆಗಿದೆ. ಶೇಕಡಾ 55ರಷ್ಟು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚುವರಿ ಮಳೆಯಾಗಿದೆ. ವಿಜಯಪುರ ಜಿಲ್ಲೆಯನ್ನು ಬರಗಾಲ ಜಿಲ್ಲೆಯೆಂದು ಕರೆಯಲಾಗುತ್ತದೆ. ಅಲ್ಲಿ ಆಗಸ್ಟ್ 4ನೇ ತಾರೀಖಿನಿಂದ 18ರವರೆಗೆ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣ 37 ಎಂ.ಎಂ. ಆಗಬೇಕಾಗಿತ್ತು. ಈಗ ಬಿದ್ದಿರುವ ಮಳೆಯ ಪ್ರಮಾಣ 64 ಎಂ.ಎಂ. ಆಗಿದೆ. ಶೇಕಡಾ 73ರಷ್ಟು ಹೆಚ್ಚುವರಿ ಮಳೆಯಾಗಿದೆ. ಜೂನ್ 1 ರಿಂದ 23 ಆಗಸ್ಟ್‌ರವರೆಗೆ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣ 221 ಎಂ.ಎಂ. ಆಗಬೇಕಾಗಿತ್ತು. ಈಗ ಬಿದ್ದಿರುವ ಮಳೆಯ ಪ್ರಮಾಣ 354 ಎಂ.ಎಂ. ಆಗಿದೆ. ಶೇಕಡಾ 61ರಷ್ಟು ಹೆಚ್ಚುವರಿ ಮಳೆಯಾಗಿದೆ. ಅದೇ ರೀತಿ ಗದಗ್ ಜಿಲ್ಲೆಯಲ್ಲಿ ವಾಡಿಕೆಯಾಗಿ ಬೀಳುತ್ತಿದ್ದ ಮಳೆಯ ಪ್ರಮಾಣಕ್ಕಿಂತ ಶೇಕಡಾ 35ರಷ್ಟು ಹೆಚ್ಚುವರಿ ಮಳೆಯಾಗಿದೆ. ಧಾರವಾಡ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇಕಡಾ 33ರಷ್ಟು ಹೆಚ್ಚುವರಿ ಮಳೆಯಾಗಿದೆ. ನಾನು ಹೆಚ್ಚು ವಿವರವಾಗಿ ಹೋಗುವುದಿಲ್ಲ. ನಾನು ಈಗ ಹೇಳಿದಂತಹ ಅಂಕಿಅಂಶಗಳು ಆಗಸ್ಟ್ ತಿಂಗಳಿನ ಅಂಕಿಅಂಶಗಳಾಗಿವೆ. ಈಗ ಅದಕ್ಕಿಂತ ಎರಡು ಮೂರು ಪಟ್ಟು ಹೆಚ್ಚಿನ ಮಳೆಯಾಗಿದೆ. 15ನೇ ಸೆಪ್ಟೆಂಬರ್‌ವರೆಗೆ ಆಗಿರುವ ಭಾರಿ ಮಳೆಯಿಂದಾಗಿ ಎಷ್ಟು ಬೆಳೆ ಹಾನಿಯಾಗಿದೆ ಎಷ್ಟು ಮನೆಗಳಿಗೆ ಹಾನಿಯಾಗಿದೆ ಮತ್ತು ಎಷ್ಟು ಪ್ರಮಾಣದಲ್ಲಿ ಪ್ರಾಣ ಹಾನಿಯಾಗಿದೆ ಎನ್ನುವ ಅಂಕಿಸಂಖ್ಯೆಯನ್ನು ಪಡೆದುಕೊಳ್ಳಲು ಮಾನ್ಯ ಕಂದಾಯ ಸಚಿವರು ಅಧಿಕಾರಿಗಳನ್ನು ಕಾರ್ಯನಿರತರನ್ನಾಗಿ ಮಾಡಬೇಕಾಗಿದೆ. ಏಕೆಂದರೆ, ಕಳೆದ ಬಾರಿಯ ಮಳೆ ಹಾನಿ ಪರಿಹಾರ ನೀಡುವುದರಲ್ಲಿ ಈ ಸರ್ಕಾರಕ್ಕೆ ಹುರುಪು ಹುಮ್ಮಸ್ಸು ಇತ್ತು. ಆಗ ಈ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದಿತ್ತು. ಮಾನ್ಯ ಯಡಿಯೂರಪ್ಪನವರು ಒಬ್ಬರೇ ಎಲ್ಲ ಖಾತೆಗಳ ಜವಾಬ್ದಾರಿಯನ್ನು ಹೊತ್ತಿದ್ದರು, ಯಾರೂ ಮಂತ್ರಿಗಳು ಇರಲಿಲ್ಲ. ಅವರು ತಮ್ಮ ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡಿದ್ದರು. ಆಗ ಈ ಪ್ರವಾಹ ಪರಿಸ್ಥಿತಿಯನ್ನು ಯುದ್ಧೋಪಾದಿಯಲ್ಲಿ ಎದುರಿಸಲಾಗಿತ್ತು. ಆದರೆ, ಈಗ ಯಾಕೆ ಸಾಧ್ಯವಾಗುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಹಿಂದಿನ ಬಾರಿಗಿಂತ ಈ ಬಾರಿ ಅತಿವೃಷ್ಟಿ ಹೆಚ್ಚಾಗಿದೆ. ಭಾರಿ ಪ್ರಮಾಣದಲ್ಲಿ ಮಳೆಯಾಗಿದೆ. ಇನ್ನೂ 'ಧೋ' ಎಂದು ಮಳೆ ಸುರಿಯುತ್ತಿದೆ. ಎಲ್ಲಿ ನೋಡಿದರೆ ಅಲ್ಲಿ ನೀರೇ ನೀರು, ಇಡೀ ಕರ್ನಾಟಕ ರಾಜ್ಯ ಜಲಮಯವಾಗಿದೆ. ಸೆಪ್ಟೆಂಬರ್ 15ರವರೆಗೆ ಮಳೆಯಿಂದ 9440 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎನ್ನುವ ವರದಿಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ. ಕೇಂದ್ರ ಸರ್ಕಾರದ ತಂಡ ಬಂದು ಪರಿವೀಕ್ಷಣೆ ಮಾಡಿದೆ. ಎಸ್.ಡಿ.ಆರ್.ಎಫ್ ನಾರ್ಮ್ಸ್ ಪ್ರಕಾರ 752 ಕೋಟಿ 69 ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಡಲಾಗಿತ್ತು. ಆದರೆ, ಕೇಂದ್ರ ಸರ್ಕಾರದಿಂದ ಇನ್ನೂ ಒಂದು ರೂಪಾಯಿ ಹಣ ಬಂದಿಲ್ಲ. ನಮ್ಮ ಭಾಗದಲ್ಲಿ ಪ್ರತಿದಿನ ಮಳೆಯಾಗುತ್ತಿದೆ. ಎಲ್ಲ ಜಿಲ್ಲೆಗಳಲ್ಲಿ ಭಾರಿ ಪ್ರಮಾಣದಲ್ಲಿ ಮಳೆಯಾಗಿದೆ. ಹಿಂದೆ 9440 ಕೋಟಿ ರೂಪಾಯಿಗಳ ನಷ್ಟವುಂಟಾಗಿದ್ದರೆ ಈಗ ಅದಕ್ಕಿಂತ ಹೆಚ್ಚು ಹಾನಿಯಾಗಿರಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಆರ್.ಅಶೋಕ್(ಕಂದಾಯ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಕಳೆದ ಬಾರಿಗಿಂತ ಕಡಿಮೆ ಮಳೆ ಹಾನಿವುಂಟಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕಡಿಮೆ ಹಾನಿಯಾಗಿದ್ದರೆ ಸಂತೋಷ. ಹೆಚ್ಚು ಹಾನಿಯಾಗಬೇಕೆನ್ನುವ ನಿರೀಕ್ಷೆಯನ್ನು ನಾವು ಮಾಡುವುದಿಲ್ಲ. ಜನರು ಸುರಕ್ಷಿತವಾಗಿರಬೇಕು. ಸರ್ಕಾರ ಅವರಿಗೆ ಸುರಕ್ಷತೆಯನ್ನು ಒದಗಿಸಬೇಕು. ಹಿಂದಿನ ಬಾರಿ ಮಹಾಪೂರದಿಂದ ಹಾನಿಯುಂಟಾಗಿತ್ತು. ಆದರೆ, ಈ ಬಾರಿ ಭಾರಿ ಮಳೆಯಿಂದ ಹಾನಿಯುಂಟಾಗಿದೆ. ನಾನು ಒಂದೆರಡು ಜಿಲ್ಲೆಗಳಿಗೆ ಭೇಟಿ ನೀಡಿದ್ದೆ, ಗದಗ್ ಜಿಲ್ಲೆಯ ಕೊಣ್ಣೂರ್ ಪಟ್ಟಣದಲ್ಲಿ ಜಾಗರಗಲ್ಲಿ, ವಾಸಿಯೋಗಲ್ಲಿ ಮತ್ತು ಹೆಸಿಯಗಲ್ಲಿ ಈ ಮೂರು ಓಣಿಗಳಿವೆ. ಈ ಮೂರು ಓಣಿಗಳು ಮಲಪ್ರಭಾ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಮಳೆಯಾದರೂ ಮುಳುಗಿ ಹೋಗುತ್ತವೆ. ಇವು ಕಳೆದ ಬಾರಿಯೂ ಮುಳುಗಿ ಹೋಗಿದ್ದವು. ಏತಕ್ಕೋಸ್ಕರ ಸರ್ಕಾರ ಇವುಗಳನ್ನು ಶಾಶ್ವತವಾಗಿ ಶಿಫ್ಟ್ ಮಾಡುವುದಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. ಮುದುವೊಳಲಲ್ಲಿ, ಕುಂಬಾರಗಲ್ಲಿ ಮತ್ತು ಕಾಂಬ್ಲೆಗಲ್ಲಿಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಡೆ ಹೊಂದಿವೆ. ಅಲ್ಲಿರುವ ಮನೆಗಳು ಸುಮಾರು 5 ರಿಂದ 10 ಫೂಟ್‌ಗಳಷ್ಟು ಮುಳುಗಿವೆ. ಅಲ್ಲಿನ ಜನರು ನಮ್ಮನ್ನು ಎಲ್ಲಿಗಾದರೂ ಸ್ಥಳಾಂತರಿಸಿ ಎಂದು ಅಂಗಲಾಚುವುದನ್ನು ನಾವು ನೋಡಿದ್ದೇವೆ. ಮುದವೊಳಲಲ್ಲಿ ಬುಲುಜಿ, ಒಣಗೋಡಿ, ಮಲ್ಲಾಪುರ ಮತ್ತು ನಾಗರಹಾಳ್ ಈ ರೀತಿ ಸುಮಾರು 22 ಹಳ್ಳಿಗಳು ಪ್ರತಿವರ್ಷ ಹಾನಿಗೊಳಗಾಗುತ್ತಿವೆ. ಇವು ಉಪ ಮುಖ್ಯಮಂತ್ರಿಗಳಾಗಿರುವ ಶ್ರೀ ಗೋವಿಂದ ಕಾರಜೋಳರವರ ಮತಕ್ಷೇತ್ರಗಳಾಗಿವೆ. ಈ ಹಳ್ಳಿಗಳನ್ನು ಸ್ಥಳಾಂತರಗೊಳಿಸಬೇಕಾಗಿದೆ. ಕಳೆದ ಬಾರಿ ಪರಿಹಾರವನ್ನು ನೀಡುವುದರಲ್ಲಿ ರಾಜ್ಯ ಸರ್ಕಾರ ಯುದ್ಧೋಪಾದಿಯಲ್ಲಿ ಕೆಲಸ ಮಾಡಿತ್ತು. ಕೇಂದ್ರ ಸರ್ಕಾರದ ನಾರ್ಮ್ಸ್‌ಗಿಂತ ಹತ್ತು ಸಾವಿರ ರೂಪಾಯಿಗಳನ್ನು ಹೆಚ್ಚುವರಿಯಾಗಿ ಪ್ರತಿ ಎಕರೆ ಬೆಳೆ ಹಾನಿಗೆ ನೀಡಲಾಗಿತ್ತು. ಆ ಮೊತ್ತ ಸಮಾಧಾನಕರ ಮೊತ್ತವೆಂದು ನಾನು ಹೇಳುವುದಿಲ್ಲ. ಎಸ್.ಡಿ.ಆರ್.ಎಫ್ ಮತ್ತು ಎನ್.ಡಿ.ಆರ್.ಎಫ್. ನಾರ್ಮ್ಸ್‌ಗಿಂತ ಹೆಚ್ಚು ಕೊಟ್ಟಿರಬಹುದು ಆದರೂ ಸಹ ರೈತರು ಕಣ್ಣೀರಿನಲ್ಲಿ ಕೈತೊಳೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಾರಿ ಬಿದ್ದಂತಹ ಮಳೆಯಲ್ಲಿ ಕಬ್ಬು, ಜೋಳ ಮತ್ತು ಈರುಳ್ಳಿ ಮುಂತಾದ ಬೆಳೆಗಳು ಮಳೆಯಲ್ಲಿ ಮುಳುಗಡೆಯಾಗಿವೆ. ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಸುಮಾರು 13 ಸಕ್ಕರೆ ಕಾರ್ಖಾನೆಗಳಿವೆ. ಈ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಇಲ್ಲದಂತಾಗಿದೆ. ಕಬ್ಬಿನ ಬೆಳೆ 5 ರಿಂದ 10 ಫೂಟ್‌ಗಳಷ್ಟು ಮುಳುಗಿ ಹೋಗಿದೆ. ಇದರಲ್ಲಿ ಬೋಟ್ ಮೂಲಕ ನಾನೇ ಸ್ವತಃ ಓಡಾಡಿದ್ದೇನೆ. ಮಳೆಯಿಂದಾಗಿ ಬೆಳೆ ನಾಶವಾಯಿತು. ನಂತರ ಕೋವಿಡ್ ಬಂತು. ಕೋವಿಡ್ ಬಂದು ಲಾಕ್‌ಡೌನ್ ಆದ ನಂತರ ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ ಮತ್ತು ಕೃಷಿ ಉತ್ಪನ್ನಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಟ್ಟಣಗಳಿಗೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ದ್ರಾಕ್ಷಿ, ದಾಳಿಂಬೆ, ನಿಂಬೆ ಮತ್ತು ತರಕಾರಿ ಬೆಳೆದಂತಹ ಬೆಳೆಗಾರರು ಕಣ್ಣೀರಿನಲ್ಲಿ ಕೈತೊಳೆಯುವಂತಹ ಪರಿಸ್ಥಿತಿ ನಿರ್ಮಾಣವಾಯಿತು. 2019ರ ಆಗಸ್ಟ್ ತಿಂಗಳಿನಲ್ಲಿ ಆದಂತಹ ಮಹಾಪೂರದಿಂದಾಗಿ ಕೃಷಿ ಭೂಮಿ ಸಂಪೂರ್ಣ ಜಲಮಯವಾಗಿತ್ತು. ಆನಂತರ ಕೃಷಿ ಬೆಳೆಗಾರರು ಅಲ್ಪಸ್ವಲ್ಪ ಬೆಳೆಗಳನ್ನು ಬೆಳೆದಿದ್ದರು. ಆ ಬೆಳೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ 2020ನೇ ಇಸವಿಯಲ್ಲಿ ಸಂಪೂರ್ಣವಾಗಿ ಬೆಳೆಗಳು ಮಳೆಯಲ್ಲಿ ಮುಳುಗಿ ಹೋಗಿವೆ. ಇಂತಹ ಸ್ಥಿತಿಯಲ್ಲಿ ರೈತರ ಗತಿಯೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮೂರು ಬಾರಿ ರೈತರು ಆಘಾತದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. 2019ರಲ್ಲಿ ಮಹಾಪೂರದಿಂದಾಗಿ ರೈತರು ಬೆಳೆದಂತಹ ಬೆಳೆಗಳು ಮುಳುಗಿ ಹೋದವು. ನಂತರ ಕೋವಿಡ್ ಬರುವುದಕ್ಕೂ ಮುಂಚೆ ಬೆಳೆಗಾಗಿ ಗೊಬ್ಬರ, ಗಾಡಿ ಮತ್ತು ಕ್ರಿಮಿನಾಶಕಕ್ಕಾಗಿ ಸಾಕಷ್ಟು ಖರ್ಚು ಮಾಡಿ, ಹಗಲು ರಾತ್ರಿ ನಿದ್ದೆ ಇಲ್ಲದೆ, ಬಿಸಿಲು ಗಾಳಿ, ಚಳಿಯನ್ನು ಪರಿಗಣಿಸದೇ ರೈತ ಕುಟುಂಬದಲ್ಲಿರುವ ಗಂಡ-ಹೆಂಡತಿ ಮಕ್ಕಳು ಮಣ್ಣಲ್ಲಿ ಮಣ್ಣಾಗಿ ದುಡಿದು ಬೆಳೆದಂತಹ ಬೆಳೆ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಯಿತು.

**(730) 21.9.2020 4.40 ಪಿಕೆ:ಎಕೆ**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಕೋವಿಡ್-19ರ ಕಾರಣ ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲಾರದ ಸ್ಥಿತಿ ಬಂತು. 2020 ರಲ್ಲಿ ಮತ್ತೊಮ್ಮೆ ಮಹಾಪೂರ ಬಂತು. ರೈತರ ಸ್ಥಿತಿಯಂತೂ ಹೇಳತೀರದಾಗಿದೆ. ಪ್ರವಾಹ ಪೀಡಿತ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಸಾಲ ಮನ್ನಾ ಮಾಡುತ್ತೇವೆ ಎಂದು ಸರ್ಕಾರ ಹೇಳಿತ್ತು. ಸಾಲ ಮನ್ನಾ ಆಗುತ್ತದೆ ಎಂದು ನಂಬಿಕೊಂಡಿದ್ದರೆ ರೈತರ ಟ್ರ್ಯಾಕ್ಟರ್ ಜಪ್ತಿ ಮಾಡಲಾಗುತ್ತಿದೆ. ಇಂಥವರ ವಿರುದ್ಧ ಏಕೆ ಕ್ರಮ ಕೈಗೊಳ್ಳುವುದಿಲ್ಲ? ನಾವು ರೈತರ ಪರ ಇರುವವರು ಎಂದು ಸರ್ಕಾರ ಹೇಳುತ್ತದೆ. ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳು ವಿಧಾನಸೌಧದ ಮೆಟ್ಟಿಲಿನ ಮೇಲೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಹಸಿರು ಶಾಲನ್ನು ಹಾಕಿಕೊಂಡಿದ್ದರು. ಮೊನ್ನೆ ಬಜೆಟ್ ಮಂಡಿಸುವಾಗಲೂ ಹಸಿರು ಶಾಲನ್ನು ಹಾಕಿಕೊಂಡಿದ್ದರು. ಪ್ರತ್ಯೇಕವಾಗಿ ಕೃಷಿ ಬಜೆಟ್ ಕೂಡ ಮಂಡಿಸಿದ್ದರು. ನಮಗೆ ಬಹಳ ಖುಷಿಯಾಯಿತು. ನಾನೂ ಒಬ್ಬ ಕೃಷಿಕ, ನಮ್ಮ ತಂದೆ, ಅಜ್ಜ, ಮುತ್ತಜ್ಜ ಹೀಗೆ ತಲತಲಾಂತರಗಳಿಂದ ಕೃಷಿಕರಾಗಿದ್ದೇವೆ. ನಾನು ಕೃಷಿಕ ಎಂದು ಹೇಳಿಕೊಳ್ಳುವುದಕ್ಕೆ ಅಭಿಮಾನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಟ್ಟುಕೊಳ್ಳುತ್ತೇನೆ. ಉತ್ತು, ಬಿತ್ತಿ, ಬೆಳೆ ಮಾಡುವಂತಹ ಅನುಭವ ಹೊಂದಿದ್ದೇನೆ. ಕೃಷಿಕರ ಕಷ್ಟ-ಸುಖ, ನೋವು-ನಲಿವು, ದುಃಖ-ದುಮ್ಮಾನಗಳನ್ನು ಬಹಳ ಸಮೀಪದಿಂದ ತಿಳಿದುಕೊಂಡಿದ್ದೇನೆ. ಈ ಸಲ ರೈತರಿಗೆ ಮೂರು ಬಾರಿ ಪೆಟ್ಟು ಬಿತ್ತು. ಹೀಗಾದರೆ ರೈತರು ಹೇಗೆ ಉಳಿಯಬೇಕು? ಇದಕ್ಕೆ ನೀವು ಏನು ಪರಿಹಾರ ಮಾಡುತ್ತೀರಿ? ಹೋದ ಸಲ ಏನಾಯಿತು ಎಂಬ ಬಗ್ಗೆ ಹೇಳಿದ್ದೇನೆ. ಮಾನ್ಯ ಸಭಾಪತಿಯವರೇ, ಹಾವೇರಿ, ಬೆಳಗಾವಿಗಳಲ್ಲಿ ನೆರೆ ಪರಿಹಾರಕ್ಕೆಂದು ಸರ್ಕಾರ ಹಣ ಬಿಡುಗಡೆ ಮಾಡಿದೆ, ಆದರೆ ಅದು ಸರಿಯಾಗಿ ಬಟವಾಡೆಯಾಗಿಲ್ಲ. ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ, ಅಧಿಕಾರಿಗಳ ಕೈಚಳಕದಿಂದ ಬೇರೆಯವರ ಖಾತೆಗೆ ಮೊತ್ತ ಜಮಾ ಆಗಿದೆ ಎನ್ನುವುದು ಬಂತು. ಹಾನಗಲ್ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಖಾತೆಗೆ ಜಮಾ ಆಗಿರುವ ಪ್ರಸಂಗಗಳೂ ಕೂಡ ಇವೆ. ಹಿಂದೆ ನೀವು ರೂ. 3243.78 ಕೋಟಿ ಕೊಡಬೇಕು ಎಂದು ಕೇಳಿದಾಗ ಕೇಂದ್ರ ಸರ್ಕಾರ ರೂ. 1800 ಕೋಟಿಗಳನ್ನು ಮಾತ್ರ ಕೊಟ್ಟರು. ಅಲ್ಲದೇ ಜಿಎಸ್‌ಟಿ ಪಾಲಿನ ಹಣ ಕೂಡ ಕೊಟ್ಟಿಲ್ಲ. ಕೆಳಮನೆಯಲ್ಲಿ ತಮ್ಮ ಪಕ್ಷದ 117 ಜನ ಶಾಸಕರನ್ನು ಜನ ಆರಿಸಿ ಕಳುಹಿಸಿದ್ದಾರೆ. ಲೋಕಸಭೆಗೆ 25 +1 = 26 ಎಂಪಿಗಳನ್ನು ಕಳುಹಿಸಿ ಕೊಟ್ಟಿದ್ದಾರೆ. 28 ರಲ್ಲಿ 26 ದೈತ್ಯ ಮೆಜಾರಿಟಿಯಾಗಿದೆ. ನಮ್ಮನ್ನು ವೈಪ್‌ಔಟ್ ಮಾಡಿದರು. ಉತ್ತರ ಕರ್ನಾಟಕದಲ್ಲಿ ನೀವು ಸ್ವೀಪ್ ಮಾಡಿದಿರಿ. ಜನ ನಿಮ್ಮನ್ನು ಆಶೀರ್ವಾದ ಮಾಡಿದ್ದಾರೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಶಾಸಕರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಇದರ ಕಲ್ಪನೆ ನಿಮಗೆ ಸ್ವಲ್ಪವಾದರೂ ಇದೆಯೇ? ಇದು ಅವರ ಕರ್ತವ್ಯ ಎಂದು ಹೇಳಿ ಸುಮ್ಮನಾಗುತ್ತೀರಿ. ನಿಮಗೆ ಜನ ಆಶೀರ್ವಾದ ಮಾಡಿದ್ದರಿಂದ ನಾವು ಈ ಕಡೆ ಬಂದು ಕುಳಿತುಕೊಂಡಿದ್ದೇವೆ. ಈಗ ನೀವು ಯಾವರೀತಿ ನಡೆದುಕೊಳ್ಳುತ್ತಿದ್ದೀರೋ ಅದನ್ನು ಹಾಗೆ ಮುಂದುವರೆಸಿದರೆ ನೀವು ಇಲ್ಲಿಗೆ ಬರುತ್ತೀರಿ; ನಾವು ಅಲ್ಲಿಗೆ ಹೋಗುತ್ತೇವೆ. ಈಗ ಅಲ್ಲಿಗೆ ಹೋಗಬೇಕು ಎನ್ನುವ ಅಪೇಕ್ಷೆ ಇಲ್ಲ. ನಾವು ಜವಾಬ್ದಾರಿಯುತವಾದ ಪ್ರತಿಪಕ್ಷವಾಗಿ ಸಮರ್ಥ ರೀತಿಯಿಂದ ಕೆಲಸ ಮಾಡುತ್ತೇವೆ. ಆಳುವ ಪಕ್ಷ-ವಿರೋಧ ಪಕ್ಷಗಳು ಒಂದು ನಾಣ್ಯದ ಎರಡು ಮುಖಗಳು ಇದ್ದ ಹಾಗೆ, ಒಂದು ರಥದ ಎರಡು ಗಾಲಿಗಳು ಇದ್ದ ಹಾಗೆ. ಒಂದು ಗಾಲಿ ಮುರಿದುಕೊಂಡರೆ ರಥವನ್ನು ಚಲಾಯಿಸುವುದಕ್ಕೆ ಆಗುವುದಿಲ್ಲ, ನಾಣ್ಯದ ಒಂದು ಭಾಗ ಸವಕಲಾದರೆ ಆ ನಾಣ್ಯ ಚಲಾವಣೆಗೆ ಬರುವುದಿಲ್ಲ. ನಾವೂ ಕೂಡ ಸರ್ಕಾರದ ಒಂದು ಭಾಗವಾಗಿದ್ದೇವೆ. ಸರ್ಕಾರಕ್ಕೆ ಅಸಿಸ್ಟ್ ಮಾಡುತ್ತೇವೆ. ಸರ್ಕಾರ ಒಳ್ಳೆಯ ಕೆಲಸ ಮಾಡಿದಾಗ, ಚೆನ್ನಾಗಿ ಕೆಲಸ ಮಾಡಿದ್ದೀರಿ ಎಂದು ಹೇಳುತ್ತೇವೆ. ಅದೇರೀತಿ ನ್ಯೂನತೆಗಳನ್ನೂ ಹೇಳುತ್ತೇವೆ. ಒಟ್ಟಿನಲ್ಲಿ ಜನರ ಕಲ್ಯಾಣದ ಕೆಲಸವನ್ನು ನಾವೂ ಮಾಡಬೇಕು, ನೀವೂ ಮಾಡಬೇಕು. ನೀವು ವಿರೋಧಿ ಪಕ್ಷದಲ್ಲಿ ಇದ್ದಾಗ ಆರಾಮವಾಗಿದ್ದೀರಿ. ಆದರೆ ನೀವು ಆಡಳಿತ ಸೂತ್ರವನ್ನು ಕೈಯಲ್ಲಿ ಹಿಡಿದುಕೊಂಡಿರಿ. ಮೊದಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಹ ಬಂತು, ನಂತರ ಕೋವಿಡ್‌ಗೆ ಸಿಕ್ಕಿಹಾಕಿಕೊಂಡಿರಿ, ನಂತರ ಮತ್ತೊಮ್ಮೆ ಪ್ರವಾಹಕ್ಕೆ ಸಿಕ್ಕಿಹಾಕಿಕೊಂಡಿರಿ. ಇವೆಲ್ಲವನ್ನೂ ನೀವು ಎದುರಿಸಬೇಕು. ಕೇಂದ್ರದಿಂದ ನಮ್ಮ ಪಾಲಿನ ಜಿಎಸ್‌ಟಿ ಹಣ ತರುವುದಕ್ಕೆ ಆಗುತ್ತಿಲ್ಲ. ನೀವು ಗೌರವಾನ್ವಿತ ಪ್ರಧಾನ ಮಂತ್ರಿಗಳಿಗೆ ಕೇಳುವುದಿಲ್ಲವೇ? 26 ಜನ ಎಂಪಿಗಳು ಹೋಗಿ, ಕರ್ನಾಟಕ ಯಾವ ಯಾವ ತೊಂದರೆಗಳನ್ನು ಎದುರಿಸುತ್ತಿದೆ ಎಂಬುದನ್ನು ಹೇಳಿ ಸೂಕ್ತ ಹಣವನ್ನು ಪಡೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಮಾನ್ಯ ಸಭಾಪತಿಯವರೇ, 2019ರಲ್ಲಿ ರಾಜ್ಯಕ್ಕೆ ಮೊದಲನೆ ಸಲ ಪ್ರವಾಹ ಬಂದಾಗ ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಭೇಟಿ ಕೊಟ್ಟು, ಚಂದ್ರಯಾನ-2ರ ವೀಕ್ಷಣೆ ಮಾಡಿದರು. ಆ ಸಮಯದಲ್ಲಿ ಕೊನೆಯ ಪಕ್ಷ ನಿಮ್ಮನ್ನು, ಕನ್ನಡ ರಾಜ್ಯ ಮುಳುಗಿದೆಯೋ, ನಿಮ್ಮ ಸಮಸ್ಯೆ ಏನು, ನೀವು ಜೀವಂತ ಇದ್ದೀರೋ ಎಂದು ಕೇಳಬಹುದಾಗಿತ್ತು. ಆ ಸಂದರ್ಭದಲ್ಲಿ 27 ಜಿಲ್ಲೆಗಳ 103 ತಾಲ್ಲೂಕುಗಳು ಮುಳುಗಿತ್ತು. ಈ ಕುರಿತು ಕಷ್ಟ-ಸುಖ, ನೋವು-ನಲಿವುಗಳ ಬಗ್ಗೆ ಕೇಳಬೇಕಾಗಿತ್ತು. ಲೋಕಸಭೆಗೆ ದೈತ್ಯ ಮೆಜಾರಿಟಿಯಿಂದ ಶಾಸಕರನ್ನು ಆರಿಸಿ ಕೊಟಿದ್ದೀರಿ. ಆದರೂ ಅವರು ಏಕೆ ನಿಮ್ಮನ್ನು ಕೇಳಲಿಲ್ಲ ಎಂದು ಆಶ್ಚರ್ಯವಾಗುತ್ತಿದೆ. ನಾನು ವಿಷಯಾಂತರ ಮಾಡುವುದಕ್ಕೆ ಹೋಗುವುದಿಲ್ಲ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಕುರಿತು ಹಿಂದೆ ಮಾತನಾಡಿದಾಗ ಸರ್ಕಾರ ಅದಕ್ಕೆ ಉತ್ತರ ಕೊಟ್ಟಿದೆ. ಹಾಗಾಗಿ ಹೊಸ ವಿಚಾರಗಳನ್ನು ಹೇಳಿದರೆ ಒಳ್ಳೆಯದು.

**ಶ್ರೀ ಎಸ್.ಆರ್.ಪಾಟೀಲ್:-** 7 ಲಕ್ಷ ಜನರನ್ನು ಸ್ಥಳಾಂತರ ಮಾಡಿರುವುದರ ಬಗ್ಗೆ ಹೇಳಿದೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್‌ನ ಅಡಿ ಹೆಚ್ಚಿಗೆ ಹಣವನ್ನು ಕೂಡ ಕೊಟ್ಟಿದ್ದೀರಿ ಎಂದು ಹೇಳಿದೆ.

**ಶ್ರೀ ಅರುಣ ಶಹಾಪೂರ:-** ನನಗೆ ಮಾನ್ಯ ನಾರಾಯಣಸ್ವಾಮಿಯವರು ಒಂದು ಮಾತನ್ನು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಹೋದ ವರ್ಷದ ಭಾಷಣವನ್ನೇ ರಿಪೀಟ್ ಮಾಡುತ್ತಿದ್ದಾರೆ ಎಂಬ ಮಾತನ್ನು ಹೇಳಿದರು.

**ಶ್ರೀ ಎಸ್.ಆರ್.ಪಾಟೀಲ್:-**ನೀವು ಹಿಂದೆ ಏನು ಹೇಳಿದ್ದೀರಿ, ಏನು ಮಾಡಿದಿರಿ ಎನ್ನುವುದರ ಬಗ್ಗೆ ನಿಮಗೆ ನೆನಪಿರುವುದಿಲ್ಲ. ನೋವುಂಡ ನಮಗೆ ನೆನಪು ಇರುತ್ತದೆ. ನಾವು ಎಲ್ಲವನ್ನೂ ಹೇಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ನಮ್ಮದೇ ಸರ್ಕಾರ ಇದೆ, ಮಾನ್ಯ ನರೇಂದ್ರಮೋದಿಯವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಕಳೆದ ಸಲ ಅತಿವೃಷ್ಟಿಯಾಗಿದ್ದಾಗ ರಾಜ್ಯಕ್ಕೆ ಬಂದಿದ್ದರ ಬಗ್ಗೆ ಪ್ರಸ್ತಾಪ ಮಾಡಿದಿರಿ. ಈ ಸಲ ಕೂಡ, ಕೊರೋನಾ ಇರುವುದರ ಕಾರಣ ವಿಡಿಯೋ ಕಾನ್‌ಫರೆನ್ಸ್ ಮುಖಾಂತರ ನಮ್ಮ ಜೊತೆ ಮಾತನಾಡಿದ್ದಾರೆ. ನಾನು ಮತ್ತು ಮಾನ್ಯ ಬಸವರಾಜ ಬೊಮ್ಮಾಯಿಯವರು ಆ ಕಾನ್‌ಫರೆನ್ಸ್‌ನಲ್ಲಿ ಭಾಗವಹಿಸಿದ್ದೆವು. ನಮ್ಮ ರಾಜ್ಯಕ್ಕೆ ಆಗಿರುವಂತಹ ಹಾನಿ ಏನು ಮತ್ತು ನಮ್ಮ ರಾಜ್ಯಕ್ಕೆ ಎಷ್ಟು ಆರ್ಥಿಕ ಸಹಾಯಬೇಕಾಗಿದೆ ಎಂಬ ಬಗ್ಗೆ ವಿವಿರವಾಗಿ ಮಾತನಾಡಿದ್ದೇವೆ. ಇದಾದ ಮೇಲೆ, ನಮ್ಮ ಕೋರಿಕೆಯ ಮೇರೆಗೆ ನಮ್ಮ ರಾಜ್ಯಕ್ಕೆ ಶ್ರೀ ಪ್ರತಾಪ್, ಜಂಟಿ ಕಾರ್ಯದರ್ಶಿ, ಕೇಂದ್ರ ಗೃಹ ಮಂತ್ರಾಲಯ ಇವರನ್ನು ಸಮೀಕ್ಷೆಗೆ ಕಳುಹಿಸಿದ್ದರು. ಕೊಡಗು ಮತ್ತು ಇನ್ನಿತರ ಜಿಲ್ಲೆಗಳಿಗೆ ಹೋಗಿ ಅವರು ಸಮೀಕ್ಷೆ ಮಾಡಿದ್ದಾರೆ. ನೀವೂ ಸರ್ಕಾರ ನಡೆಸಿದ್ದೀರಿ. ಮಾನ್ಯ ಹರಿಪ್ರಸಾದ್‌ರವರು ಕೇಂದ್ರ ಸರ್ಕಾರದಲ್ಲಿ ಇದ್ದವರು. ವ್ಯವಸ್ಥೆ ಯಾವರೀತಿ ಇರುತ್ತದೆ ಎನ್ನುವುದು ನಿಮಗೆ ಗೊತ್ತಿರುತ್ತದೆ. ವರದಿ ತೆಗೆದುಕೊಂಡು ಹೋಗಿದ್ದಾರೆ, ಸೂಕ್ತ ಪರಿಹಾರವನ್ನೂ ಕೊಡುತ್ತಾರೆ. ಆದರೆ ಪದೇ ಪದೇ ನೀವು ಕೇಂದ್ರ ಸರ್ಕಾರ ಸಹಾಯ ಮಾಡಿಲ್ಲ, ಹಾಗೆ–ಹೀಗೆ ಎಂದು ಹೇಳುತ್ತೀರಿ.

**ಶ್ರೀ ಎಸ್.ಆರ್.ಪಾಟೀಲ್:–**ನಾವು ನಿಮ್ಮ ಸಹಾಯಕ್ಕೆ ಬಂದಿದ್ದು ತಪ್ಪೇ?

**ಶ್ರೀ ಆರ್.ಅಶೋಕ್:–** ನೀವು ಹೇಳಿದ್ದನ್ನು ನಾನು ವೆಲ್‌ಕಮ್ ಮಾಡುತ್ತೇನೆ, ನೀವು ಹೇಳಿದ್ದನ್ನು ಬರೆದುಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಪ್ರತಿಪಕ್ಷದವರು ಹೀಗೆಲ್ಲಾ ಮಾತನಾಡಿದ್ದಾರೆ ಎಂಬ ಅಂಶವನ್ನು ಗಮನಕ್ಕೆ ತಂದು, ರಾಜ್ಯಕ್ಕೆ ಸೂಕ್ತ ಪರಿಹಾರ ಕೊಡಿ ಎಂದು ಕೇಂದ್ರವನ್ನು ಕೇಳಬಹುದು, ಆ ರೀತಿ ಕೇಳುವುದಕ್ಕೆ ನಿಮಗೆ ಹಕ್ಕಿರುತ್ತದೆ, ಅದಕ್ಕೆ ನಾವು ಹೇಳುತ್ತಿದ್ದೇವೆ. ನಿಮಗೆ ಸಹಾಯವಾಗಲಿ ಎಂದು ಮಾತನಾಡುತ್ತೇವೆ. ಮಾತನಾಡಬೇಕು ಎನ್ನುವ ಉದ್ದೇಶದಿಂದ ನಾನು ಮಾತನಾಡುವುದಿಲ್ಲ. ನಾನು ಬಹಳ ಕ್ರಮಬದ್ಧವಾಗಿ ಮಾತನಾಡುತ್ತೇನೆ, ದಾರಿ ತಪ್ಪಿ ಮಾತನಾಡುವುದಿಲ್ಲ. ಬಹಳ ಗೌರವದಿಂದ ಈ ಸ್ಥಾನವನ್ನು ನಿಭಾಯಿಸುತ್ತೇನೆ. ಅನವಶ್ಯಕವಾಗಿ ಇರಿಟೇಡ್ ಆಗುವಂತಹ ಟೀಕೆ–ಟಿಪ್ಪಣಿಗಳನ್ನು ಮಾಡುವುದಿಲ್ಲ. ವಾಸ್ತವಿಕ ನೆಲೆಗಟ್ಟಿನಲ್ಲಿ ನಾನು ಮಾತನಾಡುತ್ತೇನೆ. ನಮ್ಮ ಮಾತುಗಳು ದಾಖಲೆಗೆ ಹೋಗುತ್ತವೆ, ಕಡತದಲ್ಲಿರುತ್ತವೆ. ಇಷ್ಟು ಜನರನ್ನು ಆರಿಸಿ ಕಳುಹಿಸಿದ್ದೇವೆ, ನಿಮ್ಮನ್ನು ಪ್ರಧಾನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಯಾಗಿ ಮಾಡುವುದಕ್ಕೆ ಸಹಾಯ ಮಾಡಿದ್ದೇವೆ, ಹಾಗಾಗಿ ಕರ್ನಾಟಕಕ್ಕೆ ಕೊಡಬೇಕಾದುದನ್ನು ಕೊಡಿ ಎಂದು ಕೇಳಲು ಅನುಕೂಲವಾಗಲಿ ಎಂದು ನಾವು ಮಾತನಾಡುತ್ತೇವೆ.

ಶ್ರೀ **ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅವರಿಗೆ ಪ್ರಧಾನ ಮಂತ್ರಿ ಮುಂದೆ ಕೇಳುವುದಕ್ಕೆ ಆಗುತ್ತದೆಯೇ? ನೀವ್ಯಾರು ಅವರ ಸಮೀಪ ಹೋಗುವುದಿಲ್ಲ. ಡಿಸ್ಟೆನ್ಸ್ ಮೇನ್‌ಟೇನ್ ಮಾಡುತ್ತೀರಿ.

ಶ್ರೀ **ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಮನೆಯ ಪರಂಪರೆ ಏನು ಎನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರ ಮಾತನ್ನು ಎಲ್ಲರೂ ಕೇಳುತ್ತಾರೆ; ಮಧ್ಯದಲ್ಲಿ ಯಾರೂ ಮಾತನಾಡುವುದಿಲ್ಲ. ಇಲ್ಲಿ ಬೇರೆ ತರಹ ನಡೆಯುತ್ತಿದೆ. ಮಾನ್ಯ ಅಶೋಕ್‌ರವರು, ವಿಡಿಯೋ ಕಾನ್‌ಫರೆನ್ಸ್ ಮೂಲಕ ಪ್ರಧಾನ ಮಂತ್ರಿಗಳ ಜೊತೆ ಮಾತನಾಡಿದೆವು ಎಂದು ಹೇಳಿದರು. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಇದೇ ಪ್ರಧಾನ ಮಂತ್ರಿಗಳು, ಬಿಹಾರ್‌ನಲ್ಲಿ ಪ್ರವಾಹ ಬಂದಾಗ ಏರಿಯಲ್ ಸರ್ವೇ ಮಾಡಿದರು. ಪಶ್ಚಿಮ ಬಂಗಾಳದಲ್ಲಿ ಪ್ರವಾಹ ಬಂದಾಗ ಏರಿಯಲ್ ಸರ್ವೇ ಮಾಡಿದರು. ಕರ್ನಾಟಕದಲ್ಲಿ ಏಕೆ ಮಾಡಲಿಲ್ಲ? ಮಾನ್ಯ ಯಡಿಯೂರಪ್ಪನವರು ಭೀಷ್ಮಾಚಾರ್ಯರು ಎಂದು ಭಾವಿಸಿ ಅವರನ್ನು ಶರಶಯ್ಯೆಯಲ್ಲಿ ಮಲಗಿಸಿಬಿಟ್ಟಿದ್ದಾರೆಯೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಇದೆ.

**(ಮುಂದು)**

**(731)21.09.2020 4.50 ಡಿಎಸ್-ಆರ್‌ಎನ್**

ಶ್ರೀ **ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬಾರದೆಂದು ಇದ್ದೆ. ತಾವು ಅನುಮತಿ ಕೊಟ್ಟಿದ್ದಕ್ಕಾಗಿ ನಾನು ಮಾತನಾಡಿದ್ದೇನೆ. ಇವರು ಪದೇ-ಪದೇ ಕೇಂದ್ರ ಸರ್ಕಾರ ನಿಮ್ಮ ಸಹಾಯಕ್ಕೆ ಬರಲಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಇವರಿಗೆ ಅಂಕಿ-ಅಂಶ ಕೊಟ್ಟುಬಿಟ್ಟರೆ ಪೂರ್ತಿ ಸಮಾಧಾನವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ **ಬಿ.ಕೆ.ಹರಿಪ್ರಸಾದ್:-** ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಮಾತನಾಡಲಿ, ನಂತರ ತಾವು ಮಾತನಾಡಿ.

ಶ್ರೀ **ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರಿಂದ ಕೆಲವು ತೃಪ್ತಿಕರವಾದ ಉತ್ತರ ಬಂದಿದೆ. ಅದರ ಬಗ್ಗೆ ಎರಡು ಮಾತಿಲ್ಲ. ನಾನು ಅವರಿಗೆ ಅನುಕೂಲವಾಗಲಿ, ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುವುದಕ್ಕೆ ಹಕ್ಕು ಇರಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾವು ಕೇಳುತ್ತಿಲ್ಲ, ವಿರೋಧ ಪಕ್ಷದವರು ಈ ರೀತಿ ಕೇಳುತ್ತಿದ್ದಾರೆ ಎಂದು ಹೇಳುವ ಹಕ್ಕು ಇರುತ್ತದೆ. ಅವರಾಗೆ ಹೋಗಿ ಕೇಳಿದರೆ ಏನು ನೀವು ಈ ರೀತಿ ಕೇಳುತ್ತಿದ್ದೀರಲ್ಲಾ ಎನ್ನುವ ಹಾಗಿಲ್ಲ. ಈ ರೀತಿ ನಮಗೂ ಒತ್ತಡವಿದೆ ಎಂದು ಹೇಳಬಹುದು. ರಾಜ್ಯದಲ್ಲಿ ಒಂದೇ ಸರ್ಕಾರ, ಒಂದೇ ಪಕ್ಷದ ಸರ್ಕಾರವಿದ್ದರೆ ಸ್ವರ್ಗವನ್ನೇ ಧರೆಗೆ ಇಳಿಸಬಹುದೆಂದು ಅವರು ಹೇಳುತ್ತಿರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದೇ ಸರ್ಕಾರ ಎಂದು ಹೇಳಬೇಡಿ, ಮೂರು ಪಕ್ಷದ ಸರ್ಕಾರ ಎಂದು ಹೇಳಿ. ಈ ಸರ್ಕಾರದಲ್ಲಿ ಎಲ್ಲಾ ಪಕ್ಷದವರು ಇದ್ದಾರೆ. ಕಾಂಗ್ರೆಸ್ ಪಕ್ಷ, ಜೆಡಿಎಸ್ ಪಕ್ಷ, ಬಿಜೆಪಿ ಪಕ್ಷ, ಇವರೆಲ್ಲರೂ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ಅದಕ್ಕೆ ಅಮೆಂಡ್‌ಮೆಂಟ್‌ನ್ನು ಮಾಡಿದ್ದಾರೆ. ಆ ಅಮೆಂಡ್‌ಮೆಂಟ್‌ನ್ನು ನಾವು ಒಪ್ಪಿಕೊಳ್ಳುತ್ತೇವೆ. ಇವರೆಲ್ಲರನ್ನು ಕರೆದುಕೊಂಡಿದ್ದಾರೆಲ್ಲಾ ಅವರಿಗೆ ಸುಖ-ಸಂತೋಷ ಏನಾದರೂ ಸಿಕ್ಕಿದೆಯೇ?

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಇದು ಬಿಜೆಪಿ ಸರ್ಕಾರ ಮಾತ್ರ, ಸಮ್ಮಿಶ್ರ ಸರ್ಕಾರ ಅಲ್ಲ.

(**ಗೊಂದಲ**)

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಅನರ್ಹರಾದ ನಂತರ ನಮ್ಮ ಪಕ್ಷದ ಕಮಲದ ಚಿಹ್ನೆಯಲ್ಲಿ ಚುನಾವಣೆಗೆ ನಿಂತು ಗೆದ್ದು ಬಂದಿದ್ದಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಇದು purely ಬಿಜೆಪಿ ಸರ್ಕಾರ. ಬೇರೆ ಯಾವುದು ಅಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿ ಬಂದಿರುವಂತಹ ಸರ್ಕಾರ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಹೆಣ್ಣುಮಕ್ಕಳು ತವರು ಮನೆಯಲ್ಲಿದ್ದಾಗ ತಂದೆಯ ಹೆಸರು ಹೇಳುತ್ತಾರೆ. ಗಂಡನ ಮನೆಗೆ ಹೋದಾಗ ಗಂಡನ ಹೆಸರು ಹೇಳುತ್ತಾರೆ. ಇತ್ತೀಚೆಗೆ ಏನು ಬದಲಾವಣೆಯಾಗಿದೆ ಎಂದರೆ, ತಂದೆಯ ಹೆಸರೇ ಹೇಳಬೇಕು ಎಂದು ಹೇಳುತ್ತಾರೆ. ಹಾಗೆ ಇವರೆಲ್ಲರೂ ಗಂಡನ ಮನೆಗೆ ಹೋದರೂ ಕೂಡ ತಂದೆಯ ಹೆಸರನ್ನೇ ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈ ಸರ್ಕಾರ ಹೇಗೆಂದರೆ ನಮ್ಮ ಜೊತೆಯಲ್ಲಿದ್ದವರನ್ನು ಕಾಡಿಬೇಡಿ ಕರೆದುಕೊಂಡರು. ಕರೆದುಕೊಂಡವರನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದಾರೆಯೇ ಅದೂ ಇಲ್ಲ. ಎಲ್ಲಾ ನಮ್ಮ ಬಿಜೆಪಿ ಯವರು ಎಂದು ಹೇಳುತ್ತಾರೆ. ಅವರಿಗೆ ಮಂತ್ರಿಗಿರಿ ಕೊಡುತ್ತಿಲ್ಲ, ಅವರನ್ನು ಎಂ.ಎಲ್.ಸಿ. ಮಾಡುತ್ತಿಲ್ಲ. ಕೇಳಿದರೆ ಅವರನ್ನೇ ಬಯ್ಯುತ್ತಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ನಿಮ್ಮನ್ನು ಕೇಳಿ ಕೊಡಬೇಕೇ? ಏನು ಮಾಡಬೇಕೆಂಬುದು ನಮ್ಮ ಪಕ್ಷದವರಿಗೆ ಗೊತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್:–** ನಮ್ಮನ್ನು ಕೇಳಿ ಅಲ್ಲ, ಅವರನ್ನು ಕರೆದುಕೊಳ್ಳುವಾಗ ಮಂತ್ರಿಗಿರಿ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಏನು ಹೇಳಿ ಕರೆದುಕೊಂಡಿದ್ದೀರಿ ಅದರಂತೆ ನಡೆದುಕೊಳ್ಳಬೇಕು. ನಮ್ಮನ್ನು ಮಂತ್ರಿ ಮಾಡಿ ಎಂದು ಮಾಧ್ಯಮಗಳಲ್ಲಿ ಬರುತ್ತಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಪ್ರಜಾಪ್ರಭುತ್ವದ ಕಗ್ಗೊಲೆಯಾಗಿ, ಅನೈತಿಕವಾಗಿ ನಿರ್ಮಾಣವಾಗಿರುವಂತಹ ಸರ್ಕಾರ.

**(ಗೊಂದಲ)**

**ಡಾ॥ತೇಜಸ್ವಿನಿಗೌಡ:–** ಸುಪ್ರೀಂ ಕೋರ್ಟ್‌ಗೆ ಹೋಗಿ ನ್ಯಾಯವನ್ನು ಪಡೆದ ಪ್ರಜಾಪ್ರಭುತ್ವದ ರೀತ್ಯಾ ಚುನಾವಣೆಗೆ ನಿಂತು ಗೆದ್ದು ಬಂದು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಪ್ರಜಾಪ್ರಭುತ್ವ ಇದೆಯೇ ಎನ್ನುವುದನ್ನು ಸ್ವಲ್ಪ ನೋಡಿಕೊಳ್ಳಲಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ಏನು ಎಂಬುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟವರು ಕಾಂಗ್ರೆಸ್ ಪಕ್ಷ. ನಮಗೆ ಪ್ರಜಾಪ್ರಭುತ್ವ ಏನು ಎಂಬುದು ಗೊತ್ತಿದೆ. ನಾವು ಅವರಿಂದ ಕಲಿಯಬೇಕಾಗಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ವೈ.ಎ.ನಾರಾಯಣಸ್ವಾಮಿ, ನೀನಂತೂ ಮಂತ್ರಿಯಾಗುವುದಿಲ್ಲ, ಅದನ್ನು ನಾನು ಬರೆದುಕೊಡುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಬಸವರಾಜ ಹೊರಟ್ಟಿಯವರೇ, ನಿಮ್ಮ ಪರಿಸ್ಥಿತಿ ಏನಾಯಿತು?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಕಾಂಗ್ರೆಸ್ ತುರ್ತು ಪರಿಸ್ಥಿತಿಯನ್ನು ತಂದಿತ್ತು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ನೇರವಾಗಿ ತುರ್ತು ಪರಿಸ್ಥಿತಿಯನ್ನು ತರುವ ಹಾಗೆ ಮಾಡಿದ್ದೇವೆ. ಆದರೆ ಇವತ್ತು ದೇಶದಲ್ಲಿ ಎಂತಹ ತುರ್ತು ಪರಿಸ್ಥಿತಿ ಇದೆ ಎಂಬುದನ್ನು ಹೇಳಿ ನೋಡೋಣ? ಅವತ್ತು ತುರ್ತು ಪರಿಸ್ಥಿತಿ ಇತ್ತು ಎನ್ನುವುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಇವತ್ತು ಈ ದೇಶದಲ್ಲಿ ಅಗೋಚರವಾದಂತಹ ತುರ್ತು ಪರಿಸ್ಥಿತಿ ಇದೆ. ಇವತ್ತು ಪ್ರಜಾಪ್ರಭುತ್ವದಲ್ಲಿ ಅವರ ಪಾರ್ಲಿಮೆಂಟ್ ಸದಸ್ಯರು ಬಾಯಿಬಿಟ್ಟು ಮಾತನಾಡದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**(ಗೊಂದಲ)**

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಎಂ.ನಾರಾಯಣಸ್ವಾಮಿಯವರು ಮಿಸ್ಟೇಕ್ ಮಾಡಿಕೊಂಡಿದ್ದಾರೆ. ತುರ್ತು ಪರಿಸ್ಥಿತಿಗೆ ಕಾಂಗ್ರೆಸ್‌ನವರು ನೇರ ಕಾರಣರು. ಅವರು ಉಪ್ಪು ತಿಂದು, ನೀರು ಕುಡಿದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ನೀರಿನಲ್ಲಿ ಮುಳುಗುತ್ತಿದ್ದೇವೆ, ನಮ್ಮ ಬೆಳೆ, ಮನೆ ಮುಳುಗಿವೆ. ನಮ್ಮ ಊರು, ಜಿಲ್ಲೆ ಮುಳುಗಿವೆ. ಅದರ ಬಗ್ಗೆ ಚರ್ಚೆ ಮಾಡದೆ ತುರ್ತು ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿ. ಅವರೇನು ಹೆಚ್ಚಿಗೆ ಹೇಳಿಲ್ಲ. 'This BJP Government has taken birth immorally' ಎಂದು ಹೇಳುತ್ತಿದ್ದಾರೆ ಅಷ್ಟೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸ್ವತಂತ್ರ ಹೋರಾಟಗಾರರ ವಿರುದ್ಧ ನಿಮ್ಮ ಪಕ್ಷ ಇತ್ತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಅದರ ಫಲವನ್ನು ಅನುಭವಿಸಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಸ್ವಾತಂತ್ರ್ಯ ತಂದು ಕೊಟ್ಟಿರುವುದು ಈ ಕಾಂಗ್ರೆಸ್ ಅಲ್ಲ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಆ ಕಾಂಗ್ರೆಸ್ ಪಕ್ಷ ಬೇರೆ, ಈ ಕಾಂಗ್ರೆಸ್ ಪಕ್ಷ ಬೇರೆ.

**(ಗೊಂದಲ)**

**ಶ್ರೀ ಎಸ್.ರವಿ:–** ಕಾಂಗ್ರೆಸ್ ಪಕ್ಷದ ಬಗ್ಗೆ ಮಾತನಾಡುವ ಯೋಗ್ಯತೆ ಇಲ್ಲ. ಸುಮ್ಮನೆ ಮಾತನಾಡಬೇಕೆಂದು ಏನೇನೋ ಮಾತನಾಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಕಾಂಗ್ರೆಸ್ ಪಕ್ಷ ನನಗೆ ಯಾವುದೇ ಸ್ಥಾನಮಾನ ಕೊಟ್ಟಿಲ್ಲ.

**ಶ್ರೀ ಎಸ್.ರವಿ:–** ನಿಮ್ಮ ಆತ್ಮ ಮುಟ್ಟಿಕೊಂಡು ಹೇಳಿ?

**ಶ್ರೀ ವೈ.ಎ.ನಾರಾಯಣಸ್ವಾಮಿ:–** ನಾನು ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿರಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ನಾರಾಯಣಸ್ವಾಮಿಯವರೇ, ಏಕೆ ಮಧ್ಯ ಪ್ರವೇಶ ಮಾಡುತ್ತೀರಿ? ಮುಂಜಾನೆಯಿಂದ ಸದನ ಶಾಂತಿಯಿಂದ ನಡೆಯುತ್ತಿತ್ತು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಾರಾಯಣಸ್ವಾಮಿಯವರು ಮಧ್ಯ ಪ್ರವೇಶ ಮಾಡುವುದಕ್ಕೆ ಎಲ್ಲರೂ ಮಧ್ಯ ಪ್ರವೇಶ ಮಾಡುತ್ತಾರೆ. ಅವರೊಬ್ಬರು ಶಾಂತಿಯಾಗಿಬಿಟ್ಟರೆ ಎಲ್ಲರೂ ಶಾಂತಿಯಾಗುತ್ತಾರೆ. **(ಗೊಂದಲ)**

**(ಮುಂದು)**

**(732) 05.00/21.09.2020 ಎಸ್‌ವಿ–ಆರ್‌ಎನ್**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಉತ್ತರ ಕೊಡುವುದಕ್ಕೆ ಮಾನ್ಯ ವೈ.ಎ. ನಾರಾಯಣಸ್ವಾಮಿಯವರೇನು ಸರ್ಕಾರವೇ? ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಡುತ್ತಾರೆ. ಪ್ರತಿಯೊಂದಕ್ಕೂ ಏಕೆ ಎದ್ದು ನಿಂತು ಮಾತನಾಡುತ್ತಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಮುಂದಿನ ಸಚಿವ ಸಂಪುಟ ವಿಸ್ತರಣೆಯಲ್ಲಿ ನಾಲ್ಕು ಜನರನ್ನೇನೂ ಮಂತ್ರಿಗಳನ್ನಾಗಿ ಮಾಡುವವರಿದ್ದಾರೆ. ಈಗ ಇಲ್ಲಿ ಸ್ವಲ್ಪ ಮಾತನಾಡಿದರೇನಾದರೂ ಕೆಲಸವಾಗುತ್ತದೆಯೇನೋ ಎಂದು ಅವರು ಮಾತನಾಡುತ್ತಿದ್ದಾರೆ. ಏನಾದರೊಂದು ಅವಕಾಶ ದೊರೆಯುತ್ತದೆಯೇನೋ ಎಂಬ ಭಾವನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ನಿಮ್ಮನ್ನೇನೂ ಮಂತ್ರಿ ಮಾಡುವುದಿಲ್ಲ. ಸುಮ್ಮನೆ ಏಕೆ ಎದ್ದು ನಿಂತು ಮಾತನಾಡುತ್ತೀರಿ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕಳೆದ ಬಾರಿ 1,10,222 ಮನೆಗಳು ನಾಶವಾದವು. ಅವುಗಳನ್ನು ಎ, ಬಿ, ಸಿ ಎಂದು ವಿಭಾಗಿಸಿದರು. ನಂತರ 8000 ಶಾಲಾ ಕೊಠಡಿಗಳು ಹಾಳಾಗಿದ್ದವು. ಹಿಂದಿನದು ಏಕೆ ಹೇಳುತ್ತೀರೆಂದು ಸರ್ಕಾರದವರು ಕೇಳುತ್ತಾರೆ. ಶಾಲಾ ಕೊಠಡಿಗಳು ರಿಪೇರಿಯಾಗುವುದು ಬೇಡವೇ? ಚಿಕ್ಕಮಗಳೂರು, ಹಾಸನ ಜಿಲ್ಲೆಯಲ್ಲಿ ಇನ್ನೂ ಜಗಲಿಯ ಮೇಲೆ ಶಾಲೆಗಳನ್ನು ನಡೆಸುತ್ತಾರೆ. ಇನ್ನೂ 8000 ಶಾಲಾ ಕೊಠಡಿಗಳು ತಯಾರಿಲ್ಲದೆ, ಜಗಲಿಯ ಮೇಲೆ ತರಗತಿಗಳನ್ನು ನಡೆಸುತ್ತಾರೆಂದರೆ ಹೇಗೆ? ನಮ್ಮ ಶಿಕ್ಷಣ ಸಚಿವರ ಬಗ್ಗೆ ನನಗೂ ಬಹಳ ಗೌರವವಿದೆ. ಅವರು ಆರ್ಥಿಕ ಮುಗ್ಗಟ್ಟಿನಿಂದಾಗಿ ನಿರೀಕ್ಷಿತ ವೇಗದಲ್ಲಿ ಶಾಲೆಗಳ ಪುನರ್ನಿರ್ಮಾಣ ಕಾರ್ಯವು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. ಶಾಲಾ ಕೊಠಡಿಗಳ ಪುನರ್ನಿರ್ಮಾಣಕ್ಕೆ ಆರ್ಥಿಕ ಮುಗ್ಗಟ್ಟೇ? ಮಕ್ಕಳಿಗೆ ಅಕ್ಷರ ಜ್ಞಾನವನ್ನು ಕೊಡುವಂತಹ ಕೊಠಡಿಗಳನ್ನು ನಿರ್ಮಿಸಲಿಕ್ಕೆ ಸರ್ಕಾರದ ಬಳಿ ಹಣವಿಲ್ಲವೇ? ಯಾವ ಯಾವುದಕ್ಕೋ ಎಲ್ಲೆಲ್ಲಿಯೋ ಖರ್ಚು ಮಾಡಲಾಗುತ್ತದೆ. ಗ್ರಾಮೀಣ ಭಾಗದಲ್ಲಿ ಶಿಕ್ಷಕರ ಕೊರತೆ ಇದೆ, ಮೂಲಭೂತ ಸೌಲಭ್ಯಗಳ ಕೊರತೆ ಇದೆ. ಹೀಗಿರುವಾಗ 8000 ಶಾಲಾ ಕೊಠಡಿಗಳು ಹಾಳಾಗಿ ಹೋಗಿ, ದುರಸ್ತಿಗೊಳ್ಳಬೇಕಿದೆ. ಅವುಗಳನ್ನು ಸರಿಪಡಿಸುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುತ್ತಾರೆ.

ಹಳೆಯದೇ ಏಕೆ ಹೇಳುತ್ತಿದ್ದೇನೆಂದರೆ, ಒಂದು ವರ್ಷದ ನಂತರವಾದರೂ ಸರ್ಕಾರ ಅವುಗಳನ್ನು ಸರಿಪಡಿಸಿದ್ದರೆ ನಾನು ಅವುಗಳ ಬಗ್ಗೆ ಚಕಾರವೆತ್ತುತ್ತಿರಲಿಲ್ಲ. ಬಾಗಲಕೋಟೆ ಜಿಲ್ಲೆಯಲ್ಲಿ ಕೆಲವರು ಸ್ಥಳಾಂತರಗೊಂಡರು. ಅವರು ಪುನಃ ಮೂಲ ಸ್ಥಳಕ್ಕೆ ಬಂದರೆ ಶಾಲೆಗೆ ಹೋಗಲಾರದಂತಹ ಪರಿಸ್ಥಿತಿ ಇದೆ. ಈಗ ಕೋವಿಡ್ ಇರುವುದರಿಂದ ಶಾಲೆಗಳು ಮುಚ್ಚಿವೆ. ಈ ತಿಂಗಳ ಅಂತ್ಯದಲ್ಲಿಯಾದರೂ ಶಾಲೆಗಳು ಪ್ರಾರಂಭವಾಗುತ್ತದೆಯಲ್ಲವೇ? ಅಥವಾ ಈ ವರ್ಷ ಹಾಗೆಯೇ ಕಳೆದುಹೋಗುತ್ತದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲಾ ಕೊಠಡಿಗಳು ಇಲ್ಲ, ಜಗಲಿಗಳ ಮೇಲೆ ತರಗತಿಗಳು ನಡೆಯುತ್ತವೆ. ಅದನ್ನು ಮಾಡಲು ಇದ್ದಂತಹ ತೊಂದರೆ ಏನು? ನರೇಗಾ ಯೋಜನೆಯಡಿಯಲ್ಲಿ 100 ಮಾನವ ದಿನಗಳ ಬದಲಾಗಿ 150 ಮಾನವ ದಿನಗಳನ್ನು ಮಾಡಲಾಗುವುದು ಎಂದು ಹೇಳಲಾಗಿತ್ತು. ನರೇಗಾ ಯೋಜನೆಗೆ ಅನುದಾನದ ಕೊರತೆ ಇದೆ. 100 ಮಾನವ ದಿನಗಳು ಇದ್ದುದು ಹಾಗೆಯೇ ಉಳಿದಿದೆ. 150 ದಿನಗಳು ಕೂಡ ಆಗಿಲ್ಲ. ಇದೆಲ್ಲಾ ವೈಫಲ್ಯವಲ್ಲವೇ? ರೈತರ ಬೆಳೆ ಹೋಯಿತು. ಮನೆ ಹೋಯಿತು. ಜನ ತಲೆಯ ಮೇಲೆ ಮಸಿ ಗಡಿಗೆಯನ್ನು ಹೊತ್ತುಕೊಂಡು ಭಿಕಾರಿಗಳಾಗಿ ರಸ್ತೆಗೆ ಬಂದಿದ್ದಾರೆ. ತಿನ್ನಲಿಕ್ಕೆ ಅನ್ನವಿಲ್ಲ. ಅವರಿಗೆ ಸಾಲ ಕಟ್ಟಲಿಲ್ಲವೆಂದರೆ ಅವರ ಟ್ರ್ಯಾಕ್ಟರ್, ಕೃಷಿ ಉಪಕರಣಗಳು ಹರಾಜು ಮಾಡಲಾಗುತ್ತದೆ. ಹರಾಜು ಹಾಕಲಿಕ್ಕೆ ಮನೆಯಿಲ್ಲ. ಅವುಗಳನ್ನೆಲ್ಲಾ ಹರಾಜು ಹಾಕುವಾಗ ಸರ್ಕಾರಕ್ಕೆ ಕರುಣೆ ಇರುವುದಿಲ್ಲವೇ? ರೈತರ ಪರ ಎಂದು ಬಾಯಿಯಲ್ಲಿ ಹೇಳಿದರೆ ಮಾತ್ರ ಆಗುವುದಿಲ್ಲ. We should practically implement it. ನಡೆ-ನುಡಿ ಒಂದಾಗಿರಬೇಕು. 12ನೇ ಶತಮಾನದಲ್ಲಿ ಬಸವಣ್ಣನವರು ಹೇಳುತ್ತಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು.
ನುಡಿಯೊಳಗೆ ನಡೆಯಿಲ್ಲದಿದ್ದಡೆ ಮೆಚ್ಚನಾ ನಮ್ಮ ಕೂಡಲಸಂಗಮದೇವ.

ಇದು ಇತ್ತೀಚೆಗೆ ಹೇಳಿರುವುದಲ್ಲ. 900 ವರ್ಷಗಳ ಹಿಂದೆ ಬಸವಾದಿ ಶರಣರು ಹೇಳಿದಂತಹ ಮಾತಿದು. ಸರ್ಕಾರ ರೈತರ ಪರ, ಕೃಷಿಗಾಗಿ ಪ್ರತ್ಯೇಕ ಬಜೆಟ್ ಎಂದು ಹೇಳಿ ಹಸಿರು ಶಾಲನ್ನು ಹೊದ್ದರು. Being a farmer, I am very proud to say this. ನಾನೂ ಮಣ್ಣಿನ ಮಗನೇ. ನಾನಷ್ಟೇ ಅಲ್ಲ, ನಮ್ಮ ಅಜ್ಜ-ಮುತ್ತಜ್ಜ ಹೀಗೆ ತಲೆ ತಲಾಂತರಗಳಿಂದಲೂ ಕೃಷಿ ಕುಟುಂಬ ನಮ್ಮದು. Rather than all these positions, I am proud to be a farmer. ಸರ್ಕಾರ ನುಡಿದಂತೆ ನಡೆಯಬೇಕಿತ್ತಲ್ಲವೇ? 1,10,000 ಮನೆಗಳನ್ನು ಕಟ್ಟಿ ವಿತರಣೆ ಮಾಡಲು ಎ, ಬಿ, ಸಿ ಕ್ಯಾಟಗರಿ ಎಂದು ಮಾಡಲಾಯಿತು. ಎ ಮತ್ತು ಬಿ ಕ್ಯಾಟಗರಿಯವರಿಗೆ ರೂ.5 ಲಕ್ಷ. ಶೇ.25ಕ್ಕಿಂತ ಕಡಿಮೆ ಹಾನಿಯಾಗಿರುವುದಕ್ಕೆ ರೂ.50,000. ಶೇ.26ರಿಂದ ಶೇ.75ರವರೆಗೆ ಹಾನಿಯಾಗಿರುವುದಕ್ಕೆ ರೂ.5 ಲಕ್ಷ. ಈ ರೀತಿಯಾಗಿ ಕ್ಯಾಟಗರಿ ಮಾಡಿದುದನ್ನು ನಾವು ಸ್ವಾಗತ ಮಾಡಿದೆವು. ಎರಡನೇ ಬಾರಿಗೆ ನಾನು ಹಾನಿಯಾಗಿರುವ ಹಳ್ಳಿಗಳಿಗೆ ಭೇಟಿ ಕೊಟ್ಟಾಗ “ಏನ್ರೀ ಸರ್,

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಮ್ಮ ಮನಿಗೆ ರೊಕ್ಕನೇ ಬಂದಿರುವುದಿಲ್ಲ. ನೀವು ಹಾಂಗ ಬಂದು ನೋಡ್ತೀರಿ, ಹೋಗ್ತೀರಿ." ಎಂದು ಹೇಳುತ್ತಾರೆ. ಅದಕ್ಕೆ ನಾನು "ನೋಡಪಾ, ನಾವು ಪ್ರತಿಪಕ್ಷದಲ್ಲಿದ್ದೇವೆ. ಸದನ ಪ್ರಾರಂಭವಾಗಲಿ, ಮಾತನಾಡುತ್ತೇನೆ" ಎಂದು ಹೇಳಿದ್ದೇನೆ. ಮುಖ್ಯಮಂತ್ರಿಯವರು ಆಲಮಟ್ಟಿ ಜಲಾಶಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ನೇರವಾಗಿ ನಿಖರವಾದ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದೇನೆ. ನಾನು ಎಲ್ಲೆಲ್ಲಿಗೆ ಭೇಟಿ ನೀಡಿದ್ದೇನೆ ಎಂಬ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ. ಕಳೆದ ವರ್ಷದ ಹಾನಿಯನ್ನು ಹೇಳುತ್ತೇನೆ. ಮನೆಗಳಿಗೆ ಇನ್ನೂ ಸಂಪೂರ್ಣ ಹಣವನ್ನು ಕೊಟ್ಟಿಲ್ಲ. ಇನ್ನೂ ಅನೇಕ ರೈತರು ಬೆಳೆ ನಷ್ಟ ಪರಿಹಾರಕ್ಕಾಗಿ ಪರಿತಪಿಸುತ್ತಿದ್ದಾರೆ. ಸರ್ವೆ ಮಾಡಿಕೊಂಡು ಹೋಗಿರುವುದಕ್ಕೆ ರೈತರು ಬರೆದುಕೊಂಡು ಹೋದರು ಎಂದು ಹೇಳುತ್ತಾರೆ. ತಹಶೀಲ್ದಾರ್, ಉಪ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಯಾರಿಗೂ ನಮ್ಮ ಕಡೆ ಗಮನವೇ ಇಲ್ಲ. ನೀವು ಮೇಲ್ಮನೆ ಶಾಸಕರಾಗಿದ್ದು, ನಮ್ಮ ಜಿಲ್ಲೆಯನ್ನು ಪ್ರತಿನಿಧಿಸುತ್ತೀರಿ ಎಂದು ಹೇಳಿ ಸರ್ಕಾರವನ್ನು ಹಾಗೂ ನಮ್ಮನ್ನು ದೂಷಿಸುತ್ತಾರೆ. ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇವೆ, ಸದನದಲ್ಲಿ ಹೇಳುತ್ತೇವೆ, ಸರ್ಕಾರದ ಗಮನಕ್ಕೆ ತರುತ್ತೇವೆ ಎಂದು ಅವರಿಗೆ ಹೇಳುತ್ತೇವೆ. ನಾವು ಪ್ರತಿಪಕ್ಷದಲ್ಲಿದ್ದುಕೊಂಡು ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ, ಕಾಯಾ ವಾಚಾ ಮನಸಾ ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತೇವೆಂದು ಅವರಿಗೆ ಹೇಳುತ್ತೇವೆ. ಸರ್ಕಾರ ಹಳೆಯ ಪುರಾಣವನ್ನು ಹೇಳುತ್ತೇನೆಂದು ಹೇಳಿದರೆ ನಾನು ಏನು ಮಾಡಲಿ? ಅವರು ಎಲ್ಲಾ ಮುಗಿಸಿ ಪುಸ್ತಕವನ್ನು ಕಟ್ಟಿ ಹಾಕಿದ್ದರೆ ನಾನು ಏನನ್ನೂ ಹೇಳುತ್ತಿರಲಿಲ್ಲ. ಹೋದ ವರ್ಷದ ಪುರಾಣ ಮುಗಿದೇ ಇಲ್ಲ, ಎರಡನೇ ಬಾರಿಗೆ ಅವರ ಹೃದಯ ವಿದ್ರಾವಕ ಸ್ಥಿತಿಯನ್ನು, ಕರುಳು ಕಿತ್ತು ಬರುವಂತಹ ದೃಶ್ಯವನ್ನು ನೋಡಿದೆ. ಮುಧೋಳದ ಕುಂಬಾರಗಲ್ಲಿಯಲ್ಲಿ ಜನರು "ನಮ್ಮನ್ನು ನೀರಿನಲ್ಲಿ ಮುಳುಗಿಸಿ ಬಿಡಿ. ನಾವು ಸತ್ತು ಹೋದರೆ ನಿಮ್ಮನ್ನು ಕೇಳುವ ಪ್ರಶ್ನೆಯೇ ಇರುವುದಿಲ್ಲ" ಎಂದು ಹೇಳಿದರು. ಅದಕ್ಕೆ ಎರಡೂ ಕೈ ಜೋಡಿಸಿ ನಿಮ್ಮನ್ನು ಕೇಳುತ್ತೇವೆ. ಇದು ಅತ್ಯಂತ ಜ್ವಲಂತ ಸಮಸ್ಯೆ. ಇಡೀ ಕರ್ನಾಟಕ ನೀರಿನಲ್ಲಿ ಮುಳುಗಿ ಹೋಗಿದೆ. ಈಗಾಗಲೇ ಮೊದಲೊಂದು ಬಾರಿ ಮುಳುಗಿತ್ತು. ಈಗ ಪುನಃ ಮುಳುಗಿದೆ. ಕೋವಿಡ್‌ನಿಂದಾಗಿ ರೈತರು ಕೂಡ ಸಂಕಷ್ಟಕ್ಕೀಡಾಗಿದ್ದು, ಸರ್ಕಾರ ಅವರ ಕಷ್ಟಕ್ಕೆ ಧಾವಿಸಿ ಬರಬೇಕು ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ. ಸಾರ್ವಜನಿಕ ಕಟ್ಟಡಗಳು, ಶಾಲಾ ಕೊಠಡಿಗಳು, ಸೇತುವೆಗಳು, ಅಂಗನವಾಡಿ ಕಟ್ಟಡಗಳು ಎಲ್ಲವನ್ನೂ ಪುನರ್ನಿರ್ಮಾಣ ಮಾಡಬೇಕಿದೆ. ಕಳೆದ ಬಾರಿ ನೆರೆ ಸಂತ್ರಸ್ತರಿಗಾಗಿ ಸಂಗ್ರಹಿಸಿದಂತಹ ಆಹಾರ ಪದಾರ್ಥವು ಶಾಸಕರ ಕಛೇರಿಯಲ್ಲಿಯೇ ಉಳಿದು ಕೊಂಡಿರುವ ಉದಾಹರಣೆಯಿದೆ. ಯಾರು, ಏನು ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. We

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

should say thanks to the donors. ನಾವು ನೀರಿನಲ್ಲಿ ಮುಳುಗಿದಂತಹ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಎಂಬ ಭೇದವಿಲ್ಲದೆ ಬೆಂಗಳೂರಿನಿಂದ ನೂರಾರು, ಸಾವಿರಾರು ಲಾರಿಗಳ ಮುಖಾಂತರ ಬಂದ ಜನರು ಎಲ್ಲಾ ರೀತಿಯ ಸಹಾಯ-ಸಹಕಾರವನ್ನು ನೀಡಿದ್ದಾರೆ. ಅವರಿಗೆ ನಾನು ಎಷ್ಟು ಧನ್ಯವಾದಗಳನ್ನು ಹೇಳಿದರೂ ಕಡಿಮೆ. ಅದನ್ನು ವಿತರಣೆ ಮಾಡುವುದಕ್ಕೆ ಕೆಲವರು ರಾಜಕೀಯವನ್ನು ಬೆರೆಸಿದರು. ಕಳೆದ ಬಾರಿ ರೂ.35,000 ಕೋಟಿ. ಈಗ ಮುಳುಗಿರುವ ಹಳ್ಳಿಗಳಿಗೆ ಸರ್ಕಾರ ಟಾರ್ಗೆಟ್ ಮಾಡಿರುವ ರೀತಿಯಲ್ಲಿ 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ, 1000ಕ್ಕೂ ಮೇಲ್ಪಟ್ಟ ಹಳ್ಳಿಗಳು ಇದ್ದು, ಅವರನ್ನು ಏಕೆ ಶಾಶ್ವತವಾಗಿ ಸ್ಥಳಾಂತರ ಮಾಡಬಾರದು. ಜಮೀನನ್ನು ಸ್ಥಳಾಂತರ ಮಾಡುವುದಕ್ಕೆ ಆಗುವುದಿಲ್ಲ. ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕೆ ವಿಶ್ವವಿದ್ಯಾಲಯ ಇದೆ. ಪ್ರತಿ ವರ್ಷ ಗ್ರಾಮಗಳು ಮುಳುಗಡೆಯಾದಾಗ ಗ್ರಾಮಗಳನ್ನು ಎತ್ತರದ ಸ್ಥಳಗಳಿಗೆ ಸ್ಥಳಾಂತರಗೊಳಿಸಬಹುದು. ಪ್ರತಿ ವರ್ಷ ಜಮೀನು ಮುಳುಗಡೆಯಾಗುವುದಕ್ಕೆ ಏನು ಮಾಡಲಾಗುತ್ತದೆ? ಅದಕ್ಕಾಗಿ ಮಾನ್ಯ ಸಭಾಪತಿಯವರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ we have got men and material, we have got agricultural universities and horticulture universities. Scientists are working round the clock. ಅವರಿಗೆ ಹೇಳಬೇಕು. ಮಹಾಪೂರ ಬಂದರೂ ಜಮೀನಿನಲ್ಲಿ ನೀರು ತುಂಬಿಕೊಂಡು ಬೆಳೆಯು ನೀರಿನಲ್ಲಿ ಮುಳುಗಿದರೂ ಕೂಡ resist ಮಾಡುವಂತಹ, water resistant crops ವಿಜ್ಞಾನಿಗಳು ಕಂಡು ಹಿಡಿಯಬೇಕು. ವಿಶ್ವವಿದ್ಯಾಲಯದವರಿಗೆ ಎಲ್ಲಾ ರೀತಿಯಲ್ಲಿಯೂ ಸಹಾಯ ಹಾಗೂ ಸಹಕಾರವನ್ನು ಮಾಡಲಾಗುತ್ತದೆ. ಕೃಷಿ ವಿಶ್ವವಿದ್ಯಾಲಯ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಬಹಳಷ್ಟು ಜನ ವಿಜ್ಞಾನಿಗಳಿದ್ದಾರೆ. ಈ ರೀತಿಯಾದಂತಹ ಪರಿಸ್ಥಿತಿ ಎದುರಾದಾಗ ಸಮಸ್ಯೆಯ ಬಗ್ಗೆ ಅವರಿಗೆ ಏಕೆ ಹೇಳಬಾರದು? ಇದರ ಬಗ್ಗೆ ಕೃಷಿ ಸಚಿವರಾಗಲೀ ಅಥವಾ ತೋಟಗಾರಿಕೆ ಸಚಿವರಾಗಲೀ ಗಮನ ಹರಿಸಬೇಕು. ಪ್ರತಿ ವರ್ಷ ಮುಳುಗಡೆಯಾದಾಗ ಗ್ರಾಮಗಳನ್ನು ಸ್ಥಳಾಂತರ ಮಾಡಬಹುದು. ಕೃಷಿ ಭೂಮಿ ಮುಳುಗುವುದರಿಂದ ಪೀಕು-ಪೈರುಗಳು ಹಾನಿಗೊಳಗಾಗುತ್ತವೆ. ಪೈರು ನೀರಿನಲ್ಲಿ ಮುಳುಗಿದರೂ ಸಹ ಅದಕ್ಕೆ ಧಕ್ಕೆಯಾಗದಂತೆ resistant varieties ಏನಾದರೂ ಕಂಡು ಹಿಡಿಯುವಂತೆ ವಿಜ್ಞಾನಿಗಳಿಗೆ ಹೇಳಬೇಕು. ಏಕೆಂದರೆ ನಾವು 21ನೇ ಶತಮಾನದ ಹೊಸ್ತಿಲಿನಲ್ಲಿದ್ದೇವೆ. There is rapid change in the science.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Agriculture Research ಎಷ್ಟು ವೇಗವಾಗಿದೆಯೆಂದರೆ ನಿಮಿಷ–ನಿಮಿಷಕ್ಕೂ ಬದಲಾವಣೆಯಾಗುತ್ತಿರುತ್ತದೆ.

**(ಮುಂದು)**

**(733) 5.10 21.9.2020 kg vk**

**ಶ್ರೀ ಎಸ್.ಆರ್.ಪಾಟೀಲ್ (ಮುಂದು)–**

To be frank, agriculture science is a difficult science. It is more difficult than space science. ಮಂಗಳ ಲೋಕಕ್ಕೆ ಹೋಗುವುದು ಬಹಳ ಸರಳ. ಆದರೆ, ಕೃಷಿ ವಿಜ್ಞಾನ ಬಹಳ ಕಠಿಣವಾದಂತಹ ವಿಜ್ಞಾನ. ಇದನ್ನು ಬಹಳ ಸರಳ ಎಂದು ತಿಳಿದುಕೊಳ್ಳಬಾರದು. ನಮ್ಮ ಉತ್ತರ ಕರ್ನಾಟಕದ ಕಡೆ ಬಹಳ ಜನರು ಏನು ಮಾಡುತ್ತಾರೆಂದರೆ, ಅವರ ಮಕ್ಕಳು ದಂಡರಾಗಿದ್ದರೆ, ಅವರ ಹೆಗಲಿಗೆ ಬಾರ್‌ಕೋಲು ಹಾಕಿ ಒಕ್ಕಲುತನಕ್ಕೆ ಹೋಗು ಎಂದು ಹೇಳುತ್ತಾರೆ. ಇದಕ್ಕೆ ನನ್ನನ್ನು ಕೇಳಿದರೆ, rank holders and gold medalists ಇರುವಂತಹವರನ್ನು ಒಕ್ಕಲುತನ ಮಾಡುವುದಕ್ಕೆ ಕಳುಹಿಸಬೇಕು ಎಂದು ಹೇಳುತ್ತೇನೆ. ಅಂತಹ difficult science ಇದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇಂತಹ ಪರಿಸ್ಥಿತಿ ಬಂದಾಗ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಅವರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಅದಕ್ಕೆ ಅವರು ಇಂತಹ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಕೊಳ್ಳಬೇಕು. ಇದು ಪ್ರತಿ ವರ್ಷ it has become a routine affair. ಈ ವರ್ಷ ಒಂದು ಬಾರಿ ಅಲ್ಲ, ಎರಡು ಬಾರಿ ಮುಳುಗಿದೆ. ಮುಂದಿನ ವರ್ಷವು ಮುಳುಗುತ್ತದೆ. ಹಾಗೆಯೇ, ಮುಳುಗುತ್ತಾ ಹೋಗುತ್ತಿರುತ್ತದೆ. ಇದಕ್ಕೆ ಪ್ರತಿ ವರ್ಷವು ಪರಿಹಾರವನ್ನು ಕೊಡುವುದಕ್ಕೆ ಆಗುತ್ತದೆಯೇ? ಅದಕ್ಕೆ ಎಷ್ಟು ಗ್ರಾಮಗಳು ಇವೆ, ಅವುಗಳನ್ನು ಸಂಪೂರ್ಣವಾಗಿ ಸ್ಥಳಾಂತರ ಮಾಡಬೇಕು. Beg, Borrow, or Steal. You shift all those villages. Crop ಬಗ್ಗೆ ವಿಜ್ಞಾನಿಗಳ ಸಭೆಯನ್ನು ಕರೆಯಿರಿ. ಬೆಳೆ ನೀರಿನಲ್ಲಿ ಮುಳುಗಿದರೂ ಸಹ, ಬೆಳೆ ನಾಶವಾಗದಂತೆ ಇರುವ varieties ಗಳನ್ನು ಕಂಡು ಹಿಡಿಯುವಂತೆ ಹೇಳಿ. ಇದು ಆಸಾಧ್ಯವಾದುದಲ್ಲ. ಈಗ agriculture ಅನ್ನು modern agriculture adopt ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

fifty million tons ಇದ್ದದ್ದು two hundred and eighty million tons ಗೆ ಹೋಯಿತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ fifty million tons ಇತ್ತು. ಈಗ two hundred and eighty million tons of food grains ಅನ್ನು ಬೆಳೆಯುತ್ತಿದ್ದೇವೆ. ಹಾಗಾದರೆ, ಇದು ಹೇಗೆ ಸಾಧ್ಯವಾಯಿತು? "ಹಸಿರು ಕ್ರಾಂತಿಯ" ಮೂಲಕ ದೇಶದ ಕೃಷಿ ಉತ್ಪನ್ನ ಹೆಚ್ಚಿಗೆ ಆಯಿತು. ಇದು ಹೇಗೆ ಆಯಿತು? Due to the research. ಕೃಷಿ ವಿಶ್ವವಿದ್ಯಾಲಯದ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸೇರಿ ಹಸಿರು ಕ್ರಾಂತಿಯ ಮೂಲಕ ಹೊಸ ಹೊಸ ಬೀಜಗಳನ್ನು ಕಂಡುಹಿಡಿದರು. ಹೊಸ ಹೊಸ ರಸಗೊಬ್ಬರಗಳನ್ನು ಕಂಡುಹಿಡಿದರು. ಹೊಸ ಹೊಸ ಆಧುನಿಕ ಬೇಸಾಯವನ್ನು ಪದ್ದತಿಯನ್ನು ತಂದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ನಮ್ಮ ಜನರು ದಿವಸಕ್ಕೆ ಒಂದು ಬಾರಿ ಮಾತ್ರ ಊಟ ಮಾಡುತ್ತಿದ್ದರು. ನೂರಕ್ಕೆ 60% ಜನರು ರಾತ್ರಿ ವೇಳೆ ಒಂದು ಚೆಂಬು ನೀರು ಕುಡಿದು ಹೊಟ್ಟೆ ನೆಲಕ್ಕೆ ಮಾಡಿ ಮಲಗುತ್ತಿದ್ದರು. ಹೊಟ್ಟೆಗೆ ತಣ್ಣೀರಿನ ಪಟ್ಟಿಯನ್ನು ಕಟ್ಟಿಕೊಳ್ಳುತ್ತಿದ್ದರು. ಈಗ ಎರಡು ಹೊತ್ತು ಊಟ ಮಾಡುವಂತಹ ಪರಿಸ್ಥಿತಿ ಬಂದಿದೆ. ಈಗ "ಹಸಿವು ಮುಕ್ತ ಭಾರತ" ನಿರ್ಮಾಣವಾಗಿದೆ.

ಮಾನ್ಯ ಸಭಾಪತಿಯವರೇ, ಈ ಸರ್ಕಾರದವರು ರೈತರ ಪರ, ರೈತರ ಪರ ಹಾಗೂ ರೈತರು ಎಂದರೆ, ದೇವರು ಎಂದು ಹೇಳುತ್ತಾರೆ. ಆದರೆ, ಕೇವಲ ಬಾಯಿ ಮಾತಿನಿಂದ ಹೇಳಬಾರದು. ಹೇಳಿದ್ದನ್ನು ಮಾಡಿ ತೋರಿಸಬೇಕು. Whatever you say, you implement them. ನಾವು ಗ್ರಾಮೀಣಾ ಭಾಗಕ್ಕೆ ಚುನಾವಣೆಯ ಸಂದರ್ಭದಲ್ಲಿ ಹೋದಾಗ, ಅಲ್ಲಿನ ಜನರು ಈಗ ರಾಜಕಾರಣಿಗಳು ಹೇಳುತ್ತಾರೆ, ಆಮೇಲೆ ಅವರು ಏನು ಮಾಡುವುದಿಲ್ಲವೆಂದು ಹೇಳುತ್ತಾರೆ. ಅಂದರೆ, ಎಲ್ಲಿಗೆ ಬಂತು ನಮ್ಮ ಪರಿಸ್ಥಿತಿ. ರಾಜಕಾರಣಿಗಳು ಹೇಳಿದ್ದನ್ನು implement ಮಾಡದಿರುವುದಕ್ಕೆ, ರಾಜಕಾರಣಿಗಳು ಜನರ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿರುವುದಕ್ಕೆ ಆ ರೀತಿ ಮಾತನಾಡುತ್ತಿದ್ದಾರೆ. ರಾಜಕಾರಣ ಎಂದರೆ, ಇದು ಒಂದು wretched and worst field level ಗೆ ಬಂದಿದೆ. ಪ್ರಮಾಣಿಕರು, ನಿಷ್ಠಾವಂತರು ಇವತ್ತು ರಾಜಕಾರಣದಲ್ಲಿ ಇರಬೇಕೇ ಅಥವಾ ಇರಬಾರದೇ ಎನ್ನುವಷ್ಟರ ಮಟ್ಟಿಗೆ ಆಗಿದೆ. ನಮ್ಮ ಕಡೆಯ ಜನರು ನಮಗೆ ನೋಡ್ರಿ ಪಾಟೀಲ್‌ರವರೇ, ಇದರಲ್ಲಿ ರಾಜಕಾರಣ ಮಾಡಬೇಡಿ ಎಂದು ಹೇಳುತ್ತಾರೆ. ಅವರು ರಾಜಕೀಯ ಎಂದರೆ, ಮೋಸ ಮಾಡುವುದು ಎಂದು ತಿಳಿದುಕೊಂಡಿದ್ದಾರೆ. ಇಂತಹ ಪರಿಸ್ಥಿತಿ ಏಕೆ ಬಂತು? ನಾನು ಇದನ್ನು ಆಡಳಿತ ಪಕ್ಷದವರಿಗಷ್ಟೇ ಹೇಳುತ್ತಿಲ್ಲ. It is applicable to all Political Parties.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಸೊಗಸಾಗಿ ಮಾತನಾಡುತ್ತಿದ್ದಾರೆ. ಸುಮಾರು 70–72 ವರ್ಷಗಳಿಂದ ನಾವು ಮತ್ತು ಅವರು ರಾಜಕಾರಣ ಮಾಡಿದ್ದೇವೆ. ಆದರೆ, ಬಹಳ ವರ್ಷಗಳ ಕಾಲ ಅವರು ರಾಜಕಾರಣ ಮಾಡಿದ್ದಾರೆ. ಹಾಗಾಗಿ, ಅಂತಹ ಪರಿಸ್ಥಿತಿ ಏನಾದರೂ ನಿರ್ಮಾಣವಾಗಿದ್ದರೆ, ಅದರಲ್ಲಿ ನಮ್ಮ ಪಾಲಿಗಿಂತ ಅವರ ಪಾಲು ಜಾಸ್ತಿ ಎಂದು ನನ್ನ ಅನಿಸಿಕೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಅವರು ಹೇಳಿದರು ಎಂದು ಹೇಳಿದೆ ಅಷ್ಟೇ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನೂರಕ್ಕೆ 85 per cent ರಷ್ಟು ನಿರಕ್ಷರಕುಕ್ಷಿಗಳು ಇದ್ದರು. ಕೇವಲ 15% ಸುಶಿಕ್ಷಿತರು ಇದ್ದರು. ನಾವು ಬಹಳ ವರ್ಷಗಳ ಕಾಲ ಆಡಳಿತ ಮಾಡಿದ್ದೇವೆ. ಇವತ್ತು 85 per cent ರಷ್ಟು ಸುಶಿಕ್ಷಿತರು ಇದ್ದಾರೆ. 15% ನಿರಕ್ಷರಕುಕ್ಷಿಗಳು ಇದ್ದಾರೆ. Is it not an achievement, literacy achievement? ಹಿಂದೆ ನೂರಕ್ಕೆ 75% ಜನರಿಗೆ ಸೂರು ಇರಲಿಲ್ಲ. ಭೂಮಿಯೇ ಹಾಸಿಗೆ, ಆಕಾಶವೇ ಹೊದಿಕೆಯಾಗಿತ್ತು. ಇದು ನೂರಕ್ಕೆ 75% ಆಗಿತ್ತು. ಇವತ್ತು "ಗುಡಿಸಲು ಮುಕ್ತ ಭಾರತ" ನಿರ್ಮಾಣವಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಒಂದು ಹೊತ್ತು ಮಾತ್ರ ಊಟಕ್ಕೆ ಇತ್ತು. Imports of US wheat under PL-480, ಅಮೇರಿಕಾದಿಂದ ಗೋಧಿ ಬರಬೇಕಾಗಿತ್ತು ನಮ್ಮ ಮನೆಯಲ್ಲಿ ಚಪಾತಿ ಮಾಡಬೇಕಾಗಿತ್ತು. Fifty million tons food grains ಇದ್ದಿದ್ದು, ಇವತ್ತು two hundred and eighty million tons ಬೆಳೆಯುತ್ತಿದ್ದೇವೆ. Food grains ಅನ್ನು ವಿದೇಶಕ್ಕೆ ರಫ್ತು ಮಾಡುತ್ತಿದ್ದೇವೆ.

ಮಾನ್ಯ ಸಭಾಪತಿಯವರೇ ಈ ಸಾಧನೆ ನಮ್ಮ ಪಕ್ಷದ್ದು ಅಲ್ಲವೇ? ಬಹಳ ವರ್ಷಗಳ ಕಾಲ ಕಾಂಗ್ರೆಸ್‌ನವರು ಆಡಳಿತದಲ್ಲಿದ್ದರು ಎಂದು ಮಾನ್ಯ ಸಭಾನಾಯಕರು ಹೇಳಿದ್ದಾರೆ. ಆದರೆ, ನಾನು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಇದ್ದ ಸಂಗತಿಯನ್ನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಎಲ್ಲಾ ಸರ್ಕಾರಗಳು ಬಡವರಿಗೆ ಸಹಕಾರ ಮಾಡುವುದಕ್ಕೆ ಕೆಲಸ ಮಾಡುತ್ತಿವೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹ ಇನ್ನೂ 25% ಜನರಿಗೆ ಕುಡಿಯುವುದಕ್ಕೆ ಸರಿಯಾದ ನೀರು ಸಿಕ್ಕಿಲ್ಲ. 25% ಜನರಿಗೆ ಸರಿಯಾದ ಮನೆ ಇಲ್ಲ. ಅದೇ ರೀತಿ 20 ರಿಂದ 22% ಜನರ ಮನೆಗಳಿಗೆ ವಿದ್ಯುತ್ ದೀಪ ಇಲ್ಲ. ಇದು ಸತ್ಯ ಅಲ್ಲವೇ, ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯದನ್ನು ಮಾಡುತ್ತೇವೆ. ಅವರು ಸಹ ಒಳ್ಳೆಯದನ್ನೇ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಯಾವುದೇ ಸರ್ಕಾರ ಆಡಳಿತ ಚುಕ್ಕಾಣಿ ಹಿಡಿದಾಗ, ಸಮಾಜದ ಕಟ್ಟ ಕಡೆಯ ಬಡವನನ್ನು ಮುಖ್ಯ ವಾಹಿನಿಗೆ ತರುವಂತಹ ಕೆಲಸ ಮಾಡಬೇಕಾಗುತ್ತದೆ. ಅವರು ಮಾಡಿದ್ದಾರೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಇನ್ನಷ್ಟು ಪ್ರಮಾಣದಲ್ಲಿ ಮಾಡಿದ್ದರೆ, ಇಷ್ಟು ಪ್ರಮಾಣದಲ್ಲಿ ಉಳಿಯುತ್ತಿರಲಿಲ್ಲ ಎಂದು ಹೇಳಿದ್ದೇನೆ ಅಷ್ಟೇ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ನನಗೆ ದಯವಿಟ್ಟು ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಂತಹ ಸಂದರ್ಭದಲ್ಲಿ ನಮ್ಮ ದೇಶದ ಜನಸಂಖ್ಯೆ ಒಟ್ಟು 30 ಕೋಟಿ ಇತ್ತು. ಆದರೆ, ಇವತ್ತು 130 ಕೋಟ ಜನಸಂಖ್ಯೆ ಆಗಿದೆ. ಜನಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಅದರ ಅನುಗುಣವಾಗಿ ಕೆಲಸ ಮಾಡಿದ್ದೇವೆ. ಅವತ್ತಿನ ದಿವಸ ನೀರಾವರಿ ಯೋಜನೆ ಎಷ್ಟು ಹೇಕ್ಟರ್ ಪ್ರದೇಶದಲ್ಲಿ ಇತ್ತು, ಇವತ್ತು ಅದರಲ್ಲಿ ಎಷ್ಟು ಬದಲಾವಣೆಗಳು ಆಗಿವೆ, ಅವತ್ತು ಎಷ್ಟು ಅಣೆಕಟ್ಟುಗಳು ಇದ್ದವು, ಇವತ್ತು ಎಷ್ಟು ಅಣೆಕಟ್ಟುಗಳು ಆಗಿವೆ ಎಂಬುದನ್ನು ನೋಡಬೇಕು ಅಲ್ಲವೇ, ಇದು ಎಲ್ಲವೂ ಸಾಧನೆ ಅಲ್ಲವೇ,

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮಾತನಾಡುವಾಗ ಇದರ ಬಗ್ಗೆ ಮಾತನಾಡಿ. ದಯವಿಟ್ಟು ಈಗ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಾಕಷ್ಟು ಸಾಧನೆಯಾಗಿದೆ. ನಾನು achievement ಅನ್ನು ಹೇಳಿದ್ದೇನೆ. Nutshell ನಲ್ಲಿ ಹೇಳಿದ್ದೇನೆ. ಅವರು ನಮ್ಮನ್ನು ಸ್ವಾತಂತ್ರ್ಯ ತಂದಿದ್ದೀರಿ, Emergency ಏಕೆ ತಂದಿದ್ದೀರಿ ಎಂದು ಏಕೆ ಮಾತನಾಡುತ್ತಾರೆ. ಇಲ್ಲಿ ವಿಷಯವೇ dilute ಆಗಿ ಹೋಗುತ್ತದೆ. ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯವರು 1885 ರಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಬೇಕೆಂದು ಈ ಪಕ್ಷ ಸ್ಥಾಪನೆ ಆಗಿತ್ತು. ನಮ್ಮ ರಾಷ್ಟ್ರದ ತಂದೆ ಎನಿಸಿಕೊಂಡಿರುವಂತಹ ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯವರು ಸೂರ್ಯ ಮುಳಗದ ಸಾಮ್ರಾಜ್ಯ ಎಂದು ಹೇಳುತ್ತಿದ್ದರು. ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಬೇಕಾದರೆ. ಸುಮಾರು 6.50 ಲಕ್ಷ ಜನರು ಹೋರಾಟ ಮಾಡಿ ಸತ್ತಿದ್ದಾರೆ. ನಮ್ಮ ಹಿರಿಯರು ದೀರ್ಘಕಾಲದವರೆಗೆ ಜೈಲಿನಲ್ಲಿ ಕಾಲ ಕಳೆದಿದ್ದಾರೆ. ಅಷ್ಟೆ ಅಲ್ಲ. ನಮ್ಮ ಹಿರಿಯರು ಬ್ರಿಟಿಷರ ಲಾಠಿ ಏಟು, ಬೂಟಿನ ಏಟು ತಿಂದಿದ್ದಾರೆ. ಅಲ್ಲದೇ. ಬ್ರಿಟಿಷರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂದೂಕಿನ ಗುಂಡು ಹಾಕುತ್ತೇವೆಂದು ಹೇಳಿದ್ದರು. ಆಗ ನಮ್ಮ ಹಿರಿಯರು ಗುಂಡನ್ನು ಬೆನ್ನಿಗೆ ಹಾಕಿ ಎಂದು ಹೇಳಿದ್ದರು..

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, Please don't interrupt me Madam. ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಬೀದಿ ಬೀದಿಯಲ್ಲಿ ಏರ್ಪಡಿಸಿದಂತಹ ನೇಣು ಗಂಬಕ್ಕೆ ನಮ್ಮ ಹಿರಿಯರು 'ಒಂದೇ ಮಾತರಂ' ಎಂದು ನೇಣು ಗಂಬಕ್ಕೆ ಹೇರಿದ್ದಾರೆ. ನಾವು ಅಂತಹವರ ವಂಶದ ಕುಡಿಗಳು. ನಾನು ಬಹಳ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ವಿಷಯಾಂತರ ಮಾಡುವುದು ಬೇಡ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಹಾತ್ಮ ಗಾಂಧಿಜೀಯವರು ಸ್ವಾತಂತ್ರ್ಯ ಬಂದ ನಂತರ ಕಾಂಗ್ರೆಸ್‌ನ್ನು ವಿರ್ಸಜನೆ ಮಾಡಿ ಚುನಾವಣೆಗೆ ಹೋಗುವುದಕ್ಕೆ ಹೇಳಿದ್ದರು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ಬಹಳ ವಿಷಯ ಇದೆ. ಆದರೆ, ನಾನು ಅವರಿಗೆ ನೋವಾಗುವಂತಹ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಪಕ್ಷದ ಬಗ್ಗೆ ಮಾತನಾಡಿದ್ದರು ಎಂದು ನಾನು ಮಾತನಾಡಿದೆ ಅಷ್ಟೆ. ಇಲ್ಲವೆಂದರೆ, ನಾನು ಅದರ ಬಗ್ಗೆ ಮಾತನಾಡುವಂತಹ ಗೋಜಿಗೆ ಹೋಗುವುದಿಲ್ಲ. ನಮ್ಮನ್ನು 60 ವರ್ಷಗಳ ಕಾಲ ಏನು ಮಾಡಿದ್ದೀರಿ ಎಂದು, ಹಾದಿ ಬೀದಿಯಲ್ಲಿ ಮಾತನಾಡಿದಂತೆ ಮಾತನಾಡಿದರೆ, ನಾವು ಅದಕ್ಕೆ ಸ್ವಲ್ಪವಾದರೂ ಉತ್ತರವನ್ನು ಕೊಡಬೇಕಲ್ಲವೇ; ನನಗೆ ಮಾನ್ಯ ಪೂಜಾರಿಯವರ ಬಗ್ಗೆ ಬಹಳ ಗೌರವ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಅವರು ಇನ್ನೂ ಹೆಚ್ಚಿಗೆ ಮಾಡುವುದು ಇತ್ತು ಎಂದು ಹೇಳಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಅವರು ಅಧಿಕಾರಿದಲ್ಲಿ ಇದ್ದಾರೆ ಅಲ್ಲವೇ, ಅವರು ಮಾಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವೀಗ ಮಾಡುತ್ತಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಅವರು ದೇಶವನ್ನು ಆಳುತ್ತಿದ್ದಾರೆ. ಅವರು ದೇಶಕ್ಕೆ ಒಳ್ಳೆಯ ಕೆಲಸವನ್ನು ಮಾಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–:–** ಮಾನ್ಯ ಸಭಾಪತಿಯವರೇ,. ಮಾನ್ಯ ಹರಿಪ್ರಸಾದ್‌ರವರೇ,

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:– ಮಾ**ನ್ಯ ಸಭಾಪತಿಯವರೇ, ಅವರು ವಿರೋಧ ಪಕ್ಷದಿಂದ ಆಳುವ ಪಕ್ಷಕ್ಕೆ ಬಂದಿದ್ದಾರೆ. ಅವರು ಏಕೆ ಬಂದಿದ್ದಾರೆ? ಅಂತಹದ್ದು ಏನಿತ್ತು? ವಿರೋಧ ಪಕ್ಷದಲ್ಲಿ ಇದ್ದುಕೊಂಡು ನಮ್ಮ ತಪ್ಪುಗಳನ್ನು ಎತ್ತಿಹಿಡಿಯಬಹುದಾಗಿತ್ತು. COVID-19 ಬಂತು, Flood ಬಂತು. ಈಗ ನೋಡಿ ಅವರು ನನಗೆ ಅಧಿಕಾರಕ್ಕೆ ಬಂದು ಬಹಳ ತಪ್ಪಾಗಿದೆ ಎಂದು ಹೇಳುತ್ತಾರೆ. ಈಗ ಅವರಿಗೆ ತಪ್ಪಾಗಿದೆ ಎಂದು ಬಹಳ ಪಶ್ಚಾತಾಪವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಅನುಭವದ ಮಾತನ್ನು ಹೇಳುತ್ತೇನೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಬಹಳ ಹಿರಿಯ ಸದಸ್ಯರಾಗಿದ್ದಾರೆ. ಅವರು ಇಲ್ಲಿ ಸಭಾನಾಯಕರಾಗಿ ಕೆಲಸ ಮಾಡುತ್ತಿದ್ದರು. ಈಗ ವಿರೋಧ ಪಕ್ಷದ ನಾಯಕರಾಗಿ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದ್ದಾರೆ. ನನ್ನ ಅನುಭವದ ಪ್ರಕಾರ, ಮಾನ್ಯ ಎಸ್.ಆರ್.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ ಎಂದು ನನಗೆ ಅನಿಸುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮುಂದೆ ನೋಡೋಣ ಅದನ್ನು ತೀರ್ಮಾನ ಮಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,. ಹಾಗಾದರೆ, ನಾನು ಹೇಳಿದ್ದು ಸುಳ್ಳೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(734)21-09-2020(5-20)ಎಂವಿ-ವಿಕೆ**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಾಂಗ್ರೆಸ್ ಪಕ್ಷ ಎಪ್ಪತ್ತು ವರ್ಷ ಇತ್ತು ಎಂದು ಪ್ರಶ್ನೆ ಹಾಕಿದ್ದು. ಆದರೆ, ಈಗ ಏನಾಗಿದೆ ಎಂದರೆ, ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ರಾಜಕಾರಣಿಗಳು ಎಂದರೆ ಎಲ್ಲರೂ ಸಹ ಬೈಯುವಂತಹ ಸ್ಥಿತಿ ಬಂದಿದೆ ಮತ್ತು ತಪ್ಪು ತಿಳಿದುಕೊಂಡಿದ್ದಾರೆ. ಈಗ ನಾವು ಎಪ್ಪತ್ತು ವರ್ಷ ಇದ್ದದ್ದು ನಿಜ. ನಾವು ಏನು ಎಪ್ಪತ್ತು ವರ್ಷದಲ್ಲಿ ಮಾಡಿದ್ದೆವು. ಅವರು ಆರು ವರ್ಷದಲ್ಲಿ ಅದನ್ನೆಲ್ಲಾ ನಿರ್ನಾಮ ಮಾಡಿಬಿಟ್ಟರು ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರ ಮಾನಸಿಕತೆ ಏನಿದೆ ಎಂದರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವರು ಎಪ್ಪತ್ತು ವರ್ಷದಲ್ಲಿ ಮಾಡಿರುವುದನ್ನು ನಾವು ಆರು ವರ್ಷದಲ್ಲಿ ಮಾಡಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುವಂತಹ ಪ್ರತಿಯೊಂದು ಶಬ್ಧಕ್ಕೂ ಬದ್ಧನಾಗಿದ್ದೇನೆ. ನಾನು ಏನು ಹೇಳಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಬೇಕು. ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಅವರು ಮಾಡಿರುವುದನ್ನು ಹೇಳಿದ್ದೇನೆ. ನಾವು ಹೇಳಿರುವುದು ರಾಜಕಾರಣಿಗಳಿಗೆ ಅಸಡ್ಡೆ ಬರುವಂತಹ ಸಂಪ್ರದಾಯ ಅಥವಾ ವ್ಯವಸ್ಥೆ ನಿರ್ಮಾಣವಾಗಿದ್ದರೆ, ಅದಕ್ಕೆ ಯಾವುದೇ ಒಂದೇ ಪಕ್ಷ ಕಾರಣವಾಗಿರುವುದಿಲ್ಲ. ಕಾಂಗ್ರೆಸ್ ಪಕ್ಷದವರು ಹೆಚ್ಚು ಆಳಿದವರು ಅದಕ್ಕೆ ಅವರ ಪಾಲು ಇರಬಹುದು ಎಂದು ಹೇಳಿದೆ. ಇಲ್ಲವೆಂದರೆ ಅದಕ್ಕೆ ನನ್ನ ಆಕ್ಷೇಪವಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿವಯರೇ, ಎಲ್ಲರೂ ಕಾರಣರು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ನಿಮ್ಮ ಪಕ್ಷಕ್ಕೆ ಅಷ್ಟೆ ಹೇಳಿಲ್ಲ. Present political scenario and situation ಹೇಗಿದೆ?

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Irrespective of Party, it has gone to that level. So, I am much worried and every day I am thinking about it.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನನ್ನ ಒಂದೇ ಒಂದು ವಿನಂತಿ ಏನೆಂದರೆ, ಅವರು ಕೊಟ್ಟಿರುವಂತಹ ನಿಯಮ 59 ಅನ್ನು ತಾವು ನಿಯಮ 68ಕ್ಕೆ convert ಮಾಡಿದ್ದೀರಿ. ರಾಜ್ಯದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಸುರಿದ ಭಾರಿ ಮಳೆಯಿಂದಾಗಿ, ಆಗಿರುವಂತಹ ಅನಾಹುತಗಳ ಬಗ್ಗೆ ಚರ್ಚೆ ಎಂದು ಹೇಳಿದ್ದಾರೆ. ಅದು ವಿಸ್ತಾರವಾಗಿರುವುದಕ್ಕೆ ನಾವು ಕಾರಣರಲ್ಲ. ದಯವಿಟ್ಟು ಮಾನ್ಯ ವಿರೋಧ ಪಕ್ಷದ ಸದಸ್ಯರು ಮೂಲ ವಿಷಯಕ್ಕೆ ಬಂದರೆ ಒಳ್ಳೆಯದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಮೂಲ ವಿಷಯಕ್ಕೆ ಬರುವುದಕ್ಕೆ ಅವರು ಬಿಡುತ್ತಿಲ್ಲ. ವಿಷಯವನ್ನು ಎಲ್ಲಿಗೋ ತೆಗೆದುಕೊಂಡು ಹೋಗುತ್ತಾರೆ. ಮಾನ್ಯ ಸದಸ್ಯರಾದಂತಹ ಶ್ರೀಮತಿ ಭಾರತಿ ಶೆಟ್ಟಿಯವರು ಹೊಸದಾಗಿ ಸದಸ್ಯರಾಗಿ ಬಂದು ಇವತ್ತೇ ಪ್ರಾರಂಭ ಮಾಡಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಅವರು ಹೇಳಿರುವುದಕ್ಕೆ ಉತ್ತರ ನೀಡುತ್ತಿದ್ದೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅವರನ್ನು ಬಿಟ್ಟು. ನನ್ನನ್ನು ನೋಡಿಕೊಂಡು ಮಾತನಾಡಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಕಂದಾಯ ಸಚಿವರನ್ನು ನೋಡಿಕೊಂಡು ಮಾತನಾಡುತ್ತೇನೆ. ನಾನು ವಿಷಯವನ್ನು conclusion ಮಾಡುವುದಕ್ಕೆ ಬಂದಿದ್ದೇನೆ. ನೋಡಿ ಈ ದೇಶದ ಭದ್ರತೆ, ಅಖಂಡತೆ ಮತ್ತು ಸಾರ್ವಭೌಮತ್ವಕ್ಕೆ ಮಹಾತ್ಮ ಗಾಂಧೀಜಿ, ಶ್ರೀಮತಿ ಇಂದಿರಾಗಾಂಧಿ ಮತ್ತು ಶ್ರೀ ರಾಜೀವ್‌ಗಾಂಧಿ ಇವರುಗಳು ತಮ್ಮ ಪ್ರಾಣಗಳನ್ನು ತೆತ್ತಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಶ್ರೀ ಶ್ಯಾಮ್‌ಪ್ರಕಾಶ್ ಮುಖರ್ಜಿಯವರು ಸಹ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಹವಾಗುತ್ತಿದೆ. ಈಗ ದೇಶ ಸುತ್ತಾಡುವುದನ್ನು ಬಿಟ್ಟು ಇಲ್ಲಿಗೆ ಬಂದರೆ, ಸರ್ಕಾರ ಏನು ಮಾಡುತ್ತಿದೆ ಎಂದು ಹೇಳಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಇಲ್ಲೇ ಇದ್ದೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗ ವಿರೋಧ ಪಕ್ಷದ ನಾಯಕರು ಏನು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ, ಆ ಪ್ರಶ್ನೆಗಳಿಗೆ ಉತ್ತರ ಕೊಟ್ಟಾಗ ಮಾತ್ರ ಅದು ಜನರಿಗೆ ಸಮಾಧಾನವಾಗುವುದು ಮತ್ತು ಅಧಿಕಾರಿಗಳು ಎಚ್ಚರವಾಗುವಂಥದ್ದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, I do agree with that.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಅದಕ್ಕೆ ಹಣ ಬಿಡುಗಡೆ ಮಾಡುವಂಥದ್ದು. ಇವುಗಳೆಲ್ಲವೂ ಸಹ ಆಗಬೇಕಾದರೆ, ವಿರೋಧ ಪಕ್ಷದ ನಾಯಕರು ಮೊದಲು ಪ್ರಶ್ನೆಯನ್ನು ಕೇಳಬೇಕು. ಅದು ಇಲ್ಲಿ ಬಹಳ ಪ್ರಸ್ತುತ. ಇವತ್ತು ಸಹ ಪ್ರವಾಹವಾಗುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಕಡೆಯವರೇ ನಮ್ಮನ್ನು divert ಮಾಡಿದ್ದು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಇನ್ನು ಎರಡು ದಿನ ಪ್ರವಾಹವಾಗುತ್ತದೆ. ಅದಕ್ಕೆ ಬೇಗ ನಾವು ಈ ಸದನದ ಮುಖಾಂತರ ಅವರಿಗೆ ನ್ಯಾಯ ಕೊಡುವಂತಹ ದೃಷ್ಟಿಯಿಂದ ಮತ್ತು ಆ ದಿಕ್ಕಿನಲ್ಲಿ ಮಾತನಾಡುವುದು. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಶನಿವಾರದವರೆಗೆ ಮಾತ್ರ ಸದನ ಇದೆ ಎಂದು BAC (Business Advisory Committee) ಯಲ್ಲಿ ನಿರ್ಣಯವಾಗಿದೆ ಎಂದು ಕೇಳಿದ್ದೇನೆ. ಅದನ್ನು ಮಾನ್ಯ ಸಭಾನಾಯಕರು ಹೇಳಲಿಲ್ಲ. ಏಕೆಂದರೆ ಅದನ್ನು ಗಮನದಲ್ಲಿಟ್ಟುಕೊಂಡು ನಾವು ನಮ್ಮ business ಅನ್ನು ಪೂರ್ಣಗೊಳಿಸಬೇಕು. ಇನ್ನು ಸ್ವಲ್ಪ ಜನ ಸದಸ್ಯರು ಮಾತನಾಡುತ್ತಾರೆ. ಆದುದರಿಂದ ಬೇರೆಯವರಿಗೆ ಅನುಕೂಲವಾಗಲಿ ಎಂದು ನಾನು ನನ್ನ ಮಾತುಗಳನ್ನು ಬೇಗ ಮುಗಿಸುತ್ತೇನೆ. ಹೋದಬಾರಿ ಸುಮಾರು 35 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿತ್ತು. ಈ ಬಾರಿ ಸುಮಾರು 10 ಸಾವಿರ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ. ಮನೆಗಳು, ರಸ್ತೆಗಳು, ಸೇತುವೆಗಳು ಮತ್ತು ರೈತರು ಬೆಳೆದ ಬೆಳೆಯ ಪೈರುಗಳು ಹೀಗೆ ಸುಮಾರು 45 ಸಾವಿರ ಕೋಟಿ ರೂಪಾಯಿಗಳಷ್ಟನ್ನು ಈ ಪ್ರವಾಹದಲ್ಲಿ ಕಳೆದುಕೊಂಡಿದ್ದಾರೆ. ಇತ್ತೀಚೆಗೆ ಸೆಪ್ಟೆಂಬರ್,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

15ರ ನಂತರ ಪ್ರತಿ ದಿವಸ ಮೊದಲಿಗಿಂತ ಹೆಚ್ಚು ಜೋರಾಗಿ ಮಳೆಯಾಗುತ್ತಿದೆ. ಇದರಿಂದ ಅತಿವೃಷ್ಟಿಯಾಗಿದೆ. ಅದರಿಂದ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮನೆಗಳು ಹಾನಿಯಾಗುತ್ತಿವೆ. ರೈತರು ಬೆಳೆದ ಪೈರುಗಳು ಹಾನಿಯಾಗುತ್ತಿವೆ. ರೈತರು ಇನ್ನು ಹೆಚ್ಚಿನ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ. ಅದೆಲ್ಲಾ ಕೂಡಿದರೆ, ಈಗ ಏನು 10 ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ ಅದು 25 ಸಾವಿರ ಕೋಟಿ ರೂಪಾಯಿಗಳಾಗುವಂತಹ ಸಾಧ್ಯತೆ ಇದೆ. ಈಗ 25+35=60 ಸಾವಿರ ಕೋಟಿ ರೂಪಾಯಿಗಳು. Am I right mathematically? ಇನ್ನು ಮೂರು ದಿವಸ ಮಳೆಯಾಗುತ್ತದೆ ಎಂದು ಮಾನ್ಯ ಕಂದಾಯ ಮಂತ್ರಿಗಳೇ ಹೇಳಿದ್ದಾರೆ. ಅದಕ್ಕೆ ನಾನು ಏನನ್ನು ಹೇಳುತ್ತೇನೆಂದರೆ, ಇದಕ್ಕೆ ತಾತ್ಕಾಲಿಕ ವ್ಯವಸ್ಥೆ ಬೇಡ, ಪ್ರತಿ ವರ್ಷ ಮಳೆಯಾಗುತ್ತದೆ, NDRF (National Disaster Response Force) and SDRF (State Disaster Response Fund) Norms ಪ್ರಕಾರ ಒಂದು ಹೆಕ್ಟೇರ್ ಬೆಳೆ ಹಾನಿಗೆ ಇಂತಿಷ್ಟು ಎಂದು ಪರಿಹಾರ ಕೊಡುತ್ತಾರೆ. ಸರ್ಕಾರದವರು ಎರಡು ಹೆಕ್ಟೇರ್‌ವರೆಗೆ ಬೆಳೆ ಹಾನಿಗೆ ಮಾತ್ರ ಪರಿಹಾರ ಕೊಡುತ್ತಾರೆ. ಈಗ ಕೆಲವು ರೈತರು 5, 10, 15 ಮತ್ತು 25 ಎಕರೆವರೆಗೆ ಕಬ್ಬು ಮತ್ತು ಇತರೆ ಬೆಳೆಗಳನ್ನು ಕಳೆದುಕೊಂಡಿದ್ದಾರೆ. Norms ಪ್ರಕಾರ ಮಾತ್ರ ಬೆಳೆ ಪರಿಹಾರವನ್ನು ಕೊಟ್ಟರೆ ಅವರು ಹೇಗೆ ಉದ್ದಾರವಾಗುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಕಂದಾಯ ಸಚಿವರು, ಒಬ್ಬ ಕೃಷಿಕರ ಜಾಗದಲ್ಲಿ ನಿಂತುಕೊಂಡು ಯೋಚನೆ ಮಾಡಲಿ. ಅದಕ್ಕೆ ನಾನು ಕೆಲವು ಸಲಹೆಗಳನ್ನು ಹೇಳಿದ್ದೇನೆ. Submergence area and Flood ದಲ್ಲಿ affect ಆಗುವಂತಹ area ದಲ್ಲಿ you call all the Scientists for a meeting and have a discussion with them and try to find out some permanent solution for this. ಅದಕ್ಕೆ ಪ್ರವಾಹವಾದಾಗ ಶಾಶ್ವತ ಪರಿಹಾರ ಕಂಡುಹಿಡಿಯಿರಿ. ಇದರಿಂದ ಎಷ್ಟೊಂದು ಹಳ್ಳಿಗಳು affect ಆಗಿವೆ. ಅದಕ್ಕೆ ಸಂಬಂಧಪಟ್ಟಂತೆ ಅಂಕಿ–ಸಂಖ್ಯೆಗಳಿವೆ. ಎಲ್ಲಾ ಗ್ರಾಮಗಳನ್ನು ಶಾಶ್ವತವಾಗಿ ಎತ್ತರದ ಸ್ಥಳಗಳಿಗೆ ಸ್ಥಳಾಂತರ ಮಾಡಿ. ಪ್ರತಿವರ್ಷ ಪ್ರವಾಹ ಬಂದಾಗ ನೀವು ಹೋಗುವುದು ಮತ್ತು ನಾವು ಹೋಗುವುದು. ನಾವು ಹೋದಾಗ ನಿಮ್ಮನ್ನು ಬೈಯುವುದು, ನೀವು ಹೋದಾಗ ನಮ್ಮನ್ನು ಬೈಯುವುದು. ಇದರಿಂದ ಏನು ಸಹ ಉದ್ದಾರವಾಗುವುದಿಲ್ಲ. These are all the temporary reliefs. ಬೆಳೆಗಳಿಗೆ ಪರಿಹಾರ ಕೊಡುವುದು, ಮನೆಗಳನ್ನು ಕಟ್ಟಿಸಿಕೊಡುವುದು. ಈಗ ಅವರಿಗೆ ಅಲ್ಲೇ ಮನೆ ಕಟ್ಟಿಸಿಕೊಟ್ಟರೆ ಮತ್ತೆ ನೀರು ಹೋಗುತ್ತದೆ. ಅದರಿಂದ ಏನು ಲಾಭ? ಸರ್ಕಾರದ ಹಣ ವ್ಯರ್ಥವಾಗುತ್ತದೆ. ಸರ್ಕಾರದ ಹಣವೆಂದರೆ ಅದು ಬಡ ತೆರಿಗೆದಾರರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹಣ. You are just a custodian. ನೀವು ಅದನ್ನು ಹಿತವಾಗಿ ಮತ್ತು ಮಿತವಾಗಿ ಉಪಯುಕ್ತವಾಗುವಂತೆ ಮಾಡಬೇಕು. ನನ್ನ ಬೇಡಿಕೆ ಏನೆಂದರೆ, ಎಲ್ಲಾ ಹಳ್ಳಿಗಳ ಜನರು ನಾವು ಅಲ್ಲಿಗೆ ಹೋದಾಗ ಹೇಳುತ್ತಾರೆ, ನಮ್ಮನ್ನು ಎತ್ತರದ ಸ್ಥಳಕ್ಕೆ ಸ್ಥಳಾಂತರ ಮಾಡಿ ಮತ್ತು ಯು.ಕೆ.ಪಿ. ಮಾದರಿಯಲ್ಲಿ ಪರಿಹಾರವನ್ನು ಕೊಟ್ಟು, ನಿವೇಶನಗಳನ್ನು ನೀಡಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ನಮಗೆ ಪುನರ್ವಸತಿ ರೀತಿಯಲ್ಲಿ ಮಾಡಿಕೊಡಿ ಎಂದು. ಅಂದರೆ, ಕುಡಿಯುವ ನೀರು, ರಸ್ತೆಗಳು, ವಿದ್ಯುತ್ ದೀಪಗಳ ವ್ಯವಸ್ಥೆ ಎಲ್ಲವನ್ನು ಮಾಡಿ, ಶಾಶ್ವತವಾಗಿ ಒಂದು ಬಾರಿ ಅವರನ್ನು ಸ್ಥಳಾಂತರ ಮಾಡಿಬಿಡಿ. ನೀವು ಅವರಿಗೆ ಮನೆ ಕಟ್ಟಿಸಿಕೊಡುವುದು ಬೇಡ. ಅವರು ಏನು ಮನೆಗಳನ್ನು ಕಳೆದುಕೊಂಡಿರುತ್ತಾರೆ ಅಂತಹವರಿಗೆ ಪರಿಹಾರ ನೀಡಿ, ಅವರು ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಆ ರೀತಿಯಾಗಿ ಇವುಗಳಿಗೆ ಶಾಶ್ವತವಾದ ಒಂದು ಪರಿಹಾರವನ್ನು ಮಾಡಿ. ಬೆಳೆಗಳ ಬಗ್ಗೆಯೂ ಕೂಡ ನಾನು ಹೇಳಿದ್ದೇನೆ. ರಸ್ತೆಗಳ ಬಗ್ಗೆ ಬಗ್ಗೆಯೂ ಹೇಳಿದ್ದೇನೆ. ದಯಮಾಡಿ ಎಲ್ಲವನ್ನು ಬಿಟ್ಟು ಮೊದಲು ಶಾಲಾ ಕೊಠಡಿ ಮತ್ತು ಅಂಗನವಾಡಿ ಕೇಂದ್ರಗಳನ್ನು ನಿರ್ಮಾಣ ಮಾಡಿ. ನಾವುಗಳು ಇನ್ನು ಹಳೆಯ ಗ್ರಾಮಗಳಿಗೆ ಹೋಗುವುದಕ್ಕೆ ಸಾಧ್ಯವಾಗಿಲ್ಲ. ಅಲ್ಲಿನ ಎಲ್ಲಾ ರಸ್ತೆಗಳು ಕಿತ್ತುಹೋಗಿವೆ. ಸೇತುವೆಗಳು ಪೂರ್ಣ disrupt ಆಗಿವೆ. ಅವುಗಳನ್ನೆಲ್ಲಾ ನೋಡಿ. ಈಗ ಹೋದ ಬಾರಿ ಆಗಿರುವುದನ್ನು ಮಾಡಿ. ಈ ಬಾರಿ ಆಗಿರುವುದು ಅದು ದೊಡ್ಡ ಗತಿಯಾಗಿದೆ. ಈ ವರ್ಷ ಮಾಡಿರುವುದನ್ನು ಮುಂದಿನ ವರ್ಷ ಮಾತನಾಡೋಣ. ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಈ ಪ್ರವಾಹ ಪೀಡಿತ ಪ್ರದೇಶ ಏನಿದೆ. ಶಾಶ್ವತವಾಗಿ ಎಲ್ಲಾ ಹಳ್ಳಿಗಳನ್ನು ಸ್ಥಳಾಂತರ ಮಾಡುವಂತಹ ಕೆಲಸ ಮಾಡಬೇಕು ಅಲ್ಲಿಯವರೆಗೆ temporary relief ಅನ್ನು ಮಾಡಲಿ. ಈಗ ಸದ್ಯಕ್ಕೆ ಏನು ಹಾನಿಯಾಗಿದೆ ಅದನ್ನು ಸರಿಪಡಿಸಿ. ಮುಂದೆ ಇದಕ್ಕೆ ಶಾಶ್ವತವಾದ remedy ಕಂಡು ಹಿಡಿಯಬೇಕೆಂದು ಹೇಳಿ. ತಮ್ಮ ಮುಖಾಂತರ ಈ ಸರ್ಕಾರಕ್ಕೆ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಸವಿಸ್ತಾರವಾದ ಅಂಕಿ-ಸಂಖ್ಯೆಗಳನ್ನು ತಿಳಿಸಿದ್ದಾರೆ. ನಾನು ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ಹೇಳಿದ ಹಾಗೆ ಈಗ ಏನಾಗಿದೆ ಮತ್ತು ನಮ್ಮ ಮೂಲ ಪ್ರಶ್ನೆ ಏನಿದೆ ಎಂದರೆ, ರಾಜ್ಯದಲ್ಲಿ ಪ್ರಸ್ತಕ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಹಾಗೂ ಮಹಾರಾಷ್ಟ್ರದ ಅಣೆಕಟ್ಟುಗಳಿಂದ ಭಾರಿ ಪ್ರಮಾಣದಲ್ಲಿ ನೀರು ಹರಿದ ಪರಿಣಾಮದಿಂದ ಉಂಟಾದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಹ ಪರಿಸ್ಥಿತಿಯಿಂದ ಅಪಾರ ಪ್ರಮಾಣದ ಬೆಳೆ ಹಾನಿ, ಪ್ರಾಣ ಹಾನಿ ಹಾಗೂ ಕೋಟ್ಯಂತರ ರೂಪಾಯಿಗಳ ನಷ್ಟ ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ಕಂದಾಯ ಸಚಿವರೆ ನಾನು ಏನು ಹೇಳುತ್ತೇನೆಂದರೆ, ಈಗ ರಾಜಕಾರಣದ ಬಗ್ಗೆ ಮಾತನಾಡುವಂತಹ ಸಮಯವಲ್ಲ. ನಮ್ಮ ಕಡೆಯಲ್ಲಿ practical ಆದಂತಹ ಪರಿಸ್ಥಿತಿಯನ್ನು ನೋಡಿದರೆ, ಮಹಾರಾಷ್ಟ್ರದಲ್ಲಿ ಸಿಕ್ಕಾಪಟ್ಟೆ ಮಳೆಯಾಗಿದೆ. ಎಷ್ಟೋ ಹಳ್ಳಿಗಳು ಮುಳುಗಿ ಹೋಗಿವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಮಳಲಿ, ಸೊರಗಾಂವ್ ಮತ್ತು ಮಿರ್ಜಿ ಹಾಗೂ ಬಾಗಲಕೋಟೆ ಜಿಲ್ಲೆಯ ಮುಧೋಳ್ ತಾಲ್ಲೂಕಿನಲ್ಲಿ ಹೊರಗೆ ಹೋಗಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಿನ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ನಾವು ನಮ್ಮ ಹೊಲದಲ್ಲಿ ಗೋವಿನ ಜೋಳವನ್ನು ಬಿತ್ತಿದ್ದೇವೆ. ಅಲ್ಲಿ ನಮ್ಮ ಮೊಣಕಾಲಿನವರೆಗೆ ನೀರು ನಿಂತಿದೆ. ಹತ್ತಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಅಲ್ಲಿಗೆ ಜಿಲ್ಲಾಧಿಕಾರಿ ಕಚೇರಿಯವರು ಮತ್ತು ತಹಶೀಲ್ದಾರ್‌ರವರು ಬಂದು ಅದನ್ನು ನೋಡಿಕೊಂಡು ಹೋಗುತ್ತಾರೆ. ಆದರೆ ಅವುಗಳಿಗೆ ಪರಿಹಾರವಿಲ್ಲ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಮನೆ ಬಿದ್ದಿರುವುದನ್ನು, ಎಲ್ಲವನ್ನು ಸಹ ನೋಡಿಕೊಂಡು ಹೋಗುತ್ತಾರೆ. ಈಗ ನಾನು ಎರಡು ಪಾಯಿಂಟ್‌ಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ರೈತರಿಗೆ ಏನಾಗಿದೆ ಎಂದರೆ, ಈಗ ನಮ್ಮಂತಹ ದೊಡ್ಡ ದೊಡ್ಡ ರೈತರದ್ದು ಹೇಗೋ ನಡೆಯುತ್ತದೆ. ಆದರೆ, ಸಣ್ಣ ಸಣ್ಣ ರೈತರ ಪರಿಸ್ಥಿತಿ ಏನಾಗಿದೆ ಎಂದರೆ, ನಾನು ಎಲ್ಲಾ ಕಡೆಗಳಲ್ಲೂ ಓಡಾಡಿದ್ದೇನೆ. ರೈತರು ಹತ್ತಿ ಬಿತ್ತಿದ್ದಾರೆ, ಆ ಹತ್ತಿ ಬೆಳೆಗೆ ಮೊಣಕಾಲಿನವರೆಗೆ ನೀರು ನಿಂತು ಅದು ಕೆಂಪಾಗಿ, ಆ ಹತ್ತಿ ಬೆಳೆ ಸಂಪೂರ್ಣ ಹಾಳಾಗಿ ಹೋಗಿದೆ. ಗೋವಿನ ಜೋಳ ಎಲ್ಲಾ ನೀರಿನಲ್ಲಿ ನೆನೆದು, ತೆನೆ ಬಿದ್ದು ಹೋಗಿ, ತೆನೆಯಲ್ಲಿ ಮೊಳಕೆ ಹೊಡೆದಿದೆ. ಸದ್ಯಕ್ಕೆ ಇವತ್ತಿನ ದಿವಸ ರೈತರ ಪರಿಸ್ಥಿತಿ ಏನು?

(ಮುಂದು...)

**(735) 21.09.2020 05.30 LL-BNS**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):-**

ಇವೊತ್ತಿನ ದಿವಸ ರೈತರ ಪರಿಸ್ಥಿತಿ ಏನಾಗಿದೆ ಎಂದರೆ, ದನಕರುಗಳಿಗೆ ಮೇವಿಲ್ಲ. ಈ ಬಗ್ಗೆ ಇವೊತ್ತಿನ ದಿವಸ ನಾವೆಲ್ಲರೂ ಮಾತನಾಡುತ್ತೇವೆ. ಈ ಹಿಂದೆ ಅತಿವೃಷ್ಠಿಯಾದಾಗ ದನಕರುಗಳಿಗೆ ಮೇವಿನ ವ್ಯವಸ್ಥೆಯನ್ನು ಮಾಡಿದ್ದರು. ಅದನ್ನು ಈ ಸರ್ಕಾರ ಹಾಗೂ ನಮ್ಮ ಸರ್ಕಾರ ಸಹ ಮಾಡಿತ್ತು. ಇವೊತ್ತಿನ ದಿವಸ ಎಷ್ಟೊ ಜನ ರೈತರ ದನಕರುಗಳಿಗೆ ಮೇವಿಲ್ಲ. ಹಾಗಾಗಿ, ಅವರು ದನಕರುಗಳನ್ನು ಮಾರುತ್ತಿದ್ದಾರೆ. ಅವುಗಳನ್ನು ಮಾರುವುದಕ್ಕೆ ಹೋದರೆ, ಸರಿಯಾದ ಬೆಲೆ ಇರುವುದಿಲ್ಲ. ಅತಿವೃಷ್ಠಿಯಾಗಿ ಶೇಕಡ 75

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಷ್ಟು ಹಾನಿಯಾದಂತಹ ಮನೆಗಳಿಗೆ 5 ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿತ್ತು. ಆ ಹಣ ಇವೊತ್ತಿನವರೆಗೂ ಒಂದು ಮನೆಗೂ ಸಹ ಕೊಟ್ಟಿರುವುದಿಲ್ಲ. ಈ ಬಗ್ಗೆ ಅಂಕಿ-ಅಂಶಗಳನ್ನು ನೋಡಬಹುದು. ನಾನು ಕೂಡ ನಮ್ಮ ಜಿಲ್ಲೆಯ ಕೆಲವು ಕಡೆಗಳಲ್ಲಿ ಸ್ವತಃ ಓಡಾಡಿ ಮಾಹಿತಿ ಕಲೆಹಾಕಿರುತ್ತೇನೆ. ಇದುವರೆವಿಗೂ, 5 ಲಕ್ಷ ರೂಪಾಯಿ ಪರಿಹಾರ ಹಣವನ್ನು ಯಾರಿಗೂ ಸಹ ಬಿಡುಗಡೆ ಮಾಡಿರುವುದಿಲ್ಲ. ಇದನ್ನು ನಾನು authentic ಆಗಿ ಹೇಳುತ್ತೇನೆ. ಎರಡನೆಯದಾಗಿ, ಶ್ರೀ ಎಸ್.ಆರ್. ಪಾಟೀಲರು ಹೇಳಿದ ರೀತಿ, ಅತಿವೃಷ್ಠಿಯಾಗಿ ಮನೆಗಳು ನೀರಿನಲ್ಲಿ ಮುಳುಗಿ ಬೀಳುತ್ತವೆ. ಈ ಹಿಂದೆ 2009ರಲ್ಲಿ ಬಹಳ ದೊಡ್ಡ ಮಳೆಯಾದಾಗ, ಭಾರತೀಯ ಜನತಾ ಪಾರ್ಟಿ ಅಧಿಕಾರಕ್ಕೆ ಬಂದಾಗ ಮನೆಗಳನ್ನು ಕಟ್ಟಿ ಕೊಟ್ಟಿದ್ದರು. ಜೊತೆಗೆ, ವಿವಿಧ ಸಂಘ-ಸಂಸ್ಥೆಗಳು ಹಾಗೂ ಇತರರು ಮನೆಗಳನ್ನು ಕಟ್ಟಿಕೊಟ್ಟಿದ್ದರು. ಇಲ್ಲಿ ಏನಾಗಿದೆಯೆಂದರೆ, ಅತಿವೃಷ್ಠಿಯಾಗಿ ಮನೆಗಳು ಮುಳುಗಡೆಯಾಗುತ್ತದೆ. ನಂತರ, ಆ ನೀರು ಖಾಲಿಯಾಗಿ 2-3 ತಿಂಗಳು ಕಳೆದ ನಂತರ ಪುನಃ ಅಲ್ಲಿಗೆ ಹೋಗುತ್ತಾರೆ. ನವಲಗುಂದ ತಾಲ್ಲೂಕಿನಲ್ಲಿ ಬಸಾಪುರ ಎಂಬ ಊರಿಗೆ ಭೇಟಿ ನೀಡಿದ್ದೆನು. ಇಲ್ಲಿ ಏನಾಗಿದೆಯೆಂದರೆ, ರೈತರಿಗೆ 4 ದನಗಳನ್ನು ಕಟ್ಟುವುದಕ್ಕೆ ಮನೆ ಬೇಕು. ಆದರೆ, ಸರ್ಕಾರದವರು ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕಟ್ಟುವ ರೀತಿಯಲ್ಲಿ ಒಂದು ಅಡಿಗೆ ಕೋಣೆ, ಒಂದು ಬಚ್ಚಲು(ಸ್ನಾನ) ಕೋಣೆ ಹಾಗೂ ಕೂರುವುದಕ್ಕೆ ಹೊರಗೆ ಒಂದು ಕೋಣೆ ಕಟ್ಟುತ್ತಾರೆ. ಆ ರೈತರು ತಮ್ಮ ದನಗಳನ್ನು ಎಲ್ಲಿ ಕಟ್ಟಬೇಕು? ಹೀಗಾಗಿ, ಅವರು ವಾಪಸ್ಸು ಅದೇ ಮನೆಗೆ ಬರುತ್ತಾರೆ. ಯಾ್ಯಾವ ರೈತರ ಮನೆಗಳು ಯಾವ ರೀತಿ ಮುಳುಗಿವೆ, ಅವರಿಗೆ ವ್ಯವಸ್ಥಿತವಾದಂತಹ ರೀತಿಯಲ್ಲಿ ಮನೆಗಳನ್ನು ಕಟ್ಟಿದರೆ ಅವರಿಗೆ ಅನುಕೂಲವಾಗುತ್ತದೆ.

ಮೂರನೆಯದಾಗಿ, ಮನೆ ಕಟ್ಟುತ್ತೇವೆ. ಎತ್ತರವಾದಂತಹ ಪ್ರದೇಶದಲ್ಲಿ ಸರ್ವೆ ಮಾಡಿ, ಯಾವ್ಯಾವ ಜನರಿಗೆ ಯಾವ್ಯಾವ ರೀತಿಯಲ್ಲಿ ಮನೆ ಕಟ್ಟಬೇಕು ಎಂಬ ಬಗ್ಗೆ ಚಿಂತನೆ ಮಾಡಬೇಕು. ಅಂದರೆ, ಒಬ್ಬ ವ್ಯಾಪಾರಸ್ಥ ಇದ್ದರೆ, ಆತನಿಗೆ ಒಂದು ಅಂಗಡಿ ಇರುತ್ತದೆ. ಆತನಿಗೆ ಯಾವರೀತಿ ಮನೆ ಕಟ್ಟಬೇಕು. ಒಬ್ಬ ರೈತನಿಗೆ 4 ಎತ್ತುಗಳ ಒಕ್ಕಲುತನ ಇದ್ದು, ಆತನಿಗೆ ಯಾವ ರೀತಿ ಮನೆ ಕಟ್ಟಿಕೊಡಬೇಕು ಎಂಬ ಬಗ್ಗೆ ಚಿಂತನೆ ಮಾಡಬೇಕು. ಈ ರೀತಿ ಯೋಚನೆ ಮಾಡುವುದೇ ಇಲ್ಲ. ಎಲ್ಲರಿಗೂ ಒಂದೇ ರೀತಿಯ ಮನೆಗಳನ್ನು ಕಟ್ಟುತ್ತಾರೆ. ಇದು ಗಂಭೀರವಾದಂತಹ ಪರಿಸ್ಥಿತಿಯಾಗಿದೆ. ರೈತರ ಬಗ್ಗೆ ಸರ್ಕಾರ ದಯಮಾಡಿ ಚಿಂತನೆ ಮಾಡಲೇಬೇಕಾಗುತ್ತದೆ. ಈ ರೀತಿಯಾದರೆ ರೈತರು ಎಲ್ಲಿಗೆ ಹೋಗಬೇಕು? ಸಣ್ಣ-ಸಣ್ಣ ರೈತರುಗಳಂತೂ ಕಣ್ಣೀರು ಹಾಕುತ್ತಾ, ಆತ್ಮಹತ್ಯೆ ಮಾಡಿಕೊಳ್ಳಬೇಕಾದಂತಹ ಪರಿಸ್ಥಿತಿ ಒಂದು ಕಾಲಕ್ಕೆ ನಿರ್ಮಾಣವಾಗುತ್ತದೆ. ನಮ್ಮ ಭಾಗದಲ್ಲಿ ಪ್ರತಿ ದಿನ ಮಳೆಯಾಗುತ್ತಿದೆ. ಒಂದು ದಿವಸ ಸಹ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲ್ಲಲಾರದಷ್ಟು ಮಳೆ ನಮ್ಮಲ್ಲಿ ಆಗಿದೆ. ಇದರ ಜೊತೆಗೆ, ಈ ಹಿಂದೆ ಮಹಾರಾಷ್ಟ್ರದವರು 1 ಟಿ.ಎಂ.ಸಿ. ನೀರು ಬಿಡುವುದಕ್ಕಾಗಿ, ನಾವೆಲ್ಲರೂ ಅಲ್ಲಿಗೆ ಹೋಗಿ ಅವರಲ್ಲಿ ಬಹಳಷ್ಟು ಗೋಗೆರೆದರೂ ಅವರು ನೀರು ಬಿಡಲಿಲ್ಲ. ಆದರೆ, ಈಗ ಮಹಾರಾಷ್ಟ್ರದಲ್ಲಿ ಏನು ಮಳೆಯಾಗುತ್ತದೆ ಆ ಎಲ್ಲಾ ನೀರನ್ನು ನಮ್ಮ ರಾಜ್ಯಕ್ಕೆ ಬಿಡುತ್ತಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಮಹಾರಾಷ್ಟ್ರದಲ್ಲಿ ಆಗುವಂತಹ ಮಳೆಯಿಂದ ಕರ್ನಾಟಕಕ್ಕೆ ಪ್ರತಿದಿನ 1 ಲಕ್ಷ ಕ್ಯೂಸೆಕ್ಸ್‌ಗಿಂತಲೂ ಹೆಚ್ಚುವರಿ ನೀರು ಹರಿದು ಬರುತ್ತಿತ್ತು. ಆದರೆ, ಈ ವರ್ಷ ನಮ್ಮ ರಾಜ್ಯದ ನೀರಾವರಿ ಸಚಿವರಾದ ಶ್ರೀ ರಮೇಶ್ ಜಾರಕಿಹೊಳಿಯವರು ಮಹಾರಾಷ್ಟ್ರ ರಾಜ್ಯದ ನೀರಾವರಿ ಸಚಿವರೊಂದಿಗೆ ಪೂರ್ವಭಾವಿ ಸಭೆ ಮಾಡಿ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಇಂಜಿನಿಯರ್‌ಗಳ ಸಮನ್ವಯ ಸಮಿತಿ ಮಾಡಿ, ಸರಿಯಾದ ವೇಳೆಗೆ ಅಲ್ಲಿ ಆಗತಕ್ಕಂತಹ ಮಳೆ ಮತ್ತು ಕೃಷ್ಣಾ ನದಿಗೆ ನೀರು ಬಿಡುವಂತಹ ವಿಚಾರದಲ್ಲಿ ಸಮನ್ವಯ ಸಾಧಿಸಿರುವುದರಿಂದ, ಆಲಮಟ್ಟಿ ಜಲಾಶಯದಿಂದ ಹೊರಗೆ ಹೋಗುವಂತಹ ನೀರು ಮತ್ತು ಮಹಾರಾಷ್ಟ್ರದಿಂದ ಬರುವಂತಹ ನೀರಿಗೆ, ಅಂದರೆ, ಒಂದು ವೇಳೆ ಸುಮಾರು 2 ಲಕ್ಷ ಕ್ಯೂಸೆಕ್ ನೀರು ಮಹಾರಾಷ್ಟ್ರದಿಂದ ರಾಜಾಪುರ ಬ್ಯಾರೇಜ್‌ಗೆ ಬರುತ್ತಿದ್ದರೆ, ಕರ್ನಾಟಕದಿಂದ ಆಲಮಟ್ಟಿ ಜಲಾಶಯದಿಂದ ಕೆಳಗಡೆ ಇರುವಂತಹ ಬೇರೆ ಭಾಗಕ್ಕೆ 2 ಲಕ್ಷ ಕ್ಯೂಸೆಕ್ಸ್ ನೀರು ಬಿಡತಕ್ಕಂತಹ ಕೆಲಸ ಮಾಡಿರುವುದರಿಂದ ಆಗುವಂತಹ ಬಹಳಷ್ಟು ಅನಾಹುತವನ್ನು ತಪ್ಪಿಸುವಂತಹ ಕೆಲಸವನ್ನು ಸರ್ಕಾರ ಮಾಡಿದೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾನು ಯಾವುದೇ ತಕರಾರು ಮಾಡಿರುವುದಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ,...

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನಾನು ಕೇವಲ ಉದಾಹರಣೆಗಾಗಿ ಹೇಳಿದೆನು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಸರ್ಕಾರದವರು ಮಹಾರಾಷ್ಟ್ರ ರಾಜ್ಯದ ಜೊತೆ ಸಮನ್ವಯ ಸಮಿತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡಿದ್ದಾರೆ. ಹಾಗಾಗಿ, ಒಳ್ಳೆಯ ಕೆಲಸ ಮಾಡಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ, ನಾನು ಈ ಎಲ್ಲಾ ವಿಷಯವನ್ನು ಹೊರತುಪಡಿಸಿ, ರೈತರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ರೈತರಿಗೆ ಇವೊತ್ತಿನವರೆಗೂ ಒಂದು ರೂಪಾಯಿ ಪರಿಹಾರ ನೀಡಿರುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ರೈತರಿಗೆ ಸಮಸ್ಯೆ ಆದ ತಕ್ಷಣವೇ ಅವರಿಗೆ ಏನಾದರೊಂದು ಪರಿಹಾರ ನೀಡಬೇಕೆಂದು ಹೇಳುತ್ತೇನೆ. ಬಡರೈತರಿಗೆ 5 ಎಕರೆಗಿಂತಲೂ ಕಡಿಮೆ ಜಮೀನು ಇದ್ದವರು...

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಹೊರಟ್ಟಿಯವರು ತಮ್ಮ ಮಾತನ್ನು ಹೇಳಿ ಮುಗಿಸಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಂದೇ ಒಂದು ವರ್ಡ್ ಹೇಳುತ್ತೇನೆ. ಬಿಜಾಪುರ ಜಿಲ್ಲೆಗೆ ಭೀಮಾ ನದಿಯಿಂದ ಒಂದೇ ದಿವಸದಲ್ಲಿ 32 ಸಾವಿರ ಕ್ಯೂಸೆಕ್ಸ್ ನೀರು ಒಳಹರಿವು ಆಗಿದೆ. ಅಂದರೆ, ಪ್ರವಾಹ ಬರುವ ಪರಿಸ್ಥಿತಿ ಎಷ್ಟು ದೊಡ್ಡದಿದೆಯೆಂದರೆ, ಮಾನ್ಯ ಸದಸ್ಯರು 2 ಲಕ್ಷ ಕ್ಯೂಸೆಕ್ಸ್ ನೀರಿಗೆ ನಿಯಂತ್ರಣ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಅದಕ್ಕಿಂತಲೂ ಜಾಸ್ತಿ ನೀರು ಒಳಹರಿವು ಆಗುತ್ತಿದೆ. ಅದನ್ನು ನಿಯಂತ್ರಣ ಮಾಡಬೇಕು ಮತ್ತು ಸಾಕಷ್ಟು ರೈತರು ಸಂಕಟದಲ್ಲಿದ್ದಾರೆ ಅವರಿಗೆ ಪರಿಹಾರ ನೀಡಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಕೆಲವೊಂದು ಬಾರಿ ಪರಿಸ್ಥಿತಿಗಳು ಕೈ ಮೀರಿ ಹೋಗುತ್ತವೆ. ಒಂದಾನೊಂದು ಕಾಲಕ್ಕೆ ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಮಳೆಯಾಗುತ್ತಿರಲಿಲ್ಲ. ಅದಕ್ಕಾಗಿ, ನಾವು ಅಲ್ಲಿ ಗಿಡಗಳನ್ನು ನೆಡಬೇಕೆಂದು ಯೋಚನೆ ಮಾಡಿದ್ದೆವು. ಇವೊತ್ತಿನ ದಿವಸ ಅಲ್ಲಿ ಸಾಕಷ್ಟು ಮಳೆಯಾಗುತ್ತಿದೆ. ಸೃಷ್ಟಿ ನಮ್ಮ ಮೇಲೆ ಮುನಿಸಿಕೊಂಡರೆ ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಎಲ್ಲಾ ವಿಷಯಗಳಿಗೂ ಕೇವಲ ಸರ್ಕಾರವನ್ನು ದೂಷಣೆ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ಮತ್ತು ನಾವೆಲ್ಲರೂ ಕೂಡಿ ಇಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಜನರಿಗೆ ಆಗುತ್ತಿರುವ ತೊಂದರೆಗಳನ್ನು ಜನಪ್ರತಿನಿಧಿಗಳಾದ ನಾವು ತಿಳಿದುಕೊಂಡು ಬಂದು ಸರ್ಕಾರದ ಎದುರಿಗೆ ಇಡುತ್ತೇವೆ. ಸರ್ಕಾರಕ್ಕೆ ಅಧಿಕಾರ ಇದ್ದು, ಅವರ ಸಮಸ್ಯೆಗಳನ್ನು ಪರಿಹರಿಸಬೇಕು. ಹಾಗಾಗಿ, ತಕ್ಷಣವೇ ಸರ್ಕಾರದವರು ರೈತರಿಗೆ ಏನಾದರೂ ಪರಿಹಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೀಡಬೇಕು. ಉದಾಹರಣೆಗೆ, ನೆರೆಯ ರಾಜ್ಯ ತೆಲಂಗಾಣದಲ್ಲಿ 1 ಎಕರೆ ಇರಲಿ ಅಥವಾ 50 ಎಕರೆ ಜಮೀನು ಇರಲಿ, ಎಲ್ಲಾ ರೈತರಿಗೂ ಸಮಾನವಾಗಿ ಪರಿಹಾರ ಹಣ ಬಿಡುಗಡೆ ಮಾಡಿದ್ದಾರೆ. ತೆಲಂಗಾಣದಲ್ಲಿ ರೈತರ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದಾರೆಂದರೆ, ಯಾವ ರೈತರು ಕೂಡ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ರೈತ ದೇಶದ ಬೆನ್ನೆಲುಬು. ಉದಾಹರಣೆಗೆ, ನಮ್ಮ ಭಾಗದಲ್ಲಿ ಬಹಳಷ್ಟು ರೈತರು ಸೋಯಾಬೀನ್ ಬೆಳೆ ಬಿತ್ತಿದ್ದು, ಆ ಬೆಳೆಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋಗಿವೆ. ಅಷ್ಟೇ ಅಲ್ಲದೇ, ಬೆಳೆಗಿಂತಲೂ ಅದರಲ್ಲಿ ಕಸ ಜಾಸ್ತಿಯಾಗಿದೆ. ಹಾಗಾಗಿ, ಇವೊತ್ತಿನ ದಿವಸ ರೈತ ಆಗಲಿ ಅಥವಾ ಆತನ ದನ-ಕರುಗಳು ಬಚಾವಾಗಿರುವುದಿಲ್ಲ. ಅವರಿಗೆ ತಿನ್ನುವುದಕ್ಕೆ ಆಹಾರ ಸರಿಯಾಗಿ ಸಿಗುತ್ತಿಲ್ಲ. ಆಹಾರ ಇಲಾಖೆಯಿಂದ ಉಚಿತವಾಗಿ ಪಡಿತರ ಹಾಗೂ ಕಾರ್ಮಿಕ ಇಲಾಖೆಯಿಂದ ಕೆಲಸ ನೀಡುತ್ತಿದ್ದಾರೆ. ಆದರೆ, ರೈತರಿಗೆ ಸರಿಯಾದ ರೀತಿಯಿಂದ ಪರಿಹಾರ ಸಿಗಲಿಲ್ಲ. ಆ ಹಿನ್ನೆಲೆಯಲ್ಲಿ ನಾನು ಏನು ಹೇಳುತ್ತೇನೆಂದರೆ, ಸರ್ಕಾರಿ ಕಟ್ಟಡಗಳ ದುರಸ್ತಿ ಹಾಗೂ ರಸ್ತೆಗಳ ದುರಸ್ತಿ ಮಾಡಬೇಕಾಗಿದೆ. ಈ ಎಲ್ಲಾ ವಿಷಯಗಳ ಬಗ್ಗೆ ಈಗಾಗಲೇ ವಿರೋಧ ಪಕ್ಷದ ನಾಯಕರು ಸಾಕಷ್ಟು ಹೇಳಿದ್ದಾರೆ. ಆದುದರಿಂದ, ತಾವು ರೈತರ ಬಗ್ಗೆ ತಕ್ಷಣವೇ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಪರಿಸ್ಥಿತಿಗಳು ಬಹಳ ಗಂಭೀರವಾಗಿವೆ. ರೈತರ ಮಕ್ಕಳು ಮುಂದೆ ಓದುವುದಕ್ಕೆ ಸಾಧ್ಯವಿಲ್ಲ. ಇಂತಹ ನೂರಾರು ಸಮಸ್ಯೆಗಳನ್ನು ರೈತ ಎದುರಿಸುತ್ತಿದ್ದಾರೆ. ಕೃಷಿ ಅಥವಾ ತೋಟಗಾರಿಕೆ ವಿಶ್ವವಿದ್ಯಾಲಯದಿಂದ ರೈತರಿಗೆ ಯಾವುದೇ ಮಾಹಿತಿ ನೀಡುವುದಿಲ್ಲ. ಉದಾಹರಣೆಗೆ, ಒಂದು ಬಾರಿ ಸೋಯಾಬೀನ್ ಬೆಳೆ ಚೆನ್ನಾಗಿ ಬೆಳೆದರೆ ಎಲ್ಲಾ ರೈತರು ಸೋಯಾಬೀನ್ ಬೆಳೆ ಬೆಳೆಯುತ್ತಾರೆ. ಹೀಗಾಗಿ, ಮಳೆ ಬಂದರೂ ರೈತರು ಕಷ್ಟಪಡುತ್ತಾರೆ. ಮಳೆ ಬಾರದೇ ಇದ್ದರೂ ಸಹ ರೈತರು ಕಷ್ಟಪಡುತ್ತಾರೆ. ಮಳೆಯಿಂದಾಗಿ, ರಸ್ತೆಗಳು, ಸರ್ಕಾರಿ ಕಟ್ಟಡಗಳು ಹಾಗೂ ಮನೆಗಳು ಹಾಳಾಗಿವೆ. ಅವುಗಳೆಲ್ಲವನ್ನೂ ದುರಸ್ತಿ ಮಾಡಿ. ಆದರೆ, ಮೊದಲ ಆದ್ಯತೆ ರೈತರಿಗೆ ಕೊಡಿ. ಈ ಬಗ್ಗೆ ಸರ್ಕಾರ ಒಂದು ನಿರ್ಧಾರ ಮಾಡಬೇಕು. ಇವೊತ್ತಿನ ದಿವಸ ಯಾವುದೇ ಭಾಗದಲ್ಲಾಗಲಿ, ಉದಾಹರಣೆಗೆ ಉತ್ತರ ಕರ್ನಾಟಕ ಭಾಗ, ಮಡಿಕೇರಿಯ ಕೂರ್ಗ್ ಭಾಗವಾಗಲಿ ಅಥವಾ ಚಿಕ್ಕಮಗಳೂರು ಭಾಗವಾಗಲಿ ಎಲ್ಲಾ ಭಾಗದ ರೈತರಿಗೆ ಆದ್ಯತೆ ಮೇರೆಗೆ ಪರಿಹಾರ ನೀಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡು ಆ ರೈತರನ್ನು ಬದುಕಿಸಿದರೆ ಸರ್ಕಾರದವರಿಗೆ ಸಾಕಷ್ಟು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ವರ್ಷ 34 ಜಿಲ್ಲೆಗಳಲ್ಲಿಯೂ ಸಹ ಸಾಕಷ್ಟು ಮಳೆಯಾಗಿವೆ. ನಮಗೆ ಮಾಹಿತಿ ಇರುವ ಪ್ರಕಾರ 13456 ಮನೆಗಳಿಗೆ ಮಳೆಯಿಂದಾಗಿ ಹಾನಿಯಾಗಿದೆ ಎಂಬುದನ್ನು ಮಾಧ್ಯಮದಲ್ಲಿ ನಾವು ನೋಡಿದ್ದೇವೆ. ಜೊತೆಗೆ, ಸಭಾ ನಾಯಕರು ಹೇಳಿದ ಹಾಗೆ 1 ಸಾವಿರಕ್ಕಿಂತಲೂ ಹೆಚ್ಚು ದನಗಳು ಮಳೆಯಲ್ಲಿ ಕೊಚ್ಚಿಹೋಗಿ ಸಾವನ್ನಪ್ಪಿರುತ್ತವೆ. ಕೆಲವು ಕಡೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೈತರುಗಳು ತಮ್ಮ ಮನೆಗಳ ಹೊರಗಡೆ ದನಗಳನ್ನು ಕಟ್ಟಿದ್ದರು. ಆದರೆ, ರಾತ್ರೋರಾತ್ರಿ ಬಂದ ಮಳೆಯಿಂದಾಗಿ ಸುಮಾರು 26 ದನಗಳು ಸಾವನ್ನಪ್ಪಿರುತ್ತವೆ. ಇಂತಹ ವಿಷಯಗಳ ಬಗ್ಗೆ ಪರಿಶೀಲಿಸಲು ಕಂದಾಯ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳು ಅಥವಾ ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿ, ಅವರು ತಮ್ಮ ಕಚೇರಿಗಳನ್ನು ಬಿಟ್ಟು ರೈತರ ಬಳಿ ಹೋಗಿ ಅವರಿಂದ ಮಾಹಿತಿ ಪಡೆಯಲಿ. ಆ ಮಾಹಿತಿ ಮೇರೆಗೆ ಸರ್ಕಾರ ತಕ್ಷಣವೇ ರೈತರಿಗೆ ಪರಿಹಾರ ನೀಡಬೇಕೆಂಬ ಮಾತನ್ನು ಹೇಳುತ್ತೇನೆ. ಈ ಕೆಲಸವನ್ನು ಜನಪ್ರತಿನಿಧಿಗಳಾದ ನಾವು ಮತ್ತು ಸರ್ಕಾರದವರೂ ಸೇರಿ ಮಾಡಬೇಕಾಗುತ್ತದೆ. ಇದು ರಾಜ್ಯಕ್ಕೆ ಬಂದಂತಹ ವಿಪತ್ತಿನಲ್ಲಿ ಸರ್ಕಾರದ ಮೇಲೆ ನಾವು ಅಥವಾ ನಮ್ಮ ಮೇಲೆ ಸರ್ಕಾರದವರು ಗೂಬೆ ಕೂರಿಸುವುದು ಅಲ್ಲ. ಎಲ್ಲರೂ ಕೂಡಿ ಈ ಪರಿಸ್ಥಿತಿಯನ್ನು ನಿಭಾಯಿಸುವಂತಹ ಕೆಲಸ ಮಾಡಬೇಕು. ಈ ವಿಷಯದಲ್ಲಿ ವಿರೋಧ ಪಕ್ಷದವರಾದ ನಾವು ಸರ್ಕಾರದ ಜೊತೆಗಿದ್ದೇವೆ. ಅದರ ಹೊರತಾಗಿ, ಕೇವಲ ಟೀಕೆ-ಟಿಪ್ಪಣಿಗಳನ್ನು ಮಾಡುವುದು ಅಲ್ಲ. ಆದರೆ, ಎಲ್ಲಾ ಮಂತ್ರಿಗಳಾದವರು ರಾಜ್ಯದ ಎಲ್ಲಾ ಕಡೆಗಳಿಗೂ ಹೋಗಿ ಅಧಿಕಾರಿಗಳೊಂದಿಗೆ ಸಭೆ ಮಾಡಬೇಕು. ಕೇವಲ ಸಭೆ ನಡೆಸಿದರೆ, ಆ ಸಭೆ ನಡೆಸಿದ ಪ್ರತಿಫಲ ಏನು ಎಂಬುದನ್ನು ಯೋಚನೆ ಮಾಡಬೇಕು. ಆ ಸಭೆಯಲ್ಲಿ ತೀರ್ಮಾನ ಮಾಡಿದ ಅಂಶಗಳು ಅನುಷ್ಠಾನವಾಗಬೇಕಲ್ಲವೇ? ಆ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಬೇಕು. ಮುಖ್ಯವಾಗಿ ನಾನು ಹೇಳುವುದೇನೆಂದರೆ, ಬಡವರು ಮತ್ತು ರೈತರ ಬಗ್ಗೆ ಕಾಳಜಿ ವಹಿಸಬೇಕು ಹಾಗೂ ಅವರಿಗೆ ತಕ್ಷಣವೇ ಏನಾದರೂ ಪರಿಹಾರ ನೀಡಬೇಕೆಂದು ಈ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ 11 ತಾಲ್ಲೂಕುಗಳಿವೆ. ಅಲ್ಲಿಯೂ ಸಹ ಸಾಕಷ್ಟು ಮಳೆಯಾಗಿ ರೈತರ ಬೆಳೆಗಳು ನಾಶವಾಗಿವೆ. ಮನೆಗಳು ಸಹ ಬಿದ್ದಿವೆ. ಈ ಬಗ್ಗೆ ಮಾನ್ಯ ಸದಸ್ಯರು ಸಾಕಷ್ಟು ಹೇಳಿದ್ದಾರೆ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ.

**(ಮುಂದು)**

**(736)21.09.2020/5.40/ವೈಎಲ್-ಬಿಎನ್ಎಸ್**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಮುಂದು):-**

ಆದರೆ, ಉತ್ತರ ಕನ್ನಡ ಜಿಲ್ಲೆಯ 11 ತಾಲ್ಲೂಕುಗಳಲ್ಲಿ 10 ತಾಲ್ಲೂಕನ್ನು ಫ್ಲಡ್ ಡ್ಯಾಮೇಜ್‌ನಲ್ಲಿ ಸೇರಿಸಿದ್ದು, ಹಳಿಯಾಳ ಒಂದು ತಾಲ್ಲೂಕನ್ನು ಮಾತ್ರ ಫ್ಲಡ್ ಡ್ಯಾಮೇಜ್‌ನಲ್ಲಿ ಸೇರಿಸಿರುವುದಿಲ್ಲ. ಇದರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಳಿಯಾಳ ತಾಲ್ಲೂಕಿನ ರೈತರಿಗೆ ಹಾಗೂ ಬಡ ಜನರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಆಗಸ್ಟ್ ಮಾಹೆಯಲ್ಲಿ ಆದಂತಹ ಮಳೆಗೆ ನೂರಾರು ಮನೆಗಳು ನೆಲಸಮಗೊಂಡಿದೆ. ಆದ್ದರಿಂದ ಕಂದಾಯ ಇಲಾಖೆಯ ಸಚಿವರಲ್ಲಿ ಕಳಕಳಿಯಿಂದ ನಾನು ವಿನಂತಿಸುವುದೇನೆಂದರೆ, ನಮ್ಮ ಹಳಿಯಾಳ ತಾಲ್ಲೂಕನ್ನು ಫ್ಲಡ್ ಡ್ಯಾಮೇಜ್‌ನಡಿ ಸೇರಿಸಬೇಕೆಂದು ಈ ಸಂದರ್ಭದಲ್ಲಿ ಬೇಡಿಕೊಳ್ಳುತ್ತೇನೆ. ಅದೇ ಪ್ರಕಾರ ಕಳೆದ ವರ್ಷ ಸಂಪೂರ್ಣ ಮನೆ ನೆಲಸಮವಾದವರಿಗೆ 5 ಲಕ್ಷ ರೂಪಾಯಿ ನೀಡುತ್ತೇವೆ ಎಂದು ಹೇಳಿದ್ದು, ಇದುವರೆಗೂ 1 ಲಕ್ಷ ರೂಪಾಯಿ ಮಾತ್ರ ನೀಡಲಾಗಿದೆ. ಆ 1 ಲಕ್ಷ ರೂಪಾಯಿಯಲ್ಲಿ ಅರ್ಧ ಮನೆ ಮಾತ್ರ ನಿರ್ಮಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಹಾಗೂ ಹಳಿಯಾಳ ತಾಲ್ಲೂಕಿನಲ್ಲಿ ಈಗಲೂ ಮಳೆ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ. ಇದರಿಂದ ನಿರ್ಮಿಸಿರುವಂಥ ಅರ್ಧ ಮನೆಗಳು ಸಹ ನೆಲಸಮವಾಗುತ್ತದೆ. ಆದ್ದರಿಂದ ತಾವೂ ಆದಷ್ಟು ಬೇಗನೆ ಉಳಿದಂಥ ಹಣವನ್ನು ಬಿಡುಗಡೆ ಮಾಡಬೇಕು. ಹಳಿಯಾಳ ತಾಲ್ಲೂಕನ್ನು ಫ್ಲಡ್ ಡ್ಯಾಮೇಜ್‌ನಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲಾ ತಾಲ್ಲೂಕಿನಲ್ಲಿಯೂ ಸಹ ಹಣ ಬಿಡುಗಡೆ ಮಾಡುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ನಾನು ಈಗಾಗಲೇ ಎಲ್ಲರಿಗೂ 2 ಸಲ ಪತ್ರ ಬರೆದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಒಂದು ಸಲ ಪತ್ರ ನೀಡಿದ್ದೇನೆ. ದಯವಿಟ್ಟು ಎರಡನೇ ಕಂತು, ಮೂರನೇ ಕಂತು, ನಾಲ್ಕನೇ ಕಂತು ತೆಗೆದುಕೊಳ್ಳಿ ಎಂದು ಪದೇ ಪದೇ ಪತ್ರ ಬರೆದಿದ್ದೇನೆ. ಸಮಸ್ಯೆಯೇನೆಂದರೆ, ಫ್ಲಡ್ ಆದಾಗ ಅವರ ಕೈಯಲ್ಲಿ ತಕ್ಷಣ ಮನೆ ನಿರ್ಮಿಸುವುದಕ್ಕೆ ಆಗಲಿಲ್ಲ. ಅದಾದ ತಕ್ಷಣ ಕೋವಿಡ್ ಸಮಸ್ಯೆ ಉದ್ಭವಿಸಿತು. ಇದರಿಂದಾಗಿ ಲೇಬರ್ ಸಮಸ್ಯೆಯಾಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಹೇಳಿದ ಹಾಗೆ ಮನೆಗಳನ್ನು ಶಿಫ್ಟ್ ಮಾಡುವುದಕ್ಕೆ ತಯಾರಿದ್ದೆವು. ಆದರೆ, ಈಗಾಗಲೇ ಎಲ್ಲರೂ ಮನೆಗಳ ನಿರ್ಮಾಣಕ್ಕೆ ಒಂದೊಂದು ಲಕ್ಷಗಳನ್ನು ತೆಗೆದುಕೊಂಡಿದ್ದು, ಶಿಫ್ಟ್ ಮಾಡುವ ಜಾಗಕ್ಕೆ ಹೋಗುವುದಕ್ಕೆ ಯಾರೂ ಸಹ ತಯಾರಿಲ್ಲ. ಇದರಿಂದಾಗಿ ಎರಡನೇ ಕಂತನ್ನು ಬಿಡುಗಡೆ ಮಾಡಲು ಅವರು ಮನೆಗಳನ್ನು ಕಟ್ಟುತ್ತಿಲ್ಲ. ಇದುವರೆಗೂ 1600 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಏನು ಮಾಡಬೇಕೆಂದರೆ, ಬೇರೆ ಕಡೆ ಮನೆಗಳನ್ನು ನಿರ್ಮಿಸಿ, ಇರುವ ಮನೆಗಳನ್ನು ನೆಲಸಮಗೊಳಿಸಬೇಕು.

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಸ್ವತಃ ನಾನೇ ಹತ್ತಾರು ಕಡೆ ಹೋಗಿದ್ದು, ಪೂರ್ಣಗೊಂಡಿರದ ಮನೆಗಳಿಗೆ ಒಂದು ಲಕ್ಷ ರೂಪಾಯಿ ನೀಡಿದ್ದೇವೆ. ಭಾಗಶಃ ಹಾನಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವ ಮನೆಗಳಿಗೆ 3 ಲಕ್ಷ ರೂಪಾಯಿ ನೀಡಿದ್ದೇವೆ. ಒಂದು ಲಕ್ಷ ರೂಪಾಯಿ ತೆಗೆದುಕೊಂಡ ಮೇಲೆ ಬೇರೆ ಕಡೆ ವರ್ಗಾವಣೆ ಮಾಡಿ ಎಂದು ಹೇಳಿದರು. ಆನಂತರ ನಾವು ಬೇರೆ ಜಾಗವನ್ನು ಕಲ್ಪಿಸಿದ್ದೆವು. ಆದರೆ, ಅವರು ಅಲ್ಲಿ ಬರುವುದಕ್ಕೆ ತಯಾರಿಲ್ಲ. ಇರುವ ಮನೆಯನ್ನು ಕಟ್ಟಿಕೊಳ್ಳುವುದಕ್ಕೂ ತಯಾರಿಲ್ಲ. ಅಲ್ಲದೆ, ಒಂದು ಲಕ್ಷ ರೂಪಾಯಿ ನೀಡಿರುವುದರಿಂದ ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಾರೆ. ನೀವು ಒಂದೊಂದು ಲಕ್ಷ ರೂಪಾಯಿ ತೆಗೆದುಕೊಂಡಿದ್ದೀರಿ, ಬಾಕಿ ಮನೆಗಳನ್ನು ನಿರ್ಮಿಸುವುದಕ್ಕೆ ಆಗುತ್ತಿಲ್ಲ, ಮನೆಗಳನ್ನು ನಿರ್ಮಿಸಲು ಆಗಲಿಲ್ಲವೆಂದರೆ ಸರ್ಕಾರಕ್ಕೆ ಹಣವನ್ನು ವಾಪಸ್ಸು ನೀಡಿ ಎಂದು ನಾವು ನೋಟೀಸ್ ಕಳುಹಿಸಿದ್ದೆವು. ಅದಕ್ಕೆ ನಾಲ್ಕೈದು ಮನವಿಗಳು ಬಂದಿದ್ದು, ಆ ಮನವಿಯಲ್ಲಿ ದಯಮಾಡಿ ನಮಗೆ ನೀಡಿರುವಂಥ ಹಣವೇ ಸಾಕು ನಮಗೆ ತೊಂದರೆ ನೀಡಬೇಡಿ, ನಾವು ಈಗ ಎಲ್ಲಿ ನೆಲೆಸಿದ್ದೇವೋ ಅಲ್ಲಿಯೇ ನೆಲೆಸುತ್ತೇವೆ ಎಂದು ಹೇಳುತ್ತಾರೆ. ಮಾನ್ಯ ಸದಸ್ಯರಾದ ವೀಣಾ ಅಚ್ಚಯ್ಯನವರು ಮಡಿಕೇರಿಯವರಾಗಿದ್ದು, ಮಡಿಕೇರಿಯಲ್ಲಿರುವ ಅಯ್ಯಪ್ಪ ಬೆಟ್ಟವು ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಸೇರುತ್ತದೆ. ಅಲ್ಲಿ ಸುಮಾರು 460 ಮನೆಗಳು ಗುಡ್ಡದಲ್ಲಿದ್ದು, ಅಲ್ಲಿ landslides ಆಗುತ್ತಿದ್ದು, ಅಲ್ಲಿಯೇ ಜನರು ವಾಸಿಸುತ್ತಿದ್ದರು. ನಾನೇ ಸ್ವತಃ ಅಲ್ಲಿಗೆ ಭೇಟಿ ಕೊಟ್ಟು 2½ - 3 ಗಂಟೆಗಳ ಕಾಲ ನಿಂತುಕೊಂಡು ಅವರನ್ನೆಲ್ಲಾ ಕೆಳಗೆ ಇಳಿಸಿದೆ. ಅವರನ್ನು ಇಳಿಸಿದ ಮೇಲೆ ಸರ್ಕಾರ ಇಂತಹ ಕಡೆ ಜಾಗ ನೀಡಿದ್ದು, ಆ ಜಾಗವನ್ನು ನಮಗೆ ಕೊಡಿ ಮನೆಗಳನ್ನು ಕಟ್ಟಿಕೊಳ್ಳುತ್ತೇವೆ ಎಂದು ಹೇಳಿದರು. ನಾನು ತಕ್ಷಣ ಜಿಲ್ಲಾಧಿಕಾರಿಯವರನ್ನು ಕರೆದು ಅವರೆಲ್ಲರೂ ಕೆಳಗೆ ಬರಲಿ, ನಾವು ನಾಲ್ಕೈದು ತಿಂಗಳೊಳಗೆ 1+3 ಮನೆ ನಿರ್ಮಿಸಿ, ಎಲ್ಲರಿಗೂ ಸುಸಜ್ಜಿತವಾಗಿ ಮನೆಗಳನ್ನು ನಿರ್ಮಿಸುತ್ತೇವೆ ಎಂದೆಲ್ಲಾ ಶೇಕಡಾ 8 ರಷ್ಟು ಜನರು ಸಹ ಕೆಳಗೆ ಬರಲಿಲ್ಲ. 'ನೀವೂ ಏನು ಹಣ ನೀಡುತ್ತೀರೋ, ಅದನ್ನು ನಮಗೆ ನೀಡಿ, ನಾವು ಇಲ್ಲಿಯ ಮನೆಗಳನ್ನೇ ಸರಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು'. ಆದರೆ, ಆ ಮನೆಗಳೆಲ್ಲವೂ ಗುಡ್ಡದಲ್ಲಿತ್ತು. Geological survey ಪ್ರಕಾರ ಅದನ್ನು ಹಾಗೆ ಬಿಟ್ಟರೆ, ಇನ್ನೊಂದು ರೀತಿಯಲ್ಲಿ ಗಜಗಿರಿಯಾಗುತ್ತದೆ, ಗುಡ್ಡ ಕುಸಿಯುತ್ತದೆ ಎಂದು ಹೇಳುತ್ತಾರೆ. ಇದನ್ನು ತಮ್ಮ ಗಮನಕ್ಕೆ ತಂದ ಉದ್ದೇಶವೇನೆಂದರೆ, ನಾನು ಹತ್ತಾರು ಭಾಗದಲ್ಲಿ ಓಡಾಡಿದ್ದೇನೆ. ಮಾನ್ಯ ಕಂದಾಯ ಸಚಿವರು ಹೇಳಿದ ಹಾಗೆ ಸರ್ಕಾರದಿಂದ ಹಣ ಒದಗಿಸುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ನಮ್ಮ ಪಟ್ಟಿಯ ಪ್ರಕಾರ ಬಂದಿರುವಂಥ ಹಣವೇನಿದೆ ಅದನ್ನು ಕಂದಾಯ ಇಲಾಖೆಯಿಂದ ಪ್ರತಿಯೊಂದನ್ನು ಸಹ ಆರ್.ಟಿ.ಜಿ.ಎಸ್. ಮಾಡುತ್ತಿದ್ದೇವೆ. ಅವರವರ ಖಾತೆಗೆ ಹಣ ಹೋಗುತ್ತಿದೆ. ಜನರು ಸಹ ಇಷ್ಟೆಲ್ಲಾ ತೊಂದರೆಯಾದರೂ,... ಯಾವುದೋ ಒಂದು ಹಳ್ಳಿಗೆ ಭೇಟಿ ನೀಡಿದಾಗ ಮಳೆ ಬಂದು ಎಲ್ಲರ ಮನೆಯಲ್ಲೂ ಎರಡು-ಮೂರು ಅಡಿಯಷ್ಟು ನೀರು ನಿಂತಿತ್ತು. ಆದ್ದರಿಂದ ನಾನು ಅಲ್ಲಿ ನೆಲೆಸಿದ ಜನರಿಗೆ

ಕೋವಿಡ್ ಸೆಂಟರ್ ಮಾಡಿ, ಅವರನ್ನು ಅಲ್ಲಿಗೆ ಕಳುಹಿಸೋಣ ಎಂದು ವೆಂಕಟರಾಮೇಗೌಡ ಎಂಬ ದೊಡ್ಡ ಶಾಲೆಗೆ ಕರೆದುಕೊಂಡು ಹೋಗಿ, ಅವರಿಗೆ ಎಲ್ಲಾ ರೀತಿ ಸವಲತ್ತನ್ನು ಒದಗಿಸಿ, ಅವರಿಗೆಲ್ಲಾ ದೈಹಿಕವಾಗಿ ಆರೋಗ್ಯದ ಸಮಸ್ಯೆಯಾಗುತ್ತದೆ ಕೋವಿಡ್ ಸೆಂಟರ್ ಮಾಡಿಸೋಣ ಎಂದು ಎಲ್ಲಾ ಅಧಿಕಾರಿಗಳನ್ನು ಕರೆಸಿ ಮಾತನಾಡಿದರೆ, 230 ಜನ ಇದ್ದವರು ಬೆಳಿಗ್ಗೆ ಹೊತ್ತಿಗೆ 16 ಜನ ಮಾತ್ರ ಇದ್ದರು. ಇದೊಂದು ದುರಂತ. ಇದರಿಂದ ನನಗೂ ನೋವಾಗುತ್ತದೆ. ನಾನು 6 ದಿನಗಳ ಕಾಲ ಕೂರ್ಗ್ ನಲ್ಲಿ ಪ್ರತಿಯೊಂದು ಕಡೆ ಓಡಾಡಿದಂಥ ಸಂದರ್ಭದಲ್ಲಿ landslides ಆದಂತಹ ಘಟನೆಗಳು, ತೊಂದರೆಗಳನ್ನು ನೋಡಿದಾಗ ನೋವಾಗುತ್ತದೆ. ಇತ್ತೀಚೆಗೆ ನಿಧನರಾದ ಪುರೋಹಿತರಾದ ಶ್ರೀ ನಾರಾಯಣ ಆಚಾರ್ ಕಾವೇರಿ ತಪ್ಪಲಿನಲ್ಲಿಯೇ ಇರುವ ಭಾಗಮಂಡಲದ ಗಜಗಿರಿಯ 30-40 ಮೀಟರ್ ದೂರದಲ್ಲಿಯೇ ಅವರ ಸ್ವಂತ ಸಹೋದರ; ಚಿಕ್ಕಪ್ಪನ ಮಗನ ಮನೆ ಇದೆ. ನಮ್ಮ ಅಧಿಕಾರಿಗಳು ಹೋಗಿ ಆ ಮನೆಗೆ ಹೋಗಿ ನೆಲೆಸಿ ಎಂದರೆ, ಅವರ ಶ್ರೀಮತಿಯವರು ಬೇಡ ತುಂಬಾ ಮಳೆಯಾಗುತ್ತಿದೆ, ನಾವೂ ಅಲ್ಲಿಗೆ ಹೋಗಿ ಇರೋಣ ಎಂದು ಹೇಳುತ್ತಾರೆ. ತಾವೂ ಈಗಾಗಲೇ ಗೋವುಗಳ ಬಗ್ಗೆ ಮಾತನಾಡುವಾಗ ಹೇಳಿದಿರಿ, ನನಗೆ ಬಹಳ ನೋವಾದ ವಿಷಯವೇನೆಂದರೆ, 30 ರಿಂದ 40 ಗೋವುಗಳು ಬಂದು ಅವರ ಮನೆಯ ಹಿತ್ತಲಿನಲ್ಲಿ ಮಲಗುತ್ತಿದ್ದು, ಪ್ರವಾಹದಿಂದಾಗಿ ಆ ಗೋವುಗಳು ಎಲ್ಲೆಲ್ಲಿ ಹೋಗಿದ್ದವು ಎಂಬುದನ್ನೂ ಹುಡುಕಲು ಸಾಧ್ಯವಾಗಲಿಲ್ಲ. ಶ್ರೀ ನಾರಾಯಣ ಆಚಾರ್ ಅವರ ಶವ 2½ ಕಿಲೋ ಮೀಟರ್ ದೂರದಲ್ಲಿತ್ತು. ಇದು ದುರಂತದ ಸಂಗತಿಯಾಗಿದ್ದು, ಸರ್ಕಾರಕ್ಕೆ ಜನರು ಸಹ ಸ್ಪಂದಿಸಬೇಕಾಗುತ್ತದೆ. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ, ಜನರ ಹಿತ ಕಾಪಾಡುವುದು ನಮ್ಮ ಧರ್ಮ. ಕೊಡಗಿನಲ್ಲಿ ನನ್ನ ಆರು ದಿನಗಳ ಅನುಭವದಲ್ಲಿ ಜನರ ನೋವಿಗಿಂತ ಹೆಚ್ಚಾಗಿ ಜನರು ಮಾಡುವಂಥ ಕೆಲಸದಲ್ಲಿ ಕೆಲವರು ಯಾರು ತೊಂದರೆಯಲ್ಲಿದ್ದಾರೆ, ಅವರ ತೊಂದರೆ ಸ್ವಲ್ಪ ಸರಿದೂಗುತ್ತಿದ್ದಂತೆ ತಕ್ಷಣ ಅವರ ಸಮಸ್ಯೆಯನ್ನು ಮರೆತು ಬಿಡುತ್ತಾರೆ. ಇದಕ್ಕೂ ಸಹ ನಾವು ಏನಾದರೂ ಮಾರ್ಗೋಪಾಯ ಮಾಡಬೇಕಾಗುತ್ತದೆ. ಕೆಲವು ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೂ ಸಹ ಪ್ರಯೋಜನವಿಲ್ಲ. ಕಂದಾಯ ಸಚಿವರು ಸ್ವತಃ ಬಂದರು. ನಾವು ಹತ್ತು ಸಾವಿರ ರೂಪಾಯಿ ನೀಡುವುದಾಗಲಿ, 5 ಲಕ್ಷ ನೀಡುವುದಾಗಲಿ ದೊಡ್ಡ ವಿಚಾರವಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಹ ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ನಲ್ಲಿರುವಂಥ ಹಣದಲ್ಲಿ 95 ಸಾವಿರದ ಬದಲು 1 ಲಕ್ಷ ನೀಡಿ ಎಂದು ಹೇಳಿದ್ದಾರೆ. ಜೊತೆಗೆ ಎಷ್ಟು ಮನೆಗೆ ನೀಡಲಾಗಿದೆ, ಯಾವ ಹಂತದಲ್ಲಿದೆ ಎಂದು ಕರೆದು ಕೇಳುತ್ತಿರುತ್ತಾರೆ. ಇನ್ನೊಂದು ವಿಚಾರವೆಂದರೆ, ಅವರಿಗೆ ಮನೆ ಕಟ್ಟಿಕೊಳ್ಳಿ ಎಂದು ಹೇಳಿದರೆ,

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಮನೆ ಕಟ್ಟಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಹಾಗಾಗಿ ಇಲಾಖೆ ವತಿಯಿಂದಲೇ ಮನೆ ನಿರ್ಮಿಸುವಂಥ ಯೋಚನೆ ಮಾಡುತ್ತಿದ್ದೇವೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಮನೆಗಳನ್ನು ಸ್ಥಳಾಂತರ ಮಾಡುವ ಪರಿಸ್ಥಿತಿ ಇಲ್ಲ. ಈಗ ಅವರ ಮನೆ ಎಲ್ಲಿ ಇದೆ ಅಲ್ಲಿಯೇ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಆದರೆ, ಅವರಿಗೆ ಹಣ ಬರುತ್ತಿಲ್ಲ. ದಯಮಾಡಿ ಅದರ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಮಾನ್ಯ ಸೋಮಣ್ಣನವರು ವಸತಿ ಸಚಿವರಾಗಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮುಂದೆ ಬರುವ ದಿನಗಳಲ್ಲಿ ಆಶ್ರಯ ಯೋಜನೆಯಡಿ ಹೆಚ್ಚಿನ ಮನೆಗಳನ್ನು ನಮ್ಮ ಭಾಗದಲ್ಲಿ ನೀಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ, 25 ವರ್ಷಗಳ ಹಿಂದೆ ಕಟ್ಟಿದಂತಹ ಆಶ್ರಯ ಯೋಜನೆಯ ಮನೆಗಳೆಲ್ಲಾ ನೆಲಸಮಗೊಳ್ಳುವ ಪರಿಸ್ಥಿತಿಯಲ್ಲಿದೆ. ಅದಕ್ಕಾಗಿ ಬಡವರು ಬೀದಿಪಾಲಾಗುವುದು ಬೇಡವೆಂಬ ಕಾರಣದಿಂದ ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತಾ, ಮತ್ತೊಮ್ಮೆ ಕಂದಾಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಹಳಿಯಾಳ ತಾಲ್ಲೂಕನ್ನು ಫ್ಲಡ್ ಡ್ಯಾಮೇಜ್‌ನಿಂದ ಕೈಬಿಡಲಾಗಿದೆ. ಆಗಸ್ಟ್ ಮಾಹೆಯಲ್ಲಿ ಬಹಳ ದೊಡ್ಡ ಮಳೆಯಾದ ಕಾರಣ ಬಹಳಷ್ಟು ಮನೆಗಳೆಲ್ಲವೂ ನೆಲಸಮಗೊಂಡಿದೆ. ಹಾಗಾಗಿ ಫ್ಲಡ್ ಡ್ಯಾಮೇಜ್‌ನಡಿ ಹಳಿಯಾಳ ತಾಲ್ಲೂಕನ್ನು ಸೇರಿಸಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪುರ(ವಿಧಾನಸಭಾ ಕ್ಷೇತ್ರ):-** ಬಹುಶಃ 118 ವರ್ಷಗಳ ನಂತರ ಪರಿಸ್ಥಿತಿ ಹದಗೆಟ್ಟಿದೆ. ಮಳೆ, ಪ್ರವಾಹ, ಇವೆರಡನ್ನೂ ನೋಡಿದಾಗ ರೈತ ಕಂಗಾಲಾಗಿದ್ದಾನೆ, ಬಡವರು ತಮ್ಮ ಜೀವವನ್ನು ಕೈಯಲ್ಲಿಟ್ಟುಕೊಂಡು, ಊರನ್ನು ಬಿಟ್ಟು ಓಡಿ ಹೋಗುತ್ತಿದ್ದಾರೆ. ಒಂದು ಕಡೆ ಪ್ರವಾಹದ ಭೀತಿ, ಇನ್ನೊಂದು ಕಡೆ ಮಳೆ. ಇವೆರಡರ ನಡುವೆ ರೈತನ ಪರಿಸ್ಥಿತಿ ಹೇಳತೀರದ್ದಾಗಿದೆ. ಆದರೆ, ಈಗಾಗಲೇ ಮಾತನಾಡಿದ ಹಾಗೆ ಸರ್ಕಾರ ಮನೆಗಳು ಬೇಡ ಎಂದು ಹೇಳುತ್ತಾರೆ ಎಂದು ಹೇಳಿದರು. ಹೌದು, ಆದರೆ ಎಲ್ಲರೂ ಮನೆಗಳು ಬೇಡ ಎನ್ನುವ ಪರಿಸ್ಥಿತಿಯಲ್ಲಿಲ್ಲ. ಕೆಲವರು ಮಾತ್ರ ಮನೆ ಬೇಡ ಎನ್ನುವ ಪರಿಸ್ಥಿತಿಯಲ್ಲಿರಬಹುದು. ಇನ್ನೂ ಕೆಲವು ಕಡೆ ಬಿ.ಜೆ.ಪಿ. ಪಕ್ಷದ ಕಡೆಯವರು, ಕಾಂಗ್ರೆಸ್ ಪಕ್ಷದ ಕಡೆಯವರು ಎಂದು ಬಡವರ ಜೊತೆ ರಾಜಕಾರಣದ ಮಾತುಗಳನ್ನಾಡಿ ನಿಜವಾಗಿಯೂ ಮನೆಗಳನ್ನು ಕಳೆದುಕೊಂಡಿರುವವರಿಗೆ ಮನೆ ಕಟ್ಟಿಕೊಡದ ಪರಿಸ್ಥಿತಿ ಇದೆ. ಇಲ್ಲಿಯೂ ಸಹ ರಾಜಕಾರಣ ಮಾಡುವಂಥದ್ದಾಗಿದೆ. ಸ್ವತಃ ನನ್ನ ಕ್ಷೇತ್ರದಲ್ಲಿಯೇ ನನ್ನ ಪಿ.ಎ.ಗೆ ಆತನ ಊರಿನಲ್ಲಿ ಸರಿಯಾದ ಮನೆ ಇಲ್ಲ. ಆತ ಯಾರು ಎಂದು ಕೇಳಿದರೆ ತಿಮ್ಮಾಪುರರವರ ಪಿ.ಎ. ಹಾಗಾಗಿ ಆತನಿಗೆ ಮನೆ ನೀಡಬಾರದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳುತ್ತಾರೆ. ಬಡವರ ಜೊತೆ ಇದು ಎಂತಹ ರಾಜಕಾರಣ. ಇವತ್ತು ಸರ್ಕಾರ 7 ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಿದರು. ಅವರಿಗೆ ಏನಾದರೂ ಖಾಯಂ ವ್ಯವಸ್ಥೆ ಕಲ್ಪಿಸಲಾಗಿದೆಯೇ? ಅವರಿಗೆ ಖಾಯಂ ವ್ಯವಸ್ಥೆ ಮಾಡದ ಕಾರಣ ಅವರು ಎಲ್ಲಿ ವಾಸವಾಗಿದ್ದರೋ, ಅಲ್ಲಿಯೇ ಮತ್ತೆ ಹೋಗಿ ನೆಲೆಸಿದರು. ನನ್ನ ಕ್ಷೇತ್ರದ ಗುಲಗಂಜಿ ಎಂಬ ಹಳ್ಳಿ ಸೇರಿದಂತೆ ಪ್ರವಾಹದಿಂದಾಗಿ ಬಹುಶಃ 13 ಗ್ರಾಮಗಳು ಸಂಪೂರ್ಣವಾಗಿ ಮುಳುಗಿ ಹೋಗಿತ್ತು. ಒಟ್ಟು 13 ರಿಂದ 14 ಹಳ್ಳಿಗಳು ಸಂಪೂರ್ಣವಾಗಿ ಒಂದು ಮನೆ ಸಹ ಉಳಿಯದೇ ಎಲ್ಲವೂ ಮುಳುಗಿ ಹೋಗುತ್ತವೆ. 7 ದಿವಸಗಳ ನಂತರ ಬಂದ ರೈತ ನೆಲಸಮಗೊಂಡಿರುವ ಮನೆ ನೋಡಿ ನನ್ನ ಬದುಕೇ ಮುಳುಗಿ ಹೋಯಿತು ಎಂದು ಹೃದಯಾಘಾತದಿಂದ ಮರಣ ಹೊಂದುತ್ತಾನೆ. ಅದಕ್ಕೆ ಸಂಬಂಧಿಸಿದಂತೆ ಕಳೆದ ಬಾರಿ ಸಹ ವಿಧಾನ ಪರಿಷತ್ತಿನಲ್ಲಿ ಪರಿಹಾರ ನೀಡಿ ಎಂದು ಕೇಳಿದ್ದೆ.

**(ಮುಂದು) . . .**

**(737) 21.09.2020 5.50 ಟಿ.ಸಿ.ಹೆಚ್-ಜಿ.ಆರ್**

**ಶ್ರೀ ಆರ್.ಬಿ.ತಿಮ್ಮಾಪೂರ (ಮುಂದು):-**

ಇಲ್ಲ, ನಾವು ಪ್ರವಾಹದಲ್ಲಿ ಕೊಚ್ಚಿ ಹೋಗುವಂತಿದ್ದರೆ ಮಾತ್ರ ನಾವು ಪರಿಹಾರ ಕೊಡುತ್ತೇವೆ. ನಿಮಗೆ ತೊಂದರೆಯಾಗಿಲ್ಲದಿದ್ದರೆ ನಾವು ಪರಿಹಾರ ಕೊಡುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ಇದೆಂತಹ ನ್ಯಾಯ? ನಾನು ಇವತ್ತು ಕೇಳುತ್ತಿದ್ದೇನೆ, ಇವತ್ತಿನ ದಿವಸ ಸರ್ಕಾರ 5 ಲಕ್ಷ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅವರು ಏಕೆ ಮನೆಗಳನ್ನು ಕಟ್ಟಿಕೊಳ್ಳುತ್ತಿಲ್ಲ. ಅಂದರೆ, ಬಹುಶಃ ಸರ್ಕಾರ ಲಿಸ್ಟ್ ಮಾಡುವಲ್ಲಿ ಎಲ್ಲೋ ಒಂದು ಕಡೆ ಎಡವಿರಬಹುದು. ನಿಜವಾದ ಬಡವರಿಗೆ, ನಿಜವಾದ ನೋವು ಇದ್ದವರಿಗೆ 5 ಲಕ್ಷ ಮನೆಗಳನ್ನು ಕಟ್ಟಿಕೊಡುವುದಲ್ಲ. 1 ಲಕ್ಷ ಮನೆಕಟ್ಟಿಕೊಟ್ಟರೂ ಕೂಡ ಅದ್ಭುತವಾದಂತಹ ಕೆಲಸವನ್ನು ಸರ್ಕಾರ ಮಾಡಿದೆ ಎಂದು ಒಪ್ಪಿಕೊಳ್ಳುತ್ತೇನೆ. ಹಾಗಾದರೆ, ಸರ್ಕಾರ ಬಿಡುಗಡೆ ಮಾಡಿರುವಂತಹ ಹಣವನ್ನು ಅವರು ಏಕೆ ಪಡೆದುಕೊಳ್ಳುತ್ತಿಲ್ಲ. ನಮಗೂ ಕೂಡ ಗೊತ್ತಿದೆ, 50 ಎಕರೆ, 100 ಎಕರೆ 200 ಎಕರೆ ಜಮೀನು ಇದ್ದವರಿಗೆ ಐದ್ಯೆದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 100 ಎಕರೆ ಜಮೀನು ಇದ್ದವರಿಗೆ ಅವರ ಹಳೆಯ ಮನೆ ಬಿದ್ದಿದೆಯೆಂದು ಅವರಿಗೂ ದುಡ್ಡನ್ನು ಕೊಡುತ್ತಾರೆ. ನಾನು ತಾರತಮ್ಯದ ಬಗ್ಗೆ ಹೇಳುತ್ತಿಲ್ಲ, ನೀವು ಶ್ರೀಮಂತರಿಗಾದರೂ ದುಡ್ಡು ಕೊಡಿ ಅಥವಾ ಬಡವರಿಗಾದರೂ ದುಡ್ಡನ್ನು ಕೊಡಿ ಅದು ನಿಮಗೆ ಬಿಟ್ಟಿದ್ದು. ನೀವು ನಿಜವಾದ ಬಡವನಿಗೆ ಏನು ಮಾಡಿದ್ದೀರಿ? ಆದರೆ, ಅವರು ಏಕೆ ದುಡ್ಡನ್ನು ತೆಗೆದುಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮನೆಗಳನ್ನು ಕಟ್ಟಿಕೊಳ್ಳುತ್ತಿಲ್ಲ. ಯಾರೋ ಒಬ್ಬರು ಅಥವಾ ಇಬ್ಬರು ಮಾಡಿದ್ದನ್ನು ಇಡೀ ರಾಜ್ಯ ಸರ್ಕಾರದಲ್ಲಿ ಬಡವರಿಗೆ ಅನ್ಯಾಯವಾಗುವಂತಹ ರೀತಿಯಲ್ಲಿ ಈ ಮಾತುಗಳು ಆಗಬಾರದು ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಒಟ್ಟು 130 ತಾಲ್ಲೂಕುಗಳು ಇಂತಹ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದ್ದವು. 13,573 ಮನೆಗಳಿಗೆ ಹಾನಿಯಾಗಿದೆ. ಸರ್ಕಾರ ಎಷ್ಟು ಮನೆಗಳಿಗೆ ಹಣ ಕೊಟ್ಟಿದ್ದಾರೆ? ಹೌದು, ದುಡ್ಡು ಜಿಲ್ಲಾಧಿಕಾರಿಗಳ ಬಳಿ ಇದೆ, ತಹಶೀಲ್ದಾರ್‌ರವರ ಬಳಿ ಹಣವಿದೆಯೆಂದು ಹೇಳುತ್ತಾರೆ, ಆದರೆ, ಆ ಹಣ ಫಲಾನುಭವಿಗಳಿಗೆ ತಲುಪಬೇಕಲ್ಲವೇ? ಅದಕ್ಕೆ ಏನಾದರು ಅಡಚಣೆ ಇದೆಯೇ. ಅಲ್ಲಿ ಅವರಿಗೆ ಏಕೆ ಹಣ ಮುಟ್ಟುತ್ತಿಲ್ಲವೆಂದು ಏನಾದರು ಯೋಚನೆ ಮಾಡಿದ್ದೀರಾ? ಆ ಸಂಬಂಧ ಯಾವುದಾದರೂ ಒಂದು ಸಮಿತಿ ಮಾಡಿ, ಅದಕ್ಕೆ ಯಾರನ್ನಾದರೂ ಕರೆದು ವಿಚಾರ ಮಾಡಿದ್ದಾರೆಯೇ? ಇಲ್ಲವಲ್ಲಾ. ಮಾನ್ಯ ಸಭಾಪತಿಯವರೇ, ಅಲ್ಲಿ ಮಳೆಗೆ ಈರುಳ್ಳಿ ಮತ್ತು ಗೋವಿನ ಜೋಳ, ತರಕಾರಿ ಬೆಳೆಗಳು ಸಂಪೂರ್ಣವಾಗಿ ಹಾಳಾಗಿದೆ. ಸರ್ಕಾರ ನಾವಿದ್ದೇವೆ. ಹೌದು, ನಾವಿಷ್ಟು ಹಣವನ್ನು ಕೊಡುತ್ತೇವೆ. ನಿಮ್ಮ ರಕ್ಷಣೆಗೆ ನಾವು ಬರುತ್ತೇವೆ ಎನ್ನತಕ್ಕಂಥ ಒಂದು ಮಾತು ಈ ಸರ್ಕಾರದಿಂದ ಬರದಿದ್ದರೆ, ನಾವೇನು ಹೇಳಬೇಕು? ಹೋದ ವರ್ಷ ಅತಿವೃಷ್ಟಿ ಆಗಿದ್ದಕ್ಕೆ ಸರ್ಕಾರ ಏನನ್ನೂ ಕೊಟ್ಟಿಲ್ಲ. ಮುಧೋಳ ತಾಲ್ಲೂಕಿನಲ್ಲಿ 13 ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗಿವೆ. ಸರ್ಕಾರ ನಾವು ನಿಮ್ಮ ರಕ್ಷಣೆಗೆ ಇದ್ದು, ನಿಮ್ಮನ್ನು ಬೇರೆ ಕಡೆಗೆ ಸ್ಥಳಾಂತರಿಸುತ್ತೇವೆ ಎಂದು ಹೇಳಬಹುದಲ್ಲವೇ? ಒಬ್ಬ ರೈತನಿಗೆ 5 ಎಕರೆ, 10 ಎಕರೆ 20 ಎಕರೆ ಜಮೀನು ಹೊಂದಿದವರಿಗೆ ಒಂದು ಮನೆ ಬೇಕು. ಅವರು ಆಶ್ರಯ ಯೋಜನೆಯಲ್ಲಿ ಕೊಟ್ಟಿರುವ ಮನೆಗಳಲ್ಲಿ ಇರುವುದಕ್ಕೆ ಆಗುತ್ತದೆಯೇ? ಆಲಮಟ್ಟಿ ಡ್ಯಾಂನಿಂದಾಗಿ ಮುಳುಗಡೆಯಾದವರಿಗೆ ಏನು ಪರಿಹಾರ ಕೊಟ್ಟಿದ್ದಾರೆ, ಅದೇ ರೀತಿಯ ಪರಿಹಾರವನ್ನು ಕೊಟ್ಟರೆ, ಆ ರೈತರು ಅಲ್ಲಿಗೆ ಏಕೆ ಹೋಗುವುದಿಲ್ಲ? ನನಗೆ ತಿಳಿದಹಾಗೆ, ಆಲಮಟ್ಟಿ ಡ್ಯಾಂನ ಎತ್ತರ ಹೆಚ್ಚಾದಾಗ, ಪ್ರವಾಹ ಬಂದಾಗ ಅದರ ಒಳಹರಿವು ಹೆಚ್ಚಾಗಿ ಬಹಳ ಮನೆಗಳಿಗೆ ತೊಂದರೆಯಾಗುತ್ತದೆ, ಜಮೀನುಗಳಿಗೆ ತೊಂದರೆಯಾಗುತ್ತದೆ. ಒಂದೇ ದಿವಸ ಹರಿದು ಹೋಗತಕ್ಕಂಥ ನೀರು, ಸುಮಾರು 8–10 ದಿವಸಗಳು ನಿಲ್ಲತಕ್ಕಂಥ ಪರಿಸ್ಥಿತಿಯಿಂದ ಬೆಳೆಯಾಗುತ್ತಿದೆ. ಆದ್ದರಿಂದ ದಯಮಾಡಿ ಆಲಮಟ್ಟಿ ಡ್ಯಾಂ ಹಿನ್ನೀರಿನಿಂದ ಮುಳುಗಡೆಯಾಗತಕ್ಕಂಥ ಏನು ಊರುಗಳಿವೆ, ಅವುಗಳಿಗೆ ಹೆಚ್ಚು ಪರಿಹಾರವನ್ನು ಕೊಡತಕ್ಕಂಥ ಕೆಲಸ ಆಗಬೇಕಾಗುತ್ತದೆ. ಅದು ಆಲಮಟ್ಟಿ ಡ್ಯಾಂನಿಂದ ಆದಂಥದ್ದು. ಮಾನ್ಯ ಕಂದಾಯ ಸಚಿವರು ಇನ್ನೊಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಈಗಾಗಲೇ ಸುಮಾರು 22 ಹಳ್ಳಿಗಳು ಆಲಮಟ್ಟಿ ಡ್ಯಾಂನಿಂದ ಮುಳುಗಡೆಯಾಗಲಿದೆ, ಅವು ಪ್ರವಾಹ ಬಂದಾಗ ಮುಳುಗಡೆಯಾಗುತ್ತವೆ. ಅವುಗಳನ್ನಾದರೂ ನೀವು ಆದ್ಯತೆಯ ಮೇಲೆ ಸ್ಥಳಾಂತರ ಮಾಡುವಂತಹ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಇವೆಲ್ಲಾ ಆದ್ಯತೆ ಮೇರೆಗೆ ಮಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕು ಎನ್ನತಕ್ಕಂಥದ್ದನ್ನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ಈ ಸಂಬಂಧ ಮಾನ್ಯ ಸಭಾನಾಯಕರು, ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಚೆನ್ನಾಗಿ ಮಾತನಾಡಿದ್ದಾರೆ.

ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು ತುಮಕೂರು ಜಿಲ್ಲೆಗೆ ಬಂದಿದ್ದರು. ಅತಿವೃಷ್ಟಿಯಿಂದ ಸಾಕಷ್ಟು ಹಾನಿಯಾಗಿದೆ, ಏನಾದರು ಜನತೆಗೆ ಹೇಳಿ ಎಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಆದರೆ, ನಮ್ಮ ದೇಶದ ಪ್ರಧಾನ ಮಂತ್ರಿಗಳಿಂದ ಏನೂ ಉತ್ತರ ಬರಲಿಲ್ಲ. ಕರ್ನಾಟಕ ರಾಜ್ಯಕ್ಕೆ ಇಂತಹ ಹಾನಿಯಾಗಿದೆ, ನಾನು ನಿಮ್ಮ ರಕ್ಷಣೆಗೆ ಇದ್ದೇನೆ, ನಾವು ಪರಿಹಾರ ಕೊಡುತ್ತೇನೆ ಎನ್ನತಕ್ಕಂಥ ಒಂದು ಮಾತನ್ನು ಹೇಳಲಿಲ್ಲ. ಪ್ರವಾಹ ಬಂದಂತಹ ಸಂದರ್ಭದಲ್ಲಿ 'ಚಂದ್ರಾಯಾನ-2' ಅನ್ನು ಉಡಾವಣೆ ಮಾಡುವ ಸಂಬಂಧ ಸನ್ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬಂದಿದ್ದರು. ಅವರು ಬೆಂಗಳೂರಿಗೆ ಬಂದು 'ಚಂದ್ರಯಾನ-2' ರ ಉಡಾವಣೆ ನೋಡಿದರೇ, ವಿನಃ ನಾವೆಲ್ಲಾ ಮುಳುಗುತ್ತಿದ್ದೆವೆ, ತೇಲುತ್ತಿದ್ದೇವೆ, ಸಾಯುತ್ತಿದ್ದೇವೆ ಎಂಬುದರ ಬಗ್ಗೆ ಒಂದು ಮಾತು ಕೂಡ ಆಡಲಿಲ್ಲ. ಕರ್ನಾಟಕ ರಾಜ್ಯದ ಜನತೆಗೆ ಅತಿವೃಷ್ಟಿಯಿಂದ ಇಷ್ಟೆಲ್ಲಾ ಹಾನಿಯಾಗಿದೆ. ನಾನು ನಿಮ್ಮ ರಕ್ಷಣೆಗೆ ಇದ್ದೇನೆ ಎನ್ನತಕ್ಕಂಥ ಮಾತನ್ನು ಹೇಳದಿದ್ದರೆ, ನಮ್ಮ ರಾಜ್ಯದಿಂದ ಲೋಕಸಭೆಯಲ್ಲಿ 26 ಜನ ಸದಸ್ಯರುಗಳು ಇದ್ದಾರೆ, ನಾವು ಇವತ್ತು ಈ ದೇಶದ ಪ್ರಧಾನಿಗಳು ಬಹಳ ಅದ್ಭುತವಾದಂತಹ ಕೆಲಸವನ್ನು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ. ನಾವು ಏಕೆ ನೋವಿನಿಂದ ಹೇಳುತ್ತಿದ್ದೇವೆಂದರೆ, ಹೌದು ಅವರು ಒಂದು ಮಾತನ್ನಾದರು ಹೇಳಬೇಕಾಗಿತ್ತು ಎನ್ನತಕ್ಕಂಥ ಭಾವನೆ ನಮ್ಮಲ್ಲಿದೆ. ನೀವು ಹಣವನ್ನು ಎಷ್ಟು ಕೊಡುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ. ರಾಜ್ಯ ಸರ್ಕಾರ ಎಷ್ಟು ಹಣ ಕೇಳಿದ್ದಾರೆ, ಅಷ್ಟು ಹಣವನ್ನು ಅಂತೂ ಕೊಟ್ಟಿಲ್ಲ. ನಮ್ಮ ಸಭಾನಾಯಕರು, ಕಾಂಗ್ರೆಸ್‌ನವರು ಬಹಳ ದಿವಸಗಳಿಂದ ರೂಲ್ ಮಾಡಿದ್ದಾರೆ, ನಿರೀಕ್ಷಿತ ರೀತಿಯಲ್ಲಿ ಕೆಲಸ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದರು. ಮಾನ್ಯ ಸಭಾನಾಯಕರೇ, ಈಗಲಾದರು ಕಣ್ಣು ತೆರೆಯುವಂತಹ ಕೆಲಸ ಕೇಂದ್ರ ಸರ್ಕಾರ ಮಾಡದೇ ಇದ್ದರೆ ನಮಗೆ ಏನು ಲಾಭ?

ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯಕ್ಕೆ ಏನೇನು ಹಾನಿಯಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿ. ಇಲ್ಲವೆಂದರೆ, ಸರ್ವಪಕ್ಷಗಳ ಜನ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿನಿಧಿಗಳನ್ನು ಹಾಗೂ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ, ನೀವು ಸುಮ್ಮನೆ ನಿಂತುಕೊಳ್ಳಿ. ನಾವು ನಮಗೆ ಈ ರೀತಿ ತೊಂದರೆಯಾಗಿದೆ ಪರಿಹಾರ ಕೊಡಿಯೆಂದು ಕೇಳುತ್ತೇವೆ.

**ಸಭಾಪತಿಯವರು:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ. . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅಂತಹ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿರುವಷ್ಟು ಬೇರೆ ಯಾರು ತೆಗದುಕೊಂಡಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾನಾಯಕರೇ, ಆಯಿತು ಬಿಡಿ, ನೀವೆಷ್ಟು ಪರಿಹಾರ ಕೊಟ್ಟಿದ್ದಿರಿ ಎಂದು ಈ ರಾಜ್ಯದ ಜನತೆ ನೋಡುತ್ತಿದ್ದಾರೆ. ನೀವು ಬೇಕಾದರೆ defend ಮಾಡಿಕೊಳ್ಳಿ. ನನ್ನದು ಏನೂ ಅಭ್ಯಂತರವಿಲ್ಲ. ನೀವು ನಮ್ಮ ಪ್ರಧಾನ ಮಂತ್ರಿಗಳು ತುಂಬಾ ಉತ್ತಮವಾದಂಹ ಕೆಲಸವನ್ನು ಮಾಡಿದ್ದಾರೆ, 1000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಲಕ್ಷ ಕೋಟಿ ಕೊಟ್ಟಿದ್ದಾರೆಂದು defend ಮಾಡಿಕೊಳ್ಳಿ. ಹೌದು, ಈ ರಾಜ್ಯದ ಜನತೆ ನೋಡುತ್ತಾರೆ.

**(ಗೊಂದಲ)**

ಮಾನ್ಯ ಸಭಾನಾಯಕರೇ, ನೀವು ಬೇಕಾದರೆ ಡಿಫೆಂಡ್ ಮಾಡಿಕೊಳ್ಳಿ. ಈ ದೇಶದ ಪ್ರಧಾನಮಂತ್ರಿಗಳು ಕರ್ನಾಟಕ ರಾಜ್ಯಕ್ಕೆ ಭಾರಿ ಜಿ.ಎಸ್.ಟಿ. ಹಣವನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೊಟ್ಟಿದ್ದಾರೊ, ಇಲ್ಲವೊ ಕೇಳಲಿ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಇನ್ನೂ ಏನೇನು ಕೊಟ್ಟಿದ್ದಾರೆಂದು ಹೇಳಿಕೊಳ್ಳಲಿ. ನಾವೇನು ಬೇಡವೆಂದು ಹೇಳುವುದಿಲ್ಲ.

**ಸಭಾಪತಿಯವರು:-** ಶ್ರೀ ಆರ್.ಬಿ.ತಿಮ್ಮಾಪೂರ ರವರೇ, ತಾವು ಕುಳಿತುಕೊಳ್ಳಿ. ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಿ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ನನ್ನದು ಎರಡು ಪಾಯಿಂಟ್ಸ್ ಇದೆ, ಮಾತನಾಡಿ ಮುಗಿಸಿಬಿಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಶ್ರೀ ಆರ್.ಬಿ.ತಿಮ್ಮಾಪೂರ ರವರೇ, ತಾವು ಎಲ್ಲಿಯೂ ಹೋಗುವುದು ಬೇಡ, ಇಲ್ಲೇ ಮಾಡಿ.

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಬೆಳೆ ಹಾನಿಗೆ ಇನ್ನೂ ಹಣ ಸಂಪೂರ್ಣವಾಗಿ ಸಿಕ್ಕಿಲ್ಲ. ಆದಷ್ಟು ಬೇಗ ಬೆಳೆಹಾನಿಗೆ ಪರಿಹಾರ ಕೊಡತಕ್ಕಂಥ ಕೆಲಸ ಆಗಬೇಕು ಎಂದು ನಾನು ಈ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ಏನು ಎಫೆಕ್ಟ್ ಆಗಿದೆ, ಆ ಎಫೆಕ್ಟ್ ಆದಂತಹ ರೈತರ ಸಾಲ ಸೂಟುಮಾಡಬೇಕು. ಹಾನಿಗೊಳಗಾಗುತ್ತಿರುವ ಗ್ರಾಮಗಳನ್ನು ಸ್ಥಳಾಂತರ ಮಾಡಬೇಕು. ಮನೆಗಳ ನಿರ್ಮಾಣ ಆದಷ್ಟು ಬೇಗ ಮಾಡಬೇಕು. ಕೆಲವು ರೈತರ ಜಮೀನುಗಳಲ್ಲಿ ಬೆಳೆಗಳೆಲ್ಲಾ ಕೊಚ್ಚಿಕೊಂಡು ಹೋಗಿವೆ, ಅಂತಹ ರೈತರಿಗೆ ಸಹಾಯ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನೇನು ಯಾವುದೇ ವಿಷಯವನ್ನು ರಿಪೀಟ್ ಮಾಡುವುದಿಲ್ಲ. ಈಗ ನಮ್ಮ ಅನುಭವಕ್ಕೆ ಬರುತ್ತಿರುವುದೇನೆಂದರೆ, ನಮ್ಮ ಗ್ರಾಮ ಕೃಷ್ಣ ಹೊಳೆ ದಂಡೆಯ ಹತ್ತಿರವೇ ಇದೆ. ಇತ್ತೀಚೆಗೆ ಕಂದಾಯ ಸಚಿವರಾದ ಶ್ರೀ ಆರ್.ಅಶೋಕ್‌ರವರು ನಮ್ಮ ರಾಯಚೂರು ಜಿಲ್ಲೆಗೆ ಬಂದಿದ್ದರು. ನನಗೆ ಉಪ ವಿಭಾಗಾಧಿಕಾರಿಯವರು ಸಂದೇಶವನ್ನು ಕಳುಹಿಸಿ, ಮಾನ್ಯ ಕಂದಾಯ ಸಚಿವರು ಬಂದಿದ್ದಾರೆ, ಅವರು ಸಭೆಯನ್ನು ನಡೆಸುತ್ತಾರೆ, ಇದು ತಮ್ಮ ಮಾಹಿತಿಗಾಗಿ ಎಂದು ಹೇಳಿದ್ದರು. ಈಗ ತಮ್ಮ ಮಾಹಿತಿಗಾಗಿ ಎಂದು ಸಂದೇಶ ಕಳುಹಿಸಿ ಅಧಿಕಾರಿಯವರ ಸಭೆಗೆ ನಾವು ಹೋಗಬೇಕೋ ಅಥವಾ ಬೇಡವೋ ಎಂಬ ಪ್ರಶ್ನೆಯನ್ನು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ. ಕೆಲವು ಮಂದಿ ಸಚಿವರು ಏನು ಮಾಡುತ್ತಾರೆಂದರೆ, ಎಲ್ಲಾ ಪ್ರತಿನಿಧಿಗಳು ಭಾಗವಹಿಸಲು ಕೋರಲಾಗಿದೆ ಎಂದು ಬರೆಯುತ್ತಾರೆ. ತಮ್ಮ ಮಾಹಿತಿಗೆ ಎಂದು ಹೇಳಿಬಿಟ್ಟು, ನಾವು ನಿಮ್ಮನ್ನು ಆಹ್ವಾನಿಸಿಲ್ಲ. ನೀವು ಹೊರಗಡೆ ಹೋಗಿ ಎಂದರೆ, ನಮ್ಮ ಮರ್ಯಾದೆ ಕಡಿಮೆಯಾಗುತ್ತದೆ.

**ಸಭಾಪತಿಯವರು:-** ನೀವು ಬರುವುದಾರೆ, ಸಭೆಗೆ ಬನ್ನಿ, ಬಿಟ್ಟರೆ ಬಿಡಿ ಎಂದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಅವೊತ್ತು ನಾನು ಮನೆಯಲ್ಲೇ ಇದ್ದೆನು. ಅದಕ್ಕಾಗಿ ನನಗೆ ಮರ್ಯಾದೆ ಕಡಿಮೆಯಾಗುತ್ತದೆಂದು ನಾನು ಅಲ್ಲಿಗೆ ಹೋಗಲಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅಪ್ಪಾಜಿಗೌಡ.ಎನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾಹಿತಿಗಾಗಿ ಎಂದರೆ, ನೀವು ಬರುವುದು ಬೇಡ ಎಂದರ್ಥ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ಇಂತಹ ವಿಚಾರಗಳಲ್ಲಿ ತಾವು ಸ್ಪಷ್ಟವಾದ ನಿರ್ದೇಶನಗಳನ್ನು ಕೊಡಬೇಕು. ಏಕೆಂದರೆ, ನೀವು ರಾಯಚೂರಿಗೆ ಬಂದಾಗ ನಾವು ಭಾಗವಹಿಸಬೇಕೆಂದು ಹೇಳಿದಾಗ ಮಾತ್ರ ನಾನು ಬರುತ್ತೇನೆ, ಇಲ್ಲದಿದ್ದರೆ ನಾನು ಬರುವುದಿಲ್ಲ. ಏಕೆಂದರೆ ನಾನು ಮರ್ಯಾದೆ ಕಳೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಉಪ ವಿಭಾಗಾಧಿಕಾರಿಯವರು ಆ ರೀತಿ ಮಾಡಿರುವುದು ತಪ್ಪು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರೇ, ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತಂದೆನು.

**ಶ್ರೀ ಅಪ್ಪಾಜಿಗೌಡ.ಎನ್:–** ಮಾನ್ಯ ಸಭಾಪತಿಯವರೇ, ಈ ರೀತಿ ಕಂದಾಯ ಇಲಾಖೆಯದ್ದು ಒಂದೇ ಅಲ್ಲ. Majority of ministers ಬಂದಾಗೆಲ್ಲಾ ನಡೆಯುವಂತಹ ಕೆಲಸವಾಗಿದೆ. ಎಂ.ಎಲ್.ಸಿ., ಗಳಿಗೆ ಉದ್ದೇಶಪೂರ್ವಕವಾಗಿ ಮಾಡುತ್ತಾರೋ ಅಥವಾ ಯಾವ ರೀತಿ ಮಾಡುತ್ತಾರೋ ಗೊತ್ತಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ತಮ್ಮಿಂದ ಸ್ಪಷ್ಟವಾದ ಆದೇಶವನ್ನು ಕೊಡಬೇಕು. ಮಾನ್ಯ ಸಭಾಪತಿಯವರೇ, ಕೆಲವು ಸಚಿವರುಗಳು ನೀವು ಬರಬೇಕು ಎಂದು ತಮ್ಮ ಆಪ್ತ ಸಹಾಯಕರುಗಳಿಂದ ನೇರವಾಗಿ ಮೀಟಿಂಗ್ ನೋಟೀಸ್ ಕಳುಹಿಸುತ್ತಾರೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ನಾನು ಯಾವುದೋ ಒಂದು ಪಕ್ಷದ ಕಾರ್ಯಕ್ರಮಕ್ಕೆ ಬರುವುದಿಲ್ಲ. ನಾನು ಒಬ್ಬ ಸಚಿವರಾಗಿ ಬರುತ್ತಿದ್ದೇನೆ. ನಾನು ಸಚಿವನಾಗಿ ಬರುವಾಗ ಹೆಚ್ಚು ಜನ ನನಗೆ ಎಂ.ಎಲ್.ಎ.,ಗಳು ಬಂದರೆ, ನನಗೆ ಇನ್ನೂ ಹೆಚ್ಚು ಖುಷಿ ಆಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಏಕೆಂದರೆ, ಪಿ.ಎ.ಸಿ., ಸಮಿತಿಯಲ್ಲಿ ಮಾನ್ಯ ಸಚಿವರು ಅಧ್ಯಕ್ಷರಾಗಿದ್ದಂತಹವರು. ನೀವು ಬರಬೇಕೆಂದು ನಮಗೂ ಆಸೆ ಇದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು ವೇಳೆ ನಾನೇನಾದರೂ ಆ ಸಭೆಗೆ ಬಂದರೆ, ನಿಮ್ಮನ್ನು ಕರೆದಿಲ್ಲವೆಂದು ಹೊರಗಡೆ ಕಳುಹಿಸಿದರೆ ಏನು ಮಾಡುವುದು?

**ಶ್ರೀ ಆರ್.ಅಶೋಕ್:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ಉಪ ವಿಭಾಗಾಧಿಕಾರಿಯವರು ಆ ರೀತಿ ಮಾಡಿದ್ದು ತಪ್ಪು ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರ ಮಾಹಿತಿಗಾಗಿ ಹೇಳುತ್ತಿದ್ದೇನೆ. ಬರೀ ನಿಮ್ಮ ಇಲಾಖೆಯದ್ದು ಒಂದೇ ಅಲ್ಲ, ಬೇರೆ ಇಲಾಖೆಯರಿಂದಲೂ ಕೂಡ ಇದೇ ರೀತಿ ಆಗುತ್ತಿದೆ. ಇಲ್ಲಿ ಏನಾಗಿದೆಯೆಂದರೆ, ಬಹುತೇಕ 10-12 ಸಚಿವರು ನಮ್ಮ ಜಿಲ್ಲೆಗೆ ಬಂದಾಗ ಏನೇನೋ ಹೊಸ system ಮಾಡಿದಂತೆ ಕಾಣುತ್ತಿದೆ. 'ನಿಮ್ಮ ಮಾಹಿತಿಗಾಗಿ, so and so Minister is coming on so and so date and time. This is for your information' ಎನ್ನುವಂತಹ ಸಂದೇಶ ಬರುತ್ತದೆ. ನಿಮಗೆ ಬಂದಿರುವುದು ಒಂದೇ ಅಲ್ಲ. ನನಗೂ ಸಹ ಇಂತಹ ಅನೇಕ ಮೆಸೇಜ್‌ಗಳು ಬಂದಿವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಅವರು ಆ ರೀತಿ ಹೇಳಿದಾಗ, ನಾವೇನಾದರು ಆ ಸಭೆಗೆ ಬಂದರೆ, ನಾವು ಅವಮಾನ ಅನುಭವಿಸಬೇಕಾಗುತ್ತದೆ.

**(ಮುಂದು...)**

**(738)21.9.2020/6.00/ಎಂ.ಎಂ-ಜಿ.ಆರ್**

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):-** ಇನ್ನು ಮುಂದೆ ಎಲ್ಲಾ ಶಾಸಕರು ಭಾಗವಹಿಸಬೇಕೆಂದು ವಿನಂತಿ ಮಾಡುವುದಕ್ಕೆ ಹೇಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಚಿವರೇ, ಆ ರೀತಿ ಸೂಚನೆ ಕೊಡಿ, ಧನ್ಯವಾದಗಳು. ತಾವು ಬಂದು ಹೋದ ನಂತರ ರಾಯಚೂರು ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗಿದೆ. ನದಿ ಪಾತ್ರದಲ್ಲಿರುವ ದೇವದುರ್ಗ ತಾಲ್ಲೂಕು, ಲಿಂಗಸಗೂರು ತಾಲ್ಲೂಕು ಮತ್ತು ರಾಯಚೂರು most affected areas. ಪ್ರತಿ ವರ್ಷ ಅಲ್ಲಿ ಮಳೆಯಾದಾಗ, ಪ್ರವಾಹವಾದಾಗ ನಮ್ಮಲ್ಲಿರುವುದಿಲ್ಲ, ಅಲ್ಲಿ ಮುಗಿಯುವಾಗ ಎಲ್ಲಾ ನೀರು ನಮ್ಮಲ್ಲಿಗೆ ಬರುತ್ತವೆ. ಆಗ ಪ್ರವಾಹವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಮಾನ್ಯ ಕವಟಗಿಮಠರವರು Dam management ಬಗ್ಗೆ ಒಂದು ಮಾತನ್ನು ಹೇಳಿದರು. ಕಳೆದ ವರ್ಷ 2019ರಲ್ಲಿ ಇಂತಹದ್ದೇ ಆದಾಗ ನಾನೇ ಮಾತನಾಡಿದ್ದೇನೆ. Dam Management Committee ಯನ್ನು ತಾವು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿದ್ದೇವೆ ಬೇಕಾದರೆ ತಾವು ಕಡತದಲ್ಲಿ ನೋಡಬಹುದು. ಈ ಸಲ ಅತ್ಯಂತ ಸುಂದರವಾಗಿ ಮಾಡಿದ್ದಾರೆ ಅದಕ್ಕಾಗಿ ನಾವು ಅವರಿಗೆ ಧನ್ಯವಾದಗಳನ್ನು ಹೇಳಬೇಕು. ಏಕೆಂದರೆ, ಇದಕ್ಕಾಗಿ ಒಂದು ಕಮಿಟಿ ಮಾಡಿದ್ದಾರೆ, ಅದನ್ನು ಚೆನ್ನಾಗಿ ನಿರ್ವಹಿಸಿದ್ದಾರೆ ಎಂದು ಹೇಳುತ್ತಿದ್ದೇನೆ. ಇದಿಲ್ಲದಿದ್ದರೆ ಇಷ್ಟು ಹೊತ್ತಿಗೆ ಸುಮಾರು 25-30 ಹಳ್ಳಿಗಳು ಮುಳುಗಿಹೋಗುತ್ತಿದ್ದವು. ಈ ಸಲ ಕಮಿಟಿಯನ್ನು ರಚನೆ ಮಾಡಿದ ಮೇಲೆ ಪ್ರತಿದಿನವೂ ನಾರಾಯಣಪುರ ಡ್ಯಾಂನಿಂದ ಎಷ್ಟು ಕ್ಯೂಸೆಕ್ಸ್ ನೀರು ಬಿಡುಗಡೆಯಾಗುತ್ತದೆ, ಆಲಮಟ್ಟಿ ಡ್ಯಾಂಗೆ ಎಷ್ಟು ನೀರು ಬರುತ್ತಿದೆ, ಮತ್ತು ಬೆಳಗಾಂ ಮಹಾರಾಷ್ಟ್ರದ ಡ್ಯಾಂಗಳಿಂದ ಎಷ್ಟು ನೀರು ಬರುತ್ತದೆ ಎಂಬ ಬಗ್ಗೆ ನಮಗೆ ಸಂಪೂರ್ಣವಾದ ಸಂದೇಶ ಬರುತ್ತದೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ನಮಗೆ ಒಂದು ಪ್ರಶ್ನೆ ಕೇಳಿದರು. ಕಳೆದ ಬಾರಿ ಆದಂತಹ ಮಳೆಯಿಂದ ನಾವು ಬುದ್ಧಿ ಕಲಿತಿದ್ದೇವೆ. ಈ ಸಲ ಒಂದು ತಿಂಗಳು ಮುಂಚೆಯೇ ಸಭೆಯನ್ನು ಮಾಡಿ ಎಲ್ಲಾ ಡ್ಯಾಂಗಳನ್ನು ಜಿಲ್ಲಾಧಿಕಾರಿಯವರ ನಿಯಂತ್ರಣಕ್ಕೆ ತೆಗೆದುಕೊಂಡಿದ್ದೇವೆ. ಪ್ರತಿ ದಿನ ಪ್ರತಿ ನಿಮಿಷ; ಒಂದು ವಾಟ್ಸಾಪ್ ಗ್ರೂಪನ್ನು ಮಾಡಿದ್ದೇವೆ. ಅದರಲ್ಲಿ ಎಲ್ಲರಿಗೂ ಸಂದೇಶ ಕಳುಹಿಸುತ್ತೇವೆ. ಈಗ ಮಳೆ ಬರುತ್ತಿರುವುದರಿಂದ ಎಷ್ಟು ನೀರು ಇದೆಯೋ ಅಷ್ಟನ್ನು ಬಿಟ್ಟರೆ ಹೆಚ್ಚುವರಿಯಾಗಿ ಒಂದು ಹನಿಯನ್ನೂ ಬಿಡಬಾರದು, ಎಲ್ಲವನ್ನೂ ಆಚೆಗೆ ಬಿಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಆದ್ದರಿಂದ ಕಳೆದ ವರ್ಷಕ್ಕಿಂತ ಈ ವರ್ಷ ಏಕೆ ಕಡಿಮೆ ಮಾನವ ಹಾನಿಯಾಗಿದೆಯೆಂದರೆ, ಈ ಸಲ ಎಲ್ಲಾ ಡ್ಯಾಂಗಳನ್ನು manage ಮಾಡಿದ್ದೇವೆ. ಮಹಾರಾಷ್ಟ್ರದ್ದು ಇರಬಹುದು, ನಮ್ಮ ಕರ್ನಾಟಕದ್ದು ಇರಬಹುದು ಎಲ್ಲವೂ ಜಿಲ್ಲಾಧಿಕಾರಿಯವರ ನಿಯಂತ್ರಣಕ್ಕೆ ಬರುತ್ತದೆ. ಪ್ರತಿದಿನವೂ ಜಿಲ್ಲಾಧಿಕಾರಿ ಮತ್ತು ಅಲ್ಲಿನ ಕಾರ್ಯಪಾಲಕ ಅಭಿಯಂತರರು, ನೀರಾವರಿ ಇಲಾಖೆ ಇವರ ಜೊತೆಗೆ ಸಮನ್ವಯದಿಂದ ಮಾಡಿದ್ದೇವೆ ಮತ್ತು ಪ್ರತಿ ನಿಮಿಷಕ್ಕೂ ಒಂದು ಗ್ರೂಪನ್ನು ಮಾಡಿದ್ದೇವೆ. ಆದ್ದರಿಂದ ಈ ಸಲ ಕಡಿಮೆ ಹಾನಿಯಾಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ರೀತಿಯ ಯಾವುದೇ ಮಾಹಿತಿ ನಮಗೆ ಬರುವುದಿಲ್ಲ. ಇಲ್ಲಿಯವರೆಗೂ ಒಂದು ಮಾಹಿತಿಯೂ ನನಗೆ ಬಂದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಜಯಪುರ ಜಿಲ್ಲೆಯ ಯಾವುದೇ ಮಾಹಿತಿಯೂ ನನಗೆ ಬರುವುದಿಲ್ಲ. ತಾವು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸುಮ್ಮನೇ ಹೇಳಿದರೆ ಸಾಲದು ನಮಗೆ ಮಾಹಿತಿ ಬರುವುದಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನನ್ನ ಮೊಬೈಲ್‌ನಲ್ಲಿದೆ, ನಾನೀಗ ಅದನ್ನು ಆಫ್ ಮಾಡಿದ್ದೇನೆ. ಒಂದು ತಿಂಗಳಿನಿಂದ ಪ್ರತಿ ದಿವಸದ ಸಂದೇಶವಿದೆ. ಅಷ್ಟು ಸುಂದರವಾಗಿ monitor ಮಾಡಿದ್ದಾರೆ. ಒಂದು ವೇಳೆ ಎರಡು ಲಕ್ಷ ರಾಜಾಪುರ ಬ್ಯಾರೇಜ್‌ನಿಂದ ಬಂದರೆ, ಆಲಮಟ್ಟಿ ಡ್ಯಾಂನಿಂದ 2.5 ಲಕ್ಷ ನೀರನ್ನು ಬಿಡುಗಡೆ ಮಾಡುತ್ತಾರೆ. ಏಕೆಂದರೆ, ಒಂದು ಮೀಟರ್ ಗ್ಯಾಪ್ ಬಿಟ್ಟಿರುತ್ತಾರೆ ಹೆಚ್ಚು ಕಡಿಮೆ ಮಳೆಯಾದರೆ, ಅಲ್ಲಿ ಜಾಸ್ತಿ ಮಳೆಯಾದರೆ ಅದು ಕವರ್ ಆಗುವ ಹಾಗೆ ಬಹಳ ಚೆನ್ನಾಗಿ ಮ್ಯಾನೇಜ್‌ಮೆಂಟ್ ಮಾಡಿದ್ದಾರೆ ಎಂದು ಇವತ್ತು ಸರ್ಕಾರವನ್ನು ನಾನು ಪ್ರಥಮವಾಗಿ ಅಭಿನಂದಿಸುತ್ತೇನೆ. ಅಷ್ಟು ಸುಂದರವಾದ ಮ್ಯಾನೇಜ್‌ಮೆಂಟನ್ನು ಇಷ್ಟು ದಿವಸಗಳಲ್ಲಿ ಯಾವತ್ತೂ ಮಾಡಿರಲಿಲ್ಲ. ಕಳೆದ ಸಲ ಆದಾಗ ಅದನ್ನು ನಾವೇ ತೆಗೆದಿದ್ದೆವು. ಈ ಮ್ಯಾನೇಜ್‌ಮೆಂಟನ್ನು ಮಾಡಿ ಎಂದು riparian states ಮಹಾರಾಷ್ಟ್ರ, ತೆಲಂಗಾಣ ಮತ್ತು ಕರ್ನಾಟಕ ಮೂವರು ಕಲೆತು ಮಾಡಿದಾಗ ಮಾತ್ರ ಇದು ಸರಿ ಹೋಗುತ್ತದೆ ಎಂದು ಹೇಳಿದ್ದೆವು. ಅದಕ್ಕೆ ಸ್ಪಂದನೆ ಕೊಟ್ಟು ತಕ್ಷಣವೇ ಆ ಕೆಲಸ ಮಾಡಿದ್ದಾರೆ. ಆದ್ದರಿಂದ ಇವತ್ತು ಸುಮಾರು 40-50 ಹಳ್ಳಿಗಳು damage ಆಗದೇ ಉಳಿದಿವೆ. ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನದೊಂದು ವಿನಂತಿ ಇದೆ. ರಿವರ್ ಅಥವಾ ನಾಲೆಗಳನ್ನು ಎಷ್ಟು ದಿವಸಗಳಿಂದ trimming ಮಾಡಿದ್ದೀರಿ? Soil erosion ಏಕೆ ಆಗುತ್ತದೆ? ಹಳ್ಳ ಬರುತ್ತದೆ, ಹಳ್ಳ ಬಂದ ಕೂಡಲೇ ಸೈಡಿನಲ್ಲಿ ಗಿಡಗಳು ಬೆಳೆದಿರುತ್ತವೆ. ರೈತನ ಹೊಲದಲ್ಲಿ ಹಳ್ಳಗಳು ರೂಟನ್ನು ಚೇಂಜ್ ಮಾಡಿಬಿಡುತ್ತವೆ. ಹಳ್ಳವಾಗಿ ಕವರ್ ಮಾಡುತ್ತದೆ. 10 ಮೀಟರ್ ಹಳ್ಳ ಇದ್ದದ್ದು 100 ಮೀಟರ್ ಹಳ್ಳಗಳಾಗಿವೆ. ಕೆ.ಬಿ.ಜೆ.ಎನ್.ಎಲ್., ವತಿಯಿಂದ ಮಾಡಿದ್ದು 4-5 ವರ್ಷದಿಂದ ನನ್ನ ಗಮನಕ್ಕೆ ಇದೆ ಅವರು ನಾಲೆಗಳನ್ನು trimming ಮಾಡಿಸಿದರು. ಆ ಪ್ರಾಜೆಕ್ಟ್ ಏರಿಯಾದಲ್ಲಿ ಎಲ್ಲೆಲ್ಲಿ ನಾಲೆಗಳಿವೆ ಅಲ್ಲೆಲ್ಲಾ trimming ಮಾಡುವಂತಹ ಕೆಲಸ ಮಾಡಿದರು. ಬಹಳ ಕಡಿಮೆ ಪ್ರಮಾಣದಲ್ಲಿ ಮಾಡಿದರು. ಸರ್ಕಾರಕ್ಕೆ ನಾನೇನು ವಿನಂತಿ ಮಾಡುತ್ತೇನೆಂದರೆ, ರೈತರ ಹೊಲವನ್ನು ಉಳಿಸಬೇಕು, ರೈತರ soil erosion ಆಗಬಾರದು, ಹಾಳಾಗಬಾರದು ಎನ್ನುವ ಉದ್ದೇಶದಿಂದ ಕೆ.ಬಿ.ಜೆ.ಎನ್.ಎಲ್., ವತಿಯಿಂದ ಅಥವಾ Minor Irrigation Department ವತಿಯಿಂದ ಅಥವಾ ಯಾವುದೋ ಒಂದು ಏಜೆನ್ಸಿ ವತಿಯಿಂದ ಎಲ್ಲಾ ನಾಲೆಗಳನ್ನು trimming

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಸುವಂತಹ ಕೆಲಸ ಮಾಡಬೇಕು. ಇವತ್ತು ಪ್ರತಿ ಗ್ರಾಮ ಪಂಚಾಯತ್‌ಗಳಲ್ಲಿ ಎಷ್ಟೋ ನಾಲೆಗಳಿರುತ್ತವೆ. ಗ್ರಾಮ ಪಂಚಾಯ್ತಿಯವರು ಅದನ್ನು ಮಾಡಬಹುದಲ್ಲವೇ? 3–4 ಕೋಟಿ ರೂಪಾಯಿಗಳು ಎನ್.ಆರ್.ಇ.ಜಿ., ಯೊಳಗೆ ಹಣ ಬರುತ್ತದೆ. ನಾಲಾ trimming ಅದೇ ಪಕ್ಕದ ಊರಿನಲ್ಲಿರುತ್ತದೆ. Drain correct ಇದ್ದರೆ ನೀರು ಸರಿಯಾಗಿ ಹೋಗುತ್ತದೆ. ಬೆಂಗಳೂರಿನಲ್ಲಿ ತಾವೇ ನೋಡುತ್ತಿದ್ದೀರಿ Storm Water Drain ಸರಿ ಇಲ್ಲದಿರುವುದಕ್ಕೆ ಎಷ್ಟು water logging ಆಗಿದೆ ಅದೇ ಪರಿಸ್ಥಿತಿ ಹಳ್ಳಿಗಳಲ್ಲಿಯು ಕೂಡ ಆಗಿದೆ. ಇವತ್ತು river trimming ಮಾಡುವುದು ಅತ್ಯಂತ ಅವಶ್ಯಕತೆ ಇದೆ. ನಾನು ಒಂದು ಸಲ ರಾಯಚೂರು ಜಿಲ್ಲಾಧಿಕಾರಿಯವರಿಗೆ ವಿನಂತಿ ಮಾಡಿಕೊಂಡಿದ್ದೆ. ಏಕೆಂದರೆ ನೀರು ಬಹಳಷ್ಟು ಕಡಿಮೆ ಇತ್ತು. ಆಗ ನೀರೇ ಇರಲಿಲ್ಲ. ಹೊಳೆ ಪೂರ್ತಿ ಖಾಲಿಯಾಗಿತ್ತು. ಬಹುಶಃ ಆಗ ಶ್ರೀ ಶಶಿಕಾಂತ್ ಸೆಂಥಿಲ್ ಅವರು ಜಿಲ್ಲಾಧಿಕಾರಿಯಾಗಿದ್ದರು ಅವರಲ್ಲಿ ನಾನೇ ವಿನಂತಿ ಮಾಡಿಕೊಂಡೆ. Raichur Water Supply scheme ಗಾಗಿ ನೀರಿನ ತೊಂದರೆ ಏನಿದೆ, ಇದಕ್ಕಾಗಿ ಮೊದಲು trimming ಮಾಡಿಸಿ ಎಂದು ಹೇಳಿದೆ. ಎಷ್ಟು ನೀರು ಬೇಕು ಆ ಏರಿಯಾಗೆ trimming ಮಾಡಿಸುವಂತೆ ಹೇಳಿದೆ. ಆಗ ಅವರು ಖುದ್ದಾಗಿ ಅಲ್ಲಿಗೆ ಹೋಗಿ ಸುಮಾರು 6–7 ಕಿ.ಮೀ ಸುತ್ತಲೂ full trimming ಮಾಡಿದರು. ಆಗ ಮೂರು ತಿಂಗಳು ಬೇಸಿಗೆ ಕಾಲಕ್ಕಾಗುವಷ್ಟು ನೀರು ಉಳಿತಾಯವಾಯಿತು. ಇಲ್ಲದಿದ್ದರೆ ಅಷ್ಟು ನೀರು ಹೋಗುತ್ತಿತ್ತು. Trimming ಮಾಡಿ ಸರಿಯಾಗಿ bunding ಮಾಡಿದರು ಆಗ ಮೂರು ತಿಂಗಳಿಗೆ ಸಾಕಷ್ಟು ನೀರು ದೊರೆಯಿತು. ನನ್ನ ವಿನಂತಿಯೇನೆಂದರೆ, ನಾವು ಪ್ರಾಜೆಕ್ಟ್ ಮಾಡಿ ಕೆನಾಲ್ ಮುಖಾಂತರ irrigation potential create ಮಾಡುವುದಕ್ಕೆ ಎಷ್ಟು ಹಣ ಖರ್ಚು ಮಾಡುತ್ತೀರಿ ಅದರಲ್ಲಿ ಕೇವಲ ಶೇ.25ರಷ್ಟು ಹಣದೊಳಗೆ ನಾಲೆಗಳನ್ನು trimming ಮಾಡಿದರೆ ಪ್ರತಿ ವರ್ಷ ಹೆಚ್ಚಿನ ರೀತಿಯಲ್ಲಿ ಊರು ಮುಳುಗಡೆಯಾಗದಂತೆ ಕೆಲಸವನ್ನು ತಾವು ಮಾಡಬಹುದು. ಮೊನ್ನೆ ನಡೆದಂತಹ ಮಳೆ, ತಾವು ಬಂದು ಹೋದ ನಂತರ ಅಂದರೆ, ನಾವು ಅಧಿವೇಶನಕ್ಕೆ ಬರುವುದಕ್ಕೂ ಮೊದಲು ಅಂದರೆ ಸೆಪ್ಟೆಂಬರ್ 16, 17 ಮತ್ತು 18ರಂದು ನಾಲ್ಕು ದಿವಸ ಒಂದು ವರ್ಷದಲ್ಲಿ ಬರುವುದಕ್ಕಿಂತ ಶೇ.200 ರಷ್ಟು ಹೆಚ್ಚು ಮಳೆ ಆಗಿದೆ. ರಾಯಚೂರು ತಾಲ್ಲೂಕಿನಲ್ಲಿ ಡೊಂಗರಪುರ, ಹಕ್ಕೂರು ಮತ್ತು ಬುರದಿಪಾಳ ಸುತ್ತ ಮುತ್ತಲಿನ 50 ಹಳ್ಳಿಗಳ ನದಿ ಪಾತ್ರದಲ್ಲಿರುವಂತಹ ಎಲ್ಲಾ ರೈತರು paddy ಹಾಕಿದ್ದಾರೆ. ಅಲ್ಲಿ soil erosion ಆಗಿದೆ. ತಾವು ನೋಡಿರುವಂತೆ ಮಡಿಕೇರಿಯಲ್ಲಿ soil

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

erosion ಆಗುತ್ತದೆ, ಅದಕ್ಕೆ ತಾವೇನು ಮಾಡುತ್ತೀರಿ? ಎಷ್ಟು ಹಣ ಕೊಡುತ್ತೀರಿ? ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ, ಅಷ್ಟು ಹಣ ಬೇಕಾಗುತ್ತದೆ. ಆದರೆ ಇಲ್ಲಿ soil erosion ತಡೆದುಕೊಳ್ಳುವುದಕ್ಕೆ ಒಂದಿಷ್ಟು ಗಿಡಗಳನ್ನು ನೆಡಬೇಕಾಗುತ್ತದೆ. Agriculture University ಗೆ ನಾವು ಹೋಗಿ ಕೇಳಿದಾಗ ನಾಲೆಗಳ ಪಕ್ಕದಲ್ಲಿ ಅಥವಾ ನದಿಗಳ ಅಕ್ಕಪಕ್ಕದಲ್ಲಿ ಯಾವ ಗಿಡಗಳನ್ನು ಹಾಕಿದರೆ soil erosion ಆಗುವುದಿಲ್ಲ ಎಂದು ತಿಳಿಸಿದರು. ಹಾಗಾಗಿ ಪ್ರವಾಹ ಬಂದಾಗ ಅಲ್ಲಿ ಗಿಡಗಳಿದ್ದರೆ ಹಾನಿಯ ತೀವ್ರತೆ ಕಡಿಮೆಯಾಗುತ್ತದೆ. ಅದನ್ನು ಕೂಡ ಮಾಡುವುದಕ್ಕೆ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ಸದಸ್ಯರಾದ ತಿಮ್ಮಾಪೂರರವರು ಹೇಳಿದ ಹಾಗೆ ಸಾಕಷ್ಟು ಬಡವರ ಮನೆಗಳಿಗೆ ಕಳೆದ ವರ್ಷದಿಂದ ಹಣವನ್ನೇ ಕೊಟ್ಟಿಲ್ಲ. ನಾವೇ ನಮ್ಮ ಗ್ರಾಮ ಪಂಚಾಯ್ತಿಯವರನ್ನು ಜನರು ಮನೆಗಳನ್ನು ಕೇಳುತ್ತಿದ್ದಾರೆ ಎಚಿದು ಕೇಳಿದರೆ 'ಕೋವಿಡ್' ಕಾರಣದಿಂದಾಗ ಈ ವರ್ಷ ಮನೆಗಳೇ ಬಂದಿಲ್ಲ ಎಂದು ಹೇಳುತ್ತಾರೆ. ಊರಿಗೆ ಹೋಗುವುದಕ್ಕೆ ರಸ್ತೆ ಬಂದಾಗಿದೆಯಲ್ಲ ಎಂದು ಕೇಳಿದರೆ ಅದಕ್ಕೂ 'ಕೋವಿಡ್'ನಿಂದ ಎಂದು ಹೇಳುತ್ತಾರೆ. ಮೊನ್ನೆ ತಾವು ಊರಿಗೆ ಬಂದಾಗ ನೋಡಿದಿರಿ ಎಷ್ಟು ಊರುಗಳಿಗೆ ಸಂಪರ್ಕ ಕಡಿತವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ನನ್ನ ಊರು ಇಟಗಿಗೆ ನಾನು ಹೋಗುವುದಕ್ಕೆ ಆಗುತ್ತಿಲ್ಲ. 15 ವರ್ಷಗಳಿಂದಲೂ ನಾನು ರಸ್ತೆಗಳನ್ನು ಮಾಡಿ ಎಂದು ಕೇಳುತ್ತಿದ್ದೇನೆ. ಆದರೆ ಇವತ್ತು ಅಲ್ಲಿ ಹುಡುಗರು ಶಾಲೆಗಳಿಗೆ ಹೋಗುವುದಕ್ಕೆ ಬಸ್ಸು ಇಲ್ಲದಂತಹ ಪರಿಸ್ಥಿತಿ ಇದೆ. ನಾನು ಇನ್ನೋವಾ ಕಾರಿನಲ್ಲಿ ಅಲ್ಲಿಗೆ ಹೋಗಿ ಬರಬೇಕೆಂದರೆ ಪ್ರತಿ ತಿಂಗಳೂ ಒಂದು ಲಕ್ಷ ರೂಪಾಯಿಗಳು ರಿಪೇರಿಗೆ ಖರ್ಚಾಗುತ್ತದೆ. ಆ ಪರಿಸ್ಥಿತಿ ಇದೆ. ರಸ್ತೆಗಳಲ್ಲಿ ಅಷ್ಟು ಗುಂಡಿ ಬಿದ್ದಿವೆ ಕನಿಷ್ಠ ಪಕ್ಷ ಅದನ್ನು ಮುಚ್ಚುವುದಕ್ಕೆ ಯಾರಾದರೂ ಲೋಕೋಪಯೋಗಿ ಇಲಾಖೆಯವರಿಗೆ ಹೇಳಬೇಕಲ್ಲವೇ? ಅಥವಾ ಗುಂಡಿಗಳನ್ನು ಮುಚ್ಚಿ portable ಆದರೂ ಮಾಡುವಂತೆ ಹೇಳಬೇಕಲ್ಲವೇ? ರಸ್ತೆಗಳು ಸುಸ್ಥಿತಿಯಲ್ಲಿಲ್ಲದಿದ್ದರೆ ಊರಿಗೆ ಹೋಗುವುದಕ್ಕೆ ಆಗಲಾರದ ಪರಿಸ್ಥಿತಿ ಇದೆ. ಆದ್ದರಿಂದ ತಮಲ್ಲಿ ವಿನಂತಿ ಮಾಡುತ್ತೇನೆ ಮಾನ್ಯ ಸಚಿವರೇ, ತಕ್ಷಣವೇ ಹಣ ಬಿಡುಗಡೆ ಮಾಡಿ ಎಲ್ಲಿ ಸಿ.ಡಿ., ಗಳು ಕೆಟ್ಟಿವೆ ಅವುಗಳನ್ನು ರಿಪೇರಿ ಮಾಡುವುದು, ಗುಂಡಿಗಳನ್ನು ಮುಚ್ಚುವುದು, portable ರಸ್ತೆಗಳನ್ನು ಮಾಡಿ. ನಮ್ಮ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ರಸ್ತೆಗಳು ಕೆಟ್ಟಿವೆ ಅಲ್ಲಿಗೆ ತುರ್ತಾಗಿ ಹಣವನ್ನು ಬಿಡುಗಡೆ ಮಾಡಿ ಹದಿನೈದು ದಿವಸದೊಳಗೆ ಪೂರ್ಣಗೊಳಿಸಿ ತಮಗೆ ವರದಿ ಮಾಡಬೇಕೆಂದು ತಾವು ಆದೇಶ ನೀಡಿದಾಗ ಮಾತ್ರ ಅವರು ಅಲ್ಲಿ ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಅವರು ಕೆಲಸ ಮಾಡುವುದಿಲ್ಲ. ಇನ್ನೂ ಹಣ ಬಿಡುಗಡೆಯಾಗಿಲ್ಲ, ಮೊನ್ನೆ ಬಂದು ಹೋಗಿದ್ದಾರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಹದಿಂದ ಹಾನಿಯಾಗಿದೆ; ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳಿಗೆ ಎಂ.ಎಲ್.ಎಗಳಿಗೆ ಫಂಡ್ ಕೊಡುತ್ತೀರಿ ಅವರು ತಮಗೆ ಬೇಕಾದ ಕಡೆಗೆ ಹಣವನ್ನು ಕೊಡುತ್ತಾರೆ. ಎಲ್ಲಿ ಕೆಟ್ಟಿವೆ ಅಲ್ಲಿಗೆ ಕೊಡುವುದೇ ಇಲ್ಲ. ಇದಕ್ಕೆ ಏನು ಮಾಡುವುದು ಇಂತಹ ಪರಿಸ್ಥಿತಿ ಇದೆ. ಅಲ್ಲಿಯಾದರೂ ತಾರತಮ್ಯ ಮಾಡದೇ ಹಣವನ್ನು ಬಿಡುಗಡೆ ಮಾಡಬೇಕೆಂದು ತಾವು ಹೇಳಬೇಕು.

**ಸಭಾಪತಿಯವರು:–** ಮಾನ್ಯ ಇಟಗಿಯವರೇ, ಸಚಿವರಲ್ಲಿ ಸ್ಪಷ್ಟೀಕರಣ ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಧನ್ಯವಾದಗಳು.

**ಸಭಾಪತಿಯವರು:–** ಒಂದು ನಿಮಿಷ, ಈಗ ಒಂದು ಪ್ರಕಟಣೆ ಇದೆ.

**13.ಪ್ರಕಟಣೆಗಳು**

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 222ರ ಮೇರೆಗೆ 141ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿ ಈ ಮುಂದಿನಂತೆ ರಚಿಸಲಾಗಿರುತ್ತದೆ.

1. ಶ್ರೀ ಎಸ್.ಎಲ್. ಧರ್ಮೇಗೌಡರು, ಮಾನ್ಯ ಉಪಸಭಾಪತಿಯವರು
2. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಸಭಾನಾಯಕರು
3. ಶ್ರೀ ಎಸ್.ಆರ್. ಪಾಟೀಲ್, ವಿಧಾನ ಪರಿಷತ್ತಿನ ಮಾನ್ಯ ವಿರೋಧಪಕ್ಷದ ನಾಯಕರು
4. ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ್, ವಿಧಾನಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು
5. ಶ್ರೀ ಎಂ. ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ಮಾನ್ಯ ವಿರೋಧಪಕ್ಷದ ಮುಖ್ಯ ಸಚೇತಕರು
6. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ವಿಧಾನ ಪರಿಷತ್ತಿನ ಸದಸ್ಯರು,
7. ಶ್ರೀ ನಸೀರ್ ಅಹಮದ್, ವಿಧಾನ ಪರಿಷತ್ತಿನ ಸದಸ್ಯರು,
8. ಶ್ರೀ ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ತಿನ ಸದಸ್ಯರು,
9. ಶ್ರೀ ಸಿ.ಪಿ. ಯೋಗೇಶ್ವರ್, ವಿಧಾನ ಪರಿಷತ್ತಿನ ಸದಸ್ಯರು,
10. ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಆಹ್ವಾನಿತರು ಹಾಗೂ
11. ಶ್ರೀ ಜೆ.ಸಿ. ಮಾಧುಸ್ವಾಮಿ, ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾನ್ಯ ಸಭಾಪತಿಗಳು ಕಾರ್ಯ ಕಲಾಪಗಳ ಸಲಹಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

**(ಮುಂದು)**

**(739) 21-09-2020/ 06-10/ ಕೆಹೆಚ್-ಎಂಡಿ**

**ಸಭಾಪತಿಯವರು(ಮುಂದು):-**

ಇನ್ನೊಂದು ಪ್ರಕಟಣೆಯೇನೆಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

1. ಶ್ರೀ ಕೆ.ಸಿ.ಕೊಂಡಯ್ಯ
2. ಡಾ॥ ವೈ.ಎ.ನಾರಾಯಣಸ್ವಾಮಿ
3. ಶ್ರೀ ಆಯನೂರು ಮಂಜುನಾಥ್
4. ಶ್ರೀ ಮರಿತಿಬ್ಬೇಗೌಡ

**14.ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಆರ್.ಅಶೋಕ್:-** ಮಾನ್ಯ ಸದಸ್ಯರೇ, ನಾನು ಮಾತನಾಡಿದ ಮೇಲೆ ತಾವು ಸ್ಪಷ್ಟಿಕರಣವನ್ನು ಕೇಳಿ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ನೀಡಿದ ಮೇಲೆ ತಾವು ಸ್ಪಷ್ಟಿಕರಣವನ್ನು ಕೇಳಬಹುದು.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನು ಹಲವಾರು ಮಾನ್ಯ ಸದಸ್ಯರುಗಳು ಕರ್ನಾಟಕದಲ್ಲಿ ಆಗಿರುವಂತಹ ಪ್ರವಾಹದ ಬಗ್ಗೆ, ಕಳೆದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾರಿಯೂ ಕೂಡ ಪ್ರವಾಹ ಆಗಿತ್ತು. ಸತತವಾಗಿ ಎರಡನೇ ವರ್ಷವೂ ಕೂಡ ಪ್ರವಾಹ ಆಗುತ್ತಿದೆ. ಈ ಸಂದರ್ಭದಲ್ಲಿ ಹಲವಾರು ಸೂಕ್ತ ಸಲಹೆಗಳನ್ನು ಮಾನ್ಯ ಸದಸ್ಯರೆಲ್ಲರೂ ಕೂಡ ಕೊಟ್ಟಿದ್ದಾರೆ. ಸರ್ಕಾರದಿಂದ ಮಾಡಿರುವಂತಹ ಕೆಲವು ಕೆಲಸಗಳನ್ನು ಮಾನ್ಯ ಸದಸ್ಯರೆಲ್ಲರೂ ಮೆಚ್ಚಿದ್ದಾರೆ. ಈಗಾಗಲೇ ಮಾಡಿರುವಂತಹ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಸರ್ಕಾರಕ್ಕೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ತಮಗೆ ಗೊತ್ತಿರುವ ಹಾಗೆ ಕರ್ನಾಟಕದಲ್ಲಿ ಆಗಸ್ಟ್-4 ರಿಂದ ವ್ಯಾಪಕವಾದಂತಹ ಮಳೆ ಬಂದಿದೆ. ವಾಡಿಕೆ ಮಳೆ ಏನಿತ್ತೋ, ಅದಕ್ಕಿಂತ ಶೇಕಡಾ 400 ರಷ್ಟು ಜಾಸ್ತಿ ಮಳೆ ಈ ಬಾರಿ ಆಗಿರುವುದರಿಂದ ಪ್ರವಾಹವಾಗಿದೆ. ಈ ಎಲ್ಲಾ ದೃಷ್ಟಿಯಿಂದ ಬಹಳಷ್ಟು ಅನಾಹುತವಾಗಿದೆ. ಇದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಈ ಅನಾಹುತದ ಬಗ್ಗೆ memorandum ಕೂಡ ಕೊಟ್ಟಿದ್ದೇವೆ.

**(ಈ ಹಂತದಲ್ಲಿ ಡಾ॥ ವೈ.ಎ.ನಾರಾಯಣಸ್ವಾಮಿಯವರು ಸಭಾ ಪೀಠವನ್ನು ಅಲಂಕರಿಸಿದರು.)**

ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಏಪ್ರಿಲ್ 1 ರಿಂದ ಇದುವರೆಗೂ ಸುಮಾರು 125 ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. 344 ಜಾನುವಾರುಗಳು ಸತ್ತಿವೆ. ನಾನು ಹಿಂದೆ ಆಗಿರುವಂತಹ ಪ್ರವಾಹದ ಬಗ್ಗೆ ಹೇಳುತ್ತಿಲ್ಲ. ಈಗ ಆಗಿರುವಂತಹ ಪ್ರವಾಹದ ಬಗ್ಗೆ ಹೇಳುತ್ತಿದ್ದೇನೆ. ಒಟ್ಟು 13573 ಮನೆಗಳು ಹಾನಿಯಾಗಿವೆ. 3,57,426 ಹೆಕ್ಟೇರ್ ಜಮೀನು ಕೃಷಿ ಬೆಳೆ ಹಾನಿಯಾಗಿದೆ. 52,759 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಮಲೆನಾಡು ಭಾಗದಲ್ಲಿ plantation crop 50,208 ಹೆಕ್ಟೇರ್ ಹಾನಿಯಾಗಿದೆ. ಹೂಳು ತುಂಬಿರುವಂತಹ ಕೃಷಿ ಜಮೀನು ಸುಮಾರು 850 ಹೆಕ್ಟೇರ್‌ನಷ್ಟು ಹಾನಿಯಾಗಿದೆ. ಕೊಡಗು ಭಾಗದಲ್ಲಿ 850 ಹೆಕ್ಟೇರ್ ಪ್ರದೇಶ ಭೂಕುಸಿತ ಆಗಿದೆ. ರಾಜ್ಯದಲ್ಲಿ ಮತ್ತು ನಗರಗಳಲ್ಲಿ ಒಟ್ಟು 21,171 ಕಿ.ಮೀ ರಸ್ತೆಗಳು ಹಾಳಾಗಿವೆ. ಒಟ್ಟು 2757 ಸೇತುವೆಗಳು ಹಾಳಾಗಿವೆ. ಒಟ್ಟು 18533 ವಿದ್ಯುತ್ ಕಂಬಗಳು ಬಿದ್ದು ಹಾಳಾಗಿದೆ. ಒಟ್ಟು 2023 ಟ್ರಾನ್ಸ್‌ಫಾರಂಗಳು ಹಾಳಾಗಿದೆ. ಒಟ್ಟು 3074 ಕಿ.ಮೀ ವಿದ್ಯುತ್ ತಂತಿ ಸಂಪರ್ಕ ಹಾಳಾಗಿದೆ. ಒಟ್ಟು 3669 ಸರ್ಕಾರಿ ಹಾಗೂ ಸಾರ್ವಜನಿಕ ಕಟ್ಟಡಗಳಿಗೆ ಹಾನಿಯಾಗಿದೆ. ಈ ಬಾರಿ ಬಿದ್ದಿರುವಂತಹ ಮಳೆಯಿಂದ ಇಷ್ಟು ಹಾನಿಯಾಗಿರುವಂತಹದ್ದು. ಒಟ್ಟು 23 ಜಿಲ್ಲೆ, 130 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಪ್ರದೇಶವೆಂದು ಈಗಾಗಲೇ ಕಂದಾಯ ಇಲಾಖೆಯಿಂದ ಘೋಷಣೆಯನ್ನು ಮಾಡಿದ್ದೇವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಜೊತೆ ನಾನು ಮತ್ತು ಮಾನ್ಯ ಗೃಹ ಸಚಿವರು ವೀಡಿಯೋ ಕಾನ್ಫರೆನ್ಸ್ ಮುಖಾಂತರ ಮಾತನಾಡಿದ್ದೇವೆ. ಕೋವಿಡ್ ಇರುವಂತಹ ಸಂದರ್ಭದಲ್ಲಿ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಮಾತುಕತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯುವಂತಹದ್ದು ತಮಗೂ ಸಹ ಗೊತ್ತಿದೆ. ಆ ಸಂದರ್ಭದಲ್ಲಿ ಆವತ್ತಿನ ದಿವಸ ನಾವು 9440.85 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದಾದ ನಂತರವೂ ಕೂಡ ಮಳೆ ಬಂದಿದೆ. ಈಗ ಇನ್ನೂ ಸಹ ಮಳೆ ಬರುತ್ತಿದೆ. ಮೊನ್ನೆಯ ದಿವಸ ನಾನು ಗುಲ್ಬರ್ಗಾ, ಯಾದಗಿರಿ, ರಾಯಚೂರು, ಗದಗ ಜಿಲ್ಲೆಗಳಿಗೆಲ್ಲಾ ಭೇಟಿ ಕೊಟ್ಟಿದ್ದೇನೆ. ಯಾದಗಿರಿ ಜಿಲ್ಲೆಗೆ ಭೇಟಿ ನೀಡಿದಾಗ 60 ದಿನಗಳಿಂದ ಇದೇ ರೀತಿ ಮಳೆ ಬರುತ್ತಿದೆ ಎಂದು ಅಲ್ಲಿನ ಜನರು ಹೇಳಿದ್ದಾರೆ. ಒಂದು ರೀತಿಯಲ್ಲಿ ಖುಷಿ ಸಂಗತಿ ಎಂದರೆ ಎಲ್ಲಾ sufficient ಆಗಿ ಡ್ಯಾಂಗಳು ತುಂಬಿವೆ. ಈ ಬಾರಿ ಅತ್ಯಧಿಕವಾಗಿ ಬೆಳೆ ಬಿತ್ತನೆಯಾಗಿದೆ. ನಾವು ಏನು ಟಾರ್ಗೆಟ್ ಕೊಟ್ಟಿದ್ದೇವೆ. ಮೊದಲೆಲ್ಲಾ ಶೇಕಡಾ 60 ರಿಂದ 70 ರಷ್ಟು ಟಾರ್ಗೆಟ್ ತಲುಪುತ್ತಿರಲಿಲ್ಲ. ಈ ಬಾರಿ ಶೇಕಡಾ 100 ರಷ್ಟು ಟಾರ್ಗೆಟ್ ದಾಟಿ ಹೋಗುತ್ತಿದ್ದು, ಶೇಕಡಾ 100 ಕ್ಕಿಂತ ಹೆಚ್ಚು ಬೆಳೆ ಬಿತ್ತನೆಯಾಗಿದೆ. ಅದರ ಜೊತೆಗೆ ಅತ್ಯಧಿಕವಾಗಿ ಕಳೆದ 15 ವರ್ಷಗಳಲ್ಲಿ ಅಷ್ಟು ರಸಗೊಬ್ಬರ ಖರ್ಚಾಗಿರಲಿಲ್ಲ. ಈ ಬಾರಿ ಅಷ್ಟು ರಸಗೊಬ್ಬರಗಳನ್ನು ಬಿತ್ತನೆಗೋಸ್ಕರ ಕೊಟ್ಟಿದ್ದೇವೆ. ಈಗ ಹೊಸ ದಾಸ್ತಾನು ಕೂಡ ಬಂದಿದ್ದು, sufficient ಇದೆ. ಈಗ ಪ್ರವಾಹ ಏನು ಆಗುತ್ತಿದೆ, ಇನ್ನು ಯಾವ ಮಟ್ಟಕ್ಕೆ ಹೋಗುತ್ತದೆ ಎಂಬುದು ನಮಗೂ ಗೊತ್ತಿಲ್ಲ. ಈಗಿರುವ ಹವಾಮಾನ ವರದಿಯ ಪ್ರಕಾರ ಇನ್ನು 2–3 ದಿನಗಳ ಕಾಲ ಹೆಚ್ಚು ಪ್ರವಾಹ ಆಗಬಹುದು ಎಂದು ಹೇಳಿದ್ದಾರೆ. ವಿಶೇಷವಾಗಿ ಉಡುಪಿ, ಉತ್ತರ ಕನ್ನಡ ಮತ್ತು ಮಲೆನಾಡು ಭಾಗದಲ್ಲಿ ಹೆಚ್ಚು ಪ್ರವಾಹ ಆಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ಜಾಸ್ತಿ ಪ್ರವಾಹ ಆಗುತ್ತಿದ್ದು, ಅಲ್ಲಿಯೇ ಹೆಚ್ಚು concentrate ಆಗಿರುವಂತಹದ್ದು. ಕಳೆದ ಬಾರಿ ಪ್ರವಾಹದ ಕಷ್ಟ ಉಂಟಾಗಿತ್ತು. ಇದರ ಜೊತೆಗೆ ಕೋವಿಡ್ ಮತ್ತು ಈಗ ಮತ್ತೆ ಪ್ರವಾಹ ಉಂಟಾಗಿದೆ. ಇದರ ಮಧ್ಯೆಯೂ ಕೂಡ ನಮ್ಮ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆ. ತಮಗೂ ಗೊತ್ತಿರುವ ಹಾಗೆ ಕೋವಿಡ್ ಸಂದರ್ಭದಲ್ಲಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಮತ್ತು ಆರೋಗ್ಯ ಇಲಾಖೆಯವರು ಶ್ರಮವಹಿಸಿ ಕೆಲಸ ಮಾಡುತ್ತಿದ್ದಾರೆ. ಮನೆಯಿಂದ ಹೊರಗಡೆ ಬರುವುದಕ್ಕೆ ಕಷ್ಟ ಪಡುವಂತಹ ಕೆಲವು ಸಂದರ್ಭಗಳನ್ನು ಸಹ ನಾವು ನೋಡಿದ್ದೇವೆ. ಬೆಂಗಳೂರಿನಲ್ಲಿಯೂ ಕೂಡ ಕೋವಿಡ್‌ನಿಂದ ಸತ್ತ ವ್ಯಕ್ತಿಯನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವುದಕ್ಕೂ ಅವರ ಮನೆಯವರು ಬರುತ್ತಿರಲಿಲ್ಲ. ಕೆಲವರು ಈ ಶವ ನಮ್ಮದೇ ಅಲ್ಲ ಎನ್ನುವ ರೀತಿಯಲ್ಲಿ ಯೋಚನೆ ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲೂ ಕೂಡ ಈ ಬಾರಿ ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮೊನ್ನೆಯ ದಿವಸ ಕೂಡ ಉಡುಪಿಯಲ್ಲಾದ ಪ್ರವಾಹವನ್ನು ನೋಡಿದ್ದೇವೆ. ಕೇಂದ್ರ ಸರ್ಕಾರದಲ್ಲಿ ಮಾನ್ಯ ಹರಿಪ್ರಸಾದ್‌ರವರು ಕೆಲಸ ಮಾಡಿದ್ದಾರೆ. ಮೊದಲೆಲ್ಲಾ NDRF (*National Disaster Response Force)* ತಂಡ ಕಳುಹಿಸಿಕೊಡಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಪತ್ರ ಬರೆದರೆ ಅವರು ಬರುವುದಕ್ಕೆ 4–5 ದಿನಗಳಾಗುತ್ತಿತ್ತು. ಈಗ ಆ ರೀತಿ ಇಲ್ಲ. ಕಳೆದ ಒಂದು ತಿಂಗಳಿನಿಂದ Video Conference ಮತ್ತು 2–3 ಸಭೆಗಳನ್ನು ಮಾಡಿದ್ದೇವೆ. ಇದರ ಬಗ್ಗೆ ಏನೇನು precautionary measures ತೆಗೆದುಕೊಳ್ಳಬಹುದೋ ಮತ್ತು ಕೇಂದ್ರ ಸರ್ಕಾರದಿಂದ ಏನೇನು ಬೇಕಾಗಿದೆ ಎಂದು ತಾವು ಹೇಳಿದ್ದೀರಿ. ನಮಗೆ ಮೊದಲೇ 4 NDRF ತಂಡವನ್ನು ಕಳುಹಿಸಿಕೊಟ್ಟರು. ಈ ತಂಡಗಳನ್ನು ಕೊಡಗು, ಮೈಸೂರು ಮತ್ತು ಬೆಳಗಾಂ ಈ ಭಾಗದಲ್ಲೆಲ್ಲಾ ಇಟ್ಟಿರುವುದಕ್ಕೋಸ್ಕರ ಇವತ್ತಿನ ದಿವಸ ಪ್ರವಾಹ ಆದ ತಕ್ಷಣ ಅವರು ನನಗೆ ದೂರವಾಣಿ ಕರೆಯನ್ನು ಮಾಡಿದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಳಗಾಂಗೆ 2 NDRF ತಂಡ ಬಂದಿತ್ತು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಇದಕ್ಕೆ ಇನ್‌ಚಾರ್ಜ್ ಆದ ಜಿಲ್ಲಾ ನಾಯಕರು ಮಾನ್ಯ ಸುನೀಲ್ ಕುಮಾರ್‌ರವರು ಕೂಡ ದೂರವಾಣಿ ಕರೆಯನ್ನು ಮಾಡಿದರು. ತಕ್ಷಣ 3–4 ಗಂಟೆಯಲ್ಲಿಯೇ NDRF ತಂಡವನ್ನು ಕಳುಹಿಸಿಕೊಟ್ಟಿದ್ದೇವೆ. ನನಗೆ ಬೆಳಿಗ್ಗೆ ಸುಮಾರು 8 ಗಂಟೆಗೆ ದೂರವಾಣಿ ಕರೆ ಬಂದಿತ್ತು. ನಾನು ಸುಮಾರು 10 ಗಂಟೆಗೆ NDRF ತಂಡವನ್ನು ಕಳುಹಿಸಿಕೊಟ್ಟಿದ್ದೇನೆ. ಏಕೆಂದರೆ, ಅಲ್ಲಿನ ಜಿಲ್ಲಾಧಿಕಾರಿಯವರು ಒಟ್ಟು 5 ಕುಟುಂಬಗಳು ಸಿಕ್ಕಿಹಾಕಿಕೊಂಡಿದೆ ಎಂದು ಹೇಳಿದರು. ಅಲ್ಲಿರುವವರು 2 ಕುಟುಂಬಗಳನ್ನು ಹೇಗೋ ಬೋಟ್‌ನಲ್ಲಿ ಕರೆದುಕೊಂಡು ಬಂದಿದ್ದಾರೆ. ಇನ್ನು 3 ಕುಟುಂಬಗಳು ಬರುವುದಕ್ಕೆ ಆಗುತ್ತಿರಲಿಲ್ಲ. ಅಷ್ಟು flow ಇತ್ತು. ತಕ್ಷಣ NDRF ತಂಡ ಹೋಗಿ ಆ ಕುಟುಂಬಗಳನ್ನು ರಕ್ಷಣೆ ಮಾಡಿರುವ ವಿಷಯವನ್ನು ತಾವೆಲ್ಲಾ ಮಾಧ್ಯಮದಲ್ಲಿ ವರದಿಯಾಗಿರುವುದನ್ನು ನೋಡಿದ್ದೀರಿ. ಮೈಸೂರು ಜಿಲ್ಲೆಯಲ್ಲಿ ಒಂದು NDRF ತಂಡ ಇದ್ದು, ಅದನ್ನು ಕೂಡ ಅಲ್ಲಿಗೆ ಕಳುಹಿಸಿಕೊಡುತ್ತಿದ್ದೇನೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಕೂಡ ವಿನಂತಿ ಮಾಡಿದ್ದೇನೆ. ಹೆಲಿಕಾಪ್ಟರ್‌ನವರು ಯಾವಾಗ ಬೇಕೋ, ಆಗ ತೆಗೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಇನ್ನು 3 ದಿವಸ ಮಳೆ ಬರುವುದರಿಂದ ಅಲ್ಲಿಯೇ ಒಂದು ಖಾಯಂ ಹೆಲಿಕಾಪ್ಟರ್ ಅನ್ನು ಇಟ್ಟುಕೊಳ್ಳಿ ಎಂದು ನಾನು ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇನೆ. ಏಕೆಂದರೆ, ಮಂಗಳೂರು ಭಾಗದಲ್ಲಿ ಮೀನನ್ನು ಹಿಡಿಯುವುದಕ್ಕೆ ಸಮುದ್ರಕ್ಕೆ ಹೋಗುತ್ತಾರೆ. ಅಲ್ಲಿರುವ ಕೆಲವು ಬೋಟ್‌ಗಳೆಲ್ಲಾ ಮಗುಚಿಕೊಂಡಿದ್ದು, ಅದರಲ್ಲಿ ಸಿಕ್ಕಿ ಹಾಕಿಕೊಂಡಿರುವ ಜನರನ್ನು ಹೆಲಿಕಾಪ್ಟರ್ ಮುಖಾಂತರ lift ಮಾಡುವುದಕ್ಕೆ ಅವಶ್ಯಕತೆ ಇದೆ ಎಂದು ನಾನು ಹೆಲಿಕಾಪ್ಟರ್ ಅನ್ನು ವ್ಯವಸ್ಥೆ ಮಾಡುವುದಕ್ಕೂ ಸಹ ಹೇಳಿದ್ದೇನೆ. ತಮಗೆ ಗೊತ್ತಿರುವ ಪ್ರಕಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರವಾಹದ ಸಂದರ್ಭದಲ್ಲಿ ಒಟ್ಟು 92 ಕಾಳಜಿ ಕೇಂದ್ರಗಳನ್ನು ಮಾಡಿದ್ದೇವೆ. ಮೊದಲು ಗಂಜಿ ಕೇಂದ್ರ ಎಂದು ಇದ್ದದ್ದನ್ನು ನಾನು ಬಂದ ಮೇಲೆ ಈ ಪದವನ್ನು ತೆಗೆದು ಹಾಕಿದ್ದೇನೆ. ಗಂಜಿ ಕೇಂದ್ರ ಎಂದರೆ ಮಧ್ಯಮ ವರ್ಗದವರು ಹೋಗುವುದಕ್ಕೆ ಭಯ ಬೀಳುತ್ತಾರೆ. ಆದ್ದರಿಂದ ಗಂಜಿ ಕೇಂದ್ರ ಎಂಬ ಪದವನ್ನು ತೆಗೆದು ಹಾಕಿ, ಕಾಳಜಿ ಕೇಂದ್ರ ಎಂದು ಮಾಡಿದ್ದೇನೆ. ಒಟ್ಟು 92 ಕಾಳಜಿ ಕೇಂದ್ರಗಳನ್ನು ತೆರೆದಿದ್ದೇವೆ. 6716 ನಿರಾಶ್ರಿತರಿಗೆ ಆಶ್ರಯ ಒದಗಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಶಾಲೆಗಳು, ಕಾಲೇಜುಗಳು, ನಮ್ಮದೇ ಮಂಗಳೂರು ಮತ್ತು ಉಡುಪಿಯ ಕೆಲವು ಭಾಗಗಳಲ್ಲಿ ಹಾಗೂ NDRF ತಂಡದವರದೇ ಒಂದು ಭವನವನ್ನು ಕಟ್ಟುತ್ತಿದ್ದೇವೆ. ಕೇಂದ್ರ ಸರ್ಕಾರದ NDRF ಅಡಿಯಲ್ಲಿ ಹೊಸದಾಗಿ permanent structure ಅನ್ನು ಮಾಡುವಂತಹದ್ದಕ್ಕೆ ಒಂದು ಸ್ಕೀಮ್‌ಗಳನ್ನು ಮಾಡಿದ್ದಾರೆ. ಅದರಲ್ಲಿ ಏನಾಗುತ್ತದೆ ಎಂದರೆ ನಾನು ಎಲ್ಲಾ ಕಡೆಗಳಿಗೆ ಭೇಟಿ ನೀಡಿದ್ದಾಗ ಯಾವುದೋ ಒಂದು ಶಾಲೆಯಲ್ಲಿ ಈ ಕಡೆಯೆಲ್ಲಾ ಹೋದರೆ ಅಲ್ಲಿ ಹೆಂಚಿನ ಮನೆಗಳು ಇವೆ. ಅಲ್ಲಿ ಶೌಚಾಲಯಗಳು ಇರುವುದಿಲ್ಲ. ಶಾಲೆಗಳಲ್ಲಿ ಒಂದು ಶೌಚಾಲಯ ಇದ್ದರೂ ಕೂಡ ಅದಕ್ಕೆ ಮೇಷ್ಟ್ರು ಬೀಗ ಹಾಕಿಕೊಂಡು ಹೋಗಿರುತ್ತಾರೋ ಎಂಬುದು ನಮಗೆ ಗೊತ್ತಿಲ್ಲ. ಅಲ್ಲಿಗೆ 200 ರಿಂದ 300 ಜನರನ್ನು ಕರೆದುಕೊಂಡು ಹೋಗಿ ಇಡುತ್ತೇವೆ. ಅಲ್ಲಿ ಶೌಚಾಲಯಗಳು ಇರುವುದಿಲ್ಲ. ಅದಕ್ಕೋಸ್ಕರ ಹೊಸದಾಗಿ ಸುಮಾರು ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ದೊಡ್ಡ Community Hall ಅನ್ನು ಕಟ್ಟುತ್ತಿದ್ದು, ಅಲ್ಲಿ 30 ರಿಂದ 40 ಶೌಚಾಲಯಗಳು ಮತ್ತು ಸ್ನಾನದ ಮನೆಗಳು, Medical Care Centre, Library, ಒಂದು ದೊಡ್ಡ ಹಾಲ್, ಅಡುಗೆ ಮನೆಯಲ್ಲಿ ಊಟ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಹಿರಿಯಡ್ಕ ಕೂಡ ಕಾಪುನಲ್ಲಿ ಭವನದ ನಿರ್ಮಾಣದ ಕಾರ್ಯ ನಡೆಯುತ್ತಿದೆ. ಈಗಾಗಲೇ ಒಂದು ಪೂರ್ತಿಯಾಗಿದೆ.

**(ಮುಂದು)**

**(7401)21-9-2020/ಎಲ್‌ಎಂ/ಎಂಡಿ/6-20**

**ಶ್ರೀ ಆರ್.ಅಶೋಕ(ಮುಂದು):-**

ಇನ್ನು ಮುಂದೆ ಖಾಯಂ ಆಗಿ ಎಲ್ಲೇಲಿ ಪ್ರವಾಹ ಬರುತ್ತದೆ, ಅದು ಬೆಳಗಾಂವಿ ಆಗಬಹುದು ಮತ್ತೊಂದು ಕಡೆಯಾಗಬಹುದು. ಈ ರೀತಿ ಎಲ್ಲೇಲ್ಲಿ ಯಾವಾಗಲೂ ಈ ರೀತಿ ಪ್ರವಾಹ ಬರುತ್ತದೆ ಅಂತಹ ಸ್ಥಳಗಳಲ್ಲಿ ಈ ರೀತಿ ಖಾಯಂ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಈಗ ಯಾದಗಿರಿಗೂ ಈ

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೀತಿ ಖಾಯಂ ವ್ಯವಸ್ಥೆ ಮಾಡಲು ಮಂಜೂರು ಮಾಡಲಾಗಿದೆ. ಪ್ರವಾಹ ಬಂದ ಕಡೆಗಳಲ್ಲಿ ಯಾವುದೋ ಒಂದು ಶಾಲಗೆ ಕರೆದುಕೊಂಡು ಹೋಗಿ ಬಿಡುತ್ತಾರೆ. ಸರಿಯಾದ ವ್ಯವಸ್ಥೆ ಇರುವುದಿಲ್ಲ. ಅದಕ್ಕಾಗಿ ಪ್ರವಾಹ ಬರುವ ಕಡೆಗಳಲ್ಲಿ ಈ ರೀತಿ ಖಾಯಂ ವ್ಯವಸ್ಥೆ ಮಾಡಲು ಪ್ರಾರಂಭ ಮಾಡಿದ್ದೇವೆ. With medical facility ಅವರಿಗೆ ನೋಡಿಕೊಳ್ಳಲು ಡಾಕ್ಟರ್ ಇರುತ್ತಾರೆ, ಕ್ಲೀನಿಕಲ್ ವ್ಯವಸ್ಥೆ ಇರುತ್ತದೆ. ಸ್ನಾನ ಮಾಡಲು ವ್ಯವಸ್ಥೆ ಮಾಡಲಾಗುತ್ತದೆ. 10-15 ದಿನಗಳವರೆಗೆ comfortable ಆಗಿ ಇರುವಂತಹ ವ್ಯವಸ್ಥೆಯನ್ನು ಮಾಡಲಾಗುತ್ತದೆ. ನಾನು ಕೆಲವು ಸ್ಥಳಗಳಿಗೆ ಹೋಗಿ ಭೇಟಿ ನೀಡಿ ನೋಡಿದಾಗ, ಅಲ್ಲಿ ಬರಿ ಅನ್ನ ಸಾಂಬರ್ ಕೊಡುತ್ತಿದರು. ಬೆಳಗ್ಗೆ ಏನು ಕೊಡುತ್ತೀರಿ ಎಂದಾಗ ಅವರು ಬೆಳಗ್ಗೆ ಉಪ್ಪಿಟು ಕೊಡುತ್ತೇವೆ, ಮಧ್ಯಾಹ್ನ ಮತ್ತು ರಾತ್ರಿ ಅನ್ನ-ಸಾಂಬಾರ್ ಕೊಡುತ್ತೇವೆ ಎಂದು ಹೇಳಿದರು. ನಾನು ಈ ಪದ್ಧತಿಯನ್ನು ಬದಲಾಯಿಸಲು ಹೇಳಿದೆ, ಹಳೆ ಕಾಲದ ಪದ್ದತಿ ಬಿಡಿ ಎಂದು ಹೇಳಿದ್ದೇನೆ. ಮೊಟ್ಟೆ, ಚಪ್ಪಾತಿ, ಹಪ್ಪಳ, ಉಪ್ಪಿನ ಕಾಯಿ ಕೊಡಲು ಹೇಳಿದ್ದೇನೆ. ನಿಮ್ಮಪ್ಪನ ಮನೆಯಿಂದ ಏನು ಕೊಡುವುದಿಲ್ಲ ಸರ್ಕಾರ ಕೊಡುತ್ತದೆ ಸರಿಯಾಗಿ ಕೊಡಿ ಎಂದು ಹೇಳಿದ್ದೆನೆ. ಏನು ಊಟ ಕೊಡಬೇಕು ಎನ್ನುವುದಕ್ಕೆ ಒಂದು ಸುತ್ತೋಲೆಯನ್ನೇ ಹೊರಡಿಸಿದ್ದೇನೆ. ಗಂಜಿ ಕೇಂದ್ರ ಎಂದರೆ, ಗಂಜಿಯನ್ನೆ ಕೊಡಬೇಕು ಎಂದು ನಮ್ಮ ತಹಸೀಲ್ದಾರ್, ಎ.ಸಿ ಯವರು ತಿಳಿದುಕೊಂಡು ಬಿಟ್ಟಿದ್ದಾರೆ. ಇವುಗಳನ್ನು ಕಡ್ಡಾಯವಾಗಿ ಕೊಡಬೇಕು, ಉಳಿದಿರುವುದು ಆ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಏನಾದರೂ ಕೊಡುವುದಾದರೆ ಕೊಡಿ ಎಂದು ಹೇಳಿದ್ದೇನೆ. ಇದಕ್ಕೆ ಸರ್ಕಾರ ಹಣ ಕೊಡುತ್ತದೆ ಹೇಳಿರುವುದನ್ನು ಕಡ್ಡಾಯವಾಗಿ ಕೊಡಿ ಎಂದು ಹೇಳಿದ್ದೇನೆ. ಈಗ ಕೋವಿಡ ಇರುವುದರಿಂದ ಎಲ್ಲರಿಗೂ ಮಾಸ್ಕ್, ಸ್ಯಾನಿಟೇಸರ್ ಕೊಡುವಂತಹ ಹಾಗೂ ಟೆಸ್ಟ್ ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಮೃತಪಟ್ಟವರಿಗೆ ಈಗಾಗಲೇ 5ಲಕ್ಷ ರೂ.ಗಳ ಪರಿಹಾರವನ್ನು ಎಲ್ಲರಿಗೂ ಕೊಟ್ಟಿದ್ದೇವೆ. ಕೊಡುಗಿನಲ್ಲಿ ಕಾಣಿಯಾದವರದ್ದು ಮಾತ್ರ ಪೆಂಡಿಂಗ್ ಇದೆ. ಇಲ್ಲಿ ಕಾನೂನು ತೊಡಕು ಇದೆ, police certify ಮಾಡಬೇಕು ಮೂರು ತಿಂಗಳು, ಆರು ತಿಂಗಳು ಕಾಣೆಯಾಗಿದ್ದರೆ ಅದನ್ನು declare ಮಾಡುವುದಕ್ಕೆ ಅಧಿಕಾರ ಇದೆ. ಆ ಸಮಸ್ಯೆ ಬಿಟ್ಟರೆ ಉಳಿದವರೆಲ್ಲರಿಗೂ ಪರಿಹಾರವನ್ನು ಕೊಡಲಾಗಿದೆ. ಈ ಪ್ರವಾಹಕ್ಕೆ ಈಗಾಗಲೇ ಈ ಜಿಲ್ಲೆಗಳಿಗೆ 50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಎಲ್ಲಾ ಜಿಲ್ಲೆಗಳಿಗೆ 831 ಕೋಟಿ ರೂ.ಗಳು ಜಿಲ್ಲಾಧಿಕಾರಿಗಳ PD (Personal Deposit) Account ನಲ್ಲಿ ಹಣ ಇದೆ. ಯಾವುದಕ್ಕೆ ಎಷ್ಟು ಬಳಸಬೇಕು ಎನ್ನುವ ನಿರ್ದೇಶನವನ್ನೆ ಕೊಟ್ಟಿದ್ದೇವೆ. ಕೋವಿಡ್‌ಗೆ 15% ಖರ್ಚು ಮಾಡಬಹುದು, ಪ್ರವಾಹಕ್ಕೆ ಇಷ್ಟು ಖರ್ಚು ಮಾಡಬೇಕು ಎನ್ನುವ ವಿವರನ್ನೆ ಅವರಿಗೆ ಕೊಡಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣಕ್ಕಾಗಿ ಕಾಯಬೇಡಿ ಕೋವಿಡ್-19 ಹಣವನ್ನು ಬೇಕಾದರೆ ಬಳಸಿಕೊಂಡು ಹೊಂದಣಿಕೆ ಮಾಡಿಕೊಳ್ಳಿ ಎಂದು ಹೇಳಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳ PD Account ನಲ್ಲಿ ಒಟ್ಟು 831 ಕೋಟಿ ರೂ.ಗಳು ಇದೆ. ಬೆಳಗಾಂವಿ ಒಂದೇ ಜಿಲ್ಲೆಗೆ 300 ಕೋಟಿ ರೂ.ಗಳನ್ನು ಕೊಡಲಾಗಿದೆ. ಅತಿ ಹೆಚ್ಚು ಪ್ರವಾಹ ಉಂಟಾಗಿರುವುದು ಬೆಳಗಾಂವಿ ಜಿಲ್ಲೆಗೆ ಈಗಾಗಲೇ ಅಧ್ಯಯನ ತಂಡ ಬಂದು ಹೋಗಿದೆ. NDRF *(National Disaster Response Force) rules* ಬಗ್ಗೆ ಎಲ್ಲರಿಗೂ ಗೊತ್ತಿದೆ. ಲೋಕೋಪಯೋಗಿ ಇಲಾಖೆಯಿಂದ ಒಂದು ಕಿ.ಲೋ.ಮೀಟರ್ ರೋಡ್ ಮಾಡಬೇಕಾದರೆ 1ಕೋಟಿ ರೂ.ಗಳಷ್ಟು ಖರ್ಚಾಗುತ್ತದೆ. ಆದರೆ NDRF rules ಪ್ರಕಾರ ಕೇವಲ 60ಸಾವಿರ ರೂಪಾಯಿಗಳು. ಅಜಗಜಾಂತರ ವ್ಯತ್ಯಾಸವಿದೆ. ಮನೆ ಕಟ್ಟಲು NDRF rules ಪ್ರಕಾರ 95 ಸಾವಿರ ರೂಪಾಯಿಗಳು ಮಾತ್ರ ಪರಿಹಾರ ಕೊಡುವುದಕ್ಕೆ ಬರುವುದು.

**ಶ್ರೀ ಎಸ್.ಆರ್.ಪಾಟೀಲ್:-** ಇದು ಓಬಿರಾಯನ ಕಾಲದಲ್ಲಿ ಮಾಡಿರುವ ರೂಲ್ಸ್.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಇದು ಮಾನ್ಯ ಮನಮೋಹನ ಸಿಂಗ್‌ರವರ ಕಾಲದಲ್ಲಿ ಮಾಡಿರುವುದು. ಈ ರೀತಿ ಗೈಡಲೈನ್ಸ್‌ನಲ್ಲಿ ಹಣ ಕೊಟ್ಟರೆ ಜನರಿಗೆ ಉಪಯೋಗವಾಗುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ನಾನು ಎರಡು ಪತ್ರಗಳನ್ನು ಬರೆದಿದ್ದೇನೆ. ಅದನ್ನು ಹಣಕಾಸು ಇಲಾಖೆಗೆ ಕಳುಹಿಸಿದ್ದಾರೆ. Central Finance Department ಯವರು ಮೊನ್ನೆ ನಮ್ಮ ರಾಜ್ಯಕ್ಕೆ ಬಂದಿದ್ದಾಗ ಇದನ್ನು ಬದಲಾವಣೆ ಮಾಡಲು ಒಪ್ಪಿಗೆಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಎಷ್ಟು ಹೆಚ್ಚು ಮಾಡಬೇಕು ಹೇಗೆ ಮಾಡಬೇಕು ಎನ್ನುವುದನ್ನು ತಿಳಿಸುತ್ತಾರೆ. ಈ ಸಾರಿ ಆಗಿರತಕ್ಕಂತಹ ಪ್ರವಾಹಕ್ಕೆ ಈ ಉಪಯೋಗ ಸಿಗುವುದಿಲ್ಲ. ಇದನ್ನು ಎರಡು-ಮೂರು ತಿಂಗಳಲ್ಲಿ ಇಡೀ ದೇಶಕ್ಕೆ ಉಪಯೋಗವಾಗುತ್ತದೆ. ಕೇಂದ್ರ ಸರ್ಕಾರದವರು ಸರಿಯಾಗಿ ಹಣವನ್ನು ಕೊಟ್ಟಿಲ್ಲ ಎಂದು ಮಾನ್ಯ ತಿಪ್ಪೇಸ್ವಾಮಿರವರು ಹೇಳಿರುವುದಕ್ಕೆ ಕೆಲವೊಂದು ಮಾಹಿತಿಯನ್ನು ಕೊಡುತ್ತೇನೆ. ಅವರು ಕೇಳಿದ್ದಕ್ಕೆ ಹೇಳುತ್ತಿದ್ದೇನೆ, ನಾನೇನು controversy ಮಾಡಬೇಕೆಂದು ಹೇಳುತ್ತಿಲ್ಲ. ಮಾನ್ಯ ಮನಮೋಹನ ಸಿಂಗ್‌ರವರ ಕಾಲದಲ್ಲಿ ಅಂದರೆ 2008-09ನೇ ಸಾಲಿನಿಂದ 2013-14ನೇ ಸಾಲಿನವರೆಗೆ 6 ವರ್ಷದಲ್ಲಿ ಕೇಂದ್ರ ಸರ್ಕಾರದ ಪಾಲು 724 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇದು__. ನಮ್ಮ ರಾಜ್ಯ ಸರ್ಕಾರದ ಪಾಲು 241 ಕೋಟಿ ರೂ.ಗಳು. NDRF 2669 ಕೋಟಿ ರೂ.ಗಳು. ಇದು 2008 ರಿಂದ 2014ನೇ ಸಾಲಿನವರೆಗೆ ಕೊಟ್ಟಿರುವುದು. 2014 ರಿಂದ 2019-20ನೇ ಸಾಲಿನವರೆಗೆ ಕೇಂದ್ರ ಸರ್ಕಾರದ ಪಾಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

724ಕೋಟಿ ರೂ.ಗಳನ್ನು ಹಿಂದೆ ಕೊಟ್ಟಿದ್ದರು. ಈಗ 1,332 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಹಿಂದೆ 241 ಕೋಟಿ ರೂ.ಗಳಷ್ಟು ಪಾಲು ಇತ್ತು. ಈ ಸಾರಿ 380 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಹೋದ ಸಾರಿ 2660 ಕೋಟಿ ರೂ.ಗಳು ಇರುವುದನ್ನು ಈ ಸಾರಿ 9,279 ಕೋಟಿ ರೂ.ಗಳು NDRF ನಿಂದ ಕೇಂದ್ರ ಸರ್ಕಾರಕ್ಕೆ ಬಂದಿರುವುದು. ಕೇಂದ್ರ ಸರ್ಕಾರ NDRF ನಿಂದ ಇನ್ನು ಒಂದು ತಿಂಗಳು ಬಿಟ್ಟು ಹಣ ಕೊಡಬೇಕಾಗಿತ್ತು. ಆದರೆ ಪ್ರಧಾನ ಮಂತ್ರಿಗಳ ಜೊತೆಗಿನ ಸಭೆಯಲ್ಲಿ ನಮಗೆ ಹಣದ ಅವಶ್ಯಕತೆ ಇದೆ ಬೇಗನೆ ಕೊಡಿ ಎಂದು ಕೇಳಿದಕ್ಕೆ 395 ಕೋಟಿ ರೂ.ಗಳನ್ನು ಬೇಗನೆ ಕೊಟ್ಟಿದ್ದಾರೆ. NDRF ತಂಡಗಳು ನಾಲ್ಕರ ಬದಲಾಗಿ ಐದು ತಂಡಗಳನ್ನು ಕಳುಹಿಸಿದ್ದಾರೆ. ಒಟ್ಟು 9 NDRF ತಂಡಗಳು ನಮ್ಮಲ್ಲಿ ಕೆಲಸ ಮಾಡುತ್ತಿವೆ. ಇಷ್ಟು ಪ್ರವಾಹ ಪೀಡಿತ ತಾಲ್ಲೂಕುಗಳ ಮಾಹಿತಿಯಾಗಿದೆ. ಪ್ರವಾಹ ಉಂಟಾಗಿರುವ ಇನ್ನು ಕೆಲವು ತಾಲ್ಲೂಕುಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇನ್ನು ಯಾವ-ಯಾವ ತಾಲ್ಲೂಕುಗಳನ್ನು ಸೇರಿಸಬಹುದು ಎನ್ನುವುದನ್ನು ಪರಿಶೀಲನೆ ಮಾಡಲಾಗುತ್ತಿದೆ. 130 ತಾಲ್ಲೂಕುಗಳು ಪ್ರವಾಹ ಪೀಡಿತ ಪ್ರದೇಶಗಳೆಂದು ಈಗಾಗಲೆ ಘೋಷಣೆ ಮಾಡಿದ್ದೇವೆ. ಈಗ ಮತ್ತೆ ಮಳೆ ಜಾಸ್ತಿಯಾಗಿದೆ. ಹೀಗಾಗಿ ಇನ್ಯಾವ ತಾಲ್ಲೂಕುಗಳನ್ನು ಸೇರಿಸಬಹುದು ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ. ಮಳೆ ಮಾಪನದ ಆಧಾರದ ಮೇಲೆಯೇ ಘೋಷಣೆ ಮಾಡಲಾಗುತ್ತದೆ. ಇದರಲ್ಲಿ ಯಾವುದ ರಾಜಕೀಯ ಮಾಡುವ ಅವಕಾಶವೇ ಇಲ್ಲ. ನಾನಂತೂ ಇದರಲ್ಲಿ ಯಾವುದೇ ರಾಜಕಾರಣ ಮಾಡುವುದಿಲ್ಲ. ಮಳೆ ಎಷ್ಟು ಬರುತ್ತದೆ ಅದರ ಮೇಲೆ ಮಾಪನ ಮಾಡಲಾಗುತ್ತದೆ. ಮೊದಲು ಬೆಂಗಳೂರಿನಲ್ಲಿ ಮಾತ್ರ ಮಳೆ ಮಾಪನ ಕೇಂದ್ರವಿತ್ತು. ಮಲೇಶ್ವರಂನಲ್ಲಿ ಮಳೆಯಾದರೆ ಕೋರಮಂಗಲದಲ್ಲಿ ಮಳೆ ಬಂತು ಎಂದು ಘೋಷಣೆ ಮಾಡಲಾಗುತ್ತಿತ್ತು. ಈಗ ಹಾಗೆ ಆಗುವುದಿಲ್ಲ. ಪ್ರತಿಯೊಂದು ಗ್ರಾಮದಲ್ಲಿಯೂ ಮಳೆ ಮಾಪನವಿದೆ. ಹಿಂದಿನ ಸರ್ಕಾರ ಮಾಡಿಕೊಂಡು ಬಂದಿರುವುದು. ಅದನ್ನು ನಾವು ಮುಂದುವರೆಸಿದ್ದೇವೆ. ಇಡೀ ದೇಶದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಮಳೆ ಮಾಪನ ಇರುವ ರಾಜ್ಯ ಯಾವುದು ಎಂದರೆ ಅದು ಕರ್ನಾಟಕ ರಾಜ್ಯ. Accurate ಆಗಿ ಎಲ್ಲೇಲಿ ಮಳೆ ಬರುತ್ತಿದೆ ಎನ್ನುವುದು ಗೊತ್ತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಸರ್ಕಾರವೇ ಮಳೆ ಮಾಪನ ಕೇಂದ್ರಗಳನ್ನು ಸ್ಥಾಪನೆ ಮಾಡಿರುವುದು.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಗಳೆ, ನಿಮ್ಮ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈಗ Agriculture University ನಲ್ಲಿ ಮಳೆ ಮಾಪನ ಕೇಂದ್ರವನ್ನು ಮಾಡಲಾಗಿದೆ. ಅಲ್ಲಿ ಈಗ 40 ರಿಂದ 50 ಜನರು ಕೆಲಸ ಮಾಡುತ್ತಿದ್ದಾರೆ. ಸಿಡಿಲು, ಬಿಸಿಲು, ಮಳೆ ಎಷ್ಟು ಇದೆ ಎನ್ನುವುದನ್ನು ಕಾಲಕಾಲಕ್ಕೆ ನಿಖರತೆ ಇರಬೇಕು ಎನ್ನುವ ದೃಷ್ಟಿಯಿಂದ ಈ ಕೆಲಸವನ್ನು ಮಾಡಲಾಗುತ್ತಿದೆ. ಎರಡು ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ನಿನ್ನೆ ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಫೋನ್‌ನಲ್ಲಿ ಮಾತನಾಡಿದ್ದೇನೆ. ಎಷ್ಟು ಹಣ ಬೇಕಾದರೂ ಕೇಳು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇನ್ನು 20 ಕೋಟಿ ರೂ.ಗಳು ಇವೆ, ಹಣ ಕೊಡಲು ಏನು ಸಮಸ್ಯೆ ಇಲ್ಲ. ಜಿಲ್ಲಾಧಿಕಾರಿಗಳಿಗೆ ಖರ್ಚು ಮಾಡಿ ಎಂದು ಹೇಳಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಿದ್ದೇನೆ. ಖರ್ಚು ಮಾಡಿ ಎಷ್ಟು ಹಣ ಬೇಕಾದರೂ, ಯಾವಾಗ ಬೇಕಾದರೂ ಕೊಡಿ ಎಂದು ಹಣಕಾಸು ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಮಳೆಹಾನಿಯ ಬಗ್ಗೆ ಇವತ್ತಿನ ನನ್ನ ಉತ್ತರ ಇದು.

ಮನೆಗಳನ್ನು ಕಟ್ಟಿರುವ ಬಗ್ಗೆ ಮಾನ್ಯ ಬಸವರಾಜ ಹೊರಟ್ಟಿಯವರು ಎಷ್ಟು ಮನೆಗಳು ಪೂರ್ಣಗೊಂಡಿವೆ ಎಂದು ಅವರು ಕೇಳಿದ್ದಾರೆ. 5 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿ ಇದೆ. ಅದರಲ್ಲಿ 1,892 ಮನೆಗಳನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಪ್ರಗತಿಯಲ್ಲಿರುವ ಮನೆಗಳು 28,323, ಛಾವಣಿ ಹಂತದಲ್ಲಿರುವ ಮನೆಗಳು 8,125. ಕಿಟಕಿ ಹಂತದಲ್ಲಿರುವ ಮನೆಗಳು 10,617. ತಳಪಾಯದ ಹಂತದಲ್ಲಿರುವ ಮನೆಗಳು 7,689. ಇದಕ್ಕೆ ಒಟ್ಟು ಪರಿಹಾರ ಮೊತ್ತವಾಗಿ 911 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಹೌಸಿಂಗ್ ಬೋರ್ಡ್‌ಗೆ 10 ದಿನಗಳ ಹಿಂದೆ 340 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ, ತೆಗೆದುಕೊಳ್ಳಿ ಎಂದು ನಾವು ವಿನಂತಿಸಿಕೊಳ್ಳುತ್ತಿದ್ದೇವೆ. ಇಲ್ಲಿ ತೊಡಕುಗಳು ಇವೇ ಇಲ್ಲ ಎಂದು ಹೇಳುವುದಿಲ್ಲ. ಯಾರ್‍ಯಾರಿಗೋ ಕೊಟ್ಟು ಬಿಟ್ಟಿದ್ದಾರೆ ಎಂದು ಹೇಳಿದ್ದಾರೆ, ಹಾಗೆ ಆಗಿದ್ದರೂ ಹಾಗಿರಬಹುದು ನನಗೆ ಗೊತ್ತಿಲ್ಲ. ಮಳೆ ಬಂದಾಗ ಬಿದ್ದಿರುವ ಮನೆಗಳಿಗೆ ಪರಿಹಾರ ಕೊಡಬೇಕು ಎಂದು ಇರುವಾಗ ನಾವು Revenue Inspector ವರೆಗೂ ಹೋಗಿ ದುರ್ಬಿನ್ ಹಾಕಿ ನೋಡಲು ಆಗುವುದಿಲ್ಲ. ಅಲ್ಲಿ ಏನೇನು ಹೆಚ್ಚು-ಕಡಿಮೆಯಾಗಿರುತ್ತದೆ ಎನ್ನುವುದನ್ನು ನಾವು ನೋಡಿರುವುದಿಲ್ಲ. ಆದರೆ ಹಾನಿಗೊಳಗಾದವರಿಗೆ ಪರಿಹಾರವನ್ನು ಕೊಡಲಾಗಿದೆ. 30 ಜಿಲ್ಲೆಗಳಿಗೂ ನಾನು ಪ್ರವಾಸ ಮಾಡಿ ಸಭೆ ನಡೆಸಿದ್ದೇನೆ.

**(ಮುಂದು)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(741)21–09–2020(06–30) ಬಿಎಸ್‌ಡಿ–ಎಕೆ**

**ಶ್ರೀ ಆರ್. ಅಶೋಕ್ (ಮುಂದು)**

ಮಳೆ ಬಂದ ಜಿಲ್ಲೆಗಳಲ್ಲಿ review meetings ಮಾಡಿದ್ದೇನೆ, directions ಕೊಟ್ಟಿದ್ದೇನೆ. ಮೊದಲು ಆ.ಅ ಗಳು ಹಣ ಖಾಲಿಯಾಗಿದೆ, ಹಣ ಕೊಡಿ ಎಂದು ಕೇಳಬೇಕಾಗಿತ್ತು. ಅವರು ಹಣ ಕೇಳಿ 3 ತಿಂಗಳಿಗೆ ಹಣ ಹೋಗುತ್ತಿತ್ತು. ಆದರೆ ಈಗ ಆ ರೀತಿ ಇಲ್ಲ. ನಮ್ಮ system ನಲ್ಲಿ ರೂ.5 ಕೋಟಿಗಿಂತ ಕಡಿಮೆ ಇರುವ PD Account ಗೆ ನಾವೇ voluntary ಆಗಿ ಹಣ ಕಳುಹಿಸಿಬಿಡುತ್ತೇವೆ. ಆ ರೀತಿ system ಮಾಡಿದ್ದೇವೆ. ಆದ್ದರಿಂದ ಎಲ್ಲಿಯೂ ಹಣದ ಸಮಸ್ಯೆ ಬರದಂತೆ ನೋಡಿಕೊಂಡಿದ್ದೇವೆ. ಕಾಲಕಾಲಕ್ಕೆ ಹಣ ಸರಿಯಾಗಿ ತಲುಪುವ ವ್ಯವಸ್ಥೆ ಮಾಡಿದ್ದೇವೆ. ಮನೆಗಳನ್ನು ಕಟ್ಟುವ ವಿಚಾರದಲ್ಲಿ ಮಾನ್ಯ ಪಾಟೀಲರು ಎತ್ತರದ ಸ್ಥಳಕ್ಕೆ ಖಿಜಿಣ ಮಾಡಿ ಎಂದು ಹೇಳಿದರು. ಅವರು ಸರ್ಕಾರವನ್ನು ನಡೆಸಿದ್ದು, ಅವರ ಕಾಲದಲ್ಲಿಯೂ ಜಿಟಠಠಜ ಆಗಿದ್ದು, ಈಗಲೂ ಜಿಟಠಠಜ ಆಗಿದೆ. ಬಹಳಷ್ಟು ಡಿಜತುಜತಿ ಟಜಜಣುಟಿರ ಗಳನ್ನು ಮಾಡಿದಾಗ ಕಟ್ಟಿರುವ ಮನೆಗಳು ಏನಿದೆ, ಆ ಮನೆಗಳಿಗೆ 5 ವರ್ಷಗಳಿಂದ ಹೋಗಿಲ್ಲ, ಆ ಮನೆಗಳ ಕಿಟಕಿ, ಬಾಗಿಲುಗಳನ್ನು ಕಿತ್ತುಕೊಂಡು ಹೋಗಿದ್ದಾರೆ. ಅವರಿಗೆ 30x40 ಜಾಗವನ್ನು ಕೊಟ್ಟಿದ್ದು, ದನಗಳನ್ನು ಕಟ್ಟಿಕೊಳ್ಳಲು ಜಾಗ ಇಲ್ಲ. ತಿಪ್ಪೆ ಮಾಡಿಕೊಳ್ಳಲು ಜಾಗ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವು 2009ರಲ್ಲಿ ಕಟ್ಟಿದ ಮನೆಗಳಾಗಿವೆ.

**ಶ್ರೀ ಆರ್. ಅಶೋಕ್:–** ಮುಳುಗಡೆಯಾಗಿರುವುದು ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ಅದರಲ್ಲಿ ಒಂದು kitchen ಮತ್ತು ಒಂದು living room ಇದೆ. ರೈತ ವಾಸ ಮಾಡಲು ದನ ಕಟ್ಟಿಕೊಳ್ಳಲು cattle shed ಎಂದು ಬೇಕು. ಬಣವೆ ಹಾಕಲು ಜಾಗ ಬೇಕು, ತಿಪ್ಪೆಗೆ ಜಾಗ ಬೇಕು. ಆಗ ರೈತನಿಗೆ rehabilitate ಮಾಡಿದಂತಾಗುತ್ತದೆ. ಸರ್ಕಾರಿ ನೌಕರರು ಇರುವಂತಹ type ಕಟ್ಟಿಸಿದ್ದಾರೆ. ಅವು ಛಾಜ ಆಗಿಲ್ಲ. The Hon. Minister has answered very effectively and properly. ಅದರ ಬಗ್ಗೆ ನನಗೆ ಎರಡು opinion ಇಲ್ಲ. ಪ್ರಮುಖವಾಗಿ shift ಮಾಡುವಂತಹದ್ದು, ಅಂದರೆ ಎತ್ತರದ ಸ್ಥಳ ನೋಡಿಕೊಂಡು shift

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದು, ಪ್ರತಿವರ್ಷ ಬೆಳೆ ಮುಳುಗುತ್ತಿರುವ ಬಗ್ಗೆ ಏನಾದರೂ scientists ಹೇಳಿ, ನೀರಿನಲ್ಲಿ ಮುಳುಗಿದರೂ ಬೆಳೆಗೆ affect ಆಗದಂತಹ variety ಅನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಿದೆಯೇ ಎಂಬುದರ ಬಗ್ಗೆಯೂ ಯೋಜನೆ ಮಾಡಬೇಕು. It is my suggestion.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಅವರ ಸಲಹೆಯನ್ನು .......... ಮಾನ್ಯ ವಸತಿ ಸಚಿವರಿಗೆ ಮನೆ ಕಟ್ಟಿಸುವ, ಹಣ ಬಿಡುಗಡೆ ಮಾಡುವ ಜವಾಬ್ದಾರಿಯನ್ನು ಕಂದಾಯ ಇಲಾಖೆಯಿಂದ ಅವರಿಗೆ ನೀಡಲಾಗಿದೆ. ಅವರು ಹೇಳಿದ್ದನ್ನು ಮಾನ್ಯ ವಸತಿ ಸಚಿವರ ಗಮನಕ್ಕೆ ತರುತ್ತೇನೆ. ನಾನು particular ಆಗಿ ನೋಡಿದ್ದು, ನಮಗೂ ಹಾಗೆ ಭಾವಿಸಿದ್ದೇವೆ. ಮಾನ್ಯ ಸದಸ್ಯರೊಬ್ಬರು ಅವರ ಊರಿಗೆ ಹೋಗಲು ದಾರಿ ಇಲ್ಲ ಎಂದು ಪ್ರಸ್ತಾಪ ಮಾಡಿದರು. ಅದೇನೋ ಒಂದು ರೀತಿ ನನ್ನದು, ನನ್ನದು ಎಂದು ಬಂದುಬಿಟ್ಟಿದೆ. ಹಣ ರೂ. 1 ಲಕ್ಷ ಕೊಟ್ಟಿದ್ದಾರೆ, ನಾಲೆ ಪಕ್ಕದಲ್ಲಿಯೇ ಮನೆ ಕಟ್ಟಿ ಬಿದ್ದುಹೋಗಿದೆ. ಆದರೆ ನಾವು ಬೇರೆ ಕಡೆ ಹೋಗಿ ಮನೆ ಕಟ್ಟಿಕೊಳ್ಳಿ ಎಂದು ಹಣ ಕೊಟ್ಟಿದ್ದೇವೆ. ಅವರಿಗೆ ನಿವೇಶನ ಕೊಡುತ್ತೇವೆ ಎಂದರೂ ಹೋಗುತ್ತಿಲ್ಲ. ಮತ್ತೆ ಅಲ್ಲಿಯೇ adjust ಮಾಡಿಕೊಂಡು ಅಲ್ಲಿಯೇ ಕಟ್ಟಿಕೊಳ್ಳಲು ಹೋಗುತ್ತಿದ್ದಾರೆ. ನಾವು GPS ಮುಖಾಂತರ ಕಟ್ಟಬಾರದು ಎಂದು ಮಾಡಿರುತ್ತೇವೆ. ಅಲ್ಲಿಯೇ ಕಟ್ಟುವುದಕ್ಕೆ ಹೋಗಿ ಅವರಿಗೆ ದುಡ್ಡು ಸಿಗುತ್ತಿಲ್ಲ. ನಾವು ದುಡ್ಡು ಕೊಡುವುದಿಲ್ಲ. Shift ಮಾಡಿದರೆ ಮಾತ್ರ ನಾವು ದುಡ್ಡು ಕೊಡುತ್ತೇವೆ. ನಾಲೆಯಿಂದ ಪಕ್ಕಕ್ಕೆ shift ಮಾಡಿಕೊಂಡು ಬೇರೆ ಕಡೆ ಹೋಗಬೇಕು. ಅವರು ಹೋಗದೇ ಅಲ್ಲಿಯೇ ಕಟ್ಟುವುದಕ್ಕೆ ಹೋಗುವುದರಿಂದ ದುಡ್ಡು ಸಿಗುವುದಿಲ್ಲ. ಇದೊಂದು ಸಮಸ್ಯೆಯಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

5,779 ಜನರು ಇದುವರೆಗೂ ಮನೆ ಕಟ್ಟಿಲ್ಲ, ಅವರಿಗೆ notice serve ಆಗಿದೆ, ಏನೇ ಮಾಡಿದರೂ ಮನೆ ಕಟ್ಟುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೇನೆ. ಅವರಿಗೆ ರೂ. 1 ಲಕ್ಷ ಕೊಡಲಾಗಿದೆ. ಅಷ್ಟಕ್ಕೆ ಬಿಟ್ಟು ಹಾಗೆ ಅದನ್ನು close ಮಾಡಬೇಕು. ಇಲ್ಲದಿದ್ದರೆ ಅದು ಹಾಗೆ ಬರುತ್ತಿರುತ್ತದೆ. ಮನೆ ಕಟ್ಟಿಲ್ಲ ಎಂದರೆ ನಾವು ಪ್ರಗತಿಯಲ್ಲಿ ತೋರಿಸುವುದಕ್ಕೆ ಆಗುವುದಿಲ್ಲ. ಇದರಿಂದ ಸರ್ಕಾರಕ್ಕೂ ಒಂದು ರೀತಿ ಮುರಿಸು ಆಗುತ್ತದೆ. ಅದನ್ನು ಯೋಚನೆ ಮಾಡುತ್ತಿದ್ದೇವೆ. ಇದನ್ನು solve

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವ ಬಗ್ಗೆ ಏನಾದರೂ ಒಂದು ಪತ್ರ ತೆಗೆದುಕೊಂಡು ಅಷ್ಟಕ್ಕೆ close ಮಾಡಬೇಕು. ಉಳಿದವರಿಗೆ ಮನೆ ಕಟ್ಟುತ್ತಿದ್ದಾರೆ ಹಂತಹಂತವಾಗಿ ಕೊಡುತ್ತೇವೆ. ಎಲ್ಲೂ ಕೂಡ ಅದನ್ನು ಣಠಿ ಮಾಡುವುದಿಲ್ಲ.

ಇನ್ನು ಅದೇ ರೀತಿ ಬೆಳೆ ಪರಿಹಾರದ ವಿಚಾರವಾಗಿ ಮಾತನಾಡಿದ್ದು, ಕಳೆದ ಬಾರಿ ಬೆಳೆ ಪರಿಹಾರ ಕೊಡುವಾಗ ಕೇಂದ್ರ ಸರ್ಕಾರದ ಡಿಣಟಢ ಬಿಟ್ಟು ಹೆಚ್ಚಾಗಿ ಕೊಟ್ಟಿದ್ದೇವೆ. ಅದು ಎಲ್ಲರಿಗೂ ಗೊತ್ತಿದೆ. ಒಟ್ಟು 10,937 ಹೆಕ್ಟೇರ್ ಬೆಳೆ ಹಾನಿಯಾಗಿದ್ದು, 6,45,100 ರೈತರಿದ್ದು, ರೂ.1,185 ಕೋಟಿ ಪರಿಹಾರದ ಹಣವನ್ನು ಪಾವತಿಸಿದ್ದೇವೆ. ಎಲ್ಲರಿಗೂ ತಿಳಿದಿರುವಂತೆ ಹಣವನ್ನು RTGS ಮೂಲಕ ಪಾವತಿಸಿದ್ದೇವೆ. ಎಲ್ಲಿಯೂ cheque ಕೊಡುವಂತಹ system ಇಲ್ಲ. ಎಲ್ಲವನ್ನು RTGS ಮೂಲಕ ಬೆಳೆ ಪರಿಹಾರ ಕೊಡುತ್ತಿದ್ದೇವೆ. ಈಗ ಬೆಳೆ ಹಾನಿಯಾಗಿರುವ ಕಡೆ ನಾನೂ ಹೋಗಿದ್ದೇನೆ, ಒಂದು ಕಡೆ ಹೆಸರು ಬೆಳೆದಿರುವ ಕಡೆ ಫಸಲು ಬಂದು ಕೈಗೆ ಬರುವ ಸಮಯದಲ್ಲಿ ನೀರು ತುಂಬಿಕೊಂಡು ಕೊಳೆತುಹೋಗಿದೆ. ಇದಕ್ಕೆ ನಾವು ಈಗಾಗಲೇ ಸೂಚನೆ ನೀಡಿದ್ದು, ಈಗ ಏನು ಹಾನಿಯಾಗಿದೆ, ಮುಂದೆ ಏನು ಆಗಬಹುದು ಎಂಬೆರಡನ್ನೂ ನೋಡಿಕೊಂಡು ಸಮೀಕ್ಷೆ ಮಾಡಿ ವರದಿ ಕೊಟ್ಟರೆ ರಾಜ್ಯ ಸರ್ಕಾರ ಪರಿಹಾರ ಕೊಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ ಏನು ಕೊಡುತ್ತದೆ ಎಂಬುದನ್ನು ಹಾಗೂ ರಾಜ್ಯ ಸರ್ಕಾರ ಏನು ಮಾಡಬೇಕು ಎಂದು ಇವೆರಡನ್ನೂ ನೋಡಿಕೊಂಡು ಪರಿಹಾರವನ್ನು ಕೊಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಸ್ವಲ್ಪ ಮಂದಿ ರೈತರು ಬಿಟ್ಟು ಹೋಗಿದ್ದಾರೆ, last year ಏನು farmer ಗೆ compensation ಕೊಟ್ಟರು, ಅನೇಕ ರೈತರು ಬಿಟ್ಟು ಹೋಗಿದ್ದಾರೆ. ಪಕ್ಕದ ಹೊಲದಲ್ಲಿರುವವರಿಗೆ compensation ಬಂದಿದೆ, ನನಗೆ ಬಂದಿಲ್ಲ. ಆ type ಬಹಳಷ್ಟು ಮಂದಿಗೆ ಆಗಿದೆ. ಜಮೀನು ಒಂದೇ ಆಗಿದೆ. ಅಣ್ಣ–ತಮ್ಮಂದಿರಲ್ಲಿ ಒಬ್ಬರಿಗೆ ಬಂದಿದ್ದರೆ ಇನ್ನೊಬ್ಬರಿಗೆ ಬಂದಿಲ್ಲ. ಈ ರೀತಿ ಬಿಟ್ಟು ಹೋಗಿರುವ ಪ್ರಕರಣಗಳು ಜಾಸ್ತಿ ಇದ್ದು, ಇದರ ಬಗ್ಗೆ ಗಮನಹರಿಸಬೇಕು.

**ಶ್ರೀ ಆರ್. ಅಶೋಕ್:–** ಮೊನ್ನೆ ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಇದೇ point ಬಂತು. ಅಲ್ಲಿ ನಮಗೆ ಸಿಕ್ಕಿಲ್ಲ, ಇವರಿಗೆ ಸಿಕ್ಕಿಲ್ಲ ಎಂಬ ವಿಚಾರ ಬಂತು. ಅದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಲು ಜಿಲ್ಲಾಡಳಿತಕ್ಕೆ ಹೇಳಿದ್ದೇನೆ. D.C ಯವರಿಗೂ ಹೇಳಿದ್ದೇನೆ. ಮತ್ತೊಮ್ಮೆ ಪರಿಶೀಲನೆ ಮಾಡಿ ಯಾರ್‍ಯಾರದೂ ಬಿಟ್ಟು ಹೋಗಿದ್ದರೆ ಅವರ ಹೆಸರನ್ನು ಸರ್ಕಾರಕ್ಕೆ ಕೊಡಿ, ಅವರ ಹೆಸರನ್ನು ಸೇರಿಸಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡೋಣ ಎಂದು ಹೇಳಿದ್ದೇನೆ. ಇಷ್ಟು ಮುಂಜಾಗ್ರತಾ ಕ್ರಮಗಳನ್ನು ಜಿಟಂಠಜ ವಿಚಾರವಾಗಿ ಸರ್ಕಾರ ತೆಗೆದುಕೊಂಡಿರುವುದರಿಂದ ಅನಾಹುತಗಳು ಕಡಿಮೆಯಾಗಿವೆ. ಇನ್ನು ಮುಂದೆ ಪರಿಹಾರ ಕೊಡುವುದು ಶುರುವಾಗಬೇಕು. ಈಗಾಗಲೇ ಜಿಲ್ಲಾಧಿಕಾರಿ account ನಲ್ಲಿ ರೂ.800 ಕೋಟಿಗಿಂತ ಹೆಚ್ಚು ಹಣ ಇದೆ. ನಾವು ಹಣ ಕೊಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಹತ್ತಿರ ಏನು ಕೊಡಬಹುದು ಎಂದು ಮಾತನಾಡಿ, ಏಕೆಂದರೆ NDRF norms ಪ್ರಕಾರ ಏನು ಕೊಡಬೇಕೋ, ಅದನ್ನು ಕೊಡುತ್ತೇವೆ. ಅದನ್ನು ಹೊರತುಪಡಿಸಿ ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ಮಾಡಿದ ಪ್ರಕಾರ ಕೊಡುತ್ತೇವೆ. ಸರ್ಕಾರ ಇದರ ಬಗ್ಗೆ ಗಂಭೀರ ಚಿಂತನೆ ಮಾಡಿದೆ. ನಾನು ಎಲ್ಲಾ ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದೇನೆ, Assembly Session ಇಲ್ಲವೆಂದರೆ ಇಷ್ಟೊತ್ತಿಗೆ ಉಡುಪಿಗೆ ಭೇಟಿ ನೀಡಬೇಕಾಗಿತ್ತು. Assembly Session ಇರುವುದರಿಂದ ಉಡುಪಿಗೆ ಹೋಗುವುದಕ್ಕೆ ಆಗಲಿಲ್ಲ. ಸರ್ಕಾರ ಎಚ್ಚರಿಕೆಯಿಂದ ನೊಂದಿರುವವರ ಸಂಕಷ್ಟದಲ್ಲಿ ಭಾಗಿಯಾಗುತ್ತದೆ, ಅವರ ಜೊತೆ ಇರುತ್ತೇವೆ. ಮಾನ್ಯ ಸದಸ್ಯರು ಸೂಕ್ತ ಸಲಹೆ, ಮಾರ್ಗದರ್ಶನಗಳನ್ನು ನೀಡಿದ್ದು, ಅವುಗಳು ನನ್ನ ಮನಸ್ಸಿನಲ್ಲಿವೆ. ಎಲ್ಲೆಲ್ಲಿ ತಪ್ಪಾಗಿವೆ ಎಂದು ನೋಡುತ್ತೇನೆ. ಅವರು A.C ತಪ್ಪು ಮಾಡಿರುವ ಬಗ್ಗೆ ಹೇಳಿದರು, ನಾನೂ ತಪ್ಪಾಗಿದೆ ಎಂದು ಹೇಳಿದ್ದು, ಅವರ ಪರವಾಗಿ ನಿಂತಿಲ್ಲ. ಎಲ್ಲಿ ತಪ್ಪಾಗಿದೆಯೋ ಅದನ್ನು ಸರಿ ಮಾಡುತ್ತೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಚುಕ್ಕೆಗುರ್ತಿಲ್ಲದ ಪ್ರಶ್ನೆಗಳಿಗೆ ಯಾವುದಕ್ಕೂ ಉತ್ತರ ಬರುವುದಿಲ್ಲ. ಕಳೆದ ಅಧಿವೇಶನದಲ್ಲಿಯೂ ಇದೇ ರೀತಿ ಆಯಿತು. ಇಲಾಖೆಗೆ ಕಳುಹಿಸಿದರೆ ನಂತರ ಕೊಡುತ್ತೇವೆ ಎಂದು ಹೇಳುತ್ತಾರೆ. ಸದನ ಮುಗಿಯುವುದರೊಳಗೆ ಉತ್ತರ ಕೊಡದಿದ್ದರೆ ಯಾವಾಗ ಉತ್ತರ ಕೊಡುತ್ತಾರೆ?

**ಶ್ರೀ ಪುಟ್ಟಣ್ಣ / ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರ ಚರ್ಚೆ ಮಾಡಿದ ವಿಷಯಗಳಿಗೆ ಮಾನ್ಯ ಕಂದಾಯ ಸಚಿವರು ಧಾರಾಳವಾಗಿ ಉತ್ತರ ಕೊಡುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಈ ರೀತಿ ಉತ್ತರ ನೀಡುತ್ತಿರುವುದು ಬಹಳ ಸಂತೋಷ. ಇನ್ನೊಂದು ವಿಶೇಷವಾಗಿ ಮಾನ್ಯ ಕಂದಾಯ ಸಚಿವರು ಗಂಜಿ ಕೇಂದ್ರದ ಬಗ್ಗೆ ಹೇಳಿದ್ದು, ಗಂಜಿ ಕೇಂದ್ರದಲ್ಲಿ ಗಂಜಿ ಕೊಡುವ ಕೆಲಸವನ್ನು ಅಧಿಕಾರಿಗಳು ಮಾಡುತ್ತಿದ್ದು, ಇನ್ನು ಮೇಲೆ ಪೌಷ್ಠಿಕ ಆಹಾರವಾದ ಮೊಟ್ಟೆಯನ್ನು ಹಾಗೂ ಕಡ್ಡಾಯವಾಗಿ ಉಪ್ಪಿನಕಾಯಿ ಕೊಡುವ ಬಗ್ಗೆ ಹೇಳಿದರು.

ಉಪ್ಪಿನಕಾಯಿಯ ಬಗ್ಗೆ ಒಂದು ಉಪಕತೆ ಇದೆ. ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ 15 ವರ್ಷಗಳ ಹಿಂದೆ Joint Registrar ಆಗಿದ್ದವರನ್ನು Administrator ಆಗಿ ಹಾಕಿದ್ದರು. ಆಗ Board supersede ಆಗಿತ್ತು. ಅವರ ನೇತೃತ್ವದಲ್ಲಿ ಒಂದು General Body Meeting ನಡೆಯಿತು. ಆ Sugar factory General Body Meeting ಗೆ ಸುಮಾರು 300 ರಿಂದ 400 ಜನ ರೈತರು ಬಂದಿದ್ದರು. ಆ General Body Meeting ಖರ್ಚಾಗಿರುವ ಹಣದ ಬಗ್ಗೆ ಲೆಕ್ಕ ಬರೆಯುವಾಗ ಉಪ್ಪಿನಕಾಯಿಗೆ ರೂ.1.10 ಲಕ್ಷ ವೆಚ್ಚ ತೋರಿಸಿದ್ದರು. ಕೊನೆಗೆ ಅದರ ಬಗ್ಗೆ enquiry DV suspend ಆಯಿತು. ಮೊಟ್ಟೆ, ಉಪ್ಪಿನಕಾಯಿ ಕೊಡಿ ಎನ್ನುವಂತಹ ಸಂದರ್ಭದಲ್ಲಿ ಈ ರೀತಿ ಲೆಕ್ಕ ಬರೆಯದಂತೆ ನೋಡಿಕೊಳ್ಳಬೇಕು.

**ಶ್ರೀ ಅರವಿಂದಕುಮಾರ್ ಅರಳಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ಅವರು ನೆರೆ ಬಂದ ಪ್ರದೇಶಗಳಿಗೆ ಹೋಗಿ ಬಂದಿದ್ದಾರೆ. ಆದರೆ ಅವರು ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದು, ನಮ್ಮ ಬೀದರ್ ಜಿಲ್ಲೆಗೂ ಬಂದಿದ್ದರು. ಅದೇರೀತಿ ಗುಲ್ಬರ್ಗ, ಯಾದಗಿರಿ ಜಿಲ್ಲೆಗಳಿಗೂ ಹೋಗಿದ್ದಾರೆ. ಅವರು ಬಂದು ಹೋದ ನಂತರ ಹೆಚ್ಚು ಮಳೆಯಾಗಿ ಬೆಳೆ ಹಾನಿಯಾಗಿದೆ. ನೆರೆ ಬಂದಿದೆ. ಆ ಹಿನ್ನೆಲೆಯಲ್ಲಿ ರೈತರು ತೊಂದರೆಯಲ್ಲಿದ್ದಾರೆ.

**ಶ್ರೀ ಆರ್. ಅಶೋಕ್:–** ನಾವು ಬರಬಾರದು ಎಂದು ಹೇಳುತ್ತಿದ್ದಾರೆಯೇ?

**ಶ್ರೀ ಅರವಿಂದಕುಮಾರ್ ಅರಳಿ:–** ಇಲ್ಲ, ಆ ರೀತಿ ಅಲ್ಲ. ಅವರು ಬಂದು ಹೋದ ನಂತರ ಮಳೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದೇನೆ. ಯಾದಗಿರಿ ಜಿಲ್ಲೆಯಲ್ಲಿ PM Kisan scheme ಹಣವನ್ನು ಕೊಡುತ್ತಿದ್ದು, ಆ ಹಣವು ಭಜಟಜಜುಭಿಬಿಚಿಡಿಝ ಚಿಛಿಛಿಠಣಟಣ ಗೆ ಹೋಗುತ್ತಿಲ್ಲ. ಸಾಲ ಇರುವ account ಗೆ ಹೋಗುತ್ತಿದೆ. ಅಂದರೆ ಸಾಲ ಛಿಣಾಣ ಆಗುತ್ತಿದೆ. ಈ ವಿಚಾರ ಯಾದಗಿರಿಯ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(742)/21.09.2020/6.40/ಹೆಚ್‌ವಿಃಎಕೆ**

**ಶ್ರೀ ಅರವಿಂದಕುಮಾರ್ ಅರಳಿ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ವೃದ್ಧಾಪ್ಯವೇತನ ಮತ್ತು ವಿಧವಾವೇತನವನ್ನು ಸಾಲಕ್ಕೆ ಕಡಿತಗೊಳಿಸಿಕೊಳ್ಳಲಾಗುತ್ತಿದೆ ಎನ್ನುವ ಅಂಶವನ್ನು ದಾಖಲೆಯ ಸಮೇತ ಆ ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಈ ರೀತಿ ಆಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್.ಅಶೋಕ್(ಕಂದಾಯ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ನೀಡುತ್ತಿರುವ ಪಿಂಚಣಿ ಹಣ ಯಾವುದೂ ಸಾಲಕ್ಕೆ ಕಡಿತಗೊಳಿಸಿಕೊಳ್ಳಬಾರದು. ಆ ರೀತಿ ಏನಾದರು ಮಾಡಿದರೆ ಅದು ದೊಡ್ಡ ಅಪರಾಧವಾಗುತ್ತದೆ. ಅಂತಹ ಉದಾಹರಣೆಗಳು ಇದ್ದರೆ ದಾಖಲೆ ಕಳುಹಿಸಿ ಕೊಟ್ಟರೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಆರ್.ಬಿ.ತಿಮ್ಮಾಪೂರಃ- ಸನ್ಮಾನ್ಯ ಸಭಾಪತಿಯವರೇ, ಮುಧೋಳ ತಾಲ್ಲೂಕಿನಲ್ಲಿ ಕಟ್ಟಿರುವಂತಹ ಆಲಮಟ್ಟಿ ಅಣೆಕಟ್ಟಿನಲ್ಲಿ ಪ್ರವಾಹ ಬಂದಾಗ ನೀರಿನ ಮಟ್ಟ ಹೆಚ್ಚಾಗಿ ಒಟ್ಟು 13 ತಾಲ್ಲೂಕಿನ ಹಲವು ಹಳ್ಳಿಗಳು ಸಂಪೂರ್ಣವಾಗಿ ಮುಳುಗಿ ಹೋಗುತ್ತಿವೆ. ಯಾವ ರೀತಿಯಲ್ಲಿ ಮುಳುಗಡೆ ಸಂತ್ರಸ್ತರಿಗೆ ಪರಿಹಾರವನ್ನು ನೀಡಲಾಗುತ್ತದೆ ಅದೇ ರೀತಿಯ ಪರಿಹಾರವನ್ನು ಈ ಹಳ್ಳಿಗಳಿಗೂ ನೀಡಲು ಪರಿಗಣಿಸಬೇಕೆನ್ನುವುದು ನನ್ನ ಮನವಿಯಾಗಿದೆ. ಇದರ ಜೊತೆಗೆ ಸ್ಥಳಾಂತರದ ಬಗ್ಗೆಯೂ ಮಾನ್ಯ ಸಚಿವರು ಈ ಸದನದಲ್ಲಿ ಉತ್ತರಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಶ್ರೀ ಆರ್.ಅಶೋಕ್:- ಸನ್ಮಾನ್ಯ ಸಭಾಪತಿಯವರೇ, ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಪ್ರವಾಹದ ಬಗ್ಗೆ ಚರ್ಚೆ ಎಂದು ಉಲ್ಲೇಖ ಮಾಡಲಾಗಿದೆ. ಆದರೂ ಇದರ ಬಗ್ಗೆ ಪರಿಶೀಲಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**15.ಗಮನ ಸೆಳೆಯುವ ಸೂಚನೆ**

**ಅ) ವಿಷಯಃ ಸುಗ್ರಿವಾಜ್ಞೆ ಮೂಲಕ ಕರ್ನಾಟಕ ಭೂ ಸುಧಾರಣೆ ಕಾಯ್ದೆಗೆ ತಂದಿರುವ ತಿದ್ದುಪಡಿಯು ರೈತಾಪಿ ವರ್ಗಕ್ಕೆ ಮಾರಕವಾಗಿರುವುದರಿಂದ ತಿದ್ದುಪಡಿಯನ್ನು ಹಿಂಪಡೆಯುವ ಕುರಿತು.**

---

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸುಗ್ರಿವಾಜ್ಞೆ ಮೂಲಕ ಕರ್ನಾಟಕ ಭೂ ಸುಧಾರಣೆ ಕಾಯ್ದೆಗೆ ತಂದಿರುವ ತಿದ್ದುಪಡಿಯು ರೈತಾಪಿ ವರ್ಗಕ್ಕೆ ಮಾರಕವಾಗಿರುವುದರಿಂದ ತಿದ್ದುಪಡಿಯನ್ನು ಹಿಂಪಡೆಯುವ ಕುರಿತು ಮಾನ್ಯ ಕಂದಾಯ ಸಚಿವರ ಗಮನಸೆಳೆಯುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಮಹತ್ವಪೂರ್ಣವಾಗಿದೆ. ಈ ವಿಚಾರದ ಮೇಲೆ ನಾನೂ ಸೇರಿದಂತೆ ಸಾಕಷ್ಟು ಸದಸ್ಯರು ಮಾತನಾಡುವವರಿದ್ದಾರೆ. ಆದರೆ, ಈಗ ಮಾನ್ಯ ಸಮಾಜ ಕಲ್ಯಾಣ ಸಚಿವರು ಒಂದು ಸಭೆಯನ್ನು ಕರೆದಿದ್ದಾರೆ. ಆ ಸಭೆಯಲ್ಲಿ ನಾವೆಲ್ಲರೂ ಭಾಗವಹಿಸಬೇಕಾಗಿರುವುದರಿಂದ ದಯವಿಟ್ಟು ಈ ವಿಚಾರವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರುಃ-** ಮಾನ್ಯ ಸಚಿವರೇ, ಮಾನ್ಯ ಸದಸ್ಯರುಗಳು ಈ ವಿಚಾರವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣವೆಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಮೇಲಿನ ಚರ್ಚೆ ಇವತ್ತು ಪೂರ್ಣಗೊಳ್ಳುವುದಿಲ್ಲ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಉತ್ತರ ಸಿದ್ಧವಿದೆ. ಆದರೆ, ನಾಳೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ವಿಧೇಯಕವನ್ನು ಸದನದ ಮುಂದೆ ಮಂಡನೆ ಮಾಡುವುದರಿಂದ ಇವತ್ತಿನ ಬದಲಿಗೆ ನಾಳೆ ಇಡೀ ದಿನ ಪೂರ್ಣ ಪ್ರಮಾಣದಲ್ಲಿ ಚರ್ಚೆ ಮಾಡಬಹುದೆನ್ನುವುದು ನನ್ನ ಸಲಹೆಯಾಗಿದೆ. ಈ ಕಾಯಿದೆಯನ್ನು ವಾಪಸ್ಸು ತೆಗೆದುಕೊಳ್ಳುವಂತಹ ಪ್ರಶ್ನೆಯೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಚಾರಕ್ಕೆ ಸಂಬಂಧಪಟ್ಟ ವಿಧೇಯಕ ಸದನದ ಮುಂದೆ ಬಂದಾಗ ಅದರ ಮೇಲೆ ಚರ್ಚೆ ಮಾಡುತ್ತೇವೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ವಿಧೇಯಕವನ್ನು ತಂದೇ ತರುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರುಗಳು ಅದರ ಮೇಲೆ ಚರ್ಚೆ ಮಾಡಬಹುದು.

**ಸಭಾಪತಿಯವರು:-** ಬಿಲ್ ಬಂದಾಗ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಆ) ವಿಷಯ: ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟು ಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಕುರಿತು.**

---

**ಶ್ರೀಮತಿ ಭಾರತಿ ಶೆಟ್ಟಿ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಮಾದಕ ವಸ್ತುಗಳ ಲಭ್ಯತೆ, ಸಾಗಾಟ ಮತ್ತು ಮಾರಾಟದ ಮೇಲಿನ ಅನಿಯಂತ್ರಣದಿಂದಾಗಿ ಸಮಾಜದ ಮೇಲೆ ಉಂಟು ಮಾಡುತ್ತಿರುವ ದುಷ್ಪರಿಣಾಮ ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಕಾನೂನು ನಿಯಮಗಳನ್ನು ಬಲಪಡಿಸುವ ಕುರಿತು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಗೃಹ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ,

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಈ ಬಗ್ಗೆ ಹೆಚ್ಚಿನ ವಿವರವನ್ನು ಸದನದ ಮುಂದಿಡುತ್ತಿದ್ದೇನೆ, 2016ನೇ ಸಾಲಿನಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಸುಮಾರು 103 ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು ಸುಮಾರು 265.715 ಕೆ.ಜಿ. ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಅದೇ ರೀತಿಯಲ್ಲಿ ಬ್ರೌನ್ ಶುಗರ್‌ಗೆ ಸಂಬಂಧಪಟ್ಟಂತೆ ಒಂದು ಪ್ರಕರಣ ದಾಖಲಾಗಿದ್ದು ಸುಮಾರು 0.943 ಕೆ.ಜಿ. ಬ್ರೌನ್ ಶುಗರ್ ಅನ್ನು ವಶಪಡಿಸಿಕೊಳ್ಳಲಾಗಿದೆ. Opium ಗೆ ಸಂಬಂಧಪಟ್ಟಂತೆ 2 ಪ್ರಕರಣಗಳು ದಾಖಲಾಗಿದ್ದು ಸುಮಾರು 1.220 ಕೆ.ಜಿ. ವಶಪಡಿಸಿಕೊಳ್ಳಲಾಗಿತ್ತು. Synthetic drugs ಗೆ ಸಂಬಂಧಪಟ್ಟಂತೆ 19 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 7.235 ಕೆ.ಜಿ.ಯನ್ನು ವಶಪಡಿಸಿಕೊಳ್ಳಲಾಗಿದೆ. ಎಂ.ಡಿ.ಎಂ.ಎ. ಮತ್ತು ಎಂ.ಡಿ.ಎಸ್ ಪೌಡರ್ ಮತ್ತು ಮಾತ್ರೆಗಳು ಅಂದರೆ ಕ್ರಮವಾಗಿ 2750 ml, 24 Tube Injection and 53 Tablets ಅನ್ನು ವಶಪಡಿಸಿಕೊಳ್ಳಲಾಗಿದೆ. Yaba, Restyl, Anxit, Nitrosun Tablets, Methaqualone and Other drugs, LSD Paper ಗೆ ಸಂಬಂಧಪಟ್ಟಂತೆ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಮತ್ತು ಯಾವುದೇ ಪ್ರಮಾಣದ ಮಾದಕವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. 2016ನೇ ಸಾಲಿನಲ್ಲಿ 308 ಜನರನ್ನು ವಶಕ್ಕೆ ಪಡೆದುಕೊಂಡು 127 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 2017ನೇ ಸಾಲಿನಲ್ಲಿ 641 ಜನರನ್ನು ವಶಕ್ಕೆ ಪಡೆದುಕೊಂಡು 357 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 2018ನೇ ಸಾಲಿನಲ್ಲಿ 498 ಜನರನ್ನು ವಶಕ್ಕೆ ಪಡೆದುಕೊಂಡು 286 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 2019ನೇ ಸಾಲಿನಲ್ಲಿ 1260 ಜನರನ್ನು ವಶಕ್ಕೆ ಪಡೆದುಕೊಂಡು 768 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. 2020ನೇ ಸಾಲಿನಲ್ಲಿ 2587 ಜನರನ್ನು ವಶಕ್ಕೆ ಪಡೆದುಕೊಂಡು 2014 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಅವರಿಂದ ವಶಪಡಿಸಿಕೊಂಡಿರುವ ಡ್ರಗ್ಸ್‌ನ ಮೌಲ್ಯ ಒಟ್ಟು 7,07,51,800 ರೂಪಾಯಿಗಳಾಗಿವೆ. ಹೀಗೆ ಮೂರು ವರ್ಷಗಳ ಮಾಹಿತಿಯನ್ನು ನಾನು ನೀಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡಃ–** ಸನ್ಮಾನ್ಯ ಸಭಾಪತಿಯವರೇ, ಸಪ್ಲಿಮೆಂಟರಿ ಉತ್ತರವನ್ನು ಅವರು ಮಾತ್ರ ಇಟ್ಟುಕೊಂಡು ಓದುತ್ತಿದ್ದಾರೆ. ನಮ್ಮೆಲ್ಲರಿಗೂ ಹಂಚಿಕೆ ಮಾಡಬೇಕಾಗಿತ್ತು.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸದನಕ್ಕೆ ಒದಗಿಸಿರುವ ಲಿಖಿತರೂಪದ ಉತ್ತರವನ್ನು ಓದಿ ಮುಗಿಸಿ ನಂತರ ಹೆಚ್ಚುವರಿ ಮಾಹಿತಿಯನ್ನು ನೀಡುತ್ತೇನೆಂದು ಹೇಳಿ ಹೆಚ್ಚುವರಿ ಮಾಹಿತಿಯನ್ನು ಸದನಕ್ಕೆ ನೀಡುತ್ತಿದ್ದೇನೆ. ಹೆಚ್ಚುವರಿ ಮಾಹಿತಿಯನ್ನು ಸದನಕ್ಕೆ ಕೊಡುವಂತಹ ಅಧಿಕಾರ ನಮಗಿರುವುದರಿಂದ ನಾನು ಈ ಮಾಹಿತಿಯನ್ನು ಹೇಳುತ್ತಿದ್ದೇನೆ.

**(ಮುಂದು)**

**(743) 21.9.2020 6.50 ಪಿಕೆ:ಆರ್‌ಎನ್**

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)** :– ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು, ವಿದ್ಯಾರ್ಥಿಗಳು–ಯುವ ಸಮೂಹ ಮಾದಕ ವಸ್ತುಗಳ ದುಷ್ಪರಿಣಾಮಕ್ಕೆ ಬಲಿಯಾಗುತ್ತಿದೆ; ಅದನ್ನು ತಪ್ಪಿಸಲು ಕಾಲೇಜುಗಳ ಹತ್ತಿರ ಗಸ್ತು ತಿರುಗುವಂತಹ ವಿಶೇಷ ವಾಹನಗಳನ್ನು ನಿಯೋಜನೆ ಮಾಡಿದ್ದೇವೆ ಎಂದು ಹೇಳಿದ್ದಾರೆ ಮತ್ತು ಕೆಲವು ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ. ನಾವು ಈ ಕುರಿತು ಯಾವುದೇ ಪಕ್ಷ, ಜಾತಿ, ಮತ ಎಲ್ಲವನ್ನೂ ಬಿಟ್ಟು ಯೋಚನೆ ಮಾಡಬೇಕಿದೆ. 2017–18 ರ ಸರ್ವೇಯ ಪ್ರಕಾರ ಬೆಂಗಳೂರಿನಲ್ಲಿ ಶೇಕಡ 3 ರಿಂದ 3.5 ರಷ್ಟು ಮಾದಕ ವಸ್ತುಗಳನ್ನು ಸೇವನೆ ಮಾಡುವ ವ್ಯಸನಿಗಳಿದ್ದಾರೆ ಎನ್ನುವ ಉಲ್ಲೇಖ ಇದೆ. ಹಾಗಾದರೆ, ಇಲ್ಲಿ ಕೊಟ್ಟಂಥ ಅಂಕಿ–ಅಂಶಗಳಿಗೂ ಇದಕ್ಕೂ ಏನು ಸಂಬಂಧ ಇದೆ? ಅಂದರೆ ಇನ್ನೂ ಕೂಡ, ಅತ್ಯಂತ ಹೆಚ್ಚು ಪ್ರಮಾಣದ ಮಾದಕ ವಸ್ತುಗಳನ್ನು ಸೇವನೆ ಮಾಡುವ ಜನರು ನಮ್ಮ ರಾಜ್ಯದಲ್ಲಿದ್ದಾರೆಂದು ಗೊತ್ತಾಗುತ್ತದೆ. ಇವತ್ತಿನ ನಮ್ಮ ಯುವಜನ ಯಾವ ದಿಕ್ಕಿನತ್ತ ಹೋಗುತ್ತಿದೆ ಎಂದು ಯೋಚನೆ ಮಾಡಿದರೆ, ಅಲ್ಕೋಹಾಲ್‌ನಿಂದ ಡ್ರಗ್ಸ್‌ಗೆ ಕನ್‌ವರ್ಟ್ ಆಗುವಂಥಾದ್ದು ಗೊತ್ತಾಗುತ್ತಿದೆ. ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ನಾವು ಟಿವಿ ಯಲ್ಲಿ ನೋಡಿದ ಹಾಗೆ, ಯಾರೋ ಇಬ್ಬರು ವ್ಯಕ್ತಿಗಳು ಡ್ರಗ್ಸ್ ಬಗ್ಗೆ ಮಾತನಾಡಿದ್ದರಿಂದ ಬಾಲಿವುಡ್‌ನಿಂದ ಎಲ್ಲವೂ ಹೊರಗೆ ಬರುವ ಹಾಗೆ ಆಯಿತು. ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದವರೊಬ್ಬರು, ಇದು 15 ದಿನಗಳಷ್ಟೇ ನಿಲ್ಲಬಹುದು, ನಂತರ ಬಿದ್ದು ಹೋಗುತ್ತದೆ ಎಂದು ಹೇಳಿದರು. ಇನ್ನೊಬ್ಬರು ಪ್ರಭಾವಿತರ ಹೆಸರು ಬಂದ ಕೂಡಲೇ, ಇದರಲ್ಲಿ ರಾಜಕೀಯ ನಡೆಯುತ್ತಿದೆ ಎಂದು ಹೇಳುತ್ತಾರೆ. ನಮ್ಮ ರಾಜ್ಯ ಹೈದರಾಬಾದ್ ಆಗಬಾರದು. ಹೈದರಾಬಾದ್‌ನಲ್ಲಿ ಎರಡು ವರ್ಷಗಳ ಹಿಂದೆ ಫಿಲ್ಮ್ ಇಂಡಸ್ಟ್ರಿಯಲ್ಲಿ ಇದೇರೀತಿ ಆಗಿ ಅದರಲ್ಲಿ ದೊಡ್ಡ ದೊಡ್ಡವರ ಹೆಸರು ಬಂದಾಗ ಆ ಕೇಸನ್ನೇ ಮುಚ್ಚಿ ಹಾಕುವಂತಹ ಕೆಲಸವಾಯಿತು. ಇದು ವ್ಯವಸ್ಥಿತವಾಗಿ ಎಲ್ಲಾ ಹೊರಗೆ ಬರಬೇಕಾದರೆ, ಬಿಜೆಪಿ, ಕಾಂಗ್ರೆಸ್ ಅಥವಾ ಜೆಡಿಎಸ್ ಪಕ್ಷದ ಸದಸ್ಯರ ಮಕ್ಕಳಾಗಿರಬಹುದು ಅಥವಾ ಯಾರೇ ಆಗಿರಬಹುದು ಅಂಥವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಕ್ಷಿಸಲು ಒಂದು ತೀವ್ರವಾದ ಕಾನೂನು ತರಬೇಕು, ಅಪರಾಧಿಗಳನ್ನು ಬಂಧಿಸುವಂತಹ ಕೆಲಸ ಆಗಬೇಕು. ನಮ್ಮ ಗೌರವಕ್ಕೆ ಕುಂದಾಗುತ್ತದೆ ಎಂದು ನಮ್ಮ ಮಕ್ಕಳು ಇಂತಹ ಕೆಲಸಗಳನ್ನು ಮಾಡಿದರೆ ನಾವೇ ಅವರನ್ನು ಬಚಾವ್ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಇದು ಸ್ವಾಭಾವಿಕ ಕೂಡ. ಹೈದರಾಬಾದ್‌ನಲ್ಲೂ ಇದೇ ಆಯಿತು. ನಮ್ಮ ಗೌರವಕ್ಕೆ ಕುಂದಾಗುತ್ತದೆ ಎನ್ನುವುದಕ್ಕಿಂತ ನಮ್ಮ ಮಕ್ಕಳ ಭವಿಷ್ಯ ಬಹಳ ಮುಖ್ಯವಾದುದು. "ಉಡ್‌ತಾ ಪಂಜಾಬ್"ನಲ್ಲಿ ಮಾದಕ ವಸ್ತುಗಳು ಬೊಂಡ ಖರ್ಚಾಗುವ ರೀತಿಯಲ್ಲಿ ಖರ್ಚಾಗುವುದನ್ನು ನಾವು ನೋಡಿದ್ದೇವೆ. ಇಲ್ಲಿ ಬಿಡಿ-ಸಿಗರೇಟ್ ಸೇದುವ ಹಾಗೆ ಅಲ್ಲಿ ಅಫೀಮನ್ನು ಸೇದುತ್ತಾರೆ. ಇದು ವ್ಯವಸ್ಥಿತವಾಗಿ ನಡೆಯುತ್ತಿದೆ. ಮೊದಲು, ಪಂಜಾಬಿನಿಂದ ಬಹಳಷ್ಟು ಪ್ರಮಾಣದಲ್ಲಿ ಜನ ದೇಶಕ್ಕಾಗಿ ಹೋರಾಟ ಮಾಡುವುದಕ್ಕೆ ಹೋಗುತ್ತಿದ್ದರು, ಸಾಕಷ್ಟು ಐಎಎಸ್ ಅಧಿಕಾರಿಗಳು ಹೊರ ಬರುತ್ತಿದ್ದರು. ಆದರೆ ಇವತ್ತು ನಾವು ಅಲ್ಲಿ ಆ ಪರಿಸ್ಥಿತಿಯನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಆ ಸಂಖ್ಯೆ ಬಹಳ ಕುಸಿತವಾಗಿದೆ. ಮಾನ್ಯ ಸಭಾಪತಿಯವರೇ, ನಾವು ನಮ್ಮ ಸ್ಟೇಟಸ್ ನೋಡಬಾರದು. ನಮ್ಮ ಗೌರವ ಹಾಳಾಗುತ್ತದೆ ಎಂದು ನೋಡುವ ಬದಲು ಸುಧಾರಣೆಯ ನಿಟ್ಟಿನಲ್ಲಿ ಒತ್ತನ್ನು ಕೊಡಬೇಕು. ಅನೇಕ ಕಾನೂನುಗಳ ಬಗ್ಗೆ ಮಾನ್ಯ ಸಚಿವರು ಉಲ್ಲೇಖ ಮಾಡಿದರು. ನನ್ನದೊಂದು ವಿನಂತಿ ಇದೆ. ಇಂತಹ ಅಪರಾಧಿಗಳು ಹೇಗೆ ಬೇಕಾದರೂ ನುಣುಚಿಕೊಂಡು ಸಾಕ್ಷಿಯನ್ನು ನಾಶ ಮಾಡುವ ತಾಕತ್ತು ಹೊಂದಿದವರಾಗಿರುತ್ತಾರೆ. ಹೈಕೋರ್ಟ್ ರಿಟೈರ್ ಜಡ್ಜ್, ಕ್ರಿಮಿನಲ್ ಲಾಯರ್‌ಗಳ ಸಮಿತಿ ಮಾಡಿ, ವಿಶೇಷ ಕಾನೂನನ್ನು ರೂಪಿಸಿ, ಮಾದಕ ವಸ್ತುಗಳ ಮಾರಾಟಗಾರರು ಮತ್ತು ವ್ಯಸನಿಗಳು ತಪ್ಪಿಸಿಕೊಂಡು ಹೋಗದ ಹಾಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ನಿನ್ನೆ ಟಿವಿಯಲ್ಲಿ, ಡಾರ್ಕ್ ವೆಬ್ ಮೂಲಕ ಆನ್ ಲೈನ್‌ನಲ್ಲಿ ಗಾಂಜವನ್ನು, ಅಫೀಮನ್ನು ತರಿಸಿಕೊಳ್ಳುವಂಥದ್ದನ್ನು ನೋಡಿದೆ. 14 ವರ್ಷದ ಇಂತಹ ಯುವಕರು ಅಪರಾಧಿಗಳೇ; ಅವರನ್ನು ನೋಡಿಕೊಳ್ಳದ ತಂದೆ-ತಾಯಿಗಳು ಅಪರಾಧಿಗಳೇ ಅಥವಾ ಇದಕ್ಕೆ ತಕ್ಕ ಕಾನೂನು ವ್ಯವಸ್ಥೆ ಇಲ್ಲದಿರುವುದು ಅಪರಾಧವೇ ಅಥವಾ ಇಂಥದ್ದನ್ನು ತಡೆಯುವಲ್ಲಿ ವಿಫಲವಾಗುವ ಸರ್ಕಾರಗಳು ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತವೆಯೇ? ಈ ಬಗ್ಗೆ ನಾವು ಇವತ್ತು ಚಿಂತನೆ ಮಾಡಬೇಕಾಗಿದೆ. ಇದು ಮೇಲ್ಮನೆ. ಮೇಲ್ಮನೆಯಲ್ಲಿ ಒಂದು ವಿಶೇಷವಾದ ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಗೆ ಕಾಲಮಿತಿ ಹಾಕಿ 1–2 ತಿಂಗಳಲ್ಲಿ ವರದಿ ಕೊಡುವ ಹಾಗೆ ಆಗಬೇಕು. ಮಾನ್ಯ ಹೊರಟ್ಟಿಯವರು ಆಗಲೇ ಮಾತನಾಡುತ್ತಾ, ಶ್ರೀಮಂತರು ಡ್ರಗ್ಸ್ ತೆಗೆದುಕೊಳ್ಳುತ್ತಾರೆ ಎಂಬ ಮಾತನ್ನು ಹೇಳಿದರು. ಶ್ರೀಮಂತರು ಮಾತ್ರ ತೆಗೆದುಕೊಳ್ಳುವುದಿಲ್ಲ. ನಾನು ಇದರ ಬಗ್ಗೆ ಅಧ್ಯಯನ ಮಾಡಿದ್ದೇನೆ. ಸ್ಲಮ್‌ಗಳಲ್ಲಿ ವೈಟ್‌ನರ್ ಸೇವಿಸುವುದು, ವಾರ್ನಿಶ್‌ಅನ್ನು ಬಟ್ಟೆಯಲ್ಲಿ ಅದ್ದಿ ಅದನ್ನು ಎಳೆದುಕೊಳ್ಳುವುದು, ಇವೆಲ್ಲ ಆಗುತ್ತವೆ. ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯ ಅನೇಕ ಜನ ವ್ಯಸನಿಗಳು ಇದ್ದಾರೆ. ಈ ಕುರಿತು ನಾನು ಮನೋವೈಜ್ಞಾನಿಕರ ಹತ್ತಿರ ಕೂಡ ಮಾತನಾಡಿದ್ದೇನೆ. ಸರ್ಕಾರ ಒಂದು ದೊಡ್ಡ ಹೆಜ್ಜೆಯನ್ನು ಇಡಬೇಕು. ಈಗಿರುವ ಕಾನೂನಿನಲ್ಲಿ ವಾಹನಗಳು ಗಸ್ತು ತಿರುಗುವುದು ಇವೆಲ್ಲವನ್ನೂ ಹೇಳಿದ್ದೀರಿ. ಡ್ರಗ್ಸ್ ದಂಧೆಯಲ್ಲಿ ಒಬ್ಬರ ಹೆಸರು ಬಂದರೆ, ನಾನು ಅಲ್ಪಸಂಖ್ಯಾತ, ನನ್ನನ್ನು ನಾಶ ಮಾಡುವುದಕ್ಕೆ ನೋಡುತ್ತಿದ್ದಾರೆ ಎನ್ನುವ ಮಾತುಗಳು ಬರುತ್ತದೆ. ಒಂದು ಸಲ ಒಳಗೆ ಹೋಗಿ, ತಪ್ಪಿಲ್ಲ ಎಂದಾದರೆ ನಿರಪರಾಧಿಗಳಾಗಿ ಹೊರಗೆ ಬರುತ್ತಾರೆ. ಯಾರಾದರೇನು? ಇಂಥದ್ದನ್ನು ನಮ್ಮ ನಾಯಕರುಗಳು ಡಿಫೆಂಡ್ ಮಾಡಿಕೊಳ್ಳುತ್ತಾರೆ. ಯಾರೂ ಯಾರನ್ನೂ ಡಿಫೆಂಡ್ ಮಾಡದೇ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಕರ್ನಾಟಕದಲ್ಲಿ ಕಾನೂನನ್ನು ರೂಪಿಸಿ ಇದಕ್ಕೆ ಸರಿಯಾದ ಇತಿಶ್ರೀಯನ್ನು ಹಾಡಬೇಕು ಎಂದು, ನಾನು ಒಬ್ಬ ತಾಯಿಯಾಗಿ, ಒಬ್ಬ ಅಜ್ಜಿಯಾಗಿ ನಮ್ಮ ಯುವ ಜನಾಂಗದ ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ನಿಟ್ಟಿನಲ್ಲಿ ನಾವು ಒಂದು ಹೆಜ್ಜೆ ಮುಂದೆ ಇಟ್ಟಿದ್ದೇವೆ. ಈ ಪ್ರಯತ್ನವನ್ನು ಮಾಡಿದ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಈಗೇನು ಕಾನೂನಿನ ಬಗ್ಗೆ ಹೇಳಿದರೋ ಇದರಿಂದ ನಿಜವಾದ ರಿಸಲ್ಟ್ ಬರುವುದಿಲ್ಲ. ಅಧಿಕಾರಿಗಳು ಶಾಮೀಲಾಗಿರುತ್ತಾರೆ. ನಮ್ಮ ಸ್ಕೂಲ್ ಮಕ್ಕಳ ಬ್ಯಾಗ್‌ನಲ್ಲಿ ಅಫೀಮನ್ನು ಸಾಗಿಸುತ್ತಿದ್ದಾರೆ. ಈ ರೀತಿ ಸಾಗಾಣೆ ಮಾಡಿದರೆ ಯಾರು ಹಿಡಿಯುವುದಕ್ಕೆ ಆಗುತ್ತದೆ? ಶಂಖದಿಂದ ಬಿದ್ದರೆ ತೀರ್ಥ. ಇವತ್ತಿನ ಮಕ್ಕಳು ತಾಯಂದಿರು ಹೇಳುವುದನ್ನು ಕೇಳುವುದಿಲ್ಲ. ರಾತ್ರಿ ಹೊತ್ತು ಮೊಬೈಲ್ ಇಟ್ಟುಕೊಂಡು ನೋಡುತ್ತಾರೆ. 24 ಗಂಟೆಯೂ ಆನ್‌ಲೈನ್‌ನಲ್ಲಿ ಸಿಗುತ್ತದೆ. ನಾನು ಸಾಕಷ್ಟು ಮಾದಕ ವ್ಯಸನಿ ಮಕ್ಕಳುಗಳ ಜೊತೆ ಮಾತನಾಡಿದ್ದೇನೆ. ಡ್ರಗ್ಸ್ ವಿಚಾರವನ್ನು ಯಾರು ಹೊರಗೆ ತಂದರೋ ಅವರಿಗೆ ಸದನದ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ. ಮೊದಲು, ಆ ವ್ಯಕ್ತಿಗೆ ತಲೆಯ ಮೇಲೆ ಕೂದಲು ಇಲ್ಲ, ತಲೆ ಒಳಗೆ ಮೆದುಳು ಇಲ್ಲ ಎಂಬ ಮಾತನ್ನು ಹೇಳಿದರು. ನಾನು ಹೆಸರನ್ನು ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅವರು ಮಾಡಿದ ಒಳ್ಳೆಯ ಕೆಲಸದಿಂದ ಅನೇಕ ಜನರ ಹೆಸರು ಹೊರಗೆ ಬರುತ್ತಿದೆ. ಇವರು ಮುಂದಿನ ದಿನಗಳಲ್ಲಿ ಒಳ್ಳೆಯ ಪ್ರಜೆಗಳಾಗಿ ಬೆಳೆಯಬೇಕು. ಸರ್ಕಾರ ಒಂದು ಒಳ್ಳೆಯ ಪುನರ್ವಸತಿ ಕೇಂದ್ರ ನಿರ್ಮಿಸಬೇಕು. ಏಕೆಂದರೆ, ಡ್ರಗ್ಸ್ ವಿಚಾರ ಬಂದಾಗ, ತಮ್ಮ ಮಕ್ಕಳು ಡ್ರಗ್ಸ್ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ತಂದೆ-ತಾಯಿಯರೇ ಹೇಳುವುದಿಲ್ಲ. ಈ ಕುರಿತು ತಮ್ಮ ಹೆಸರನ್ನು ಹೇಳದೇ ನನ್ನ ಜೊತೆ ದೂರವಾಣಿಯಲ್ಲಿ ಮಾತನಾಡಿ, ಈ ದಿಸೆಯಲ್ಲಿ ಸರಿಯಾದ ಕಾನೂನು ತನ್ನಿ, ನಮ್ಮ ಮಕ್ಕಳನ್ನು ರಕ್ಷಣೆ ಮಾಡಿ ಎಂದು ಕೇಳಿಕೊಳ್ಳುತ್ತಾರೆ. ಈ ವಿಚಾರ ನನ್ನಲ್ಲಿ ಮಾತ್ರ ಅಲ್ಲ ಇಲ್ಲಿ ಕುಳಿತಿರುವ ಎಲ್ಲಾ ಮಾನ್ಯ ಸದಸ್ಯರ ಮನಸ್ಸುಗಳಲ್ಲೂ ಇದೆ ಎಂದು ನಾನು ಭಾವಿಸುತ್ತೇನೆ. ಇಂಥದ್ದಕ್ಕೆ ಸರಿಯಾಗಿ ಇತಿಶ್ರೀ ಹಾಕುವ ನಿಟ್ಟಿನಲ್ಲಿ ಸರ್ಕಾರ ಕಾನೂನಿನ ರಚನೆ ಮಾಡಬೇಕು. ಇಂತಹ

ತಪ್ಪು ಮಾಡಿದರೆ ಇಂತಹ ಶಿಕ್ಷೆ ಸಿಗುತ್ತದೆ ಎನ್ನುವ ಭಯಕ್ಕಾದರೂ ಹೆದರಿ ಸುಮ್ಮನಿರಬೇಕಾಗುತ್ತದೆ. ಆದರೆ ಈಗಿರುವ ಕಾನೂನಿನಿಂದ ಇದನ್ನು ಖಂಡಿತವಾಗಿಯೂ ತಡೆಯುವುದಕ್ಕೆ ಸಾಧ್ಯವಿಲ್ಲ. 2017–18ನೇ ಸಾಲಿನ ಅಂಕಿ–ಅಂಶಗಳು ಏನಿವೆ, ಇವತ್ತು ಈ ಸಂಖ್ಯೆ 3.35 ಪರ್ಸೆಂಟ್‌ಗಿಂತ ಎರಡರಷ್ಟಾಗಿರಬಹುದು. ಮಾನ್ಯ ಗೃಹ ಸಚಿವರು ಸದನಕ್ಕೆ ಇವತ್ತು ಬಂದಿಲ್ಲ. ಆದರೆ ನಮ್ಮ ಕಾನೂನು ಸಚಿವರು ಇದನ್ನು ತಡೆಯವ ನಿಟ್ಟಿನಲ್ಲಿ ತಕ್ಕ ಕಾನೂನನ್ನು ತರಬೇಕು. ಮಾನ್ಯ ಕಾನೂನು ಸಚಿವರ ಅವಧಿಯಲ್ಲಿ, ಇಂತಹ ಅಪರಾಧಗಳು ಆಗದ ರೀತಿಯಲ್ಲಿ ಒಂದು ಛಾಪನ್ನು ಮೂಡಿಸಿ ನ್ಯಾಯ ಒದಗಿಸುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಲಹರ್‌ಸಿಂಗ್ ಸಿರೋಯಾ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವಿಚಾರ ಕುರಿತು ನಾನು ಸತತವಾಗಿ 7–8 ವರ್ಷಗಳಿಂದ ಸದನದಲ್ಲಿ ಮತ್ತು ಹೊರಗೆ ಚರ್ಚೆ ಮಾಡುತ್ತಲೇ ಇದ್ದೇನೆ. ಪ್ರತಿಷ್ಠಿತ ಶಾಲೆಗಳಲ್ಲಿ ಸುಮಾರು 11–12 ವರ್ಷ ವಯಸ್ಸಿನ ಮಕ್ಕಳು ಮಾದಕ ವಸ್ತುಗಳ ವ್ಯಸನಿಗಳಾಗಿದ್ದಾರೆ ಎನ್ನುವ ಬಗ್ಗೆ 2017ರಲ್ಲೇ ಪತ್ರಿಕೆಗಳಲ್ಲಿ ವರದಿಯಾಗಿತ್ತು ಮತ್ತು ಇದರ ಬಗ್ಗೆ ಚರ್ಚೆ ಕೂಡ ಆಗಿತ್ತು. ನಂತರ ಇದರ ಬಗ್ಗೆ ಏನು ಕ್ರಮ ಕೈಗೊಂಡರೋ ಗೊತ್ತಿಲ್ಲ.

**(ಮುಂದು . . .)**

**(744)21–09–2020 7.00 ಡಿಎಸ್–ಆರ್‌ಎನ್**

**ಶ್ರೀ ಲಹರ್ ಸಿಂಗ್ ಸಿರೋಯಾ(ಮುಂದು):–**

ಮಾನ್ಯ ಪರಮೇಶ್ವರ್‌ರವರು 2017 ರಲ್ಲಿ ರಾಜ್ಯವನ್ನು 'ಉಡ್ತಾ ಪಂಜಾಬ್' ಆಗುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರು. ಎಲ್ಲಾ ಪತ್ರಿಕೆಗಳಲ್ಲಿ ಅವರ ಫೋಟೋ ಹಾಕಿ ಪತ್ರಿಕೆಗಳಲ್ಲಿ ಬಂದಿತ್ತು. ಇದರ ಬಗ್ಗೆ ಸರ್ಕಾರ ಎಷ್ಟು ಗಂಭೀರವಾಗಿ ಪರಿಗಣಿಸಿತ್ತು ಎಂದರೆ ನಾನು ಟೀಕೆ–ಟಿಪ್ಪಣಿಯನ್ನು ಮಾಡುವುದಿಲ್ಲ. ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದ ಹಾಗೆ, ನಾವು ಪಕ್ಷಾತೀತವಾಗಿ ಮಾತನಾಡಬೇಕು, ನಾನು ಯಾರನ್ನೂ ಟೀಕೆ ಮಾಡುವುದಿಲ್ಲ. ನಾನು ಕಳೆದ ಅಧಿವೇಶನದಲ್ಲಿ ರಸ್ತೆಯ ಬಗ್ಗೆ ಮಾತನಾಡಿದ್ದೇನೆ. ರಸ್ತೆಯ ಬಗ್ಗೆ ಮಾತನಾಡುವಾಗ ನಾನು ಟೀಕೆ ಮಾಡಿದ್ದೇನೆ. ಏಕೆಂದರೆ, ನಾನು ವ್ಯವಸ್ಥೆಯ ಬಗ್ಗೆ ಮಾತನಾಡಿದ್ದೇನೆ, ಆ ಪಕ್ಷ, ಈ ಪಕ್ಷ ಎಂದು ಟೀಕೆ ಮಾಡಿಲ್ಲ. ನಾನು ಇದರ ಬಗ್ಗೆ ಮಾತನಾಡುವಾಗ ಮಾನ್ಯ ಸುರೇಶ್ ಕುಮಾರ್‌ರವರು ಇದ್ದರು. ಅವರ ಬಗ್ಗೆ ನನಗೆ ಹೆಮ್ಮೆ ಇದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರು ಪ್ರಾಮಾಣಿಕ ವ್ಯಕ್ತಿಯಾಗಿದ್ದಾರೆ. ಅವರು ನನ್ನನ್ನು ಕರೆದು what is this Lehar Singh? ಎಂದು ಕೇಳಿದರು. Next day, there was headlines in the newspaper that Lehar Singh has made a self-goal. ಜನಪರ ಮತ್ತು ವ್ಯವಸ್ಥೆ ಬಗ್ಗೆ ಮಾತನಾಡುವುದು self-goal ಹೇಗೆ ಆಗುತ್ತದೆಂದು ನನಗೆ ಅದು ಅರ್ಥವಾಗಲಿಲ್ಲ. But that was highlighted like that. I am not speaking against the system of any parties. ನಮ್ಮ ಸರ್ಕಾರ ಸಮ್ಮಿಶ್ರ ಸರ್ಕಾರ ಇದ್ದ ಹಾಗೆ, ನಮ್ಮ ಸರ್ಕಾರದಲ್ಲಿ ಕಾಂಗ್ರೆಸ್‌ನವರು, ಜೆಡಿಎಸ್‌ನವರು, ನಮ್ಮವರು ಇದ್ದಾರೆ. ನಾವು ವ್ಯವಸ್ಥೆ rectify ಮಾಡದಿದ್ದರೆ, ಇಲ್ಲಿ ಅವರನ್ನು ಬಚಾವ್ ಮಾಡಬೇಕು, ಇವರನ್ನು ಬಚಾವ್ ಮಾಡಬೇಕೆಂದೇನಿಲ್ಲ. ಮಾನ್ಯ ಪರಮೇಶ್ವರ್‌ರವರ ಬಗ್ಗೆ ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ಮಾನ್ಯ ಪರಮೇಶ್ವರ್‌ರವರ ಮನೆಗೆ ಹೋಗಿ ಬಾಂಗ್ಲಾ ದೇಶದವರು ಡ್ರಗ್ಸ್ ವ್ಯವಹಾರ ಮಾಡುತ್ತಿದ್ದಾರೆಂದು ವಿವರಗಳನ್ನು ಕೊಟ್ಟು ಬಂದಿದ್ದೆ. ಮಾನ್ಯ ಕುಮಾರಸ್ವಾಮಿಯವರು 2015ರಲ್ಲಿ ಬಾಂಗ್ಲಾ ದೇಶದಲ್ಲಿ ಡ್ರಗ್ಸ್ ವ್ಯವಹಾರ ಮಾಡುತ್ತಿದ್ದಾರೆ ಎಂದು ಪತ್ರ ಕೂಡ ಕೊಟ್ಟಿದ್ದೆ. ಆದರೆ ಇದರ ಬಗ್ಗೆ ಯಾರು ಗಂಭೀರವಾಗಿ ಪರಿಗಣಿಸಲಿಲ್ಲ. ಶಾಲಾ-ಕಾಲೇಜಿನ ಮಕ್ಕಳಿಗೆ ಇದನ್ನು ಮಾರಾಟ ಮಾಡುತ್ತಿದ್ದಾರೆಂದು ಎಲ್ಲರೂ ಹೇಳುತ್ತಿದ್ದಾರೆ. ಹೊರ ರಾಜ್ಯದಿಂದ ವಿದ್ಯಾರ್ಥಿಗಳು ಬಂದು ಇಂಜಿನಿಯರಿಂಗ್ ಕಾಲೇಜು, ಬೇರೆ-ಬೇರೆ ಕಾಲೇಜುಗಳಲ್ಲಿ ಇದ್ದಾರೆ. First, they are consuming drugs, after that they themselves involved in peddling the drugs, thereafter they become kingpins. ಅದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ನಾನು ಹೇಳಬೇಕಾಗಿಲ್ಲ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟುಬಿಡುತ್ತೇವೆ. ನಾನು ಎಲ್ಲರಿಗೂ ಮನವಿ ಮಾಡಿಕೊಳ್ಳುವುದೇನೆಂದರೆ, ನಾವು ಯಾರನ್ನು ಇದರಲ್ಲಿ ಬಚಾವ್ ಮಾಡಬಾರದು. ಶ್ರೀಮಂತರ ಮಕ್ಕಳಾಗಲೀ, politicians ಆಗಲೀ, bureaucrats ಆಗಲೀ, officers ಮಕ್ಕಳಾಗಲೀ, ಅವರ ಮಕ್ಕಳೇ ಇದರಲ್ಲಿ ಜಾಸ್ತಿ ಇರುತ್ತಿದ್ದಾರೆ. ಯಾರ್‍ಯಾರು ಈ ಅಡ್ಡದಲ್ಲಿದ್ದಾರೆ, ಎಲ್ಲೆಲ್ಲಿದ್ದಾರೆ ಅದಕ್ಕೆಲ್ಲಾ proof ಬೇಕೆಂದು ಕೇಳುತ್ತಾರೆ. ಅದೆಲ್ಲಾ ಈಗ ಮಾಧ್ಯಮಗಳಲ್ಲಿ ಬರುತ್ತಿದೆ. ಇದರ ಬಗ್ಗೆ ಆಳವಾಗಿ ನೋಡಿದರೆ ಪೋಲೀಸ್ ಇಲಾಖೆ ಮೇಲೆ ಯಾವುದೇ ರೀತಿಯ ಒತ್ತಡ ಹಾಕಬಾರದು. ಈಗಾಗಲೇ ನಮಗೆ ತಿಳಿದಿದೆ, ಕೆಲವು ಕಡೆ ಒತ್ತಡ ಬರುತ್ತಿರುವುದು ಕೇಳಿ ಬರುತ್ತಿದೆ. ಸರ್ಕಾರವು ಪೋಲೀಸ್ ಇಲಾಖೆ ಮೇಲೆ ಒತ್ತಡ ಬರುವುದನ್ನು ತಡೆಗಟ್ಟ ಬೇಕಿದೆ. We came to know that some IPS

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Officers also involved in that. ಅವರು ಹಫ್ತಾ ವಸೂಲು ಮಾಡುತ್ತಿರುವುದು ತಿಳಿದು ಬಂದಿದೆ. Viren Khanna is a kingpin of drug. ಬೆಂಗಳೂರಿನ ಸುತ್ತಮುತ್ತ ಪಾರ್ಟಿಗಳನ್ನು ಮಾಡುತ್ತಿದ್ದಾರೆ. ಈ ಪಾರ್ಟಿಗಳಲ್ಲಿ 25 ಪರ್ಸೆಂಟ್ ಕಮಿಷನ್ ಕೂಡ ಅವರಿಗೆ ಸಿಗುತ್ತದೆ. ಪೊಲೀಸ್ ಸ್ಟೇಷನ್‌ಗೆ ಹಫ್ತಾ ಕೊಟ್ಟು ಸರಿ ಮಾಡುತ್ತಿದ್ದರು. ಅದರ ಬಗ್ಗೆ ತನಿಖೆ ಮಾಡಬೇಕು. ತನಿಖೆಯನ್ನು ಯಾರು ಮಾಡುತ್ತಾರೆ? They are protecting their officers. ಜಾತಿ ಆಧಾರದ ಮೇಲೆ, ನೆಂಟರು ಆಧಾರದ ಮೇಲೆ ಪೊಲೀಸ್‌ರಿಂದ ಬಚಾವ್ ಮಾಡುತ್ತೇವೆ. ಹಲವಾರು ಕಡೆಗಳಲ್ಲಿ ಅವರು zone ಗಳನ್ನು ಮಾಡಿಕೊಂಡಿದ್ದಾರೆ. ಉದಾಹರಣೆಗೆ U.B. City ಅಂಥಹ ಪ್ರಮುಖ ಸ್ಥಳಗಳ ಅಕ್ಕಪಕ್ಕದಲ್ಲಿ zone ಮಾಡಿಕೊಂಡಿರುತ್ತಾರೆ. ಅಲ್ಲೆಲ್ಲಾ ಪ್ರಭಾವಿ ವ್ಯಕ್ತಿಗಳ partnership ಇದ್ದೆ ಇರುತ್ತದೆ. ಅದು ತನಿಖೆಯಾಗಬೇಕು. ಮಾನ್ಯ ಕುಮಾರಸ್ವಾಮಿಯವರು ಮೊನ್ನೆ ಸರಿಯಾಗಿ ಹೇಳಿದ್ದಾರೆ. ಯಾರ್ಯಾರು ಆ ರೀತಿ ನಡೆಸುತ್ತಾರೆ, ಇನ್ವೆಸ್ಟ್‌ಮೆಂಟ್ ಇದೆ ಎಂಬುದು ತನಿಖೆಯಾಗಬೇಕು. ಉಡ್ತಾ ಪಂಜಾಬ್‌ನಂತೆ ಆಗುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ಈಗಾಗಲೇ ಮೂರು ವರ್ಷಗಳಾಗಿವೆ, ಆದರೂ ಏನು ಆಗಿಲ್ಲ. Now it has become ten times more. ನಾನು ಎಲ್ಲರ ಗಮನಕ್ಕೆ ತರುವುದೇನೆಂದರೆ, ನಿನ್ನೆಯ 'THE ECONOMIC TIMES' ಪತ್ರಿಕೆಯಲ್ಲಿ ಬಹಳ ದೊಡ್ಡದಾದ ಸುದ್ದಿ ಇತ್ತು. I want to read some paragraphs; *"Pakistan's involvement in State-terrorism and sponsorship of international* <u>*Jihadism*</u> *are well-known and documented. Moreover, there are increasingly numerous reports regarding Islamabad's engagement in a phenomenon described as narco-terrorism,"...* ಕಾನೂನು ಇಲಾಖೆಯ ಮಂತ್ರಿಗಳ ಮೇಲೆ ನನಗೆ ನಂಬಿಕೆ ಇದೆ. He will take stern action. This is narco-terrorism. If we go deeper in that, then only we can catch-hold of culprits who are all involved in this mafia and who are all behind this. ಇದೇ ದಂಧೆಯಿಂದ ಸಂಪಾದನೆ ಮಾಡಿ terrorism ನಡೆಸುತ್ತಾರೆ. ಪತ್ರಿಕೆಯವರು ಇದನ್ನು report ಮಾಡಿದ್ದಾರೆ; *NEW DELHI: Narco-terrorism is one of today's buzzwords in both foreign and domestic policy in South Asia, especially in the context of the*

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*contentious India-Pakistan relations, according to Siegfried O.Wolf, a Germany based specialist on South Asia.* ನಾನು ಟೈಮ್ಸ್ ಆಫ್ ಇಂಡಿಯಾಗೆ ಕಾಗದವನ್ನು ಕೂಡ ಬರೆದಿದ್ದೇನೆ. ಬೆಂಗಳೂರು ನಗರದಲ್ಲಿರುವ ಎಲ್ಲಾ ಶಾಸಕರುಗಳನ್ನು ಸೇರಿಸಿ ಸಭೆ ನಡೆಸಿ, ಅವರಿಗೆ ಜವಾಬ್ದಾರಿಯನ್ನು ವಹಿಸಬೇಕು. ಅವರವರ ಏರಿಯಾಗಳಲ್ಲಿ ಪೊಲೀಸ್ ಅಧಿಕಾರಿಗಳು ಇದ್ದೇ ಇರುತ್ತಾರೆ, ಆ ಏರಿಯಾಗಳಲ್ಲಿ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಬೇಕು. ಎಲ್ಲಾ ಪಕ್ಷದ ಶಾಸಕರುಗಳಿಗೂ ಈ ಬಗ್ಗೆ ನಾನು ಮನವಿ ಮಾಡುತ್ತೇನೆ. They can control this activity in their area. ಅವರು ಕಡಿವಾಣ ಹಾಕಿದರೆ, ಯಾವುದೇ ಕಾರಣಕ್ಕೂ ಮುಂದೆ ಪ್ರಶ್ನೆ ಬರುವುದಿಲ್ಲ. All become strict across the party line. ಡ್ರಗ್ಸ್ ವ್ಯಾಪಾರವಂತೂ ಆಗಲೇಬಾರದು. ಇದರಿಂದ ಮುಂದಿನ ಜನರೇಶನ್ ಹಾಳಾಗುತ್ತದೆ. Lot of things are coming in the media about how the students are involved in this. They were targeting the students belonged to reputed and highly influential families. So that they can be protected themselves behind the scenes. ನನ್ನ ಮನವಿ ಏನೆಂದರೆ, ಇದಕ್ಕೆ Police has to take stern action. Our police are doing particularly good job and I appreciate their efforts. We must be understanding that they must be under tremendous pressure. Because influential people are involved in this and they put pressure on them. It is my humble request to all that do not protect anybody who are involved in this mafia and do not influence or put pressure on drug related cases. Police should be given free hand. Moreover, we have not seen any conviction to culprits. We must recommend for enhance the rate of punishment. Our Prosecution system is good. ಈಗ ಅಪರಾಧಿಗಳಿಗೆ ಜಾಮೀನು ಸಿಗದ ರೀತ್ಯಾ ಮತ್ತು ಶಿಕ್ಷೆಗೊಳಪಡಿಸುವಲ್ಲಿ ಸೂಕ್ತ ವಾದ ಮಂಡನೆ ಮಾಡಬೇಕೆಂದು ಒತ್ತಾಯಿಸುತ್ತೇನೆ. ಅವರು ಜಾಮೀನಿನ ಮೇಲೆ ಬಿಡುಗಡೆ ಹೊಂದಿದರೆ ಮತ್ತದೇ ಕೃತ್ಯವನ್ನು ಮುಂದುವರೆಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. We need to support the

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Government to take stern action. We must support Police and Legal system. Then only we can achieve something. Otherwise, it will be difficult. We have seen in Sadashiva Nagar a 14-year boy, he got ganja from the foreign. What will happen? All children are mingling with each other. What will happen to our children and future generation? One of my journalist friend wanted to send his son to high profile school, ಇದೆಲ್ಲಾ ನೋಡಿದರೆ ಯಾವ ಶಾಲೆಗೆ ಸೇರಿಸಬೇಕೆನ್ನುವ ಸಮಸ್ಯೆಯಾಗಿದೆ ಎಂದು ಹೇಳಿದರು. Not only rich people, poor people also being involved in this and they are becoming the peddlers. Because they do not have money. ಇದರ ಬಗ್ಗೆ ನಾವು ಸೂಕ್ತವಾಗಿ ಚರ್ಚೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಇದರಲ್ಲಿ ರಾಜಕೀಯ ಒತ್ತಡ ತರಬಾರದು. My suggestion is that all party MLAs/MLCs of the Bengaluru City meeting should be called specially for this purpose. Police must be given full powers; efficient and honest Police Officers should put on that zone. ಇದರಲ್ಲಿ ಸಂತೋಷದ ಸುದ್ದಿ ಏನೆಂದರೆ, present setup is doing particularly good job. But I do not know how long they can do their job. In between something happens. ಎರಡು ದಿನದಲ್ಲಿ, ಮೂರು ದಿನದಲ್ಲಿ ಪ್ರಕರಣ ಮುಚ್ಚಿ ಹೋಗುತ್ತದೆ. ಆರೋಪಿಗಳಿಗೆ ಜಾಮೀನು ಸಿಗುತ್ತದೆ, ಅವರು ಹೊರಗಡೆ ಬರುತ್ತಾರೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ನಾನು ಮಾನ್ಯ ಕಾನೂನು ಮಂತ್ರಿಗಳಿಗೆ ಮನವಿ ಮಾಡುತ್ತೇನೆ, efficient Law Minister, he knows the law very well and he is the honest person to the core. He put the legal machinery, and nobody escape from the clutches of the law. I request everybody to support the system, support the Police and support the Government to eradicate this mafia. Thank you, Sir.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(745) 07.10 21.09.2020 ಎಸ್‌ವಿ-ವಿಕೆ**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇಂದು ಈ ಡ್ರಗ್ ಮಾಫಿಯಾದಿಂದ ಯುವ ಪೀಳಿಗೆಯು ಸಾಕಷ್ಟು ಹಾನಿಗೆ ಒಳಗಾಗುತ್ತಿದೆ. ಇಡೀ ಪ್ರಪಂಚದಲ್ಲಿಯೇ ನಮ್ಮ ದೇಶವು ಉತ್ತಮವಾದ ಮಾನವ ಸಂಪನ್ಮೂಲವನ್ನು ಹೊಂದಿರುತ್ತದೆ. ಇದು ನಮ್ಮ ಮಕ್ಕಳಲ್ಲಿ ಬೆಳವಣಿಗೆಯಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂತಹ ಮಾನವ ಸಂಪನ್ಮೂಲವನ್ನು ನಾಶ ಪಡಿಸಲು ಯಾವುದೇ ಯುದ್ಧವನ್ನು ಮಾಡಬೇಕೆಂದಿಲ್ಲ. ಒಂದು ಪೀಳಿಗೆಯನ್ನು ಮಾದಕ ವಸ್ತು ವ್ಯಸನಿಗಳನ್ನಾಗಿ ಮಾಡಿಬಿಟ್ಟರೆ ನಮ್ಮ ದೇಶದ ಮಾನವ ಸಂಪನ್ಮೂಲವೇ ಸಂಪೂರ್ಣವಾಗಿ ನಾಶವಾಗಿ ಬಿಡುತ್ತದೆ. ಇಂದು ಐದಾರು ವರ್ಷ ವಯಸ್ಸಿನ ಚಿಕ್ಕ ಮಕ್ಕಳಿಗೆ ಚಾಕೊಲೇಟ್‌ಗಳೊಂದಿಗೆ ಮಾದಕವಸ್ತುಗಳನ್ನು ನೀಡಲಾಗುತ್ತಿದೆ. ಐದಾರು ವರ್ಷ ವಯಸ್ಸಿನ ಮಕ್ಕಳಲ್ಲಿ ಆ ಒಂದು ಅಭ್ಯಾಸ ಬಂದಿತೆಂದರೆ ಮುಂದೆ ಅವನು ಹದಿನೈದು-ಹದಿನಾರರ ವಯಸ್ಸಿನವನಾಗುವ ವೇಳೆಗೆ ಮಾದಕ ವಸ್ತು ವ್ಯಸನಿಯಾಗುತ್ತಾನೆ. He will be addicted and accustomed to it. ಸಂಪೂರ್ಣವಾಗಿ ಅವನ ಮೆದುಳು ಆ ಮಾದಕವಸ್ತುವಿನ ಜೊತೆಯಲ್ಲಿಯೇ ಇರುತ್ತದೆ. This is very important. ಕೇವಲ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ವಾಹನಗಳ ಮುಖಾಂತರ ಮಾದಕ ವಸ್ತುಗಳು ಸರಬರಾಜಾಗುತ್ತಿದೆ. ಕಾನೂನಿನಲ್ಲಿ Drug Law ಎಂದು ಮಾಡುವುದಾದರೆ ಯಾವ ವಾಹನಗಳಲ್ಲಿ ಮಾದಕ ವಸ್ತುಗಳನ್ನು ತೆಗೆದುಕೊಂಡು ಹೋಗಲಾಗುವುದೋ ಅಂತಹ ವಾಹನಗಳನ್ನು ಜಪ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಗಾಂಜಾ ಅಥವಾ ಇನ್ನಾವುದೇ ಮಾದಕ ವಸ್ತುವನ್ನು ಕೃಷಿ ಭೂಮಿಯಲ್ಲಿ ಬೆಳೆದರೆ ಆ ಭೂಮಿಯನ್ನು ಜಪ್ತಿ ಮಾಡುವಂತಹ ಕಾನೂನಾಗಿರಬೇಕು. ಇಂತಹ ಕೆಲಸಗಳನ್ನು ಮಾಡಿದಾಗ ಒಂದು strong message ಹೋಗುತ್ತದೆ. Enforcement ತರಬಹುದು. ಆದರೆ ಈಗ ಹಳೆಯ ಪೊಲೀಸ್ ಕಾರ್ಯವಿಧಿಯಲ್ಲಿರುವ provisions ಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಇದರ ಜೊತೆಗೆ Intelligence ಮೇಲೆಯೂ focus ಮಾಡಬೇಕು. Intelligence ಮುಖಾಂತರ ಸಾಕಷ್ಟು ಮಾಹಿತಿಯನ್ನು ಕಲೆಹಾಕುವ ಕೆಲಸವನ್ನು ಮಾಡಬೇಕು.

ನಮ್ಮ ಮಕ್ಕಳು ಬುದ್ಧಿವಂತರಾದರೇ ದೇಶದ ಬುದ್ಧಿವಂತಿಕೆಯೇ ಹೆಚ್ಚಾದಂತೆ. ದೇಶದ ಬುದ್ಧಿವಂತಿಕೆಯನ್ನು ಕಳೆಯುವ ರೀತಿಯಲ್ಲಿ ಇದನ್ನು ಮಾಡಲಾಗುತ್ತಿದೆ. ಹೊರದೇಶದವರು ಯಾರು

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆಯೋ ನಮಗೆ ಗೊತ್ತಿಲ್ಲ. ಆದರೆ ನಮ್ಮ ದೇಶದವರು ಇದನ್ನು ಬಹಳ ಹಗುರವಾಗಿ ಪರಿಗಣಿಸುತ್ತಿದ್ದಾರೆ. ಏಕೆಂದರೆ ನಾವು corruption ಗೆ yield ಆಗಿದ್ದೇವೆ. ಇದರ ಮೂಲ ಎಲ್ಲಿದೆ? ಯಾವ ದೇಶದಿಂದ ಬರುತ್ತದೆ? ಯಾವ ವಿಮಾನ ನಿಲ್ದಾಣಕ್ಕೆ ಬರುತ್ತದೆ? ಯಾವ ರೈಲಿನ ಮೂಲಕ ಬರುತ್ತದೆ? ಎಲ್ಲವೂ ಇಲಾಖೆಗೆ ತಿಳಿದಿದೆ. But nobody wants to take action against it. ಆದ್ದರಿಂದ ಇಡೀ ದೇಶದಲ್ಲಿ ಇದು ಒಂದು ಬೃಹತ್ ಜಾಲವಾಗಿದೆ. ಸರ್ಕಾರ ನಮ್ಮ ರಾಜ್ಯದಲ್ಲಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬಹಳ ದಿಟ್ಟತನದಿಂದ ಮುಂದಾಗಿದೆ. ಇದಕ್ಕೆ ಪಕ್ಷಾತೀತವಾಗಿ ನಾವೆಲ್ಲರೂ ಕೈ ಜೋಡಿಸುವಂತಹ ಕೆಲಸವಾಗಬೇಕು. ಇದನ್ನು ಕಡೆಗಣಿಸಬಾರದು. It should be managed, it should be controlled and it should be enforced. ಗೂಂಡಾ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಅದರ ಜೊತೆಗೆ ಗೂಂಡಾ ಕಾಯಿದೆಯನ್ನು ಬಲಗೊಳಿಸಿ ಮಾದಕ ವಸ್ತು ಸಾಗಣೆಯ ವಾಹನವನ್ನು ಜಪ್ತಿ ಮಾಡುವುದು, ಮಾದಕ ವಸ್ತು ಬೆಳೆಯುವ ಪ್ರದೇಶವನ್ನು ಜಪ್ತಿ ಮಾಡುವ ಮೂಲಕ ಮಾದಕ ವಸ್ತುಗಳ ಸೇವನೆಯನ್ನು eradicate ಮಾಡಬಹುದು.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಮತ್ತು ಶ್ರೀ ಲಹರ್‌ಸಿಂಗ್ ಸಿರೋಯಾರವರು ಮಾದಕ ವಸ್ತುಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ಇದರ ಜೊತೆಗೆ ಮಾನ್ಯ ರಮೇಶ್ ಅವರೂ ಮಾತನಾಡಿದ್ದಾರೆ. ಮೂರು ವರ್ಷಗಳ statistics ಅನ್ನು ನೋಡಿದಾಗ identify ಮಾಡಲಾದ ಪ್ರಕರಣಗಳು ಇಷ್ಟಿವೆ. ಪ್ರಸ್ತುತ ಏನು ನಡೆಯುತ್ತಿದೆ ಎಂಬುದನ್ನು ನಾವು ಎರಡು ತಿಂಗಳಿನಿಂದ ಟಿ.ವಿ.ಗಳಲ್ಲಿ ನೋಡುತ್ತಿದ್ದೇವೆ. ಯಾವ ರೀತಿಯಾಗಿ high-end people ಇದನ್ನು ಬಳಸುತ್ತಾರೆ. ಮಾತ್ರೆಗಳ ರೂಪದಲ್ಲಿ, ಚುಚ್ಚುಮದ್ದಿನ ರೂಪದಲ್ಲಿ ಬಳಸಲಾಗುತ್ತದೆ. ಹಳ್ಳಿಗಳಲ್ಲಿ ಗಾಂಜಾ ಮತ್ತು ಅಫೀಮನ್ನು ಬೆಳೆಯುತ್ತಾರೆ. ಅಫೀಮನ್ನು ಜೋದ್‌ಪೇಡಾದಲ್ಲಿ ಇಟ್ಟುಕೊಂಡು ತಿನ್ನುತ್ತಾರೆ. ಇವೆಲ್ಲವೂ addiction ಆಗಿದೆ. ಇಂದು ಯುವಕರು ಇದಕ್ಕೆ ಹೆಚ್ಚು ಬಲಿಯಾಗುತ್ತಿದ್ದಾರೆ. ವಿದ್ಯಾರ್ಥಿಗಳು ಬಲಿಯಾಗುತ್ತಿದ್ದಾರೆ. ಇದನ್ನು ಯಾವ ರೀತಿ ತಡೆಯಬಹುದು. ಸರ್ಕಾರ ಇಂದು 15 to 16 per cent liquor ಗೆ addict ಆಗಿದೆ. ಇಂದು ಸರ್ಕಾರಕ್ಕೆ ರೂ.22,000-23,000 ಕೋಟಿ income ಅನ್ನು liquor ನಿಂದ ಪಡೆಯುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟು ಮಂದಿ liquor ಅನ್ನು ಸೇವನೆ ಮಾಡುತ್ತಾರೆ. ಈ ಮಾದಕ ವಸ್ತುಗಳು liquor ಗಿಂತಲೂ poisonous and dangerous ಆಗಿವೆ. ಇದನ್ನು ವಿದ್ಯಾರ್ಥಿಗಳ ಮಟ್ಟದಲ್ಲಿಯೇ ತಡೆಯುವ ನಿಟ್ಟಿನಲ್ಲಿ ನನ್ನದೊಂದು ಸಲಹೆ ಇದೆ. ವಿದ್ಯಾರ್ಥಿಗಳ ಪಾಲಕರು ಶಾಲೆಯಿಂದ ಬಂದ ನಂತರ ಅವನ attitude ಅನ್ನು ಗಮನಿಸಬೇಕು. ಅವನೇನಾದರೂ ಮಾದಕ ವಸ್ತುಗಳ ಸೇವನೆ ಮಾಡಿದ್ದರೆ, ಚಾಕೊಲೇಟ್ ಸೇವಿಸಿದ್ದರೆ ಯಾವ ರೀತಿ ವರ್ತಿಸುತ್ತಾರೆಂದು ಗಮನಿಸಬೇಕು. 14–15 ವರ್ಷದ ಮಕ್ಕಳಿಗೆ Anti-drug certificate ಪಡೆದುಕೊಳ್ಳುವಂತೆ ಶಾಲೆಗಳು insist ಮಾಡಬೇಕು. ಮಾನ್ಯ ಸಭಾಪತಿಯವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ನಮಗೆ ಸುತ್ತೋಲೆಯನ್ನು ಕಳುಹಿಸಿದ್ದರು. ಫಲಿತಾಂಶ positive ಬಂದು ನಾನು ಹತ್ತು ದಿನಗಳ ಕಾಲ ಆಸ್ಪತ್ರೆಗೆ ದಾಖಲಾಗಿದ್ದೆನು. ನಿನ್ನೆ ಪುನಃ ನಮ್ಮ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿದಾಗ negative ಬಂದಿತು. ಅದರ ಪ್ರಮಾಣಪತ್ರವನ್ನು ತಂದು ಕೊಟ್ಟೆನು. ಆರೋಗ್ಯದ ಬಗ್ಗೆ ಕಾಳಜಿಯಿರುವುದರಿಂದ ನಾವು ಈ ರೀತಿ ಸರ್ಕಾರದ ಆದೇಶಗಳನ್ನು ಪಾಲಿಸುತ್ತೇವೆ. ಅದೇ ರೀತಿಯಾಗಿ ವಿದ್ಯಾರ್ಥಿಗಳಲ್ಲಿಯೂ ಭಯವಿರಬೇಕು. ಇದನ್ನು ಕಾನೂನಿನಲ್ಲಿ ತೆಗೆದುಕೊಂಡು ಬರಬೇಕು. ಯಾವ ರೀತಿಯಾಗಿ Economic Affairs ಮುಂತಾದ case ಗಳನ್ನು trial ಮಾಡುವುದಕ್ಕೆ Special Court ಗಳಿವೆಯೋ, ಅದೇ ರೀತಿಯಲ್ಲಿ ಮಾದಕ ವಸ್ತುಗಳಿಗೂ ವಿಶೇಷ ನ್ಯಾಯಾಲಯವನ್ನು ರಚಿಸಿ timebound ಮಾಡಿ ಎರಡು-ಮೂರು ತಿಂಗಳೊಳಗಾಗಿ dispose ಆಗಿ ಅವರಿಗೆ ಶಿಕ್ಷೆಯಾಗಬೇಕು. ಇದಕ್ಕಾಗಿ Special Track Court ಗಳನ್ನು ಮಾಡಿದರೆ ಈ ಪಿಡುಗನ್ನು ತಡೆಯಬಹುದೆನ್ನಿಸುತ್ತದೆ. ಈ ಮಾದಕ ವಸ್ತುಗಳ ಔಷಧ ರೂಪದಲ್ಲಿಯೂ ಬರುತ್ತಿದ್ದು, Amazon, Flipkart ನಂತಹ ಕಂಪನಿಗಳವರು ಮನೆಬಾಗಿಲಿಗೆ ಸರಬರಾಜು ಮಾಡುತ್ತಾರೆ. ಅದರಲ್ಲಿ ಏನು ಔಷಧವಿದೆಯೆಂಬುದು ಅವರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಪಾಲಕರು ತಮ್ಮ ಮಕ್ಕಳ ಕಡೆಗೆ ಗಮನ ಹರಿಸಿದರೆ ಇದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ತಕ್ಕ ಶಿಕ್ಷೆ ತಕ್ಷಣವೇ ಆಗಬೇಕು ಎಂದರೆ ವಿಶೇಷ ನ್ಯಾಯಾಲಯಗಳಾಗಬೇಕು. ಪೊಲೀಸರು ಅತ್ಯಂತ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ಪೊಲೀಸರು ಎಷ್ಟೆಂದು ಮಾಡುತ್ತಾರೆ? ಪೊಲೀಸರು ಚಾಪೆ ಕೆಳಗೆ ತೂರಿದರೆ ಕಳ್ಳರು ರಂಗೋಲಿಯ ಕೆಳಗೆ ತೂರುತ್ತಾರೆ. ಸೈಬರ್ ಕ್ರೈಂ, ಎ.ಟಿ.ಎಂ. ಕಾರ್ಡ್‌ಗಳ ದುರ್ಬಳಕೆ ಮಾಡಿಕೊಳ್ಳುವುದು ಹೀಗೆ ಹಲವು ವಿಧಗಳಲ್ಲಿ frauds ಗಳು, ಕಳ್ಳತನಗಳು, ಡಕಾಯಿತಿಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಯುತ್ತಿದೆ. ಹೀಗಾಗಿ ನನ್ನ ಸಲಹೆಗಳೇನೆಂದರೆ ವಿದ್ಯಾರ್ಥಿಗಳ ಪಾಲಕರು ರೆಗ್ಯುಲರ್ ಆಗಿ ಮಕ್ಕಳ ಕಡೆಗೆ ಗಮನ ಹರಿಸುವುದು, ಮೂರು ತಿಂಗಳಿಗೊಮ್ಮೆ medical test ಮಾಡಿ Anti-drug certificate ಅನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದು – ಇವುಗಳನ್ನು ಕಾನೂನಿನಲ್ಲಿ ಯಾವ ರೀತಿಯಾಗಿ ತರಬಹುದೆಂಬುದರ ಕುರಿತು ಸರ್ಕಾರ ಚಿಂತನೆ ಮಾಡಬೇಕು ಎಂದು ಹೇಳಿ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ಶ್ರೀಮತಿ ಭಾರತಿ ಶೆಟ್ಟಿಯವರು ಮತ್ತು ಶ್ರೀ ಲಹರ್‌ಸಿಂಗ್ ಸಿರೋಯಾ ಅವರು ಮಾದಕ ವಸ್ತುಗಳ ವಿಷಯವನ್ನು ನಿಯಮ 72ರ ಅಡಿಯಲ್ಲಿ ಚರ್ಚೆಗೆ ತಂದಿರುವುದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗಾಗಲೇ ಹಿರಿಯ ಸದಸ್ಯರು ಪಕ್ಷಾತೀತವಾಗಿ ಮಾತನಾಡಿದ್ದಾರೆ. ನಮ್ಮ ಯುವ ಜನಾಂಗ ಅದರಲ್ಲಿಯೂ 18 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಶಾಲಾ ಕಾಲೇಜು ಮಕ್ಕಳು ಮಾದಕ ವಸ್ತುಗಳ ವ್ಯಸನಿಗಳಾಗಿ ಬದಲಾಗುತ್ತಿರುವುದನ್ನು ನಾವು ಗಮನಿಸಿದ್ದೇವೆ. ಒಂದು ಆಶ್ಚರ್ಯಕರ ಸಂಗತಿಯೆಂದರೆ ಮಾದಕ ವಸ್ತುಗಳಿಗೆ ಸಂಬಂಧಪಟ್ಟಂತೆ ಇಡೀ ದೇಶಕ್ಕೆ ಮತ್ತು ರಾಜ್ಯಕ್ಕೆ ಇದು ಎಲ್ಲಿಂದ ಸರಬರಾಜು ಆಗುತ್ತಿದೆ? ಆಫ್ಘಾನಿಸ್ತಾನದಲ್ಲಿ ಶೇ.40ರಷ್ಟು ಆದಾಯವನ್ನು ಮಾದಕ ವಸ್ತುಗಳನ್ನು ಬೆಳೆಯುವುದರ ಮೂಲಕ ಗಳಿಸುತ್ತಿದ್ದಾರೆ. ಪಾಕಿಸ್ತಾನದಲ್ಲಿಯೂ ಇದನ್ನು ಬೆಳೆಯಲಾಗುತ್ತಿದೆ ಎಂಬ ವಿಷಯ ನಮಗೆ ತಿಳಿದಿದೆ. ನಮ್ಮ ಭಾರತ ದೇಶದಲ್ಲಿ, ಕರ್ನಾಟಕ ರಾಜ್ಯದಲ್ಲಿ, ಬೆಂಗಳೂರಿನಲ್ಲಿ ಟೆರೇಸ್ ಮೇಲೆ ಇದನ್ನು ಬೆಳೆಯುತ್ತಿರುವುದಾಗಿ ನಾವು ದಿನಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇಷ್ಟೆಲ್ಲಾ ಆಗುತ್ತಿದ್ದರೂ, ನಮ್ಮ Intelligence ಹಾಗೂ ಪೊಲೀಸ್ ಇಲಾಖೆಗೆ ತಿಳಿಯದೆ ಯಾವುದೇ ಈ ರೀತಿಯ ಚಟುವಟಿಕೆ ನಡೆಯಲು ಸಾಧ್ಯವಿಲ್ಲ.

**(...ಮುಂದು)**

**(746) 7.20 21.9.2020 KG VK**

**ಶ್ರೀ ಎನ್.ಅಪ್ಪಾಜಿ ಗೌಡ (ಮುಂದು):–**

ಯಾವುದೇ Pubs ಅನ್ನು ತೆಗೆದುಕೊಂಡರೂ ಸಹ, ಅವು ರಾತ್ರಿಯಿಂದ ಬೆಳಗ್ಗೆಯವರೆಗೆ ನಡೆಯುತ್ತಿವೆ. ಇದು ನಡೆಯುತ್ತಿದೆ. ಈ Pubs ಗಳಿಗೆ ಸಂಬಂಧಪಟ್ಟಂತೆ ಮಾದಕ ದ್ರವ್ಯಗಳನ್ನು ಸರಬರಾಜು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವಂತಹ ಎಲ್ಲಾ ವ್ಯಕ್ತಿಗಳ ಬಗ್ಗೆ ಪೊಲೀಸ್ ಇಲಾಖೆಗೆ ಗೊತ್ತಿಲ್ಲದಿರುವಂತಹ ಮಾಹಿತಿ ಯಾವುದೂ ಇಲ್ಲ. ಇವತ್ತು ನಮಗೆ ಯಾರಿಗೂ ಸಹ ಭಷ್ಠಚಾರದ ಬಗ್ಗೆ ಮಾತನಾಡುವಂತಹ ನೈತಿಕತೆ ಇಲ್ಲ. ಆದರೆ, ತಮ್ಮ ಮುಖಾಂತರ ನನ್ನ ಮನವಿ ಏನೆಂದರೆ, ಎಲ್ಲಾ ರಾಜಕೀಯ ಪಕ್ಷದ ಮುಖಂಡರು ನನ್ನನ್ನು ಸೇರಿಸಿದಂತೆ ನಿಜವಾಗಲೂ ಇದಕ್ಕೆ ಯಾರಾದರೂ support ಮಾಡಿದರೆ, ಅವರು ಅವರ ತಾಯಿಗೆ ವಿಷ ಹಾಕುವುದಕ್ಕೆ ಯಾವ ರೀತಿ ಮಾಡುತ್ತಾರೆ, ಅದಕ್ಕಿಂತ ಘೋರ ಅನ್ಯಾಯವೆಂದು ನಾನು ಭಾವಿಸಿದ್ದೇನೆ. ಹಾಗಾಗಿ, ನಮ್ಮ ಭಾರತ ದೇಶದ ಯುವ ಜನಾಂಗ ಮತ್ತು ವಿದ್ಯಾರ್ಥಿಗಳು ಉಳಿಯಬೇಕಾದರೆ, ಈ ಮಾದಕ ವಸ್ತುಗಳು ಎಲ್ಲೆಲ್ಲಿ ಸರಬರಾಜು ಆಗುತ್ತಿದೆ ಅದನ್ನು ನಿಲ್ಲಿಸುವಂತಹ ಅನಿವಾರ್ಯತೆ ಇದೆ. ನಮ್ಮ ಯುವ ಜನಾಂಗವನ್ನು ಹಾಳು ಮಾಡುತ್ತಿರುವಂತಹ ಪ್ರಕ್ರಿಯೆ ಇದು terrorism ಗಿಂತ ಹೆಚ್ಚಾಗಿದೆ. Terrorism ಇದರ ಮುಂದೆ ಏನೇನೂ ಅಲ್ಲ. ನಮ್ಮ ಭಾರತ ದೇಶದಲ್ಲಿ ವಿದ್ಯಾರ್ಥಿಗಳು ಇಡೀ ಪ್ರಪಂಚದಲ್ಲಿಯೇ ಪೂಪೈಟಿ ಮಾಡುವಂತಹ ಒಂದು ಜ್ಞಾನ ಶಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಬೇರೆ ದೇಶದವರು ನಮ್ಮ ದೇಶದ ಯುವ ಜನಾಂಗವನ್ನು ದಾರಿ ತಪ್ಪಿಸುವುದಕ್ಕೆ ಒಂದು ಷಡ್ಯಂತ್ರವನ್ನು ರೂಪಿಸಿದ್ದಾರೆಂದು ನನಗೂ ಸಹ ಅನುಮಾನ ಇದೆ.

ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಸರ್ಕಾರ ಇದರ ಬಗ್ಗೆ ಕಠಿಣವಾದಂತಹ ಕಾನೂನು ಕ್ರಮಗಳನ್ನು ಕೈಗೊಂಡು ಮಟ್ಟ ಹಾಕದಿದ್ದರೆ ಮುಂದಿನ ದಿವಸಗಳಲ್ಲಿ ನಮ್ಮ ಮಕ್ಕಳು ಸೇರಿದಂತೆ ಬಹಳ ದೊಡ್ಡ ಸಮಸ್ಯೆಯನ್ನು ಅನುಭವಿಸಬೇಕಾಗುತ್ತದೆ.

**ಶ್ರೀ ಎನ್.ರವಿಕುಮರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀಮತಿ ಭಾರತಿ ಶೆಟ್ಟಿರವರು ಮತ್ತು ಶ್ರೀ ಲಹರ್ ಸಿಂಗ್ ಸಿರೋಯಾ ರವರು ಪ್ರಸ್ತಾಪಿಸಿದಂತಹ ವಿಷಯ ಇದು ನಮ್ಮ ನಾಡಿನ ಅತ್ಯಂತ ಗಂಭೀರವಾದಂತಹ ಸಮಸ್ಯೆಯಾಗಿದೆ. ಆದರೆ, ಈ ಸಮಸ್ಯೆ ಇಡೀ ದೇಶದ್ದು. ಇದರ ಬಗ್ಗೆ ಹಲವಾರು ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಇದರ ಹಿಂದೆ ಒಂದು ದೊಡ್ಡ ವ್ಯಾಪಾರದ ಜಾಲ ಇದೆ. ಇದನ್ನು ಮಾರಾಟ ಮಾಡುವುದರಿಂದ ಅತಿ ಹೆಚ್ಚಿನ ಹಣ ಸಿಗುತ್ತದೆ ಎಂದು ತಿಳಿದಿರುವುದರಿಂದ ಇದು ಗುಪ್ತವಾಗಿ ಈ ವಿಷ ಅನಿಲ ವ್ಯಾಪಿಸುತ್ತಿದೆ. ಅದಕ್ಕೆ ನನ್ನ ಕಳಕಳಿಯ ವಿನಂತಿ ಏನೆಂದರೆ, ನಮ್ಮ ಮಾನ್ಯ ಕಾನೂನು ಸಚಿವರು ಬಹಳ ಸಮರ್ಥರಿದ್ದಾರೆ. ಅವರಿಗೆ ಈ ವಿಷಯದಲ್ಲೂ ಮತ್ತು ಕಾನೂನು ವಿಷಯದಲ್ಲಿ ಬಹಳ knowledge ಇದೆ. ನನ್ನ ಪ್ರಕಾರ, ಇದಕ್ಕೆ ಕೇಸ್‌ನ್ನು ದಾಖಲಿಸಬೇಕಾಗುತ್ತದೆ. ಇದರ ಬಗ್ಗೆ Non-bailable ಕೇಸ್‌ನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ದಾಖಲಿಸಬೇಕು ಎನ್ನುವುದು ನನ್ನ ಮೊದಲನೆ ಸಲಹೆ. ಎರಡನೆ ಸಲಹೆ ಏನೆಂದರೆ, High School ನಿಂದ ಮೇಲ್ಪಟ್ಟು, ಅದರಲ್ಲೂ ವಿಶೇಷವಾಗಿ Professional Colleges, Pharmacy Colleges ತೆಗೆದುಕೊಳ್ಳಿ, Engineering Colleges ತೆಗೆದುಕೊಳ್ಳಿ, Medical Colleges ತೆಗೆದುಕೊಳ್ಳಿ. ನಾನು ವಿದ್ಯಾರ್ಥಿ ಪರಿಷತ್ತಿನಲ್ಲಿ ಕೆಲಸ ಮಾಡಿರುವುದರಿಂದ, ಹಾಸನದಲ್ಲಿ ಒಬ್ಬ ವಿದ್ಯಾರ್ಥಿ ಯಾವ ರೀತಿ ಸಿಕ್ಕಿ ಹಾಕಿಕೊಂಡಿದ್ದ ಎಂದರೆ, ಸುಮಾರು ನಾಲ್ಕು ವರ್ಷಗಳ ಕಾಲ ಆ ವಿದ್ಯಾರ್ಥಿ ಓದುತ್ತಾ, ಓದುತ್ತಾ ಆತನ ಪೋಷಕರನ್ನು ಕರೆದುಕೊಂಡು ಬಂದು ಮನೆಯಲ್ಲಿಟ್ಟುಕೊಂಡು, ಆತನನ್ನು drugs ನಿಂದ ಮುಕ್ತ ಮಾಡುವುದಕ್ಕೆ ಇನ್ನೂ ಹೆಚ್ಚಿಗೆ ನಾಲ್ಕು ವರ್ಷಗಳು ಬೇಕಾಯಿತು. ಅಷ್ಟೋತ್ತಿಗೆ ವಿದ್ಯಾರ್ಥಿಯ ಜೀವನ ಬಾರ್‌ಬಾದ್ ಆಗಿ ಹೋಗಿತ್ತು ಅದೇ ತರಹ North East ನ ಒಬ್ಬ ವಿದ್ಯಾರ್ಥಿ ಬೆಂಗಳೂರು Pharmacy ಕಾಲೇಜಿನಲ್ಲಿ ವ್ಯಾಸಂಗ ಮಾಡುವುದಕ್ಕೆ ಬಂದಿರುತ್ತಾನೆ. ಆತ ರಾತ್ರಿ ವೇಳೆ ಮಲಗುವುದೇ ಇಲ್ಲ. ಏಕೆಂದರೆ, ಆತ ರಾತ್ರಿ ವೇಳೆ ಏನೇನೂ ಮಾತನಾಡುತ್ತಿರುತ್ತಾನೆ. ಆ ಕೊಠಡಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಇದ್ದರು. ಆತ ನಿದ್ರೆ ಮಾಡದಿರುವುದಕ್ಕೆ ಮತ್ತು ಓದದಿದ್ದಕ್ಕೆ ಆತನ ರೂ roommate ಸಹ ಆತನನ್ನು ಬಿಟ್ಟು ಹೊರಟು ಹೋಗುತ್ತಾನೆ. ಆತ ರಾತ್ರಿ ಪೂರ್ತಿ inject ಮಾಡಿಕೊಳ್ಳುತ್ತಿರುತ್ತಾನೆ. ಆತ ಏನು inject ಮಾಡಿಕೊಳ್ಳುತ್ತಿರುತ್ತಾನೆ. ಹಾಗಾಗಿ, ಪ್ರತಿ ಹೈಸ್ಕೂಲ್ ಮತ್ತು ಕಾಲೇಜು ಪ್ರಾಂಶುಪಾಲರ ನೇತೃತ್ವದಲ್ಲಿ ಒಂದು Committee ಯನ್ನು ಮಾಡಬೇಕು, ಅವರು ಏನ್ನನ್ನು ಗಮನಿಸಬೇಕು ಯಾವ ಜಾಲ ಇಲ್ಲಿ ತಾಂಡವಾಡುತ್ತಿದೆ ಎಂಬುದರ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಯಾವುದೇ ಶಾಲೆ ಮತ್ತು ಕಾಲೇಜನಿಂದ ನಿಂದ 100 ಮೀಟರ್ ದೂರದಲ್ಲಿ ಯಾವುದೇ Arak shop ಇರಬಾರದು ಎಂದು ಕಾನೂನಿದೆ. ಚಾಕಲೇಟ್‌ನ್ನು ಮಾರಾಟ ಮಾಡುತ್ತಾರೆ. ಅದರಲ್ಲಿ drugs ಇರುತ್ತದೆ. Cigarette ನಲ್ಲಿ drugs ಇರುತ್ತದೆ. Whitener ಅನ್ನು ಮೂಸುತ್ತಾರೆ. Whitener ಏನೋ ಒಂದು ರೀತಿಯಲ್ಲಿ ಸಣ್ಣ kick ಕೊಡುತ್ತದೆ. Shoe polish ತಿನ್ನುತ್ತಾರೆ. Puncher ಹಾಕುವಂತಹ solution ಅನ್ನು ತಿನ್ನುತ್ತಾರೆ. ಹಾಗಾಗಿ, ಇದರ ಜಾಲ ಬಹಳ ದೊಡ್ಡ ಮಟ್ಟದಲ್ಲಿದೆ. ನಮ್ಮ ಬೆಂಗಳೂರಿನಿಂದ ಹಿಡಿದುಕೊಂಡು International level ಗೂ ಇದೆ. ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿರುವಂತದ್ದು ಅಲ್ಲ. ನಾವು ಇದಕ್ಕೆ ಕೇಂದ್ರ ಸರ್ಕಾರದ ನೆರವನ್ನು ತೆಗೆದುಕೊಂಡು ಇದರ ಜಾಲ ಮತ್ತು network ಎಲ್ಲೆಲ್ಲಿ ಇದೆ ಮತ್ತು ಎಲ್ಲೆಲ್ಲಿ ಮಾರಾಟ ಮಾಡುತ್ತಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚಬೇಕು. ಇದರ ಬಗ್ಗೆ ನಮ್ಮ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರಾದ ರಮೇಶ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಆ ವಾಹನಗಳನ್ನು seize ಮಾಡಬೇಕೆಂದು ಹೇಳಿದರು. ಇದರಲ್ಲಿ ಬಹಳ ದೊಡ್ಡ network ಇದೆ. ಹಾಗಾಗಿ, ಇದಕ್ಕೆ ಒಂದು ಸರಿಯಾದಂತಹ ಕಾನೂನನ್ನು ರೂಪಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಉಡ್ತಾ ಪಂಜಾಬ್ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಸಚಿವರು ಸಹ ಸಿಕ್ಕಿಹಾಕಿಕೊಂಡಿದ್ದರು. ಅನೇಕ ಜನ ಶಾಸಕರು ಸಹ ಸಿಕ್ಕಿಹಾಕಿಕೊಂಡಿದ್ದರು. ಪಂಚಾಬ್‌ನೊಳಗೆ ಗಡಿಗಳಿಂದ ಬರುತ್ತಿದ್ದರು. ಪಂಜಾಬ್ ಎನ್ನುವುದು ಒಂದು ದೊಡ್ಡ ಅಗರದ ಸಮಸ್ಯೆ ಆಗಿಬಿಟ್ಟಿದೆ. ಅಲ್ಲಿ ಒಂದು ಚುನಾವಣೆಯ ವಿಷಯ ಬಂತು. ಇದೆಲ್ಲಾ ನಮಗೆ ಗೊತ್ತಿದೆ. ಹಾಗಾಗಿ, ಯುವಕರ ಭವಿಷ್ಯದ ಚಿಂತೆ ಇದೆ. ಪೋಷಕರು ಅದರೊಳಗೆ ಮುಳುಗಿ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಬಹಳ ಒಳ್ಳೆಯ ಪ್ರಯತ್ನವನ್ನು ಮಾಡಿದೆ. ಇದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇನೆ. ಈಗಾಗಲೇ ಅನೇಕ ಜನರನ್ನು arrest ಮಾಡಿದ್ದಾರೆ. ಅವರು ಮಹಿಳೆಯರು ಇರಲಿ ಅಥವಾ ಇನ್ನಾರೇ ಇರಲಿ. ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ಇದು ಸರ್ಕಾರದ ಪಾಲಿಸಿ ಆಗಬೇಕು. ಹಾಗಾಗಿ, ಇದರಲ್ಲಿ ದೇಶ, ಪಂಥ, ಮತ, ಜಾತಿ ಧರ್ಮ ಇವುಗಳನ್ನು ಬಿಟ್ಟು ದೇಶವನ್ನು ಉಳಿಸಬೇಕು ಮತ್ತು ಯುವಕರನ್ನು ಉಳಿಸಬೇಕು. ಡ್ರಗ್ಸ್ ಜಾಲಕ್ಕೆ ವ್ಯಸನಿಗಳು ಆಗಬಾರದು. ಮೊದಲು ಯಾವ ರೀತಿ ಇರುತ್ತದೆ ಎಂದು ತೆಗೆದುಕೊಳ್ಳುತ್ತಾರೆ. ನಂತರ ಅವರ ಜೀವನ ಬರ್ಬಾದ್ ಆಗುತ್ತದೆ. ಹಾಗಾಗಿ, ಈ ವಿಷಯ ಕುರಿತಂತೆ Non-bailable case ಅನ್ನು ಹಾಕಬೇಕು. ಪ್ರತಿ ಶಾಲಾ-ಕಾಲೇಜುಗಳಲ್ಲಿ ಒಂದು Committee ಯನ್ನು ರಚನೆ ಮಾಡಬೇಕು. ಯಾವ್ಯವ ಮೆಡಿಕಲ್ ಶಾಪ್‌ಗಳಲ್ಲಿ ಇಂತಹದ್ದು ಮಾರಾಟವಾಗುತ್ತಿದೆ ಎನ್ನುವುದನ್ನು ಗಮನಿಸಬೇಕು.

ಮಾನ್ಯ ಸಭಾಪತಿಯವರೇ, ನನ್ನ ಒಳ್ಳೆಯ ಸಲಹೆ ಏನೆಂದರೆ, ಪೊಲೀಸ್ ಇಲಾಖೆಯವರಿಗೂ ಇದರ ಬಗ್ಗೆ ತರಬೇತಿ ಕೊಡಬೇಕೆಂದು ಈ ಸಂದರ್ಭದಲ್ಲಿ ನನಗೆ ಅನಿಸುತ್ತದೆ. Internet ಇದೆ. ಅರ್ಥವಾಗದಿರುವಂತಹ code ಗಳನ್ನು ಅವರು ಬಳಸುತ್ತಿರುತ್ತಾರೆ. ಈ ತರಹದ ಎಲ್ಲಾ ವಿಷಯಗಳನ್ನು study ಮಾಡುವುದಕ್ಕಾಗಿ ತಜ್ಞರನ್ನು State level, District level and Taluk level Committee ಗಳನ್ನು ಮಾಡಿ ಇದನ್ನು ಬೇದಿಸುವಂತಹ ಮತ್ತು ಇದನ್ನು ಸರಿಯಾಗಿ ಮಟ್ಟ ಹಾಕುವಂತಹ ನೀತಿ ರೂಪಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮೊದಲನೆಯದಾಗಿ, ನಮ್ಮ ಬೆಂಗಳೂರಿಗೆ ವಿದ್ಯಾಭ್ಯಾಸಕ್ಕೆ ಬಂದಿರುವಂತಹ ವಿದೇಶಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿದ್ಯಾರ್ಥಿಗಳು Visa expiry ಆದ ನಂತರವು ಸಹ ಇಲ್ಲಿಯೇ ಉಳಿದುಕೊಂಡು ಡ್ರಗ್ಸ್ ದಂದೆಯನ್ನು ಮಾಡಿಕೊಂಡಿದ್ದಾರೆ. ಅವರ ಬಗ್ಗೆ ಕೇಸಿನಲ್ಲಿ ಉಲ್ಲೇಖ ಇಲ್ಲ. ಎರಡನೇಯದಾಗಿ, ಮಾನ್ಯ ಸದಸ್ಯರೊಬ್ಬರು ಈ ವಾಹನಗಳನ್ನು seize ಮಾಡಬೇಕೆಂದು ಉಲ್ಲೇಖ ಮಾಡಿದ್ದಾರೆ. ಒಂದು ವೇಳೆ, ಆ ವಾಹನಗಳನ್ನು seize ಮಾಡಿದರೆ, ಎರಡು ದಿವಸಗಳ ಮುಂಚೆಯೇ ಆ ವಾಹನದ ಮಾಲೀಕರು ಸದರಿ ವಾಹನ ಕಳ್ಳತನವಾಗಿದೆ ಎಂದು ಪೊಲೀಸ್ ಠಾಣೆಗೆ ದೂರು ಕೊಡುತ್ತಾರೆ. ಇಂತಹದ್ದು ನುಸುಳುವಂತಹ ವ್ಯವಸ್ಥೆ ಅದರಲ್ಲಿ ಇದೆ. ಆದ್ದರಿಂದ, ನನ್ನ ವಿನಂತಿ ಏನೆಂದರೆ, ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಮತ್ತು ಒಬ್ಬ ಕ್ರಿಮಿನಲ್ ಲಾಯರ್ ಇವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡಿದರೆ ಬಹುಶಃ ಇದಕ್ಕೆ ಒಂದು ಒಳ್ಳೆಯ ಫಲ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಭಾರತ ದೇಶವನ್ನು Young India ಎಂದು ಹೇಳುತ್ತಾರೆ, ಇಡೀ ಪ್ರಪಂಚದಲ್ಲಿ ನಮ್ಮ ಭಾರತ ದೇಶದಲ್ಲಿ ಪ್ರತಿಶತ ಜನಸಂಖ್ಯೆ 65% ರಷ್ಟು ಯುವಕರು ಇದ್ದಾರೆ. America is very much afraid of India ಎಂದು ಹೇಳುತ್ತಾರೆ. ಏಕೆಂದರೆ, ಇಡೀ ಪ್ರಪಂಚದಲ್ಲಿಯೇ ಯುವ ಜನಾಂಗ ಹೊಂದಿರುವಂತಹ ಏಕೈಕ ರಾಷ್ಟ್ರ ಭಾರತ, ಯುವಕರು ಭಾರತದಲ್ಲಿ ದೇಶ ಕಟ್ಟುವಂತಹ ಮತ್ತು ಸಮಾಜ ಕಟ್ಟುವಂತಹ ಕೆಲಸವನ್ನು ಮಾಡಿದರೆ definitely India will overtake America ಅನ್ನುವಂತಹ apprehension ಇದೆ. ನನಗೆ ಇದರಲ್ಲಿ ವಿದೇಶಿಯರ ಷಡ್ಯಂತ್ರ ಇರುಬಹುದು ಅನಿಸುತ್ತದೆ. ಏಕೆಂದರೆ, ಇಲ್ಲಿ ಯುವ ಜನಾಂಗ ಮಾದಕ ದ್ರವ್ಯಗಳ ವ್ಯಸನಿಗಳನ್ನಾಗಿ ಮಾಡಿದರೆ, ಯುವ ಶಕ್ತಿ ಸತ್ತು ಹೋಗುತ್ತದೆ. ಇಂತಹ ಒಂದು ಸಾಧ್ಯತೆ ಇರಬಹುದು. The Narcotic Drugs and Psychotropic Substances Act, 1985 ರಲ್ಲಿಯೇ ಈ ಕಾಯಿದೆ ಬಂದಿದೆ. ಈ ಕಾಯಿದೆ ಬಂದು 35 ವರ್ಷವಾಗಿದೆ. ಇದರ ನಂತರ The Prevention of Illicit Traffic in Narcotic Drugs and Psychotropic Substances Act, 1988. ಇಲ್ಲಿ ಎರಡು ಕಾಯಿದೆಗಳು ಇವೆ. ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಹೇಳಿದಂತೆ, drug peddlers ಗಳಿಗೆ ಜಾಮಿನು ಇಲ್ಲ. It is a Non-bailable Offence. ಈ ಕಾನೂನಿನಲ್ಲಿ ಉತ್ಪಾದನೆ ಮಾಡುವುದು, ಸಂಗ್ರಹ ಮಾಡುವುದು, ವಿತರಣೆ ಮಾಡುವುದು ಮತ್ತು ಸಾಗಾಣಿಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದು ಇದರಲ್ಲಿ ಬರುತ್ತದೆ. ಇವರೆಲ್ಲರನ್ನು prevent ಮಾಡುವುದಕ್ಕೆ ಈ ಎರಡು ಕಾನೂನುಗಳಿವೆ. 1985 ಮತ್ತು 1988 ಕಾನೂನುಗಳಿಂದ ಈಗಾಗಲೇ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದಂತೆ, ಇದರಿಂದ ಏನೇನು prevention ಆಗಿಲ್ಲ.

**ಮುಂದು.,**

**(747)21-09-2020(7-30)ಎಂವಿ-ಬಿಎನ್ಎಸ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ದೊಡ್ಡ ದೊಡ್ಡ ನಗರ ಪ್ರದೇಶಗಳಾದ ಬೆಂಗಳೂರು ಮತ್ತು ಹುಬ್ಬಳ್ಳಿ, ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಹೊರಟ್ಟಿಯವರು ಹೇಳಿದ್ದಾರೆ. ಈಗ ಬೆಂಗಳೂರು ನಗರದ prestigious school ಪಕ್ಕದಲ್ಲಿಯೇ ಹುಕ್ಕಾ ಪಾರ್ಲರ್‌ಗಳಿವೆ. ಬಿಷಪ್ ಕಾಟನ್ ಶಾಲೆ ಮತ್ತು ಇತರೆ ಶಾಲೆಗಳ ಪಕ್ಕದಲ್ಲಿ ಇರುವುದನ್ನು ನಾನು ನೋಡಿದ್ದೇನೆ. ಅಲ್ಲಿ ಸಣ್ಣ ಸಣ್ಣ ಹೈಸ್ಕೂಲ್ ಮಕ್ಕಳು ಮತ್ತು ಸಣ್ಣ ವಯಸ್ಸಿನ ಹುಡುಗಿಯರು ಹುಕ್ಕಾ ಪಾರ್ಲರ್‌ನಲ್ಲಿ ಹುಕ್ಕಾ ಸೇದುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಅಲ್ಲಿಗೆ ಸರ್ಕಾರದ license ಇದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸರ್ಕಾರದಿಂದ license ಕೊಟ್ಟರೆ ಮುಗಿದೇ ಹೋಯಿತು. ಅವರು ಸಣ್ಣ ವಯಸ್ಸಿನಲ್ಲಿ ಡ್ರಗ್ಸ್‌ಗೆ addiction ಆದರೆ ಅವರ ತಂದೆ ತಾಯಿಗಳು ಆ ಮಗುವನ್ನು ಕೈಬಿಟ್ಟ ಹಾಗೆಯೇ ಆಗುತ್ತದೆ. ಎಳೆ ವಯಸ್ಸಿನಲ್ಲಿ ಡ್ರಗ್ಸ್‌ಗೆ addiction ಆದರೆ ಮುಂದೆ ಅವರನ್ನು de-addiction centre ಗೆ ಕಳುಹಿಸಬೇಕಾಗುತ್ತದೆ. ಅದು ಮೈಸೂರಿನಲ್ಲಿ ಇದೆ. ಅದನ್ನು de-addiction centre ಎಂದು ಕರೆಯುತ್ತಾರೆ. ಅದನ್ನು ನಾನು ಹೇಳಬಾರದು. ಬಹಳಷ್ಟು ಹಣ ಇರುವಂತಹ ಶ್ರೀಮಂತರ ಮಕ್ಕಳು ಮತ್ತು ದೊಡ್ಡ ದೊಡ್ಡ ಜನರ ಮಕ್ಕಳು ಬಹಳಷ್ಟು ಮಂದಿ ಸಣ್ಣ ಸಣ್ಣ ವಯಸ್ಸಿನ ಹುಡುಗ ಮತ್ತು ಹುಡುಗಿಯರು, teenaged girls and boys are addicted to these drugs. ಒಮ್ಮೆ ಆ ಮಗು ಡ್ರಗ್ಸ್‌ಗೆ addict ಆದರೆ finish ಅಂದರೆ ಅವರನ್ನು ಕೈಬಿಟ್ಟು ಬಿಡುತ್ತೇವೆ. ಇದು ಈ ರೀತಿಯಾಗಿ ವ್ಯಾಪಕವಾಗಿ ಹರಡಿದರೆ, ಇಡೀ ದೇಶದ ಯುವ ಜನಾಂಗ ಏನಿದೆ, ಅದು ನಿಸತ್ವ ಆಗುವಂತಹ ಸಾಧ್ಯತೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಇವತ್ತು ದೇಶದ ಭವಿಷ್ಯಕ್ಕೂ ಕೂಡ ಬಹಳಷ್ಟು ಆತಂಕ ಇರುವುದರಿಂದ ಈ ಕಾನೂನನ್ನು ಈಗಾಗಲೇ ಅವರು ಹೇಳಿದ ಹಾಗೆ, it may not be sufficient. ಏನು ಕಡಿಮೆ ಆಗಿದೆ. 2017ರಲ್ಲಿ 1120 ಆದರೆ 2020ಕ್ಕೆ 1661 ಆಗಿದೆ. ಅಂದರೆ, ವರ್ಷದಿಂದ ವರ್ಷಕ್ಕೆ crime rate is increasing but not decreasing. ರಿಪೋರ್ಟ್ ಇಲ್ಲದೇ ಎಷ್ಟು ಪ್ರಮಾಣದಲ್ಲಿ ಇದೆಯೋ? These are the reported cases. Crime rate is increasing year by year. That means Narcotic Drugs and Psychotropic Substances Act 1985 ಮತ್ತು ಇನ್ನೊಂದು ಕಾನೂನು ಏನು ಇದೆ, 1988ರಲ್ಲಿ ಮಾಡಿರುವಂತಹ ಕಾನೂನು; the Prevention of Illicit Traffic in Narcotic Drugs and Psychotropic Substances Act, 1988 are insufficient. They cannot control the drug mafia. ಡ್ರಗ್ಸ್ ಮಾಫಿಯಾದಲ್ಲಿ ಇದ್ದಂತಹವರಿಗೆ 32 ರಾಷ್ಟ್ರಗಳಲ್ಲಿ death penalty ಇದೆ. ಆದರೆ ನಮ್ಮಲ್ಲಿ ಆ ರೀತಿಯ death penalty ಇಲ್ಲ. ಇನ್ನು ಕೇವಲ ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಚಿಕ್ಕ ಪ್ರಮಾಣದಲ್ಲಿ ಡ್ರಗ್ಸ್ ಜಪ್ತಿಯಾದರೆ, ಅಪರಾಧಿಗೆ ಆರು ತಿಂಗಳ ಶಿಕ್ಷೆಯಾಗುತ್ತದೆ. ಒಂದು ಕಿಲೋಗಿಂತ ಹೆಚ್ಚು ಪ್ರಮಾಣದಲ್ಲಿ ಡ್ರಗ್ಸ್ ಇದ್ದು ಮಾರಾಟದ ಪ್ರಮಾಣಕ್ಕಿಂತ ಕಡಿಮೆ ಇದ್ದರೆ ಅಪರಾಧಿಗೆ ಹತ್ತು ವರ್ಷದ ಶಿಕ್ಷೆಯಾಗುತ್ತದೆ ಮತ್ತು ಮಾರಾಟ ಮಾಡುವಷ್ಟು ಪ್ರಮಾಣದ ಡ್ರಗ್ಸ್ ಪತ್ತೆಯಾದರೆ ಅಪರಾಧಿಗೆ ಹತ್ತರಿಂದ ಇಪ್ಪತ್ತು ವರ್ಷದ ಜೈಲು ಶಿಕ್ಷೆ ಮತ್ತು ಒಂದರಿಂದ ಎರಡು ಲಕ್ಷದವರೆಗೆ ಜುಲ್ಮಾನೆ. Death penalty ಇಲ್ಲ. ಆದರೆ, 32 ರಾಷ್ಟ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಚೀನಾ, ಇರಾನ್, ಸೌಧಿ ಅರೇಬಿಯಾ, ವಿಯಾಟ್ನಂ, ಮಲೇಷಿಯಾ ಮತ್ತು ಸಿಂಗಾಪುರ ಇಲ್ಲಿ ಸಣ್ಣಪುಟ್ಟ ಡ್ರಗ್ಸ್ ಆಪಾಧನೆಗಳಿಗೆ ಮರಣ ದಂಡನೆ ಶಿಕ್ಷೆ ವಿಧಿಸುತ್ತಾರೆ. Death penalty ಎಂದರೆ, it is the highest punishment. ನಮ್ಮ ಕಾನೂನು ಮಂತ್ರಿಗಳು ಕಾನೂನು ಪಂಡಿತರು. Basically the Minister is an Advocate and he knows the laws very well. How to prevent this? ಇದು ಒಂದು ದೊಡ್ಡ ಮಾಫಿಯಾ. ಕೇವಲ ರಾಜ್ಯದಲ್ಲೇ ಅಷ್ಟೆ ಅಲ್ಲ ಇಡೀ ದೇಶದ ಯುವ ಜನಾಂಗವನ್ನು ನಿಸತ್ವ ಮಾಡುವಂತಹ ಮತ್ತು ಯುವ ಜನಾಂಗ ಸಮಾಜ ಕಟ್ಟುವಂತಹ ಮತ್ತು ರಾಷ್ಟ್ರ ಕಟ್ಟುವಂತಹ ಕೆಲಸದಿಂದ ವಿಮುಖವಾಗುವಂತಹ ಈ ಒಂದು ಡ್ರಗ್ಸ್ ಏನಿದೆ ಅದರ ಬಗ್ಗೆ ನಮ್ಮ ಅನೇಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ನೇಹಿತರು ಹೇಳಿದ್ದಾರೆ. ಇದು severe than terrorist activities ಎಂದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ದೃಷ್ಟಿಯಿಂದ ಈ ಕಾನೂನುಗಳನ್ನು ಬಿಗಿ ಮಾಡಬೇಕು. ಸಹೋದರಿ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದ ಹಾಗೆ, criminal lawyer ಮತ್ತು Judge ಅದರ ಬಗ್ಗೆ ಚಿಂತನೆ ಮತ್ತು ಮಂಥನ ಮಾಡಬೇಕು. How to prevent and curb this mercilessly and high handed. Government should have a political will to control this. ನೀವು ರಾಜಕೀಯದ ಇಚ್ಚಾಶಕ್ತಿಯಿಂದ ಈ ಡ್ರಗ್ಸ್ ಮಾಫಿಯಾ ಏನಿದೆ consumer ಅನ್ನು ಹಿಡಿದುಕೊಂಡು ಅವರಿಗೆ ಶಿಕ್ಷೆಯಾಗಬೇಕು. ಯಾರು consume ಮಾಡುತ್ತಾರೆ. ಮೊದಲು ತಯಾರಕರು manufacture ಮಾಡುತ್ತಾರೆ. ನಂತರ ಅದನ್ನು ಸಂಗ್ರಹ ಮಾಡುತ್ತಾರೆ. ಅನಂತರ ಅದನ್ನು ವಿತರಣೆ ಮಾಡುತ್ತಾರೆ. ಆ ನಂತರ ಅದು consumer ಗೆ ಹೋಗುತ್ತದೆ. ಅಂದರೆ ಅದು ಮಕ್ಕಳು ಮತ್ತು ಯುವ ಜನಾಂಗಕ್ಕೆ ಹೋಗುತ್ತದೆ. ಇವರೆಲ್ಲರನ್ನೂ ಸಹ ಹದ್ದುಬಸ್ತಿನಲ್ಲಿಡುವಂತಹ ಕಠಿಣವಾದಂತಹ ಕಾನೂನು, you impose death penalty. What is wrong in it? ಇಡೀ ದೇಶದ ಭವಿಷ್ಯ ಇದರಲ್ಲಿ ಅಡಗಿದೆ. ಆ ದೃಷ್ಟಿಯಿಂದ ಮಾನ್ಯ ಸಭಾಪತಿಯವರ ಮುಖಾಂತರ ಈ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಕಾನೂನು ಸಚಿವರು ಇದನ್ನು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಅವಶ್ಯಕವಾದ ಕಾನೂನುಗಳನ್ನು ತರಬೇಕು ಮತ್ತು ಜಾಗ್ರತೆಯನ್ನು ಮೂಡಿಸುವಂತಹ ಕೆಲಸವು ಕೂಡ simultaneously ಆಗಬೇಕು. ಒಟ್ಟಾರೆ ಈ ಡ್ರಗ್ಸ್ ಮಾಫಿಯಾ ರಾಜ್ಯದಿಂದ ಕಾಲು ಕೀಳುವಂತಹ ಕೆಲಸವನ್ನು ಮಾನ್ಯ ಕಾನೂನು ಮಂತ್ರಿಗಳು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ನಿಮಿಷ ಮಾತನಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):-** ಮಾನ್ಯ ಸಭಾಪತಿಯವರೇ, ಅವರಿಗೆಲ್ಲಾ ಇಷ್ಟೊಂದು ಸಾಮಾಜಿಕ ಕಳಕಳಿ ಇರುವುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಈಗಾಗಲೇ ಸದಸ್ಯರು ಏನನ್ನು ಹೇಳಿದ್ದಾರೆ, ಅವರಿಗೆ ನಾನು ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ. You are supposed to ask one clarification in one Calling Attention Notice.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, (interruption) what I say here is that five states; Punjab, Haryana, Delhi, Himachal Pradesh and Uttarakhand . . . (interruption) for this drugs only and they have made a common Secretariat for these five States in 2018. I am giving the important information. You can also . . . (interruption) because it is interstate.. ಹೈದರಾಬಾದ್‌ನಿಂದ ಬರುವುದು . . .

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):–** ಮಾನ್ಯ ಸಭಾಪತಿಯವರೇ, the Member should have told it when he stood up.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಪೂರಕವಾಗಿ ಒಂದೇ ಒಂದು ಪ್ರಶ್ನೆ ಇದೆ. ಅವಕಾಶ ನೀಡಿರುವುದಕ್ಕೆ ಧನ್ಯವಾದಗಳು. ಹೋದ ಬಾರಿ ಸದನ ನಡೆದಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಗೃಹ ಮಂತ್ರಿಗಳು ಉತ್ತರವನ್ನು ನೀಡಿದ್ದರು. ಈಗ ಮಾನ್ಯ ಕಾನೂನು ಸಚಿವರು ಇರುವುದರಿಂದ. ಒಂದು ವಿಷಯವನ್ನು ಹೇಳಬಯಸುತ್ತೇನೆ. ಹೊಸಕೋಟೆಯ ಗ್ರಾಮೀಣ ಭಾಗದಲ್ಲಿ ಕೆಲವಂತಹ ರೈತರು ತಮ್ಮ ಹೊಲದಲ್ಲಿ ಗಸಗಸೆಯನ್ನು ಬೆಳೆಯುತ್ತಿದ್ದಾರೆ. ಆದರೆ, ಅವರಿಗೆ ಗಸಗಸೆ ಕೂಡ ಒಂದು ಮಾದಕ ವಸ್ತು ಎಂದು ಗೊತ್ತಿಲ್ಲ. ಆದರೆ, ಇಂದು ಮಧ್ಯಾಹ್ನ ಹೊಸಕೋಟೆಯ ಗ್ರಾಮೀಣ ಠಾಣೆಯ ಒಬ್ಬ ಸಿಬ್ಬಂದಿ ರೈತರ ಬಳಿ ಹೋಗಿ ನೀವು ಮಾದಕ ವಸ್ತುವನ್ನು ಬೆಳೆಯುತ್ತಿದ್ದೀರಿ ಎಂದು ಹೇಳಿ ಅವರ ಮೇಲೆ ಪ್ರಕರಣವನ್ನು ದಾಖಲಿಸಿದ್ದಾರೆ. ಅವರಿಗೆ ಇದು ಮಾದಕ ವಸ್ತು ಎಂದು ಗೊತ್ತಿರುವುದಿಲ್ಲ. ಹಾಗಾಗಿ ಆ ರೀತಿಯಾಗಿ ಬೆಳೆದಂತಹವರಿಗೆ awareness ಬರುವಂತಹ ರೀತಿ ಏನಾದರೂ ಮಾಡಬೇಕೆ ಹೊರತು, ಅದು ಬಿಟ್ಟು ಅವರ ಮೇಲೆ ಪ್ರಕರಣವನ್ನು ದಾಖಲು ಮಾಡಬಾರದು ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳ ಬಯಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿಯನ್ನು ಮತ್ತು ಅವರ ಸಾಮಾಜಿಕ ಹೊಣೆಗಾರಿಕೆಯನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತದೆ. ನಮ್ಮದು ಒಂದು ಮನವಿ ಏನೆಂದರೆ, ಮಕ್ಕಳ ಪೋಷಕರು ಮತ್ತು ಶಿಕ್ಷಕರು ಸಹ ಈ ನಿರ್ಣಯದಲ್ಲಿ ಹೋಗಬೇಕು. ಬಹಳ ಜನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೋಷಕರಿಗೆ ಗೊತ್ತಿರುತ್ತದೆ ಅವರ ಮಕ್ಕಳು ಎಲ್ಲೋ ದಾರಿ ತಪ್ಪುತ್ತಿದ್ದಾರೆ, ಅವರು ಏನೋ ಏರುಪೇರು ಆಗಿದ್ದಾರೆಂದು, ಅದಕ್ಕೆ ಏನಾದರೂ ಮಾಡಬೇಕೆಂದು, ಏನೋ ಒಂದು false prestige ಗೆ ಸಿಲುಕಿಕೊಂಡು ಸಾಮಾನ್ಯವಾಗಿ ನಮಗೆ ವರದಿ ಮಾಡುವುದಿಲ್ಲ. ಏಕೆಂದರೆ, ಅವರಿಗೆ ದೊಡ್ಡ ಆಘಾತವಾಗಿರುತ್ತದೆ, ಇದು ಆರಂಭಿಕ ಹಂತದಲ್ಲಿ ವರದಿಯಾದರೆ, ಅವರು ಮತ್ತು ಅವರ peddlers ಮತ್ತು suppliers ಎಲ್ಲರನ್ನು ಸಹ we can book under law. ನನ್ನ ಕೋರಿಕೆ ಎಂದರೆ, ಮಕ್ಕಳನ್ನು ಅಲ್ಲಿಯವರೆಗೆ ಹೋಗುವುದಕ್ಕೆ ಬಿಡದೆ, ಆರಂಭಿಕ ಹಂತದಲ್ಲೇ ಪೋಷಕರು ನಮಗೆ ಸ್ವಲ್ಪ ಮಾಹಿತಿಯನ್ನು ಕೊಟ್ಟರೆ, ಸರ್ಕಾರ ಕೈಲಾದಷ್ಟು ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಎರಡನೆಯದಾಗಿ, ನಾವು ಇದನ್ನು ಹೊಣೆಗಾರಿಕೆ ಎಂದು ಭಾವಿಸಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೇ ಇದನ್ನು ಪೂರ್ತಿ ಕಾನೂನಿನ ಚೌಕಟ್ಟಿನಲ್ಲಿ ಮಾಡುವುದು ಬಹಳ ಕಷ್ಟ. ಹಾಗಾಗಿ ಇದಕ್ಕೆ ಆದಷ್ಟು educate ಮಾಡಬೇಕು. ಕೌನ್ಸಿಲ್ ಮಾಡಬೇಕು ಮತ್ತು ಅವರಿಗೆ ಅಲ್ಲಲ್ಲಿ ತಿಳುವಳಿಕೆ ಕೊಡಬೇಕು ಎಂದು ಸರ್ಕಾರ ಯಥೇಚ್ಛವಾಗಿ ಕಾರ್ಯಕ್ರಮವನ್ನು ಹಾಕಿಕೊಂಡು, ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಮಿತಿಗಳನ್ನು ಮಾಡಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ handbills and poster ಹಾಕುತ್ತೇವೆ ಮತ್ತು ಅವರಿಗೆ educate ಮಾಡುತ್ತೇವೆ ಹಾಗೂ ಅಲ್ಲಿ ಯಾರಾದರೂ ಇದ್ದರೆ ಮಾಹಿತಿ ನೀಡಿ ಎಂದು ಕಾಲೇಜಿನ ಪ್ರಿನ್ಸಿಪಾಲರಿಗೆ ಮತ್ತು ಆಡಳಿತ ಮಂಡಳಿಯವರಿಗೆ ಸೂಚನೆಯನ್ನು ಸಹ ಕೊಟಿದ್ದೇವೆ. ಮೂರನೆಯದಾಗಿ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿರುವುದು ಸತ್ಯವಿದೆ. ಯಾರು ಹೊರಗಡೆಯಿಂದ ಬಂದಿದ್ದಾರೆ ಮತ್ತು ಯಾರ ವೀಸಾ ಅವಧಿ ಮುಗಿದಿದೆ ಮತ್ತು ಅವರು ಏಕೆ ಹೋಗಿಲ್ಲ ಎಂಬುದನ್ನು ಕೂಡ ಈಗ ಹುಡುಕುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಅವರು ಬೇಕಾದಷ್ಟು ಪ್ರಕರಣಗಳಿಗೆ ಸಿಗುವಂತಹ ಅವಕಾಶಗಳು ಇರುತ್ತವೆ. ಶೇಕಡಾ 99ರಷ್ಟು ಆ ತರಹದವರು ಸಿಕ್ಕಿದರೆ, ನಾವು ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆಗುತ್ತದೆ. ಹಾಗೆಯೇ ಸದಸ್ಯರಾದ ಮಾನ್ಯ ಹೆಚ್.ಎಂ.ರಮೇಶ್‌ಗೌಡರವರಿಗೆ ಒಂದು ಮಾಹಿತಿ ಕೊಡುತ್ತೇನೆ. ಈಗ ಕಾಲ ಸ್ವಲ್ಪ ಬದಲಾಗಿದೆ. ಈಗ ಲಾರಿ ಮತ್ತು ಟ್ರಾಕ್ಟರ್‌ನಲ್ಲಿ ಬರುವಂತಹ ಕಾಲದಲ್ಲಿ ಇಲ್ಲ. ವೆಬ್‌ನಲ್ಲಿ 'ಡಾರ್ಕ್ ವೆಬ್' ಎಂಬ ವ್ಯವಸ್ಥೆ ಪ್ರಾರಂಭವಾಗಿದೆ. ಆ ಡಾರ್ಕ್ ವೆಬ್ ಮುಖಾಂತರ ಡ್ರಗ್ಸ್ ಸರಬರಾಜು ಆಗುತ್ತಿದೆ. ಡಾರ್ಕ್ ವೆಬ್ ಮುಖಾಂತರ ಬೆಂಗಳೂರು ಪಬ್‌ನಲ್ಲಿ ಮಾರಾಟವಾಗುತ್ತಿದ್ದ ಅಂತರರಾಷ್ಟ್ರೀಯ 21 ಡ್ರಗ್ಸ್ ಪೆಡ್ಲರ್‌ಗಳನ್ನು ನಾವು ಈಗಾಗಲೇ ಬಂಧಿಸಿದ್ದೇವೆ. ಈಗ ಕೆ.ಜಿ.ನಗರ, ಅಶೋಕನಗರ, ಸುದ್ದಗುಂಟೆ ಪಾಳ್ಯ, ಕೆಂಗೇರಿ, ಹುಳಿಮಾವು ಮತ್ತು ಸೋಲದೇವನಹಳ್ಳಿ ಪೊಲೀಸ್ ಠಾಣೆಗಳಲ್ಲಿ ಪ್ರಕರಣವನ್ನು ದಾಖಲಿಸಿ, ಸುಮಾರು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದೂಕಾಲು ಕೋಟಿ ಮೌಲ್ಯದ ಎರಡು ಸಾವಿರ LSD strips ವಶಪಡಿಸಿಕೊಳ್ಳಲಾಗಿದೆ. ಅದು ತಮಗೆ ಗೊತ್ತಿದೆ. ಅದು ಒಂದು ಸಣ್ಣ ಪೇಪರ್. ಆ ಪೇಪರ್ ಅನ್ನು ಕಟ್ ಮಾಡಿಕೊಂಡು, ಅದನ್ನು ನೆಕ್ಕಿಕೊಂಡು ಹೋದರೆ ಅವರು ಅದಕ್ಕೆ addict ಆಗುತ್ತಾರೆ. No one can prevent this. ಅದು ಯಾರಿಗೂ ಸಹ ಗೊತ್ತಾಗುವುದಿಲ್ಲ. ಇವತ್ತು ಒಂದು ವೈಟ್ ಪೇಪರ್ addiction ತರುತ್ತಿದೆ. ಸದಸ್ಯರಾದ ಮಾನ್ಯ ಎನ್.ರವಿಕುಮಾರ್ ರವರು ಹೇಳಿರುವುದು ನಿಜ. ಅವರು turpentine ಮತ್ತು iodine ಕುಡಿಯುತ್ತಾರೆ.

**(ಮುಂದು...)**

**(748) 21.09.2020 07.40 LL-BNS**

**ಶ್ರೀ ಜೆ.ಸಿ. ಮಾಧುಸ್ವಾಮಿ(ಮುಂದು):-**

ಇದು, this is a strip/paper, costliest ಮಾದಕ ವಸ್ತು. ಅದನ್ನು ನಾವು 2000 ಸ್ಟ್ರಿಪ್ಸ್ ಅನ್ನು ವಶಪಡಿಸಿಕೊಂಡಿದ್ದೇವೆ. 110 ಗ್ರಾಂ ಎಂ.ಡಿ.ಎಂ.ಎ. ಕ್ರಿಸ್ಟಲ್ಸ್ ಅನ್ನು ಸೀಜ್ ಮಾಡಿದ್ದೇವೆ. 10 Ecstacy ಮಾತ್ರೆ, 5 ಕೆ.ಜಿ. ತೂಕದ ಗಾಂಜಾವನ್ನು ನಾವು ಇವೊತ್ತಿನ ದಿವಸ ಡಾರ್ಕ್ ವೆಬ್‌ನಿಂದ ವಶಪಡಿಸಿಕೊಂಡಿದ್ದೇವೆ. ಬೆಂಗಳೂರಿನಲ್ಲಿ ಪೋಸ್ಟ್ ಮುಖಾಂತರ ಮಾದಕ ದ್ರವ್ಯಗಳನ್ನು ತರುತ್ತಿದ್ದಾರೆ. ಹಾಗಾಗಿ, ಅಂಚೆ ಇಲಾಖೆಯ ನೌಕರನನ್ನು ಅರೆಸ್ಟ್ ಮಾಡಿ, ಆತನಿಂದ ಸುಮಾರು 20 ಲಕ್ಷ ರೂಪಾಯಿ ಬೆಲೆ ಬಾಳುವ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದೇವೆ. Through regular post, ಆತ ಪೋಸ್ಟ್ ಆಫೀಸ್ ಮುಖಾಂತರವೇ ಮಾದಕ ವಸ್ತು ಸಾಗಾಣೆ ಮಾಡುತ್ತಾನೆ. ಇದರ ಜೊತೆಗೆ, ನಮ್ಮ ಸಿಸಿಬಿ ಪೊಲೀಸ್‌ನವರು ಪಂಚತಾರಾ ಹೋಟೆಲ್ ಮತ್ತು ಇತರೆ ಸ್ಥಳಗಳಲ್ಲಿ ಡ್ರಗ್ ಸರಬರಾಜು ಮಾಡಿಕೊಂಡಿದ್ದ ಅಂತರಾಷ್ಟ್ರೀಯ ಡ್ರಗ್ ಪೆಡ್ಲರ್ಸ್ ಮತ್ತು ಸೆಲೆಬ್ರಿಟಿ ಮಾಡೆಲ್‌ಗಳ ಜಾಲ ಪತ್ತೆ ಮಾಡಿ, ಪಂಚತಾರಾ ಹೋಟೆಲ್‌ಗಳಲ್ಲಿ, ಪಬ್‌ಗಳಲ್ಲಿ, ನೃತ್ಯ ಕೂಟಗಳಲ್ಲಿ, ಸಂಗೀತ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಹಾಗೂ ಕೆಲವು ಫಾರ್ಮ್ ಹೌಸ್‌ಗಳಲ್ಲಿ ವ್ಯವಸ್ಥಿತವಾಗಿ ಡ್ರಗ್ ಜಾಲವನ್ನು ಮಾಡಿಕೊಂಡು, ಬೇರೆ ಬೇರೆ ರಾಜ್ಯಗಳಿಂದ ಅಂದರೆ, ಗೋವಾ, ಮುಂಬೈ, ಪಂಜಾಬ್, ಆಂಧ್ರಪ್ರದೇಶ, ಕೇರಳ ಹಾಗೂ ವಿದೇಶಗಳಿಂದಲೂ ಸಹ ಗಾಂಜಾ, Ecstacy pills, ಕೊಕೇನ್, ಎಂ.ಡಿ.ಎಂ.ಎ., ಎಲ್.ಎಸ್.ಡಿ. ರೀತಿಯ ಮಾದಕ ವಸ್ತು(ಡ್ರಗ್ಸ್)ಗಳನ್ನು ತರಿಸಿಕೊಂಡು ಪಾರ್ಟಿಗಳಿಗೆ ಬರುವ ವ್ಯಕ್ತಿಗಳು, ಉದ್ಯಮಿಗಳು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೆಲೆಬ್ರಿಟಿಗಳು, ಕೆಲ ನಟನಟಿಯರು, ಡಿಜೆಗಳು, ಸಾಫ್ಟ್‌ವೇರ್ ಉದ್ಯೋಗಿಗಳು ಹಾಗೂ ಇತರೆ ಗಿರಾಕಿಗಳಿಗೆ ಒಳಸಂಚು ಮಾಡಿ ಕಾನೂನು ಬಾಹಿರ ಚಟುವಟಿಕೆ ನಡೆಸಿಕೊಂಡು ಡ್ರಗ್ಸ್ ಸರಬರಾಜು ಮಾಡುತ್ತಿದ್ದ ಜಾಲವನ್ನು ಸಿಸಿಬಿ ಅಧಿಕಾರಿಗಳು ಭೇದಿಸಿರುತ್ತಾರೆ.

ಇದಾದ ನಂತರ, ಮಾದಕ ವ್ಯಸನಿಗಳು ತಮ್ಮ ತಮ್ಮ ಅಪಾರ್ಟ್‌ಮೆಂಟ್‌ಗಳಿಗೆ ಹೋಗಿ ಇಡೀ ರಾತ್ರಿ ಡ್ರಗ್ಸ್ ಸೇವನೆ ಮಾಡುತ್ತಿದ್ದರು. ಅದನ್ನು ಕೂಡ ನಾವು ಭೇದಿಸುವುದಕ್ಕೆ ಸಮರ್ಥರಾಗಿದ್ದೇವೆ. ಇದರ ಜೊತೆಗೆ, ಡ್ರಗ್ ಪೆಡ್ಲರ್‌ಗಳ ಜೊತೆ ಶಾಮೀಲಾಗಿ ಪೋಸ್ಟ್ ಆಫೀಸ್‌ನವರು fake address ಸೃಷ್ಟಿ ಮಾಡಿರುತ್ತಾರೆ. ಆ ವಿಳಾಸದಲ್ಲಿ ಯಾರು ಇರುವುದಿಲ್ಲ. ಆದರೆ, ಆ ವಿಳಾಸಕ್ಕೆ ಮಾದಕ ವಸ್ತು ಬರುತ್ತದೆ. ಆಗ postman ಆ ಮಾದಕ ವಸ್ತುವನ್ನು ಯಾರಿಗೆ ಸರಬರಾಜು ಮಾಡಬೇಕೋ ಅವರಿಗೆ ಸರಬರಾಜು ಮಾಡುತ್ತಾನೆ. 10 ಗ್ರಾಂ ತೂಕದ ಎಂ.ಡಿ.ಎಂ.ಎ. ಕ್ರಿಸ್ಟಲ್ಸ್, 30 ಗ್ರಾಂ ತೂಕದ ಬ್ರೌನ್ ಶುಗರ್ ಹಾಗೂ ವಿದೇಶಗಳಿಂದ ಬಂದಿದ್ದ ಪೋಸ್ಟ್ ಕವರ್‌ಗಳನ್ನು ಅಮಾನತ್ತುಪಡಿಸಿರುತ್ತೇವೆ. ಇದರ ಜೊತೆಗೆ, 03 ಜನ ಅಂತರಾಜ್ಯ ಕುಖ್ಯಾತ ಡ್ರಗ್ ಪೆಡ್ಲರ್‌ಗಳನ್ನು ನನ್ನ ಬಳಿ ಅವರುಗಳ ಹೆಸರು ಇದೆ. ಆದರೆ, I do not think it is fit to read. ಅವರನ್ನು ಬಂಧಿಸಿ, 44 ಲಕ್ಷ ಬೆಲೆ ಬಾಳುವ 2161 ಗ್ರಾಂ ಹ್ಯಾಶ್ ಆಯಿಲ್ ಮತ್ತು 2 ಕೆಜಿ ಗಾಂಜಾವನ್ನು ಸೀಜ್ ಮಾಡಿಕೊಂಡಿದ್ದೇವೆ. ದಿನಾಂಕ:08.09.2020ರಂದು ಕೇಂದ್ರ ವಿಭಾಗದ ಪೊಲೀಸರು 4 ಜನ ಪೆಡ್ಲರ್‌ಗಳನ್ನು ಬಂಧಿಸಿ 1352 ಕೆ.ಜಿ. ತೂಕದ ಗಾಂಜಾವನ್ನು ನಾವು ಸೀಜ್ ಮಾಡಿದ್ದೇವೆ. ಅವರನ್ನು ಒಂದು ವಾರದ ನಂತರ ಕಲ್ಬುರ್ಗಿಯಲ್ಲಿ ಅರೆಸ್ಟ್ ಮಾಡಿದ್ದೇವೆ. ಸಿಸಿಬಿ ಪೊಲೀಸರು ಅಂತರ್‌ರಾಜ್ಯ ಬೃಹತ್ ಮಾದಕ ವಸ್ತು ಕಳ್ಳ ಸಾಗಾಣಿಕೆ ಜಾಲ ಪತ್ತೆ ಮಾಡಿ, ಒಂದು ಕೋಟಿ ರೂಪಾಯಿ ಮೌಲ್ಯದ 204 ಕೆಜಿ ವಶಪಡಿಸಿ 03 ಜನ ಡ್ರಗ್ ಪೆಡ್ಲರ್‌ಗಳನ್ನು ನಾವು ಬಂಧಿಸಿರುತ್ತೇವೆ.

ಇದರ ಜೊತೆಗೆ, ದಿನಾಂಕ:06.09.2020ರಂದು 3 ಜನ ಆರೋಪಿಗಳನ್ನು ಪರಪ್ಪನ ಅಗ್ರಹಾರ ಪೊಲೀಸರವರು ಬಂಧಿಸಿ, ಅವರಿಂದ ಸುಮಾರು 165 ಕೆಜಿ ಗಾಂಜಾವನ್ನು ಸೀಜ್ ಮಾಡಿದ್ದೇವೆ. ಆಗ್ನೇಯ ವಿಭಾಗದ ಪೊಲೀಸರು ಸುಮಾರು 109 ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಆಗಲೇ ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದೇನೆಂದರೆ, ನೈಜೀರಿಯಾದಿಂದ ಬಂದವರು, ಆಫ್ರಿಕನ್ ದೇಶಗಳಿಂದ ಬಂದವರನ್ನು thorough investigation ಮಾಡಿ ನಾವು ಅವರ ಮೇಲೆ undercover ಇಟ್ಟುಕೊಂಡು ನೋಡುತ್ತಿದ್ದೇವೆ. ಮೇಜರ್ ಬಿಸಿನೆಸ್ ನೈಜೀರಿಯಾ ದೇಶಕ್ಕೆ ಇದೆ ಎಂಬ ಮಾಹಿತಿ ಇದೆ. ಶ್ರೀಲಂಕಾ ದೇಶದ ಜೊತೆ ಇದೆ, ಆಫ್ರಿಕನ್ ದೇಶಗಳ ಜೊತೆ ಇದೆ. ಇವೆಲ್ಲವನ್ನೂ ನಮ್ಮ ಪೊಲೀಸರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫಾಲೋ-ಅಪ್ ಮಾಡುತ್ತಿದ್ದಾರೆ. ಇದರಲ್ಲಿ ನಾವು ರಾಜಿ ಆಗುವ ಪ್ರಶ್ನೆ ಇಲ್ಲವೇ ಇಲ್ಲ. ಖಂಡಿತವಾಗಿ ನಮ್ಮ ಸರ್ಕಾರ ಈ ಹಂತಕ್ಕೆ ಇಳಿದು ರಾಜಿ ಮಾಡಿಕೊಳ್ಳುವುದಕ್ಕೆ ನಾವು ತಯಾರಾಗಿಲ್ಲ. ಮಾಹಿತಿ ಸಿಗಬೇಕಾಗಿದೆ. ಇವೊತ್ತಿನ ದಿವಸ ಡ್ರಗ್ voluminous thing ಆಗಿದ್ದರೆ ಏನಾದರೂ ಮಾಡಬಹುದಾಗಿತ್ತು. ಈ ಬಗ್ಗೆ ಮಾನ್ಯ ಸದಸ್ಯರು ಹೇಳಿದ ಹಾಗೆ, ಡ್ರಗ್ ಇವೊತ್ತಿನ ದಿವಸ ಚಾಕೊಲೇಟ್ ಆಗಿ, ಪೇಪರ್ ಆಗಿ ಅಥವಾ ಒಂದು ಸಣ್ಣ ಮಾತ್ರೆ ರೀತಿ ಇರುತ್ತದೆ. ಅವುಗಳನ್ನು ಮಾದಕ ವ್ಯಸನಿಗಳು ಜೇಬಿನಲ್ಲಿಟ್ಟುಕೊಂಡು ನುಂಗುತ್ತಾರೆ. ಇಂತಹವರನ್ನು ಪತ್ತೆ ಮಾಡುವುದು ನಮಗೆ ಬಹಳ ಕಷ್ಟವಾಗಿರುತ್ತದೆ. ಹಾಗಾಗಿ, ಪ್ರತಿ ಕಾಲೇಜುಗಳಿಗೆ ಅದರಲ್ಲಿಯೂ Technical Institution ಗಳಿಗೆ ಮಾದಕ ವಸ್ತುಗಳ ಬಗ್ಗೆ ಇನ್ನು ಮುಂದೆ ಕಡ್ಡಾಯವಾಗಿ ಮಾಹಿತಿ ಕೊಡಬೇಕೆಂದು ನಾವು ಸೂಚನೆ ಕೊಟ್ಟಿದ್ದೇವೆ.

ಇದರ ಜೊತೆಗೆ, ನಾವು ಸದನಕ್ಕೆ ಮಾಹಿತಿ ನೀಡುವುದೇನೆಂದರೆ, ನಾವು ಯಾರ ಜೊತೆಗೂ ರಾಜಿ ಆಗಿರುವುದಿಲ್ಲ. 2011 ನಲ್ಲಿ 251 ಪ್ರಕರಣಗಳು ರಿಪೋರ್ಟ್ ಆಗಿದ್ದು, 246 ಪ್ರಕರಣಗಳು ಟ್ರೂ ಆಗಿವೆ. ಅದರಲ್ಲಿ 18 ಜನ ಕನ್ವಿಕ್ಷನ್ ಆಗಿದ್ದಾರೆ. ಕೋರ್ಟ್ 125 ಜನಕ್ಕೆ ಅಕ್ವಿಟ್ ಮಾಡಿದೆ. 2012 ನಲ್ಲಿ 227 ರಿಪೋರ್ಟ್ ಆಗಿದ್ದು, 223 ಟ್ರೂ ಇದೆ, 24 ಜನ ಕನ್ವಿಕ್ಷನ್ ಆಗಿದ್ದಾರೆ, 115 ಜನ ರಿಲೀಸ್ ಆಗಿದ್ದಾರೆ. 2013 ನಲ್ಲಿ 294 ಪ್ರಕರಣಗಳು ರಿಪೋರ್ಟ್ ಆಗಿದ್ದು, ಅದರಲ್ಲಿ 293 ಪ್ರಕರಣಗಳು ಟ್ರೂ ಆಗಿದ್ದು, 30 ಜನರನ್ನು ಕನ್ವಿಕ್ಷನ್ ಮಾಡಿದ್ದು, 108 ಜನರನ್ನು ಅಕ್ವಿಟಲ್ ಆಗಿದ್ದಾರೆ. 2014ರಲ್ಲಿ 279 ಪ್ರಕರಣಗಳು ರಿಪೋರ್ಟ್ ಆಗಿದ್ದು, 277 ಪ್ರಕರಣಗಳು ಟ್ರೂ ಆಗಿದ್ದು, 106 ಜನ ಅಕ್ವಿಟಲ್ ಆಗಿದ್ದಾರೆ. 18 ಜನ ಕನ್ವಿಕ್ಷನ್ ಆಗಿದ್ದಾರೆ. 2015 ರಲ್ಲಿ 352 ಪ್ರಕರಣಗಳು ರಿಪೋರ್ಟ್ ಆಗಿದ್ದು, 351 ಪ್ರಕರಣಗಳು ಟ್ರೂ ಆಗಿವೆ. 2016 ರಲ್ಲಿ 652 ಪ್ರಕರಣಗಳು ರಿಪೋರ್ಟ್ ಆಗಿದ್ದು, 650 ಪ್ರಕರಣಗಳು ಟ್ರೂ ಆಗಿವೆ. 148 ಕನ್ವಿಕ್ಷನ್ ಆಗಿವೆ. 2017ರಲ್ಲಿ 1126 ಪ್ರಕರಣಗಳು ರಿಪೋರ್ಟ್ ಆಗಿದ್ದು, 1118 ಪ್ರಕರಣಗಳು ಟ್ರೂ ಆಗಿವೆ. 188 ಕನ್ವಿಕ್ಷನ್ ಆಗಿವೆ, 65 ಜನ ಮಾತ್ರ ಅಕ್ವಿಟಲ್ ಆಗಿದ್ದಾರೆ, 803 ಪ್ರಕರಣಗಳು pending trial ಇದ್ದು. 2018 ರಲ್ಲಿ 1032 ಪ್ರಕರಣಗಳು ರಿಪೋರ್ಟ್ ಆಗಿದ್ದು, 1029 ಪ್ರಕರಣಗಳು ಟ್ರೂ ಆಗಿವೆ. 167 ಜನಕ್ಕೆ ಕನ್ವಿಕ್ಷನ್ ಮಾಡಿದ್ದು, 685 ಜನ under trial ಇದ್ದಾರೆ. 2019 ರಲ್ಲಿ 1661 ಪ್ರಕರಣಗಳು ರಿಪೋರ್ಟ್ ಆಗಿದ್ದು, 1656 ಪ್ರಕರಣಗಳು ಟ್ರೂ ಆಗಿವೆ. 254 ಜನ ಕನ್ವಿಕ್ಷನ್ ಆಗಿದ್ದು, 889 ಜನ still under trial ಇದ್ದಾರೆ. 2020 ರಲ್ಲಿ 2589 ಪ್ರಕರಣಗಳು ರಿಪೋರ್ಟ್ ಆಗಿದ್ದು, 2584 ಟ್ರೂ ಆಗಿವೆ. ಈ ವರ್ಷದಲ್ಲಿದ್ದರೂ ಸಹ 83 ಜನ ಕನ್ವಿಕ್ಷನ್ ಆಗಿದ್ದು, 844 ಜನ pending trial

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದಾರೆ. Under investigation 1655 ಇದೆ. ಈ ಎಲ್ಲಾ ಮಾಹಿತಿಯನ್ನು ನಮ್ಮ ಸಿಸಿಬಿಯವರು ಮತ್ತು ಪೊಲೀಸರು ವ್ಯಾಪಕವಾಗಿ ಭೇದಿಸಿದ್ದಾರೆ.

ತಮಗೆಲ್ಲಾ ಗೊತ್ತಿರುವಂತೆ, ಇವೊತ್ತಿನ ದಿವಸ ಸೆಲೆಬ್ರಿಟಿಗಳು, ದೊಡ್ಡವರು ಮತ್ತು ವಿದ್ಯಾರ್ಥಿಗಳು ಅಂದರೆ, ಯಾವ ವ್ಯಕ್ತಿಗಳು ಒಂದು ಮಟ್ಟದಿಂದ ಮೇಲೆ ಇರುತ್ತಾರೆ ಅವರನ್ನು ಏಕಾಏಕಿ ಹೋಗಿ ಅರೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಅದು ಅಷ್ಟೊಂದು ಸುಲಭವಾಗುವುದಿಲ್ಲ. ಅದಕ್ಕೆ ಸರಿಯಾದ ಮಾಹಿತಿ ಬಂದು ನಾವು ಅದನ್ನು track ಮಾಡಿ, ಆ ನಂತರ ಅವರನ್ನು ಕಾನೂನು ಕೆಳಗಡೆ ತರಬೇಕಾಗುತ್ತದೆ. ಮಾನ್ಯ ಪಾಟೀಲ್ ಸಾಹೇಬರು ಹೇಳಿದ ಹಾಗೆ, law is very much there. ಇದು Non-Bailable offence. ನಮಗೆ ಸಿಕ್ಕಿದರೆ ಖಂಡಿತ ನಾವು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ confiscation ಗೂ scope ಇದೆ. ಒಂದು ವೇಳೆ ವಾಹನಗಳಲ್ಲಿ ಮಾದಕ ವಸ್ತು ಸಾಗಾಣೆ ಮಾಡಿದರೆ ನಾವು confiscate ಮಾಡುತ್ತೇವೆ. ನಾವು ಅದನ್ನು ಬಿಡುವುದಿಲ್ಲ. ಆದರೆ, ಇವೊತ್ತಿನ ದಿವಸ ಆ ಪ್ರಮಾಣದ ವ್ಯವಹಾರ ನಡೆಯುತ್ತಿಲ್ಲ. ಅದರಲ್ಲಿ ಆಗುವುದಕ್ಕಿಂತ, ಸ್ಟ್ರಿಪ್ಸ್, ಪೇಪರ್, ಮಾತ್ರೆ, ಚಾಕೊಲೇಟ್, ಅಯೋಡಿನ್, ಟರ್ಪೆಂಟೈನ್ ನಲ್ಲಿ ಮಾದಕ ವಸ್ತು ಸರಬರಾಜು ಆಗುತ್ತಿದೆ, ಇದನ್ನು ತಪ್ಪಿಸುವುದು ಬಹಳ ಕಷ್ಟವಾಗಿದೆ. ಅದಕ್ಕೆ, we need the help of the entire society. ಇದು ಹೇಗೆ ಇದೆಯೆಂದರೆ, ಒಂದು ಕಡೆ ನಾವು ಸೀದಾ ಹೋಗಿ ಒಬ್ಬ mob ಎಂದು ಹೇಳಿ ಬಂಧಿಸಿ ಒಳಗಡೆ ಹಾಕುವುದಕ್ಕೆ ಆಗುವುದಿಲ್ಲ. ಈ ಮಾದಕ ವಸ್ತು ಎಲ್ಲಿ ಸಿಗುತ್ತದೆ, ಯಾರು ಹೋಗುತ್ತಿದ್ದಾನೆ ಎಂಬ ಬಗ್ಗೆ initial ಆಗಿ ಅದು ನಮಗೆ ಗೊತ್ತಾಗುವುದಿಲ್ಲ. ನಮಗೆ ಗೊತ್ತಾಗುವ ವೇಳೆಗೆ ಆತ ಬಹಳ ಮುಂದೆ ಹೋಗಿರುತ್ತಾನೆ. ಹಾಗಾಗಿ, ಈ ಬಗ್ಗೆ ಕಾನೂನು ತರುವುದಕ್ಕೆ ಯಾವುದೇ ರಾಜಿ ಮಾಡುವುದಿಲ್ಲವೆಂದು ಹೇಳುತ್ತಾ, ಕಾನೂನು ಮಂತ್ರಿಯಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಾವು ಈಗಾಗಲೇ ನ್ಯಾಷನಲ್ ಲಾ ಸ್ಕೂಲ್‌ನವರನ್ನು ಮತ್ತು ನಮ್ಮ A.G.(Advocate General) ಯವರನ್ನು ಈ ಬಗ್ಗೆ ಏನಾದರೂ ಒಂದು ಬಿಗಿಯಾದ ಕಾನೂನು ಅಥವಾ ನಿಯಮ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ್ದೇವೆ. ಅವರಿಂದ ಒಂದು ಡ್ರಾಫ್ಟ್ ಬಂದರೆ, ತಕ್ಷಣವೇ ನಾವು ಅದನ್ನು enact ಮಾಡಿ, ಇದರ ಮೇಲೆ ಕಾನೂನನ್ನು ಬಿಗಿ ಮಾಡುತ್ತೇವೆ. ನಾವು ಇದರಲ್ಲಿ drug abettors ಅನ್ನು ಕೂಡ ಸೇರಿಸಬೇಕೆಂದು ಹೇಳಿದ್ದೇವೆ. Not only peddlers, ಮಾದಕ ವಸ್ತು ಸೇವನೆ ಮಾಡಬೇಕೆಂದು ಯಾರಾದರೂ ಪ್ರಚೋದನೆ ಮಾಡಿದರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಮಕ್ಕಳಿಗೆ ಮಾದಕ ವಸ್ತು ಸೇವನೆ ಮಾಡುವುದಕ್ಕೆ ಹುರಿದುಂಬಿಸಿದರೆ ಅವರನ್ನೂ ಕೂಡ abettors ಎಂದು ತೆಗೆದುಕೊಂಡು ಈ ಕಾನೂನಿನ ಕೆಳಗೆ ತರಬೇಕೆಂದು ಹೇಳಿದ್ದೇವೆ. ಇದರ ಜೊತೆಗೆ, ಯಾವುದೇ ವ್ಯಕ್ತಿ ಡ್ರಗ್ ಪರವಾಗಿ ಒಂದು ಒಳ್ಳೆಯ ಮಾತು ಆಡುತ್ತಾನೆಂದರೆ, he has to be treated as an abettor ಎಂದು ಹೇಳಿದ್ದೇವೆ. ಇಲ್ಲವಾದರೆ, ಈ ಮಾರಿಯನ್ನು ನಿಯಂತ್ರಣ ಮಾಡುವುದಿಲ್ಲವೆಂದು ನಮಗೆ ಗೊತ್ತಿದೆ. We will certainly bring law. ಇದರಲ್ಲಿ ನಮ್ಮ ನ್ಯಾಷನಲ್ ಲಾ ಸ್ಕೂಲ್‌ನವರಿಗೆ ಈ ಬಗ್ಗೆ ಒಂದು ಡ್ರಾಫ್ಟ್ ಅನ್ನು ಮಾಡಿಕೊಡಬೇಕೆಂದು ಹೇಳಿದ್ದೇವೆ. ಅವರು ಆ ಡ್ರಾಫ್ಟ್ ಮಾಡಿಕೊಟ್ಟ ನಂತರ ಅದನ್ನು ನಾವು ಹಾಕುತ್ತೇವೆ. ಈ ವರ್ಷ ನಮ್ಮ ಪೊಲೀಸರು commendable job ಮಾಡಿದ್ದಾರೆ. ಇದರಲ್ಲಿ ಎರಡು ಮಾತಿಲ್ಲ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮುಖಾಂತರ ಬೆಂಬಲ ವ್ಯಕ್ತಪಡಿಸಿದರು)**

ಈಗಾಗಲೇ ನಾನು ಪ್ರತಿ ವರ್ಷ ಎಷ್ಟು ಮಾದಕ ವಸ್ತು ಪ್ರಕರಣಗಳು ರಿಪೋರ್ಟ್ ಆಗುತ್ತಿತ್ತು ಎಂಬ ಬಗ್ಗೆ ಓದಿ ಹೇಳಿದ್ದೇನೆ. ಇದರಲ್ಲಿ ನಾವು ಈಗ ಸ್ವಲ್ಪಮಟ್ಟಿಗೆ ಭೇದನೆಯನ್ನು ಮಾಡಿದ್ದೇವೆ. ನಾವು ಇನ್ನೂ ಅವರನ್ನು ಕಾನೂನು ಕೆಳಗಡೆ ತರುವುದು ಬಾಕಿ ಇರುವುದರಿಂದ, ಈ ಬಗ್ಗೆ ಪೂರ್ಣ ಸ್ಥಿತಿಯನ್ನು reveal ಮಾಡುವುದಕ್ಕೆ ಆಗುವುದಿಲ್ಲ. ಪ್ರಸ್ತುತ ನಮ್ಮ ಬಳಿಯಿರುವ ಮಾಹಿತಿಯನ್ನು ಮಾತ್ರ ನೀಡಿದ್ದೇವೆ. ಸರ್ಕಾರ ಇದರಲ್ಲಿ ಯಾರ ದಾಕ್ಷಿಣ್ಯಕ್ಕೆ, ಯಾರ ಮುಲಾಜಿಗೆ ಬಲಿಯಾಗುವುದಿಲ್ಲ ಅಥವಾ ಶರಣಾಗುವುದಿಲ್ಲ, you can take it from us. ಇದರಲ್ಲಿ, ನಾವು strict action ತೆಗೆದುಕೊಳ್ಳುತ್ತೇವೆ. ಒಂದು ಸಮಾಜವನ್ನು ನೈತಿಕವಾಗಿ ಅಧೋಪತನಕ್ಕೆ ಹೋಗುವುದಕ್ಕೆ ಬಿಡುವುದಿಲ್ಲವೆಂದು ಹೇಳುತ್ತಾ, ಇವೊತ್ತಿನ ದಿವಸ ಸದನದಲ್ಲಿ ಮಾನ್ಯ ಸದಸ್ಯರು ಈ ವಿಷಯವನ್ನು ತೆಗೆದುಕೊಂಡು ಬಂದು, ಸಾಮಾಜಿಕ ಕಳಕಳಿಯನ್ನು ವ್ಯಕ್ತಿಪಡಿಸಿದ್ದಾರೆ, ಅವರಿಗೆ ನಾನು ಅಭಾರಿಯಾಗಿದ್ದೇನೆಂದು ತಿಳಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮುಂದಿನ ವಿಷಯ ನಿಯಮ 330 ರ ಮೇರೆಗೆ ಶ್ರೀ ಕೆ.ಪಿ. ನಂಜುಂಡಿಯವರದ್ದು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಇವೊತ್ತಿನ ಕಾರ್ಯಸೂಚಿಯ ಗಮನ ಸೆಳೆಯುವ ಸೂಚನೆಯಲ್ಲಿ ನನ್ನ ವಿಷಯ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ತಮ್ಮ ಪ್ರಶ್ನೆಗೆ ಉತ್ತರ ನೀಡುವುದಕ್ಕೆ ಸಚಿವರು ಸದನದಲ್ಲಿ ಇರುವುದಿಲ್ಲ. ಆ ಕಾರಣ ತಮಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾಳೆಯ ದಿವಸ ನನ್ನ ವಿಷಯವನ್ನು ತೆಗೆದುಕೊಳ್ಳುತ್ತೀರಾ?

**(ಗೊಂದಲ)**

**ಸಭಾಪತಿಯವರು:-** ಸಚಿವರು ಸದನಕ್ಕೆ ಯಾವಾಗ ಬರುತ್ತಾರೆಂದು ನನಗೆ ಗೊತ್ತಿರುತ್ತದೆಯೇ?

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ರಾಥೋಡ್‌ರವರ ಪ್ರಶ್ನೆಯನ್ನು ಕನಿಷ್ಠ ಪಕ್ಷ ನಾಳೆಯಾದರೂ ತೆಗೆದುಕೊಳ್ಳಬೇಕಾಗುತ್ತದೆ.

**ಸಭಾಪತಿಯವರು:-** ಸಚಿವರು ನಾಳೆಯ ದಿವಸ ಸದನಕ್ಕೆ ಹಾಜರಾದರೆ ತೆಗೆದುಕೊಳ್ಳಬಹುದು. ಹೌದು, ಅದು ಹಾಗೆಯೇ ಇರುವುದು. ಈಗ ನಿಯಮ 330.

**(ಮುಂದು)**

**(749)21.09.2020/7.50/ವೈಎಲ್-ಜಿಆರ್** (ಸಭಾಪತಿಯವರ ಉಪಸ್ಥಿತಿ)

**16.ನಿಯಮ 330 ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

**ವಿಷಯ:** ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ
ನಡೆಸಲಾಗಿರುವ ಜಾತಿವಾರು ಜನಗಣತಿ ವರದಿಯನ್ನು
ಬಿಡುಗಡೆಗೊಳಿಸಿ ತ್ವರಿತವಾಗಿ ಅನುಷ್ಠಾನಗೊಳಿಸುವ ಕುರಿತು.

****

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತಾ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗಿರುವ ಜಾತಿ, ಜನಗಣತಿ ಸಮೀಕ್ಷೆ ಕಾರ್ಯಕ್ಕೆ ಮಾಡಲಾಗಿರುವ ವೆಚ್ಚವು ಹಿಂದುಳಿದ ವರ್ಗಗಳ ಆಯೋಗದಿಂದ ಸಲ್ಲಿಸಲಾಗಿರುವ ವರದಿಯನ್ನು ಮಾನ್ಯ ಸಚಿವರು ಬಿಡುಗಡೆಗೊಳಿಸುತ್ತೇವೆ ಎಂದು ಹಿಂದೆಯೇ ತಿಳಿಸಿದ್ದರೂ, ಈವರೆಗೂ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯೋಗದ ವರದಿಯಲ್ಲಿ ಹಣ ಬಿಡುಗಡೆಯಾಗಿರುವುದಿಲ್ಲ ತ್ವರಿತವಾಗಿ ಅನುಷ್ಠಾನಗೊಳಿಸಿ ಎಂದು ಕೇಳಿದೆ. ನಮ್ಮ ಆತ್ಮೀಯ ಮಿತ್ರರಿಗೆ ಹಿಂದುಳಿದ ವರ್ಗದವರು ಕಷ್ಟ ಪಟ್ಟಿರುವ ಇತಿಹಾಸವನ್ನು ಹೇಳಿದರೆ ಜಾತಿ, ಜನಗಣತಿ ರೀತ್ಯಾ ಏಕೆ ಹಣ ಬಿಡುಗಡೆ ಮಾಡಬೇಕೆಂಬ ಅಂಶವು ಮಾನ್ಯ ಸಚಿವರ ಮನಸ್ಸಿಗೆ ಹೋಗುತ್ತದೆ ಎಂಬ ದೃಷ್ಟಿಯಿಂದ ಈ ವಿಚಾರವನ್ನು ಅವರ ಮುಂದೆ ಹೇಳುವುದಕ್ಕೆ ಇಚ್ಛಿಸುತ್ತೇನೆ. 1931ನೇ ಸಾಲಿನಲ್ಲಿ ಬ್ರಿಟಿಷರು ಜಾತಿವಾರು ಜನಗಣತಿಯನ್ನು ಮಾಡಿದ್ದಾರೆ. ಸುಮಾರು 85-88 ವರ್ಷಗಳಾದ ನಂತರ ಮಾನ್ಯ ಸಿದ್ದರಾಮಯ್ಯನವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಮತ್ತೊಂದು ಸಲ ಜಾತಿವಾರು ಜನಗಣತಿ ಮಾಡಬೇಕೆಂದು ಆದೇಶವನ್ನು ಮಾಡುತ್ತಾರೆ. ಆದರೆ, 88 ವರ್ಷಗಳ ನಂತರ ಹಿಂದುಳಿದ ವರ್ಗಗಳ ಜಾತಿವಾರು ಜನಗಣತಿ ಎಷ್ಟಿದೆ ಎಂಬುದರ ಆದೇಶ ಮಾಡುತ್ತಾರೆ. ಹಿಂದುಳಿದ ವರ್ಗಗಳನ್ನು ಮಾಡಿದವರು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ರಾಮಕೃಷ್ಣ ಹೆಗಡೆಯವರು 1983 ರಿಂದ 1985ನೇ ಸಾಲಿನೊಳಗೆ ಮಾಡುತ್ತಾರೆ. ಆದಾದ ನಂತರ ಅದರಲ್ಲಿ ಸ್ವಲ್ಪ ಗೊಂದಲ ಇದೆ, ಸರಿಯಾಗಿ ಜಾತಿವಾರು ಜನಗಣತಿ ಮಾಡಿಲ್ಲ, ನಮ್ಮನ್ನು ಕೈಬಿಡಲಾಗಿದೆ, ಸರಿಯಾಗಿ ಅವಕಾಶ ಸಿಗಲಿಲ್ಲ ಎನ್ನುವಂಥ ಮಾತು ಬಂದಂತಹ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪ ಮೊಯ್ಲಿಯವರು 1993-94ನೇ ಸಾಲಿನಲ್ಲಿ ಮತ್ತೊಂದು ಸಲ ಅದನ್ನು ಮಾರ್ಪಾಡು ಮಾಡುತ್ತಾರೆ. ಆದಾದ ನಂತರ ಇಲ್ಲಿಯವರೆಗೂ ಆ ಸಮಸ್ಯೆ ಯಾವುದು ಎಂಬುದು ಗೊತ್ತಿದ್ದರೂ ಸಹ ಸರಿಪಡಿಸುವಂತಹ ಕೆಲಸವನ್ನು ಯಾರೂ ಮಾಡುವುದಿಲ್ಲ. ಉದಾಹರಣೆಗೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಯಾವ ಆಧಾರದ ಮೇಲೆ ವರ್ಗಗಳಲ್ಲಿ ಜಾತಿವಾರು ವಿಂಗಡನೆಯನ್ನು ಮಾಡೋಣ ಎಂದು ಮಾಡಿದರೋ, ಆಗ ನಡೆದ ತಪ್ಪುಗಳನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿಯವರ ಸರ್ಕಾರದಲ್ಲಿ ಸರಿಪಡಿಸಬೇಕಾಗಿತ್ತು. ಅವರು ಸಹ ಎಲ್ಲಿಯೋ ಒಂದು ಕಡೆ ಮಿಸ್ ಮಾಡುತ್ತಾರೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿಯವರ ಕಾಲ ಘಟ್ಟದಲ್ಲಿ ಏನಾಗಿತ್ತೆಂದರೆ, ವೃತ್ತಿಯಲ್ಲಿ ರಕ್ತಗತವಾಗಿ ಬಂದಂತಹ ಕುಲಕಸುಬನ್ನು ಜಾತಿವಾರು ವಿಂಗಡನೆ ಮಾಡುವಂತಹ ಸಂದರ್ಭದಲ್ಲಿ ಕೆಲವು ಸಮಾಜದವರು ಮಾಡುವಂಥ ವೃತ್ತಿಗಳನ್ನು ಬೇರೆ ಬೇರೆ ಸಮಾಜದವರು ಅದೇ ವೃತ್ತಿಗಳನ್ನು ಮಾಡಿದಾಗ ಅವರನೆಲ್ಲಾ ತಂದು ಕುಲಕಸುಬನ್ನು ಮಾಡುವಂಥ ಜಾತಿಗಳಲ್ಲಿ ಉಪಜಾತಿಗಳನ್ನಾಗಿ ಸೇರಿಸುತ್ತಾರೆ. 102 ಜಾತಿಗಳಲ್ಲಿ ಹಿಂದುಳಿದ ವರ್ಗದವರಿಗೆ ಕೇವಲ ಶೇಕಡಾ 15 ರಷ್ಟು ಮೀಸಲಾತಿ ಇದೆ. ನಮ್ಮ ಜಾತಿಗಳಿಗೆ ಆ ಮೀಸಲಾತಿಯನ್ನು ತಂದು ಕೊಡುವುದಕ್ಕೆ ಕಣ್ಣಿನಲ್ಲಿ ರಕ್ತ ಬರುತ್ತದೆ. ರಕ್ತಗತವಾಗಿ ಬಂದಂತಹ ವೃತ್ತಿಯನ್ನು ನಮ್ಮ ಸಮಾಜದವರು ಮಾಡುತ್ತಾರೆ. ಬೇರೆ ಸಮಾಜದವರು ಅದೇ ವೃತ್ತಿ ಮಾಡಿದರೆ ನಮ್ಮ ಜನಗಣತಿಯಲ್ಲಿಯೇ ಸೇರಿಸಿ ಬಿಡುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಉದಾಹರಣೆಗೆ: ವಿಶ್ವಕರ್ಮ ಸಮಾಜದಲ್ಲಿ 41 ಉಪ ಜಾತಿಗಳಿದ್ದು, ಈ 41 ಉಪ ಜಾತಿಗಳಲ್ಲಿ ದೈವಜ್ಞ ಬ್ರಾಹ್ಮಣರು ಬರುತ್ತಾರೆ. ಇವರು ದೊಡ್ಡ ಸಮಾಜಕ್ಕೆ ಸೇರಿದ್ದು, ಗೋವಾದಿಂದ ಬಂದು ಚಿನ್ನ, ಬೆಳ್ಳಿ ಮಾರುವ ವೃತ್ತಿಯನ್ನು ಹೊಂದಿರುತ್ತಾರೆ. ಆದರೆ, ಇವರು ಜಾತಿಯಲ್ಲಿ ನಮ್ಮವರಲ್ಲ, ವೃತ್ತಿಯಲ್ಲಿ ಮಾತ್ರ ನಮ್ಮವರು. ನಮ್ಮ ಸಮಾಜದ ವಿಶ್ವಕರ್ಮವನ್ನು ಪೂಜಿಸುವುದಿಲ್ಲ, ಕಾಳಿಕಾ ದೇವಿಯನ್ನು ಪೂಜಿಸುವುದಾಗಲಿ, ನಮ್ಮ ಜಾತಿಯ ಯಾವುದೇ ಆಚರಣೆಯನ್ನು ಮಾಡುವುದಿಲ್ಲ. ಅವರದ್ದೇ ಆದಂತಹ ಆಚಾರ ವಿಚಾರಗಳನ್ನು ಹೊಂದಿರುತ್ತಾರೆ. ಅದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಆದರೆ, ನಮಗೆ ಇರುವ ಮೀಸಲಾತಿಯನ್ನು ದೈವಜ್ಞ ಬ್ರಾಹ್ಮಣರು ತೆಗೆದುಕೊಳ್ಳುತ್ತಿದ್ದಾರೆ. ಹಾಗಾಗಿ ಅವರನ್ನು ಬೇರ್ಪಡಿಸಿದರೆ ತಾನೇ ನಮ್ಮ ಮೀಸಲಾತಿಯನ್ನು ನಾವು ತೆಗೆದುಕೊಳ್ಳಲು ಸಾಧ್ಯ? ಈ ರೀತಿ ಬಹಳಷ್ಟು ತಪ್ಪುಗಳು ಬೇರೆ-ಬೇರೆ ಸಮಾಜದಲ್ಲಿಯೂ ಆಗುತ್ತಿದೆ. ಉದಾಹರಣೆಗೆ: ಚೆನ್ನದಾಸ, ದೊಂಬಿದಾಸ ಎಂಬ ಜಾತಿಗಳಿದ್ದು, ಇವೆರಡೂ ಒಂದೇ ಜಾತಿಗೆ ಸಂಬಂಧಪಟ್ಟಿರುತ್ತದೆ. ಆದರೆ, ಚೆನ್ನದಾಸದವರನ್ನು ಎಸ್.ಸಿ., ಸಮುದಾಯಕ್ಕೆ ಸೇರಿಸಿ, ದೊಂಬಿದಾಸರನ್ನು ಓಬಿಸಿಗೆ ಸೇರಿಸಿರುತ್ತಾರೆ. ಅದೇ ರೀತಿ ಶಿಳ್ಳೆಕ್ಯಾತ, ಕಿಳ್ಳೆಕ್ಯಾತ ಎಂಬ ಸಮುದಾಯವಿದ್ದು, ಕಿಳ್ಳೆಕ್ಯಾತವನ್ನು ಎಸ್.ಸಿ. ಸಮುದಾಯಕ್ಕೆ ಸೇರಿಸುತ್ತಾರೆ. ಶಿಳ್ಳೆಕ್ಯಾತವನ್ನು ಓ.ಬಿ.ಸಿ., ಗೆ ಸೇರಿಸಿರುತ್ತಾರೆ. ಈ ರೀತಿ ಬಹಳಷ್ಟು ಗೊಂದಲಗಳು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದರಿಂದಾಗಿ ಬಹಳಷ್ಟು ಜನರು ಇದರಿಂದ ನಿಮಗೆ ಏನು ತೊಂದರೆ ಎಂದು ಕೇಳಿದರು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಜಾತಿವಾರು ಜನಗಣತಿ ವರದಿಯನ್ನು ಬಿಡುಗಡೆಗೊಳಿಸಿ ಎಂಬುದರ ಬಗ್ಗೆ ಮಾತ್ರ ಕೇಳಿ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಹೌದು, ನಾನು ಎಲ್ಲವನ್ನೂ ಹೇಳದೆ ಏತಕ್ಕೆ ಬಿಡುಗಡೆ ಮಾಡುತ್ತೀರಿ ಎಂದು ಕೇಳಿದರೆ, ಮುಂದಿನ ಆಯೋಗದಲ್ಲಿ ಅಧ್ಯಕ್ಷರು ಬರುತ್ತಾರೆ, ಆಗ ಬಿಡುಗಡೆ ಮಾಡುತ್ತೇವೆ ಎಂದು ಹೇಳಿ ಸುಮ್ಮನಾಗುತ್ತಾರೆ. ಹಾಗಾಗಿ ಇದರ ಆಳ ಗೊತ್ತಾದರೆ, ನಾಳೆ ದಿವಸ ಹೋರಾಟ ಮಾಡಿ ನಮಗೆ ನ್ಯಾಯ ದೊರಕಿಸಿಕೊಡಬಹುದು. ಈ ತಪ್ಪುಗಳನ್ನು ಸರಿಪಡಿಸಬೇಕೆಂದರೆ, ಹಿಂದುಳಿದ ವರ್ಗದ ಜಾತಿವಾರು ಜನಗಣತಿಯನ್ನು ಬಹಿರಂಗವನ್ನು ಏತಕ್ಕೆ ಪಡಿಸಬೇಕೆಂದಕ್ಕೆ ಇದು ಮೂಲ. ಇಲ್ಲದಿದ್ದರೆ ನಾನು ಕೊಟ್ಟಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿದ್ದು, ಅದನ್ನು ಓದಿಕೊಂಡು ನಾನು ಸುಮ್ಮನಾಗುತ್ತಿದ್ದೆ. ಸ್ವಲ್ಪ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಆಯಿತು. ಸಚಿವರಿಗೂ ಅದೆಲ್ಲಾ ಗೊತ್ತಿರುತ್ತದೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಭಾಪತಿಯವರೇ, ಇವೆಲ್ಲಾ ತಪ್ಪುಗಳನ್ನು ಸರಿಪಡಿಸಬೇಕೆಂದು 2010ನೇ ಸಾಲಿನಲ್ಲಿ ನಮ್ಮ ದ್ವಾರಕನಾಥ ಆಯೋಗ ಈ ತಪ್ಪುಗಳನ್ನು ಸರಿಪಡಿಸಿ ಎಂದು ಸೂಚನೆ ನೀಡಿರುತ್ತದೆ. ಆದರೂ ಸರಿಪಡಿಸಿರುವುದಿಲ್ಲ. ಈ ಸಂಬಂಧ ಆಗಿನ ಕಾಲದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಜಾತಿವಾರು ಜನಗಣತಿ ಮಾಡಿ ಎಂದು ಆದೇಶ ಮಾಡಿದ ಮೇಲೆ ಜಾತಿವಾರು ಜನಗಣತಿ ಮಾಡುತ್ತಾರೆ. 162 ಕೋಟಿ 67 ಲಕ್ಷ ರೂಪಾಯಿ ಖರ್ಚು ಮಾಡಿ ಬಹಳ ದಿವಸಗಳ ಸಮಯ ತೆಗೆದುಕೊಂಡು, ಎಲ್ಲಾ ನೌಕರರು ಅದರ ಹಿಂದೆಯೇ ಬಿದ್ದು ಜಾತಿವಾರು ಜನಗಣತಿ ಮಾಡುವಂತೆ ಮಾಡಿರುತ್ತಾರೆ, ಆದರೆ ಅದನ್ನು ಬಹಿರಂಗ ಪಡಿಸಿಲ್ಲ. ನಾವುಗಳು ನಮ್ಮ ಜಾತಿ ಜನಸಂಖ್ಯೆ ಎಷ್ಟು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಬಹಿರಂಗ ಪಡಿಸಿ ಎಂದು ಒತ್ತಡ ಸಹ ಹಾಕುತ್ತಿದ್ದೇವೆ. ಇವತ್ತಿನ ಕಾಲದಲ್ಲಿ ಹಿಂದುಳಿದ ವರ್ಗದಲ್ಲಿ ಹುಟ್ಟಿರುವುದೇ ನೋವು ತರುವಂಥ ವಿಚಾರವಾಗಿದೆ. ನಾವು ನಮ್ಮ ಜಾತಿ ಸಂಖ್ಯೆ ಎಷ್ಟು ಎಂಬುದು ಗೊತ್ತಿಲ್ಲದಿದ್ದರೆ, ನಾವು ಹೇಗೆ ಹೋರಾಟ ಮಾಡಬೇಕು? ರಾಜಕೀಯ ತೀರ್ಮಾನಕೊಂಡಿರುವ ಯಾವುದೋ ಐದಾರು ಜಾತಿಯವರು ಮುಂದೆ ಬಂದಾಗ 102 ಜಾತಿಗಳವರು ಏನಿದ್ದಾರೆ, ಅವರೆಲ್ಲಾ ಹಿಂದೆಯೇ ಉಳಿದು ಬಿಡುತ್ತಾರೆ. ಅದಕ್ಕಾಗಿ ತುಂಬಾ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಆದ್ದರಿಂದ ಜಾತಿವಾರು ಜನಗಣತಿಯನ್ನು ಬಹಿರಂಗಪಡಿಸದೇ ಹೋದರೆ, ನಮಗೆ ಆಗುವ ನಷ್ಟ ಅಷ್ಟಿಷ್ಟಲ್ಲ. ನಮ್ಮ ಹಕ್ಕುಗಳನ್ನು ಸಾಮಾಜಿಕ ನ್ಯಾಯದಡಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬಹಳಷ್ಟು ಜನ ಅದರ ಬಗ್ಗೆ ಬೇರೆ ರೀತಿಯಲ್ಲಿ ಊಹಾಪೋಹಗಳನ್ನು ಮಾಡುತ್ತಿದ್ದಾರೆ. ಜಾತಿವಾರು ಜನಗಣತಿ ಬಂದರೆ, ಬೇರೆ ಸಮಾಜದಲ್ಲಿರುವ ಜನಸಂಖ್ಯೆ ಕಡಿಮೆಯಾದರೆ, ನಮಗೆ ಕಷ್ಟವಾಗುತ್ತದೆ ಹಾಗಾಗಿ ಜಾತಿವಾರು ಜನಗಣತಿ ಮಾಡುವುದು ಬೇಡ ಎಂದು ಹೇಳುತ್ತಿದ್ದಾರೆ. ಇದಕ್ಕೆ ಸರ್ಕಾರ ಮಣಿಯಬಾರದು. ಪ್ರತಿಯೊಬ್ಬರಿಗೂ ಅವರವರ ಜಾತಿ ಜನಸಂಖ್ಯೆ ಎಷ್ಟಿದೆ ಎಂಬುದು ತಿಳಿದುಕೊಂಡಾಗ ಮಾತ್ರವೇ, ನಮ್ಮ ಹಕ್ಕನ್ನು ಸಾಮಾಜಿಕ ನ್ಯಾಯದಡಿ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಆದ್ದರಿಂದ ದಯಮಾಡಿ ಕೇಳಿಕೊಳ್ಳುವುದೇನೆಂದರೆ, ಹಿಂದಿನ ಸರ್ಕಾರದಲ್ಲಿ ಶ್ರೀ ಕೆ.ಪಿ.ಪುಟ್ಟಣ್ಣ ಚೆಟ್ಟಿಯವರು ನಾನು ಸಹ ಹಿಂದುಳಿದ ವರ್ಗದಿಂದ ಬಂದಿದ್ದು, ಇದನ್ನು ಬಹಿರಂಗ ಪಡಿಸುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದರು. ಆದರೆ, ಅವರು ಸಹ ಮಾಡಲಿಲ್ಲ. ನಮಗೆಲ್ಲಾ ಹಾಲಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರದ ಮೇಲೆ ಬಹಳ ವಿಶ್ವಾಸ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯಮಾಡಿ ಮಾನ್ಯ ಸಚಿವರಾದ ಶ್ರೀರಾಮುಲುರವರು ಹಿಂದುಳಿದ ವರ್ಗಗಳ ಇತಿಹಾಸವನ್ನು ತಿಳಿದುಕೊಂಡು,... ಈ ದೇಶವನ್ನು ಕಟ್ಟಿದವರು ನಾವು, ಈ ದೇಶವನ್ನು ಉಳಿಸಿದವರು ನಾವು, ನಮಗೂ ಸಹ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದರೆ, ಈ ಜಾತಿವಾರು ಜನಗಣತಿಯನ್ನು ಬಹಿರಂಗಪಡಿಸಬೇಕು. ಇಲ್ಲದಿದ್ದರೆ ನಮ್ಮಲ್ಲಿಯೇ ಗೊಂದಲಗಳಾಗಿ, ನಾವುಗಳೇ ಕಿತ್ತಾಡಿಕೊಂಡು ಮತ್ತೆ ಮೊದಲಿನ ಸ್ಥಿತಿಗೆ ಬರುವಂತಾಗುತ್ತದೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು)** ಮಾನ್ಯ ಸಭಾಪತಿಯವರೇ, ಆ ಕಡೆ ಮಾತನಾಡಲು ಅವರಿಗೆ ಅವಕಾಶ ನೀಡಲಾಗಿದೆ, ಅದೇ ರೀತಿ ವಿರೋಧ ಪಕ್ಷದಲ್ಲಿ ಕಡೆಯೂ ಒಬ್ಬರಿಗೆ ಮಾತನಾಡಲು ಅವಕಾಶ ನೀಡಿದರೆ ಅನುಕೂಲವಾಗುತ್ತದೆ. ಎರಡೇ ಮಾತು ಜಾಸ್ತಿ ಮಾತನಾಡಲು ಹೋಗುವುದಿಲ್ಲ.

**ಸಭಾಪತಿಯವರು:–** ಸಚಿವರು ಉತ್ತರ ನೀಡಿದ ಮೇಲೆ ಸ್ಪಷ್ಟೀಕರಣ ಕೇಳಿದರೆ ಆಯಿತು. ಈಗ ಕುಳಿತುಕೊಳ್ಳಿ.

**ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೇ, ನಿಯಮ 330 ರಡಿಯಲ್ಲಿ ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಏಕೆಂದರೆ, ಇಲ್ಲಿಯೂ ಹಿಂದುಳಿದ ಆಯೋಗದ ಬಗ್ಗೆ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಮೀಕ್ಷೆ ನಡೆಯುವಂತಹ ಸಮಯದಲ್ಲಿ ಸುಮಾರು 5 ವರ್ಷಗಳಾಗಿವೆ.

**(ಮುಂದು) . . .**

**(750) 21.09.2020 8.00 ಟಿ.ಸಿ.ಹೆಚ್–ಜಿ.ಆರ್**

**ಶ್ರೀ ಬಿ.ಶ್ರೀರಾಮುಲು(ಮುಂದು):–**

ಇದಕ್ಕೋಸ್ಕರ ಎಲ್ಲಾ ವಿವರಗಳನ್ನು ಕಂಪ್ಯೂಟರೈಸ್ಡ್ ಮಾಡಿ, ಎಲ್ಲಾ ವರದಿಗಳನ್ನು ರೆಡಿ ಇಟ್ಟುಕೊಂಡಿದ್ದಾರೆ. ಈ ಸಮೀಕ್ಷೆಗೋಸ್ಕರವಾಗಿ ಸುಮಾರು 162.77 ಕೋಟಿ ರೂಪಾಯಿಗಳು ಖರ್ಚಾಗಿದೆ. ನಮ್ಮ ಸರ್ಕಾರಕ್ಕೆ ಇಲ್ಲಿಯತನಕ ಕೂಡ ಆಯೋಗದಿಂದ ಯಾವುದೇ ವರದಿ ಸಲ್ಲಿಕೆಯಾಗಲಿಲ್ಲ. ಅದಕ್ಕೆ ಕಾರಣವೇನೆಂದರೆ, ಆ ಆಯೋಗದ ಅಧ್ಯಕ್ಷರಾದಂತಹ ಶ್ರೀ ಹೆಚ್.ಕಾಂತರಾಜು ರವರ ಅವಧಿ ಮುಕ್ತಾಯವಾಗಿದೆ. ಆಯೋಗಕ್ಕೆ ಅಧ್ಯಕ್ಷರು ಮತ್ತು ಸದಸ್ಯರುಗಳ ಹೊಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೇಮಕಾತಿಯಾಗುವವರೆಗೆ ಈ ಆಯೋಗದ ಸಮೀಕ್ಷೆ ವರದಿ ಬಗ್ಗೆ ಇನ್ನೂ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದಕ್ಕಾಗಿಲ್ಲ. ತಮಗೂ ತಿಳಿದಿರುವಂತೆ, ಈ ಸಂಬಂಧ ಈಗಾಗಲೇ ಹೈಕೋರ್ಟ್‌ನಲ್ಲೂ ಕೂಡ ರಿಟ್ ಅನ್ನು ಹಾಕಿದ್ದಾರೆ, ಅದು ಇನ್ನೂ ನಡೆಯುತ್ತಿದೆ. ಹಾಗಾಗಿ, ಇವತ್ತು ಶ್ರೀ ಕೆ.ಪಿ.ನಂಜುಂಡಿಯವರು ಕೂಡ ಜಾತಿ ಜನಗಣತಿ ಸಮೀಕ್ಷೆ ಬಗ್ಗೆ ಅನುಷ್ಠಾನಗೊಳಿಸಬೇಕೆಂದು ಬಹಳ ಕಳಕಳಿ ಇಟ್ಟುಕೊಂಡು ಹಿಂದುಳಿದ ವರ್ಗದವರಿಗೆ ಈ ಸರ್ಕಾರದಲ್ಲಿ ನ್ಯಾಯ ಸಿಗುತ್ತದೆಂದು ಅವರು ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಹೊಸ ಅಧ್ಯಕ್ಷರು ಮತ್ತು ಹೊಸ ಸದಸ್ಯರುಗಳು ಬರುವವರೆಗೂ ಕೂಡ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಷ್ಟು ಶೀಘ್ರದಲ್ಲಿ ಈ ವಿಷಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಹೊಸ ಅಧ್ಯಕ್ಷರು ಮತ್ತು ಹೊಸ ಸದಸ್ಯರುಗಳು ನೇಮಕವಾದ ನಂತರ ಈ ಜಾತಿ ಜನಗಣತಿ ಸಮೀಕ್ಷೆಯನ್ನು ಆದಷ್ಟು ಶೀಘ್ರವಾಗಿ ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಚಿವರೇ, ಇಷ್ಟು ದಿವಸಗಳಲ್ಲಿ ಇದನ್ನು ಬಿಡುಗಡೆ ಮಾಡಲಾಗುವುದೆಂದು ಇದಕ್ಕೆ ಏನಾದರೂ time limit ಕೊಡುತ್ತೀರಾ?

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ನಾನು ಮಾನ್ಯ ಸಚಿವರು ಕೊಟ್ಟಂತಹ ಉತ್ತರವನ್ನು ಕೇಳಿದೆನು. ಜಾತಿ ಜನಗಣತಿ ಸಮೀಕ್ಷೆಗಾಗಿ ಸುಮಾರು 162.77 ಕೋಟಿ ರೂಪಾಯಿಗಳನ್ನು ವ್ಯಯ ಮಾಡಲಾಗಿದೆ. ಸುಮಾರು 10 ವರ್ಷಗಳಿಂದ ಈ ಹಣವನ್ನು ಹಿಂದುಳಿದ ವರ್ಗಗಳ ಆಯೋಗಕ್ಕೆ ಕೊಟ್ಟಿದ್ದೀರಿ. ನಾನು ಸುಮಾರು 2 ವರ್ಷಗಳ ಹಿಂದೆ ಆಗಿನ ಅಧ್ಯಕ್ಷರ ಜೊತೆ ಮಾತನಾಡಿದಾಗ, ಅವರು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇನೆಂದು ಹೇಳಿದರು. ಅದನ್ನು ಯಾರ ಕಡೆ, ಎಲ್ಲಿಗೆ ಕೊಟ್ಟಿದ್ದಾರೊ, ಗೊತ್ತಿಲ್ಲ. ತಾವು ಸಚಿವರಾಗಿ ಬರುವುದಕ್ಕಿಂತ ಮುಂಚೆ ಕೊಟ್ಟಿದ್ದರೊ, ಇಲ್ಲವೊ ಗೊತ್ತಿಲ್ಲ. ಅದು ನಿಮ್ಮ Secretariat ನಲ್ಲಿ ಇರಬಹುದು ದಯವಿಟ್ಟು ಅದನ್ನು ನೋಡಬೇಕು. ಶ್ರೀ ಹೆಚ್.ಕಾಂತರಾಜ ರವರು ವರದಿಯನ್ನು ಅಫಿಷಿಯಲಿ ಕೊಟ್ಟಿದ್ದಾರೊ, ಇಲ್ಲವೊ ಎಂದು ನೀವು clarification ತೆಗೆದುಕೊಳ್ಳಬೇಕು. ಇವತ್ತು ಇಡೀ ಹಿಂದುಳಿದ ವರ್ಗಕ್ಕೆ ಸಮೀಕ್ಷೆ ಮಾಡಿರುವುದಲ್ಲ. ಇಡೀ ನಮ್ಮ ರಾಜ್ಯದ ಪ್ರತಿಯೊಬ್ಬ ಮನುಷ್ಯ ಯಾವ ರೀತಿ ಸಾಮಾಜಿಕವಾಗಿ ಬಾಳುತ್ತಿದ್ದಾನೆ, ಯಾವ ರೀತಿ ಶೈಕ್ಷಣಿಕವಾಗಿ ಅವನ ಬೆಳವಣಿಗೆಯಾಗಿದೆ. ಆರ್ಥಿಕವಾಗಿ ಅವನು ಯಾವ ಮಟ್ಟದಲ್ಲಿ ಇದ್ದಾನೆಂದು ಮಾಡಿರುವಂತಹ ಜಾತಿ ಜನಗಣತಿ ಸಮೀಕ್ಷೆಯಾಗಿದೆ. ಇದು ಬರೀ ಜಾತಿ ಅಲ್ಲ. ಜಾತಿಯಲ್ಲಿ ಒಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಶ. ಪ್ರತಿಯೊಬ್ಬ ಮನುಷ್ಯನ ಅವನ ಯೋಗ್ಯ ಮತ್ತು ಅವನ ಸ್ಥಿತಿಗತಿಗಳನ್ನು ಹೇಳತಕ್ಕಂಥ ಒಂದು ಸಮೀಕ್ಷೆಯಾಗಿದೆ. ಇಲ್ಲಿ ನಾವು ಹಿಂದುಳಿದವರು ಅಥವಾ ಮುಂದುವರೆದವರು ಅಥವಾ ಮುಸಲ್ಮಾನರು ಅಥವಾ ಪರಿಶಿಷ್ಟ ಜಾತಿಯವರಿಗೆ ಮಾತ್ರ ಸಮೀಕ್ಷೆ ಮಾಡಿರುವುದು ಅಲ್ಲ. ಇಡೀ ನಮ್ಮ ರಾಜ್ಯದ ಮನುಷ್ಯರ ಅಥವಾ ಜನರ ಒಂದು ಸ್ಥಿತಿಗತಿಗಳನ್ನು ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಯಾವ ರೀತಿ ಇದ್ದಾರೆ ಎಂದು ಸಮೀಕ್ಷೆ ಮಾಡಿರುತ್ತದೆ. ಇದನ್ನು ತೂಗಿಸತಕ್ಕಂಥ ಒಂದು ವರದಿಯಾಗಿರುತ್ತದೆ. ಈ ವರದಿಯನ್ನು ತಾವು ತರಿಸಿಕೊಳ್ಳಬೇಕು. ಇವತ್ತು ಸುಮಾರು 162.77 ಕೋಟಿ ರೂಪಾಯಿಗಳು ಸಾರ್ವಜನಿಕರ ಹಣವನ್ನು ವ್ಯಯ ಮಾಡಿದ್ದೀರಿ. ಇದನ್ನು ಗಂಭೀರವಾಗಿ ತೆಗೆದುಕೊಂಡು ಆದಷ್ಟು ಬೇಗ ಮಂಡಿಸಿ. ತಾವು ಒಬ್ಬರು ಉತ್ತಮವಾದ ಸಚಿವರಾಗಿದ್ದೀರಿ. ನಿಮಗೂ ಪ್ರತಿಯೊಂದು ವಿಷಯದಲ್ಲೂ ಕೂಡ ಕಾಳಜಿ ಇದೆ. ಇದನ್ನು ನೀವು ತಮ್ಮ ಒಂದು Ministry ಯಲ್ಲಿ ಇದನ್ನು ತರಿಸಿಕೊಂಡು ಏನಾದರೂ ಮಾಡಿ. ಆದಷ್ಟು ಬೇಗ ಇದನ್ನು ಪ್ರಕಟ ಮಾಡಿದರೆ ಇಡೀ ನಮ್ಮ ಕರ್ನಾಟಕದ ಆರೂವರೆ ಕೋಟಿ ಜನರು ನಿಮ್ಮ ಬಗ್ಗೆ ಗೌರವವನ್ನು ಸೂಚಿಸುತ್ತಾರೆ. ಆದ್ದರಿಂದ ದಯವಿಟ್ಟು ಆ ಕೆಲಸವನ್ನು ಮಾಡಿ. ಶ್ರೀ ಕೆ.ಪಿ.ನಂಜುಂಡಿಯವರು ಈ ವಿಷಯವನ್ನು ನಿಯಮ 330ರಡಿಯಲ್ಲಿ ತಂದಿದ್ದಾರೆ, ತಮ್ಮ ಪಕ್ಷದವರೇ ಇದನ್ನು ತಂದಿದ್ದಾರೆ. ಹಾಗಾಗಿ, ಕಾಳಜಿ ವಹಿಸಿ. ಇದರಲ್ಲಿ ಎಲ್ಲಾ ಜಾತಿಯವರು ಇದ್ದಾರೆ, ಬರೀ ಹಿಂದುಳಿದ ವರ್ಗದವರು ಮಾತ್ರವಿಲ್ಲ. ಇಲ್ಲಿ ಎಲ್ಲಾ ಜನಾಂಗದ ಒಂದು ಸ್ಥಿತಿಗತಿಗಳನ್ನು ನೋಡುವುದಕ್ಕೆ ಈ ವರದಿ ಇದೆ. ಇದು ಯಾರಿಗೂ ಯಾವುದೇ ತರಹದ ಬಂಡವಾಳ ಅಥವಾ ಯಾರಿಗೂ ಯಾವುದೇ ರೀತಿ ಉಪಯೋಗ ಅಗತಕ್ಕಂಥದ್ದಲ್ಲ. ಅದು ಅವರ ಸ್ಥಿತಿಗತಿಗಳನ್ನು ನೋಡತಕ್ಕಂತಹ ಒಂದು ಸಮೀಕ್ಷೆ ಅಷ್ಟೆ. ನಂತರ ನೀವು ಸಂವಿಧಾನದ ಅಡಿಯಲ್ಲಿ ನಮಗೆ ಯಾವ ರೀತಿ ಅವಕಾಶ ಸಿಗುತ್ತದೆ, ನಿಮ್ಮ ಕಾಯ್ದೆಗಳಲ್ಲಿ ಯಾವ ರೀತಿ ಸಿಗುತ್ತದೆ, ಯಾರ್‍ಯಾರಿಗೆ ಎಷ್ಟೆಷ್ಟು ಪಾಲನ್ನು ಕೊಡಬೇಕು. ಯಾವ ಜನಾಂಗಕ್ಕೆ ಎಷ್ಟು ಮೀಸಲಾತಿ ಕೊಡಬೇಕಾಗುತ್ತದೆ ಎನ್ನುವುದನ್ನು ಲೆಕ್ಕಾಚಾರ ಮಾಡತಕ್ಕಂಥ ಒಂದು ಪಟ್ಟಿಯಾಗುವುದು ಅಷ್ಟೆ. ಹಾಗಾಗಿ, ದಯವಿಟ್ಟು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಆದಷ್ಟು ಬೇಗ ಅಂದರೆ ಇನ್ನು 2-3 ತಿಂಗಳಿನಲ್ಲಿ ಇದನ್ನು ತಂದರೆ ತಮಗೆ ಬಹಳ ಗೌರವ ಬರುತ್ತದೆಂದು ತಮ್ಮಲ್ಲಿ ಕೇಳುತ್ತಿದ್ದೇನೆ. ನಮಸ್ಕಾರ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್ ರವರೇ, ನಿಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಏಕೆ ಅದನ್ನು ಜಾರಿಗೆ ತರಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:-** ಅದನ್ನು ಆಗತಾನೆ ಮಾಡಿದ್ದರು. ಅದನ್ನು ಜಾರಿಗೆ ತರಬೇಕು ಎನ್ನುವಷ್ಟರಲ್ಲಿ ನಮ್ಮ ಸರ್ಕಾರ ಬಿದ್ದುಹೋಯಿತು.

**ಶ್ರೀ ಬಿ.ಶ್ರೀರಾಮುಲು:-** ಏಕೆಂದರೆ, ನಾನು ಕೂಡ ಕಾರ್ಯದರ್ಶಿಯವರ ಜೊತೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಇದರ ಬಗ್ಗೆ ಕೂಲಂಕಷವಾಗಿ ಮಾತನಾಡುತ್ತೇನೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಹೆಚ್. ಕಾಂತರಾಜರವರ ಅವಧಿ ಮುಗಿದ ನಂತರ, ಏನು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿತ್ತು, ಆ ವರದಿ ಸಲ್ಲಿಸುವಂತಹ ವಿಚಾರದಲ್ಲಿ ಇಲ್ಲಿಯವರೆಗೂ ಕೂಡ ನಮಗೆ ಯಾವುದೇ ಮಾಹಿತಿ ಇಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ತಮ್ಮ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಈಗ ನಿಮ್ಮದೇ ಸರ್ಕಾರ ಇರುವುದರಿಂದ, ನೀವು ಯಾರಿಂದ ಬೇಕಾದರೂ ವರದಿ ತರಿಸಿಕೊಳ್ಳುವುದಕ್ಕೆ ಅಧಿಕಾರವಿದೆ. ಅವರು ಸಮೀಕ್ಷೆ ಮಾಡಿದ್ದರೆ, ಅದು Secretariate ನಲ್ಲಿರುತ್ತದೆ. ಅವರದ್ದು ಒಂದು administrative wing ಇರುತ್ತದೆ. ದಯವಿಟ್ಟು ತಾವು ಅಲ್ಲಿಂದ ತರಿಸಿಕೊಳ್ಳಬಹುದು. ಸರ್ಕಾರಕ್ಕೆ ಅಧಿಕಾರವಿದೆ.

**ಶ್ರೀ ಬಿ.ಶ್ರೀರಾಮುಲು:-** ಅವರ ಅವಧಿ ಮುಗಿದಿರುವ ಕಾರಣ ಸಮಸ್ಯೆಯಾಗುತ್ತಿದೆ. ಆ ಆಯೋಗಕ್ಕೆ ಹೊಸ ಅಧ್ಯಕ್ಷರು ಮತ್ತು ಸದಸ್ಯರು ಬಂದರೆ, ನಮಗೆ ಯಾವುದೇ ಸಮಸ್ಯೆಯಾಗುವುದಿಲ್ಲ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:-** ಮಾನ್ಯ ಸಚಿವರೇ, ಶ್ರೀ ಹೆಚ್.ಕಾಂತರಾಜ ಆಯೋಗದವರು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ದಯವಿಟ್ಟು ತಾವು ಇದರಲ್ಲಿ ಮುತುವರ್ಜಿವಹಿಸಿ. ಸರ್ಕಾರ ಮನಸ್ಸು ಮಾಡಿದರೆ, ಹೊಸ ಅಧ್ಯಕ್ಷರನ್ನು ತಕ್ಷಣವೇ ನೇಮಕ ಮಾಡಬಹುದು. ಅದನ್ನು ನೀವು ಮುತುವರ್ಜಿ ವಹಿಸಿ ಮಾಡಿದರೆ, ಇಡೀ ಸಮಾಜ ನಿಮ್ಮನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತೆಂದು ಹೇಳುತ್ತಿದ್ದೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆಲಮಟ್ಟಿ ಅಣೆಕಟ್ಟನ್ನು 519 ರಿಂದ 524 ಮೀಟರ್‌ಗೆ ಹೆಚ್ಚಿಸುವುದರಿಂದ, ಬಿಜಾಪುರ ಜಿಲ್ಲೆಯ ಜನರಿಗೆ ಮತ್ತು ಜಾನುವಾರುಗಳಿಗೆ ಹಾಗೂ ಕೃಷಿ ಉತ್ಪಾದಕರಿಗೆ ಅನುಕೂಲವಾಗುವಂತೆ ಆ ಅಣೆಕಟ್ಟಿನ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಬೇಕೆಂದು ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, this is not a small matter. ಇದು 14 ಲಕ್ಷ ಎಕರೆ ನೀರಾವರಿಗೆ 7 ಜಿಲ್ಲೆಗಳಿಗೆ ಬೆನಿಫಿಟ್ ಆಗುವಂಥದ್ದು. ಇದನ್ನು ಇಷ್ಟು ಸರಳವಾಗಿ, ಸರಾಗವಾಗಿ ಸಂಬಂಧಪಟ್ಟ ಸಚಿವರ ಗೈರುಹಾಜರಿಯಲ್ಲಿ ಇದಕ್ಕೆ ಉತ್ತರ ನೀಡುವುದು I don't like this.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಇಲಾಖೆ ಸಚಿವರು):–** ಉತ್ತರ ಕೊಡುತ್ತೇವೆ. ಉತ್ತರ ಕೊಡುತ್ತೇವೆಂದರೆ ಬೇಡ ಎನ್ನುತ್ತಿದ್ದಾರಲ್ಲ?

**ಶ್ರೀ ಎಸ್.ಆರ್.ಪಾಟೀಲ್:–** ಇಲ್ಲ, I want the concerned Minister to be present while discussing this mater. ಇದು ಉತ್ತರ ಕರ್ನಾಟಕದ ಅಳಿವು–ಉಳಿವಿನ ಪ್ರಶ್ನೆ. Kindly see, this is a biggest project. 2010ರಲ್ಲಿ Krishna Water Disputes Tribunal ವರದಿ ಕೊಟ್ಟು 10 ವರ್ಷವಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಬೇರೆ form ನಲ್ಲಿ discussion ಮಾಡಿ. You can raise this matter by giving a Calling Attention Notice.

**ಶ್ರೀ ಎಸ್.ಆರ್.ಪಾಟೀಲ್:–** ನಾಳೆಗೆ ಈ ವಿಷಯ ಇದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಶ್ರೀ ಎಸ್.ಆರ್.ಪಾಟೀಲ್‌ರವರೇ, ಮಾನ್ಯ ಸದಸ್ಯರು ಕೇಳಿರುವುದಕ್ಕೆ ಉತ್ತರ ಕೊಟ್ಟುಬಿಡುತ್ತೇವೆ. ನಮ್ಮ ಮಾತು ಸ್ವಲ್ಪ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಇಲ್ಲ. ವಿಷಯಕ್ಕೆ ಸಂಬಂಧಪಟ್ಟ ಸಚಿವರು ಇಲ್ಲ. ಈ ರೀತಿಯಾಗಿ ನೀವು ಹಗುರವಾಗಿ ನಮ್ಮನ್ನು ಕಾಣುತ್ತೀರಿ ಎಂದರೆ, I don't like this one.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾವು ಇಷ್ಟನ್ನೇ ಹೇಳುತ್ತೇವೆ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, this is not a small thing. ಇದು ಇಡೀ ಉತ್ತರ ಕರ್ನಾಟಕದ ಬದುಕಿನ ಪ್ರಶ್ನೆ ಇದೆ. 130 ಟಿ.ಎಂ.ಸಿ., ನೀರು ಸುಮಾರು 10 ವರ್ಷಗಳಿಂದ ಬಳಕೆಯಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇಲ್ಲಿ ಏನಾಗುತ್ತದೆಂದರೆ, ಸಂಬಂಧಪಟ್ಟಂತಹ ಸಚಿವರು ಇಲ್ಲದೇ ಇರುವುದರಿಂದ, ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಈ ವಿಷಯ ನಡೆದಿದೆ ಎಂದು ಕೇಳಿದ್ದರು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಪೇಪರ್ ಓದಿ ಹೋಗುವವರು. ನೋಡಿ . . .

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ಸಮಸ್ಯೆ ಏನಾಗಿದೆಯೆಂದು ಹೇಳಿದರೂ ಅವರು ಕೇಳುತ್ತಿಲ್ಲ. ಅದು ಹೇಗೆ solve ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಬೇಕು ಎಂದು ನಾನು insist ಮಾಡುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದೇ ಉತ್ತರವನ್ನೇ ಅವರು ಹೇಳುವುದು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಉತ್ತರ ಕೊಡಲಿ. ಇದಕ್ಕೇನು importance ಇಲ್ಲವೇ? ಇದನ್ನು ಅಲೋ ಮಾಡಿದರೆ I will be more unhappy. ಇದು ಇಡೀ ಉತ್ತರ ಕರ್ನಾಟಕದ ಬದುಕಿನ ಪ್ರಶ್ನೆ. 130 ಟಿ.ಎಂ.ಸಿ. ನೀರು ಇದರಿಂದ ಸುಮಾರು 14 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಆಗುವಂಥದ್ದು. ಸಂಬಂಧಪಟ್ಟ ಸಚಿವರೇ ಇಲ್ಲ, ಕಾನೂನು ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದರೆ, ನಾನು ಸದನದಿಂದ ಹೊರಗಡೆ ಹೋಗಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೆ, ಅವರ ಪರವಾಗಿ ಕಾನೂನು ಸಚಿವರು ಉತ್ತರ ಕೊಡುತ್ತಿದ್ದಾರೆ, ತಾವು ದಯವಿಟ್ಟು ಕೇಳಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾಳೆ ಸಂಬಂಧಪಟ್ಟ ಸಚಿವರು ಬರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ತಾವು ಅವರು ಬರುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಪ್ರಕಾಶ್.ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಂದ ನಂತರ ಇದನ್ನು ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, kindly don't allow this. Let the concerned Minister come and answer. ಏಕೆಂದರೆ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ.

**ಶ್ರೀ ಆರ್.ಬಿ.ತಿಮ್ಮಾಪೂರ್:-** ಮಾನ್ಯ ಸಭಾನಾಯಕರೇ, ಜಲ ಸಂಪನ್ಮೂಲ ಸಚಿವರಿಗೆ ಏನಾಗಿದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಕಾರಣಾಂತರದಿಂದ ಅವರು ಸದನಕ್ಕೆ ಬಂದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೋಡಿ, ಇದು ಬಹಳ ಮಹತ್ವದ ವಿಚಾರವಾಗಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಜಲಸಂಪನ್ಮೂಲ ಸಚಿವರ ಪರವಾಗಿ ಮಾನ್ಯ ಕಾನೂನು ಸಚಿವರು ಉತ್ತರ ಕೊಡುತ್ತಾರೆ. ಒಂದು ವೇಳೆ ನಿಮಗೆ ಏನಾದರೂ ತೊಂದರೆಯಾದರೆ ಮತ್ತೆ ಕೇಳಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ಪ್ರಕಾಶ್.ಕೆ.ರಾಥೋಡ್‌ರವರು ನಿಯಮ 59 ರಡಿಯಲ್ಲಿ ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಇನ್‌ವಾಲ್ವ್ ಆಗಿರುವುದು ನಮ್ಮ ಕೆಲಸವಲ್ಲ. ಇದು court matter. ಅವರು ಈ ವಿಚಾರವನ್ನು ಹೇಳಿ ಎಂದು ಹೇಳಿದ್ದಾರೆ. It is my turn. ನನಗೂ ಉತ್ತರ ಹೇಳುವುದಕ್ಕೆ ಬರುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, let the concerned Minister answer this. ಇದಕ್ಕೆ ಸಂಬಂಧಪಟ್ಟ ಸಚಿವರು ಬರಲಿ. ನೋಡಿ, ಇದು ಸಣ್ಣ ವಿಚಾರ ಅಲ್ಲ, (ಗೊಂದಲ) ಇದರ ಬಗ್ಗೆ ಬಹಳ ಆಳವಾಗಿ ವಿಸ್ತಾರವಾಗಿ ಚರ್ಚೆ ಮಾಡಬೇಕಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾಳೆ ಮಾನ್ಯ ಜಲಸಂಪನ್ಮೂಲ ಸಚಿವರು ಬಂದ ನಂತರ ಅವರಿಂದ ಉತ್ತರ ಕೇಳುತ್ತೇನೆ.

**ಸಭಾಪತಿಯವರು:–** ಸರಿ, ಈಗ ಆಗಿನಿಂದ ಇವತ್ತೇ ಆಗಬೇಕು ಎಂದು ಹೇಳಿದರು. ಈಗ ನಾಳೆ ಅವರಿಂದ ಉತ್ತರ ಕೇಳುತ್ತೇವೆಂದು ಹೇಳುತ್ತಿದ್ದೀರಿ.

**(751)21.9.2020/8.10/ಎಂ.ಎಂ–ಎಂ.ಡಿ**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ತಾವು ನನ್ನ ಪ್ರಶ್ನೆಯನ್ನು ಕರೆಯಲಿಲ್ಲವೆಂದು, ನನ್ನ ಪ್ರಶ್ನೆ ಬಂದಿಲ್ಲವೆಂದು ಮಾನ್ಯ ಮುಖ್ಯ ಸಚೇತಕರಿಗೂ ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಕೇಳಿ ಅವರು ಉತ್ತರ ಕೊಡಲಿ ಎಂದು ನಾನೇ ನಿಲ್ಲಿಸಿಕೊಂಡಿದ್ದೆ.

**Sri S.R.PATIL (LEADER OF OPPOSITION):-** Sir, Let the concerned Minister come and answer.

**Sri J.C.MADHUSWAMY (LAW PARLIAMENTARY AFFAIRS & MINOR IRRIGATION MINISTER):-** No, that is not the parliamentary practice. ಸರ್ಕಾರದ ಪರವಾಗಿ ಉತ್ತರ ಕೊಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿವೆ. ನೀವು ನಮ್ಮನ್ನು ಬಹಳ ಹಗುರವಾಗಿ ಕಾಣುತ್ತಿದ್ದೀರಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ವಿರೋಧಪಕ್ಷದ ನಾಯಕರೇ, ದಯಮಾಡಿ ನಮ್ಮನ್ನು ಕ್ಷಮಿಸಿ.

**ಶ್ರೀ ಎಸ್.ಆರ್. ಪಾಟೀಲ್:-** ನೋಡಿ ಇದರಲ್ಲಿ ಬಹಳಷ್ಟು ವಿಷಯವಿದೆ. ನಾವು ಇದರ ಬಗ್ಗೆ ಚರ್ಚೆ ಮಾಡಬೇಕು.

**(ಗೊಂದಲ)**

**Sri S.R.PATIL:-** This is not proper. ಸಂಬಂಧಿಸಿದ ಮಂತ್ರಿ ಬರಲಿ. (ಗೊಂದಲ) ನಮ್ಮನ್ನು ಎಷ್ಟು ಹಗುರವಾಗಿ ತೆಗೆದುಕೊಂಡಿದ್ದಾರೆ. Atleast, you adjourn the House. Tomorrow we can take it for discussion.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಯಾರು ಕೊಟ್ಟರೂ ನಾಳೆ ಇದನ್ನೇ ಓದುತ್ತೇವೆ. It is signed by the Hon'ble Minister.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರ ನಿಯಮ 59ರ ಕೆಳಗೆ ಬಂದಿದೆ ಇದನ್ನು ಕ್ಲಬ್ ಮಾಡಿಸಿ. (ಗೊಂದಲ) ಉತ್ತರ ಕೊಡಬಾರದು ಎಂದಲ್ಲ, ಅನೇಕ ಸಲ ನಾವು ನಿಮ್ಮ ಸ್ಥಾನದಲ್ಲಿದ್ದಾಗ ಸಂಬಂಧಿಸಿದ ಮಂತ್ರಿ ಇಲ್ಲದಿದ್ದಾಗ ಅವರು ಬಂದ ನಂತರ ಉತ್ತರ ಕೊಡಲು ಹೇಳುತ್ತಿದ್ದೆವು. ನಾವು ನಿಮ್ಮ ಹಾಗೆ defend ಮಾಡುವುದಕ್ಕೆ ಹೋಗಿಲ್ಲ. ನಾನು ಕೂಡ ಸಭಾನಾಯಕರಾಗಿ ಮೂರು ವರ್ಷ ಕೆಲಸ ಮಾಡಿದ್ದೇನೆ. ಸದಸ್ಯರು ಒತ್ತಾಯ ಮಾಡಿದಾಗ ಸಂಬಂಧಿಸಿದ ಮಂತ್ರಿಗಳೇ ಬೇಕು ಎಂದಾಗ ಅದನ್ನು allow ಮಾಡಿದೆವು. ನೀವು ಹೀಗೆ defend ಮಾಡುವುದು ಸರಿ ಕಾಣುವುದಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ನಿಮಗೆ ಸಮಾಧಾನವಾಗದಿದ್ದರೆ ಅವರು ಬಂದು ಮತ್ತೆ ಉತ್ತರ ಕೊಡಲಿ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆ ಎಂದು ಕೇಳುವ ಸೌಜನ್ಯ ನಿಮಗಿಲ್ಲವೆಂದರೆ . . .

**ಶ್ರೀ ಎಸ್.ಆರ್. ಪಾಟೀಲ್:-** ಮಂತ್ರಿಯವರು ಬರಲಿ . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರು ಏನು ಹೇಳುತ್ತಿದ್ದಾರೆ . . . ಅದನ್ನು . . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ ಇದಕ್ಕಿಂತ ಹೆಚ್ಚಾಗಿ ನಾನು ಏನೂ ಹೇಳುವುದಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಈ ವಿಚಾರವನ್ನು ಬಿಡುವ ವಿಷಯ ಇಲ್ಲಿ ಚರ್ಚೆಯಲ್ಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಅದಕ್ಕೆ ಹಿನ್ನೆಲೆ ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ನಮ್ಮ allocation ಏನಿತ್ತು, ಟ್ರಿಬ್ಯೂನಲ್ ನಮಗೇನು ಕೊಟ್ಟಿತ್ತು ಮೂರು ರಾಜ್ಯಗಳು SLP (Special Leave Petition) ಹಾಕಿ ಅದು ಸುಪ್ರೀಂ ಕೋರ್ಟ್‌ನಲ್ಲಿ stay ಇರುವುದರಿಂದ ನಾವು ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು as a Law Minister, I am bound to answer on this matter. ನಾನು ಹೇಳುವುದಕ್ಕೆ ಹೊರಟಿರುವ ಉತ್ತರ ಸುಪ್ರೀಂ ಕೋರ್ಟ್ ಮುಂದೆ SLP ಇದೆ, stay ಇದೆ, we cannot enhance the height of the dam.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಬಹಳಷ್ಟು ಬೇರೆ ವಿಚಾರಗಳಿವೆ. ದಯವಿಟ್ಟು ನಾವು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆಂದರೆ ಅಷ್ಟೇ ಸಾಕಾಗುವುದಿಲ್ಲ, ಅವರು ಹೇಳುವುದು ಸಾಕಾಗುವುದಿಲ್ಲ ಇದರ ಬಗ್ಗೆ ಚರ್ಚೆಯಾಗಲೇಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಇಲ್ಲಿ technical ಆಗಿರುವುದು ಏನೂ ಇಲ್ಲ. ಇದು Tribunal decision ಆಯಿತು, ಗೆಜೆಟ್ ನೋಟಿಫಿಕೇಷನ್ ಆಗುವ ಹಂತಕ್ಕೆ ಬಂದಿತ್ತು, ಕಾವೇರಿ, ಮಹದಾಯಿ ಗೆಜೆಟ್ ಆಯಿತು ನಮ್ಮ ಗ್ರಹಚಾರಕ್ಕೆ 519.6 ರಿಂದ 524ಕ್ಕೆ ಆಗಿ 170 ಟಿ.ಎಂ.ಸಿ ನೀರನ್ನು ನಮಗೆ ಹೆಚ್ಚು ಕೊಡಬೇಕಾಗಿದೆ, ನೀರು ತರುವ ಮಧ್ಯೆ ಸುಪ್ರೀಂ ಕೋರ್ಟ್ ಗೆಜೆಟ್ ನೋಟಿಫಿಕೇಷನ್ ಮಾಡಬಾರದು ಎಂದು ತಿಳಿಸಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಚಿವರೇ, ಇದಷ್ಟೇ ವಿಚಾರವಲ್ಲ, ಇದರ ಬಗ್ಗೆ ನಾಳೆ ಮಾತನಾಡೋಣ.

**Sri S.R.PATIL:-** You are diluting the issue.

**Sri PRAKASH K.RATHOD:-** I agree with you.

**Sri S.R.PATIL:-** You please insist for the concerned Minister. Let him come and answer.

**Sri PRAKASH K.RATHOD:-** Sir, Let the concerned Minister come and answer.

**Sri J.C.MADHUSWAMY:-** There is no procedure like that.

**Sri S.R.PATIL:-** Sir, There is a procedure.

**Sri J.C.MADHUSWAMY:-** Sir, On behalf of the Government, we are answering here.

**ಶ್ರೀ ಎಸ್.ಆರ್. ಪಾಟೀಲ್:-** ಅವರನ್ನೇಕೆ ನೀವು ಮಂತ್ರಿ ಮಾಡಿದಿರಿ? ಬೃಹತ್ ನೀರಾವರಿ ಸಚಿವರ ಬದಲಾಗಿ ನೀವು ಉತ್ತರವನ್ನು ಕೊಡುತ್ತೀರಾ?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ವಿಮರ್ಶೆ ಸರಿಯಲ್ಲ. ಸರ್ಕಾರದಲ್ಲಿ ಸಚಿವರೇ ಉತ್ತರ ಕೊಡಬೇಕು ಎಂದು ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಸಂಬಂಧಿಸಿದ ಮಂತ್ರಿ ಬೇಕಾಗಿದ್ದಾರೆ ಇದರಲ್ಲಿ ನಮ್ಮ ಬಹಳಷ್ಟು ವಿಚಾರಗಳಿವೆ, ಗಹನವಾದಂತಹ ವಿಚಾರಗಳಿವೆ, ಉತ್ತರ ಕರ್ನಾಟಕದ ಬದುಕಿನ ಪ್ರಶ್ನೆ ಇದೆ. ನಾವು ಇಷ್ಟು ಹೇಳಿದರೂ ನೀವು ತಾವೇ ಉತ್ತರ ಕೊಡುತ್ತೇನೆ ಎಂದರೆ ನಿಮ್ಮದು ಜಿದ್ದಾ? ನಿಮ್ಮದೇನು ಜಿದ್ದು?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ನನ್ನನ್ನು ಬೆಳಿಗ್ಗೆಯಿಂದ ಕೂರಿಸಿಕೊಂಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಅನೇಕ ಸಂದರ್ಭದಲ್ಲಿ ಸಂಬಂಧಿಸಿದ ಮಂತ್ರಿ ಇಲ್ಲದಿದ್ದರೆ ಮಂತ್ರಿ ಬಂದ ಮೇಲೆ ಉತ್ತರ ಕೊಡುವಂತೆ ಹೇಳಿದ್ದೆವು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರೇಕೆ ಪ್ರಶ್ನೆ ಕೇಳಿದರು? How can you say that?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಂತ್ರಿಯವರು ಬರಲಿ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–**ನಾನು ಮಂತ್ರಿ ಅಲ್ಲವೇ? ನಾವು ಸರ್ಕಾರದಲ್ಲಿ ಇಲ್ಲವೇ?

**ಶ್ರೀ ಎಸ್.ಆರ್. ಪಾಟೀಲ್:–** ಆ portfolio ನಿಮಗಿದೆಯೇ? ಮಂತ್ರಿಯವರು ಬರಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಂತ್ರಿಗಳು ಜವಾಬ್ದಾರಿಯುತವಾಗಿ collective responsibility ಇರುವುದರಿಂದ ನಾವು ಸರ್ಕಾರದ ಪರವಾಗಿ ಉತ್ತರ ಕೊಡುತ್ತೇವೆ.

**Sri S.R.PATIL:-** I know that. Even I have also studied the Constitution and law of the land.

**Sri J.C.MADHUSWAMY:-** Sorry, it is the practice. ಈ ತರಹ bulldoze ಮಾಡಿಕೊಂಡು ಸಭೆಗಳನ್ನು ನಡೆಸುವುದಾದರೆ, ಆ ರೀತಿ ನಡೆಸುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ನೀವು bulldoze ಮಾಡುವುದಕ್ಕೆ ಹತ್ತಿದ್ದೀರಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಈ process ನಲ್ಲಿ ಈ ತರಹ ಅವರೇ ಬರಲಿ ಇವರೇ ಬರಲಿ ಎಂದು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ನಾವು ಹೇಳುವುದು ಒಂದೇ ಸಲ. ನಮ್ಮ ಕಳಕಳಿಯನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೀವು ಇದನ್ನು ಬೇರೆ ರೂಪದಲ್ಲಿ ತನ್ನಿ. **(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಸಬ್ಮಿಷನ್ ಇದೆ ಇದೊಂದು ತುಂಬಾ ಗಹನವಾದಂತಹ ವಿಷಯವಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ತಿಪ್ಪೇಸ್ವಾಮಿಯವರೇ, ಅವರು ಕೇಳುವುದಕ್ಕೆ ಮೊದಲೇ ಹೇಳಬಹುದಾಗಿತ್ತಲ್ಲವೇ?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ದಯಮಾಡಿ ಒಂದು ನಿಮಿಷ ಕೇಳಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಅವರು ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡಿದ ಮೇಲೆ ಉತ್ತರ ಹೇಳದಿದ್ದರೆ ಹೇಗೆ?

**Sri K.A.THIPPESWAMY:-** Sir, Please allow me to submit. ನನ್ನ ಸಬ್ಮಿಷನ್ ಇಷ್ಟೇ. ಇದು ಆಂಧ್ರಪ್ರದೇಶದವರು....

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಇದು ಸರಿಯಲ್ಲ, ಮಾನ್ಯ ಸಚಿವರೇ ನಿಮ್ಮ ಮೇಲೆ ನಮಗೆ ಬಹಳ ಗೌರವವಿದೆ

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ನಿಮ್ಮದು ಸರಿಯಲ್ಲ. You cannot deny the right of the Minister. I am answering on behalf of the Government.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಅವರ ಕಡೆಯಿಂದ ಉತ್ತರ ಕೊಡಿಸಿ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ನಾವು ನಿಮ್ಮ ಯೋಜನೆಯ ವಿರೋಧಿಗಳಲ್ಲ. ಆದರೆ ನಾವು ಸರ್ಕಾರವನ್ನು ನಡೆಸಬೇಕಾದರೆ ಅವರೇ ಬಂದು ಉತ್ತರ ಕೊಡಬೇಕು ಎನ್ನುವುದು;

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ವಾದ ಮಾಡುತ್ತಾರೆ ಇಡೀ ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಬದುಕಿನ ಪ್ರಶ್ನೆ ಇದೆ. 14 ಲಕ್ಷ ಎಕರೆ ನೀರಾವರಿ ಪ್ರಶ್ನೆ ಇದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಳೆ ಸಂಬಂಧಿಸಿದ ಮಂತ್ರಿ ಬರಲಿ, ಅವರ ಜೊತೆ ನಾವು ವಿಸ್ತೃತವಾದ ಚರ್ಚೆ ಮಾಡುತ್ತೇವೆ ಎಂದು ನಾವು ಮನವಿ ಮಾಡಿಕೊಂಡರೆ ಅದರ ಬಗ್ಗೆ ಇವರಿಗೆ ಲಕ್ಷ್ಯವೇ ಇಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ವಿರೋಧಪಕ್ಷದ ನಾಯಕರೇ, ನೀವು ಆಗ ಮನವಿ ಮಾಡಲಿಲ್ಲ. ಅವರು ಕೇಳಿದ ಮೇಲೆ ನೀವು ಉತ್ತರ ಹೇಳಬೇಡಿ ಎಂದು ಹೇಳಿದಿರಿ. ನೀವೇ ಅವರಿಗೆ ಗಮನ ಸೆಳೆಯುವ ಸೂಚನೆಯನ್ನು raise ಮಾಡಬೇಡಿ ಎಂದು ಹೇಳಬಹುದಾಗಿತ್ತು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ತಾವು ನಾಳೆಗೆ ತೆಗೆದುಕೊಳ್ಳುತ್ತೇವೆಂದ ಮೇಲೆ ನಾನು ಸುಮ್ಮನೆ ಕುಳಿತುಕೊಂಡೆ.

**ಶ್ರೀ ಎಸ್.ಆರ್. ಪಾಟೀಲ್:-** ನಾನು ಆ ಕಳಕಳಿ, ಚಿಂತನೆ ಮತ್ತು ಕಾಳಜಿಯ ಮೇಲೆ ಮಾತನಾಡುತ್ತೇನೆ. I don't have power like a Minister.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಪಾಟೀಲರೇ ನಿಮ್ಮ ಬಗ್ಗೆ ನಮಗೆ ಗೌರವ ಇದೆ. ನಮ್ಮ ಕಾನೂನು ಸಚಿವರು ಏನು ಹೇಳಿದರೆಂದರೆ, ಉತ್ತರ ಕೊಡುತ್ತೇವೆ, ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ನಾಳೆ ಪಡೆದುಕೊಳ್ಳಿ ಎಂದು ಹೇಳುತ್ತಿದ್ದಾರೆ.

**Sri S.R.PATIL:-** Sir, I am requesting, as an Opposition Leader I am standing on my feet ನಾನು ಹೇಳುತ್ತೇನೆ. ಅದರ ಭವಿತವ್ಯತೆ ಎಲ್ಲ ನನಗೆ ಗೊತ್ತಿದೆ. I know each and everything. ಬಹಳ ಆಳವಾಗಿ ನಾವು ಅಧ್ಯಯನ ಮಾಡಿ ಇದರ ಮೇಲೆ ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ಸಂಬಂಧಿಸಿದ ಸಚಿವರು ಇದ್ದರೆ ಒಳ್ಳೆಯದೆಂದು ನಾವು ಹೇಳಿದರೂ ಕಾಯಬೇಕಾಗಿತ್ತು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ತಾವು ಆ ಭಾವನೆಯನ್ನು ವ್ಯಕ್ತ ಮಾಡಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾಡಿದ್ದೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಉತ್ತರವನ್ನು ಹೇಳಕೂಡದು ಎಂದಿರಿ ಆ ಹಕ್ಕು ನಿಮಗಿಲ್ಲ ಎಂದು ನಾನು ವಾದ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಸಭೆಯನ್ನು ನಾಳೆ ಬೆಳಿಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತೇನೆ.

**(ಸದನವು ರಾತ್ರಿ 8 ಗಂಟೆ 17 ನಿಮಿಷಕ್ಕೆ ಮುಕ್ತಾಯಗೊಂಡಿತು. ಪುನಃ ದಿನಾಂಕ 22ನೇ ಸೆಪ್ಟೆಂಬರ್ 2020ರಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"